ಮಹಾಕವಿ ಭಾರತಿಯಾರರ



ನೆನಪುಗಳು

ಅಂದು ಇಂದು ಮುಂದಿಗೂ ತಮಿಳರ ಅಚ್ಚುಮೆಚ್ಚು ಪುರುಷೋತ್ತಮ ಕವಿ - ಭಾರತಿಯಾರ್। 1908ರಲ್ಲಿ ಆಂಗ್ಲರ ಎದೆಯಲ್ಲಿ ನಡುಕ ಉಂಟಾಗಿಸಿ ತಲೆ ಮರೆಸಿಕೊಂಡು ಪಾಂಡುಚೆರಿಯಲ್ಲಿ ಆಶ್ರಯಿಸಿದರು. ಆ ಕುಟುಂಬಗಳಲ್ಲಿ ಬಾಲಕಿ ಶ್ರೀಮತಿ ಯದುಗಿರಿಯಮ್ಮರೂ ಒಬ್ಬರು. ಯಾವ ಜನ್ಮದ ಪುಣ್ಯವೋ 6 ವರುಷದ ಬಾಲೆ ಭಾರತಿಯವರ ಹೆಣ್ಣುಮಕ್ಕಳ ಗೆಳತಿಯಾಗಿ, ಆ ಮನೆಯ ಅಚ್ಚುಮೆಚ್ಚಿನ ಪುತ್ರಿಯಾಗಿ ಬೆಳೆದರು. ಅವರ ಸುತ್ತಿ ಸುತ್ತಿ ಬಳಸುತ್ತಾ ಅವರು ಹಾಡುತ್ತಿದ್ದಂತೆಯೇ ಲಿಪಿಯಲ್ಲಿ ಮೂಡಿಸಿ, ಅವರ ನವೀನ ಭಾವನೆಗಳಿಗೆ ಬೆರಗುಗೊಳ್ಳುತ್ತಾ ಸಮಯದ ಪರಿವೆಯೇ ಇಲ್ಲದ ಧನ್ಯತೆ ಪಡೆದ ಪುಣ್ಯವತಿ!

ಪುಟ್ಟ ಬಾಲೆಯಾಗಿ ಅಂದು ತಾ ಕಂಡ ಆ ಮಹಾಕವಿಯ ಅದೇ ಕಣ್ಣೋಟದಲ್ಲಿ, ತಮ್ಮದೇ ಆಡು ಭಾಷೆಯಲ್ಲಿ, ಹೃದಂಗಮಯವಾಗಿ ತೆರೆದಿಟ್ಟ ಚಿತ್ರದಂತೆ ಮುಂದಿಟ್ಟಿರುವ ಪರಿ ಬಹು ಪ್ರಶಂಸನೀಯವಾಗಿದೆ.

ಇಂದು ಅವರ ಹಿರಿಯ ಸೊಸೆಯಾದ ಶ್ರೀಮತಿ ಪುಷ್ಪಾ ಶ್ರೀನಿವಾಸನ್ ಕನ್ನಡದಲ್ಲಿ ಈ ಕೃತಿಯ ಮೂಡಿಸಿ ತಮ್ಮ ಧನ್ಯತಾಭಾವವನ್ನು ಸಹೃದಯರಲ್ಲಿ ಹಂಚಿದ್ದಾರೆ.

ಶ್ರೇಷ್ಠ ರಾಷ್ಟ್ರಕವಿಯೊಬ್ಬರ ಜೀವನ ಗಾಥೆಯ ಈ ಕನ್ನಡ ಪ್ರತಿಯನ್ನು, ಎಲ್ಲರೂ ಮುಕ್ತ ಮನಸ್ಸಿನಿಂದ ಸ್ವಾಗತಿಸಿ, ಅದರ ಪ್ರಯೋಜನ ಪಡೆಯಬೇಕೆಂಬುದೇ ನಮ್ಮೆಲ್ಲರ ಹಾರೈಕೆ.

ಸಂಗೀತಪ್ರೇಮಿ, ಸಾಹಿತ್ಯಪ್ರೇಮಿ ಪ್ರೊಫೆಸರ್ ಹುದ್ದೆದಾರರಾಗಿರುವ M.A.N Prasad ರವರಿಗೆ ಗೌರವಪೂರ್ವಕವಾಗಿ ಸಮರ್ಪಣೆ.
ಪುಷ್ಪ ಶ್ರೀನಿವಾಸನ್
22/6/2019

ಮಹಾಕವಿ ಭಾರತಿಯಾರರ ನೆನಪುಗಳು

ತಮಿಳು ಮೂಲ
ಮ. ಗೋ. ಯದುಗಿರಿ

ಕನ್ನಡಕ್ಕೆ ಅನುವಾದ
ಪುಷ್ಪ ಶ್ರೀನಿವಾಸನ್

ಲಿಪಿಕರೇ ಪ್ರಕಾಶಕರು
342, 1ನೇ ಅಡ್ಡರಸ್ತೆ, 5ನೇ ಮುಖ್ಯ ರಸ್ತೆ,
ಕೆನರಾ ಬ್ಯಾಂಕ್ ಕಾಲೋನಿ,
ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು 560 097

MAHAKAVI BHARATHIYARARA NENAPUGALU - Kannada Translation by Smt. Pushpa Srinivasan, 342, 1st Cross, 5th Main, Canara Bank Colony, Vidyaranyapura Post, Bangalore 560 097 - of "BHARATHIYARAR NINAIVUGAL" originally written in Tamil by Ma.Go. Yadugiri.

P.P.: viii + 112 Edn. 2013 Price : Rs. 50/-

© : ಅನುವಾದಕರದು

ಮೊದಲ ಮುದ್ರಣ : 2013

ಪುಟಗಳು : viii + 112

ಬೆಲೆ : ರೂ. 50/-

ಕಾಗದ : 70 ಜಿ.ಎಸ್.ಎಂ. ಮ್ಯಾಪ್ಲಿತೊ

ಡಿ.ಟಿ.ಪಿ. : ಸುಂದರ್ 98804 67551

ಮುದ್ರಣ : ಪಾಲಹಳ್ಳಿ ಎಂಟರ್‌ಪ್ರೈಸಸ್
79/1, ದೇವಸ್ಥಾನದ ರಸ್ತೆ,
ಮಲ್ಲೇಶ್ವರ,
ಬೆಂಗಳೂರು – 560 003

ಅರ್ಪಣೆ

ನನ್ನನ್ನು ಅತ್ಯಂತ ಮಮತೆಯಿಂದ ನೋಡಿಕೊಂಡ
ನಮ್ಮ ಅತ್ತೆಮಾವಂದಿರಿಗೆ
ಸಮರ್ಪಣೆ

ಪುಷ್ಪ ಶ್ರೀನಿವಾಸನ್
ಅನುವಾದಕಿ

ಮುನ್ನುಡಿ

"ಚೂಪಿನ ಮೊನೆಯ ಖಡ್ಗ ನಾಚಿ ತಲೆ ತಗ್ಗಿಸುವ ಮಹಾ ಪ್ರಬಲ ಶಕ್ತಿ ಇದೆ ಒಂದು ಲೇಖನಿಯ ಮೊನೆಗೆ, ಎದುರಾಳಿಯ ಎದೆ ಸೀಳಿ ಹಾಯುವ ಪ್ರಬಲ ಶಕ್ತಿ ಇದೆ ಒಂದು ಪ್ರಖರ ಲಿಪಿಯ ಮೂಡಿಸುವ ಲೇಖನಿಯ ಮೊನೆಗೆ"

ಈ ನಾನ್ನುಡಿಗೆ ಪ್ರತ್ಯಕ್ಷ ಸಾಕ್ಷಿ ಮಹಾಕವಿ, ಕಿಡಿಬೆಂಕಿ ಕಿಚ್ಚಿನ "ಇಂಡಿಯಾ' ಪತ್ರಿಕೆಯ ರುವಾರಿ, ಮಹಾಕವಿ ಸುಬ್ರಮ್ಹಣ್ಯ ಭಾರತಿಯವರೇ! ಅವರ ಲೇಖನಿಯ ಮೊನೆಯೇ.

ಅಂದು ಇಂದು ಮುಂದಿಗೂ ತಮಿಳರ ಅಚ್ಚುಮೆಚ್ಚು ಪುರುಷೋತ್ತಮ ಕವಿ – ಭಾರತಿಯಾರ್॥ 1908ರಲ್ಲಿ ಆಂಗ್ಲರ ಎದೆಯಲ್ಲಿ ನಡುಕ ಉಂಟಾಗಿಸಿ ತಲೆ ಮರೆಸಿಕೊಂಡು ಪಾಂಡುಚೆರಿಯಲ್ಲಿ ಆಶ್ರಯಿಸಿದರು. ಆ ಕುಟುಂಬಗಳಲ್ಲಿ ಬಾಲಕಿ ನಮ್ಮ ತಾಯಿ ಯದುಗಿರಿಯಮ್ಮಳೂ ಒಬ್ಬಳು. ಯಾವ ಜನ್ಮದ ಪುಣ್ಯವೋ 6 ವರುಷದ ಬಾಲೆ ಭಾರತಿಯವರ ಹೆಣ್ಣುಮಕ್ಕಳ ಗೆಳತಿಯಾಗಿ, ಆ ಮನೆಯ ಅಚ್ಚುಮೆಚ್ಚಿನ ಪುತ್ರಿಯಾಗಿ ಬೆಳೆದಳು. ಅವರ ನೋವು ನಲಿವುಗಳಲ್ಲಿ ಪಾಲ್ಗೊಂಡು ಕುಸುಮಿಸಿದ ಬಾಲೆ ಅವಳು! ಅವರ ಅಮೃತಂಗಮಯ ಕಾವ್ಯದ ಕಾವನ್ನು ಅರಿಯದ ಮುಗ್ಧ ಬಾಲೆ – ಆ ಘನ ಗಂಭೀರ ಆಳದ ವಾಣಿಗೆ ನರ್ತನ ಗೈಯ್ಯುತ್ತಾ ಅವರು ಪಾಡುವ ಮೋಡಿಗೆ ಮರುಳಾಗಿ ಅವರಿಂದ ದೊರಕುತ್ತಿದ್ದ ಕಾವ್ಯ ಕಿರುಹೊತ್ತಗೆಗಳ ಶೇಖರಿಸುತ್ತಾ ಅವರ ಹಾಡ ಅಭ್ಯಸಿಸುವ ಪರಮ ಶಿಷ್ಯೆಯಾಗಿ ಬೆಳಗಿದಳು. ಅವರ ಸುತ್ತಿ ಸುತ್ತಿ ಬಳಸುತ್ತಾ ಅವರು ಹಾಡುತ್ತಿದ್ದಂತೆಯೇ ಲಿಪಿಯಲ್ಲಿ ಮೂಡಿಸಿ, ಅವರ ನವೀನ ಭಾವನೆಗಳಿಗೆ ಬೆರಗುಗೊಳ್ಳುತ್ತಾ ಸಮಯದ ಪರಿವೆಯೇ ಇಲ್ಲದ ಧನ್ಯತೆ ಪಡೆದ ಪುಣ್ಯವತಿ!

"ಹದಿನಾರು ಹಡೆದು ಹದಿಬದೆಯಾಗಿ ಬಾಳು" ಎಂಬ ನಾಣ್ಣುಡಿ ಪರಿಪಾಲಿಪ ದಿನಗಳವು. ಅಂತೆಯೇ ಸೇರಿದ ಕುಟುಂಬಕ್ಕೆ ಮಣಿದು ಬಾಳಿದರು ನಮ್ಮ ತಾಯಿ. ಇಂಜಿನಿಯರ್ ಹುದ್ದೆಯ ಪತಿ. ಆಳುಕಾಳು, ಬಂಗ್ಲೆ, ಸಕಲ ವಸತಿಯ ಸರ್ಕಾರ ಒದಗಿಸುತ್ತಿದ್ದ ಪುಣ್ಯದಿನಗಳವು. ದೊಡ್ಡ ಕುಟುಂಬದ ಸಕಲ ನಿರ್ವಹಣೆಯ, ಸಕಾಲಕ್ಕೆ ಪರಿಪಾಲಿಸುತ್ತಾ ಜೊತೆ ಜೊತೆಗೆ ಮಹಾಕವಿ ಭಾರತಿಯವರ ಕಾವ್ಯಾನಂದವನ್ನೂ ಮುಣುಮುಣುಗಿಸುತ್ತಿದ್ದ ಅವಳ ಆ ಪರಿಪಾಠ ಕಿರಿಯವಳಾದ ನನಗೆ ಮೋಜು–ಬೆರಗು ಮೂಡಿಸುತ್ತಿತ್ತು!

ನಿರಾಡಂಬರ ಸೌಮ್ಯರೂಪ. ವಜ್ರದ ಬೆಂಡೋಲೆ. ಮೂಗಿನಲ್ಲಿ ವಜ್ರ ಮೂಗುತಿ ಮಿಂಚಿ, ನಗುಮೊಗದಿಂದ ನಲ್ನುಡಿಗಳಿಂದ ಆಳುಕಾಳು–ಮಕ್ಕಳು– ಹಿರಿಯ ಗೌರವಾನ್ವಿತ ಅತಿಥಿಗಳ ಆದರಿಸುತ್ತಿದ್ದ ಪರಿ ನಿಜಕ್ಕೂ ಮೆಚ್ಚ ತಕ್ಕುದೇ.

ಬಾಲ್ಯದಲ್ಲಿ ಮನೆಯೇ ಶಾಲೆ ಅವರಿಗೆ. ಪ್ರಥಮ ಪಾಠದಿಂದ ಆರಂಭಿಸಿ ತಮಿಳಿನ ವೇದವಾದ 'ನಾಲಾಯಿರಂ' ಪ್ರಬಂಧದ ಅಧ್ಯಯನದವರೆವಿಗೆ ಪ್ರಬುದ್ಧತೆ ಪಡೆಯಿತು ಆ ಪಾಠ–ಪ್ರವಚನ. ಭಾರತಿಯವರ ನಾವಿನ್ಯತೆ ಕಾವ್ಯದ ವಿಶೇಷ ನಂತರದ ಜೀವನದಲ್ಲಿ ಬೃಹದಾಕಾರವಾಗಿ ಅರ್ಥೈಸಿ ಬೇರೂರಿತೇ. ತನ್ನ ಸಂಸಾರದಲ್ಲೂ ಸಾಧ್ಯವಾದ ಮಟ್ಟಿಗೆ ಆ ಆದರ್ಶ ಚಿಂತನೆಗಳ ಅಳವಡಿಸಿದ ಧೀರೆ! ಹಿರಿಯ ಸೊಸೆಯಾದಿ ತನ್ನೆಲ್ಲ ಕುಡಿಗಳಿಗೂ ಉತ್ತಮ ವಿದ್ಯಾಭ್ಯಾಸ, ನವೀನ ಸೌಕರ್ಯ ಸಲಕರಣೆಗಳ ಅಳವಡಿಸಿ ಅರ್ಥಹೀನ ಆಚಾರ ವಿಚಾರಗಳ ಬದಿಗಿರಿಸಿ, ಧೀಮಂತ ಬಾಳ್ವೆಯ ಸಾಗಿಸಿದ ಉತ್ತಮಿ ನಮ್ಮ ತಾಯಿ!" ಮನೆ ಒಡತಿಯಾಗಿ ಎಲ್ಲರ ಸೇವೆಗಳ ನಿರ್ವಹಿಸಿ, ತದನಂತರ ತನ್ನ ತನಕ್ಕಾಗಿಯೇ ತನಗೆಂದೇ ತುಸು ಸಮಯ ಕಾದಿರಿಸಿದ್ದುದು ನಮ್ಮೆಲ್ಲರ ಪುಣ್ಯ. ತನ್ನ ಮೂವತ್ತಾರನೇ ವಯಸ್ಸಿನಲ್ಲಿ ಈ ಪುಟ್ಟ ಕಿರುಹೊತ್ತಿಗೆ ಅವರ ಲೇಖನಿಯಿಂದ ಮೂಡಿ ಬಂದು ಇಂದು ಬೆಳಗುತ್ತಿದೆ.

ಪುಟ್ಟ ಬಾಲೆಯಾಗಿ ಅಂದು ತಾ ಕಂಡ ಆ ಮಹಾಕವಿಯ ಅದೇ ಕಣ್ಣೋಟದಲ್ಲಿ, ತನ್ನದೇ ಆಡು ಭಾಷೆಯಲ್ಲಿ, ಹೃದಂಗಮಯವಾಗಿ ತೆರೆದಿಟ್ಟ ಚಿತ್ರದಂತೆ ನಮ್ಮ ಮುಂದಿಟ್ಟಿರುವ ಪರಿ ಬಹು ಪ್ರಶಂಸನೀಯವಾಗಿದೆ. ಆ ಮಹಾನ್‌ನನ್ನು ಅದ್ಭುತ ಕವಿಯಾಗಿ, ನವ್ಯ ಶೃಂಗಾರ ಪತಿಯಾಗಿ, ಮುದ್ದುಗರೆವ ತಂದೆಯಾಗಿ, ಮಾನವ ಶ್ರೇಷ್ಠನಾಗಿ ವಿವಿಧ ಕೋನಗಳಲ್ಲಿ ನಾವು ಕಾಣಬಹುದು. ಪ್ರತಿ ಕಾವ್ಯ ಮೂಡಿ ಬಂದ ಸನ್ನಿವೇಶಗಳ ನಿರೂಪಣೆ ಈ ಎಲ್ಲ ಕೋನಗಳನ್ನೂ ಪ್ರತಿಪಾದಿಸುವಂತಿದೆ.

ಅಮೆರಿಕಾದಲ್ಲಿ ಭಾರತಿಯಾರ್ ಭಕ್ತೆ ಶ್ರೀಮತಿ ರಾಜೀ ಕೃಷ್ಣನ್‌ರವರು ಈ ಕಿರುಹೊತ್ತಿಗೆಯ ಆಂಗ್ಲ ಭಾಷೆಗೆ ಭಾಷಾಂತರಿಸಿ ಸಾವಿರಾರು ಪ್ರತಿಗಳ ಹಂಚಿ ಜಗತ್ತಿಗೇ ಆ ಮಹಾಕವಿಯ ದರ್ಶನ ದರ್ಪಣ ಕೈಂಕರ್ಯ ಮಾಡಿ ಧನ್ಯತೆ ಪಡೆದಿದ್ದಾರೆ. ಇಂದು ನನ್ನ ಹಿರಿಯ ಅತ್ತಿಗೆ ಪುಷ್ಪಾ ಶ್ರೀನಿವಾಸನ್ ಕನ್ನಡದಲ್ಲಿ ಈ ಕೃತಿಯ ಮೂಡಿಸಿ ತನ್ನ ಧನ್ಯತಾಭಾವವನ್ನು ಸಹೃದಯರಲ್ಲಿ ಹಂಚಲಿದ್ದಾರೆ.

ಶ್ರೇಷ್ಠ ರಾಷ್ಟ್ರಕವಿಯೊಬ್ಬರ ಜೀವನ ಗಾಥೆಯ ಈ ಕನ್ನಡ ಪ್ರತಿಯನ್ನು ಎಲ್ಲರೂ ಮುಕ್ತ ಮನಸ್ಸಿನಿಂದ ಸ್ವಾಗತಿಸಿ, ಅದರ ಪ್ರಯೋಜನ ಪಡೆಯಬೇಕೆಂಬುದೇ ನಮ್ಮೆಲ್ಲರ ಹಾರೈಕೆ.

26.12.2013 **ದ್ವಾರಕಿ ಕೃಷ್ಣಸ್ವಾಮಿ**

ಮೂಲ ಲೇಖಕಿ
ಶ್ರೀಮತಿ ಮ.ಗೋ. ಯದುಗಿರಿ

ಈ ಹೊತ್ತಿಗೆಯಲ್ಲಿ ಬರುವ ವ್ಯಕ್ತಿಗಳ ಪರಿಚಯ

ಈ ಗ್ರಂಥದಲ್ಲಿ ಬರುವ ವ್ಯಕ್ತಿಗಳೆಲ್ಲಾ ಸುಮಾರು ನೂರು ವರುಷದ ಹಿಂದೆ ಬದುಕಿ ಬಾಳಿದವರು. ಸ್ವಲ್ಪ ಮಟ್ಟಿಗೆ ಅವರುಗಳು ಯಾರು ಯಾರೆಂದು ತಿಳಿಯಲು ಈ ಪರಿಚಯ ಅವಶ್ಯಕವೆನಿಸುತ್ತದೆ.

ಮ.ಗೋ. ಯದುಗಿರಿ:– ಈ ಪುಸ್ತಕದ ಲೇಖಕಿ. ಈ ಅನುವಾದಕಿಯ ಗೌರವಾನ್ವಿತ ಅತ್ತೆಯವರು.

ಮುಖ್ಯವ್ಯಕ್ತಿ ಭಾರತಿಯಾರರು: ಸ್ವಾತಂತ್ರ್ಯ ಹೋರಾಟಗಾರರು (ಬ್ರಿಟಿಷ್ ಇಂಡಿಯಾ ಕಾಲದಲ್ಲಿ) ನೂರಾರು ಕವಿತೆಗಳನ್ನು ರಚಿಸಿ (ತಮಿಳಿನಲ್ಲಿ) ಎಲ್ಲರಲ್ಲಿಯೂ ದೇಶಭಕ್ತಿಯ ಕಿಡಿಯನ್ನು ಹೊತ್ತಿಸಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿ ಭಾರತದ ರಾಷ್ಟ್ರ ಕವಿ ಎನಿಸಿಕೊಂಡವರು. (ಮಹಾಕವಿ)

ಶೆಲ್ಲಮ್ಮಾ: ಮಹಾಕವಿ ಭಾರತಿಯಾರರ ಪತ್ನಿ. ಅವರ ಕಷ್ಟ, ಸುಖಗಳನ್ನು ಸಮಸಮವಾಗಿ ಹಂಚಿಕೊಂಡವರು.

ತಂಗಮ್ಮ, ಶಕುಂತಲಾ: ಭಾರತಿಯವರ ಇಬ್ಬರು ಹೆಣ್ಣುಮಕ್ಕಳು.

ಮಂಡಯಂ ಶ್ರೀನಿವಾಸಾಚಾರ್ಯರು: ಈ ಪುಸ್ತಕದ ಲೇಖಕಿಯ ತಂದೆಯವರು. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಭಾರತಿಯಾರರ ಜೊತೆ ಕೈಜೋಡಿಸಿದವರು.

ಶ್ರೀ ರಂಗಮ್ಮ: ಶ್ರೀನಿವಾಸಾಚಾರ್ಯರ ಪತ್ನಿ, ಲೇಖಕಿಯ ತಾಯಿಯವರು.

ರಂಗನಾಯಕಿ: ಲೇಖಕಿಯ ತಂಗಿ. ಭಾರತಿಯಾರರ ಮಗಳು ಶಕುಂತಲಾವಿನ ಗೆಳತಿ.

ವ.ವೆ.ಶು. ಅಯ್ಯರ್: ಇವರೂ ಭಾರತಿಯಾರರ ಜೊತೆಯಲ್ಲಿ ಟೊಂಕ ಕಟ್ಟಿ ನಿಂತು ಈ ದೇಶಕ್ಕಾಗಿ ಹೋರಾಡಿದ ದೇಶಭಕ್ತರು. ಇವರ ಪತ್ನಿ, ಶೆಲ್ಲಮ್ಮಾ, ಶ್ರೀರಂಗಮ್ಮ ಎಲ್ಲರೂ ಒಂದೇ ಮನೆಯವರಂತೆ ಪಳಗಿದವರು.

ಮೀನ:– ಸ್ವಾಮಿನಾಥ ದೀಕ್ಷಿತರ ಮಗಳು ಯದುಗಿರಿಯ ಗೆಳತಿ

ಮುರುಗೇಶಪಿಳ್ಳೆ : ಪುದುಚೇರಿಯಲ್ಲಿಯೇ ಬಹಳ ವರ್ಷಗಳಿಂದ ನೆಲೆಸಿದ್ದ ಸ್ಥಳ ನಿವಾಸಿಗಳು.

ಅಣ್ಣೆಯಮ್ಮ: ಇವರ ಪತ್ನಿ.

ರಾಜ ಬಹುದ್ದೂರ್: ಇವರುಗಳ ಪುತ್ರ.

ಅರವಿಂದ ಘೋಷ್: ಪುದುಚೇರಿಯಲ್ಲಿರುವ ಅರವಿಂದಾಶ್ರಮ ಸ್ಥಾಪಕರು, ದಾರ್ಶನಿಕರು.

ಚಿದಂಬರಪಿಳ್ಳೆ: ಇವರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರು.

ಇವರೆಲ್ಲರೂ ಭಾರತಿಯಾರರು ಸಂಪಾದಕರಾಗಿದ್ದ ಸ್ವದೇಶಮಿತ್ರನ್, ಇಂಡಿಯಾ ಪತ್ರಿಕೆಗಳಿಗೆ ಸಂಬಂಧ ಪಟ್ಟವರು.

ಪರಿಚಯ

ಶ್ರೀಮತಿ ಯದುಗಿರಿಅಮ್ಮಾ ಅವರ **'ಭಾರತಿ ನಿನೈವುಕಳ್'** ಎಂಬ ಕೃತಿಯನ್ನೂ, ಅದರ ಲೇಖಕಿಯನ್ನೂ ಪರಿಚಯಿಸುವುದು ನನ್ನ ಮನದಲ್ಲಿ ಒಂದಕ್ಕೊಂದು ವ್ಯತಿರಿಕ್ತವಾದ ಭಾವನೆಗಳನ್ನು ಎಬ್ಬಿಸುತ್ತದೆ. ಹದಿನೈದು ವರ್ಷಗಳಿಂದ ಪ್ರಕಟಿಸುವವರಿಲ್ಲದೆ ಬಿದ್ದಿದ್ದ ಈ ಕೃತಿ ಈಗ ಪ್ರಕಾಶನದ ರಥವೇರಿ ಹೊರಬರುತ್ತಿದೆ ಎಂಬ ಸಂತೋಷ ಒಂದುಕಡೆ; ಸಮೀಪ ಕಾಲದವರೆಗೆ ಬದುಕಿದ್ದ ಲೇಖಕಿ, ತಮ್ಮ ಅಭಿಲಾಷೆ ಪೂರ್ತಿಯಾಗುವ ಸಮಯದಲ್ಲಿ ಬದುಕಿಲ್ಲವಲ್ಲಾ ಎಂಬ ದುಃಖ ಒಂದು ಕಡೆ. ಶ್ರೀಮತಿ ಯದುಗಿರಿಯಮ್ಮ ಈ ಕೃತಿ ಹೊರಬರಲು ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿ ಬರುವ ಭಾರತಿಯಾರರ ದಿನದಂದು ಈ ಕೃತಿ ಹೊರಬಂದು ಬಿಡುತ್ತದೆ. ಎಂದು ಹೇಳುತ್ತಲೇ, ಹಿಂದಿನ ತಿಂಗಳ ಆಗಸ್ಟ್ 3ನೆ ದಿನಾಂಕ ಮರಣಿಸಿದರು. ಹಲವು ವರುಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಈ ಕೃತಿಯ ಪ್ರಕಟಣೆಗಾಗಿಯೇ ಕಾಯುತ್ತಿದ್ದರೇನೋ ಎಂಬಂತೆ!

1904ನೆಯ ಇಸವಿ 'ಸ್ವದೇಶಮಿತ್ರ'ದ ಉಪ-ಸಂಪಾದಕರಾಗಿ ಚೆನ್ನೈಗೆ ಬಂದ ಭಾರತಿಯಾರರು ಎರಡೇ ವರ್ಷದಲ್ಲಿ 'ಇಂಡಿಯಾ' ಎಂಬ ರೊಚ್ಚಿನ ವಾರ ಪತ್ರಿಕೆಯ ಸಂಪಾದಕೀಯ ಸ್ಥಾನದಲ್ಲಿ ಕುಳಿತರು. 'ಇಂಡಿಯಾ' ಪತ್ರಿಕೆ ಚೆನ್ನೈ ಜನಸಂಘ ಎಂಬ ಯುವಕರ ಕೂಟದ ಇಡೀ ಸಿಂಹ ಘರ್ಜನೆಯಾಗಿತ್ತು. ತಿಲಕರನ್ನು ನಾಯಕರನ್ನಾಗಿ ಇಟ್ಟುಕೊಂಡ ಈ ವೀರಮಣಿಗಳಲ್ಲಿ ಭಾರತಿ, ವ.ವು.ಶಿ., ಮಂಡಯಂ ಶ್ರೀಶ್ರೀನಿವಾಸಾಚಾರ್ಯ, ಎಸ್. ದೊರೆಸ್ವಾಮಿ ಅಯ್ಯರ್ ಮೊದಲಾದವರು ಪ್ರಮುಖರು, ಮಂಡ್ಯಂ ಕುಟುಂಬದವರೇ ಬಂಡವಾಳ ಹಾಕಿ **'ಇಂಡಿಯಾ'** ಪತ್ರಿಕೆಯನ್ನು ನಡೆಸುತ್ತಿದ್ದರು. **'ಇಂಡಿಯಾ'** ಪತ್ರಿಕೆಯ ಬೆಂಕಿ ಸುರಿಸುರುವಂಥ ಲೇಖನಗಳು, ತಟ್ಟಿ ಎಬ್ಬಿಸುವ ತಲೆಬರಹಗಳು ಬ್ರಿಟಿಷರು ಮತ್ತು ಅವರ ಅನುಯಾಯಿಗಳನ್ನು ತಲೆತಗ್ಗಿಸುವಂತೆ ಮಾಡಿತು. ಗೇಲಿ ಮಾಡುತ್ತಿದ್ದ ಈ ಪತ್ರಿಕೆಯ ಭಿತ್ತಿಚಿತ್ರಗಳು ತಮಿಳುನಾಡಿನ ಸರ್ಕಾರದಲ್ಲಿ ಒಂದು ದೊಡ್ಡ ಅಬ್ಬರವೆಬ್ಬಿಸಿತು.

1908ನೆಯ ಇಸವಿಯಲ್ಲಿ ಭಾರತಿಯಾರರನ್ನು ಸೆರೆ ಹಿಡಿದು ಬಿಡುವರೆಂದು ಚಿಂತೆ ಇದ್ದಿತು. ಒಂದು ದಿನ 'ಇಂಡಿಯಾ' ವಿನ ಸಂಪಾದಕರನ್ನು ಸೆರೆಹಿಡಿಯಲು ಪೋಲೀಸಿನವರು ಪತ್ರಿಕೆಯ ಕಾರ್ಯಾಲಯಕ್ಕೆ ವಾರಂಟಿನೊಂದಿಗೆ ಬಂದುಬಿಟ್ಟರು. ಆದರೆ ಎದಿರು ನೋಡದ ವಿಧ ಭಾರತಿಯಾರರು ತಪ್ಪಿದರು. ಆಗಿನ ನಿಯಮದಂತೆ ಸಂಪಾದಕರ ಹೆಸರು ಅವರದಾಗಿರಲಿಲ್ಲ. ಆದ್ದರಿಂದ ತಮ್ಮನ್ನು

ಹುಡುಕಿಕೊಂಡು ಬಂದ ಪೋಲೀಸರಿಂದ ಅವರು ಅನಾಯಾಸವಾಗಿ ತಪ್ಪಿಸಿಕೊಂಡರು. 'ಇಂಡಿಯ' ಪತ್ರಿಕೆಯ ಸಂಪಾದಕರಾಗಿದ ಎಂ. ಶ್ರೀನಿವಾಸನ್ ಸೆರೆಯಾದರು. ಶಿಕ್ಷೆಯೂ ಆಯಿತು.

ಈ ಸಂದರ್ಭದ ನಂತರ ಭಾರತಿಯಾರರಿಗೆ ಎಂದಾದರೂ ವಾರೆಂಟು ಬರಬಹುದೆಂಬ ಸ್ಥಿತಿ ಉಂಟಾಯಿತು. ಭಾರತಿಯಾರರು ಚೆನ್ನೈಯಲ್ಲಿದ್ದು ಸಿಕ್ಕಿಹಾಕಿಕೊಳ್ಳುವ ಬದಲು ಪುದುಚೇರಿಗೆ ಹೋಗಿ ಅಲ್ಲಿದ್ದುಕೊಂಡು ಮಾತೃಭೂಮಿಯ ಬಿಡುಗಡೆಗಾಗಿ ಕೆಲಸ ಮಾಡಬಹುದೆಂದು ತೀರ್ಮಾನಿಸಿದರು.

ಅದರಂತೆಯೇ ಚೆನ್ನೈ ಪೋಲೀಸರ ಕಣ್ಣಿಗೆ ಮಣ್ಣೆರಚಿ, ಭಾರತಿಯಾರರು ಪುದುಚೇರಿಗೆ ಹೋಗಿ ಸೇರಿದರು. ಭಾರತಿಯಾರರು ಪುದುಚೇರಿಗೆ ಹೋಗಿ ಸೇರಿದ ಕೆಲವು ವಾರಗಳ ನಂತರ ಮಂಡಯಂ ಶ್ರೀನಿವಾಸಾಚಾರ್ಯರೂ ಅಲ್ಲಿಗೆ ಹೋಗಿ ಸೇರಿದರು; ಅವರು ಹಿಂದೆಯೇ 'ಇಂಡಿಯ ಪತ್ರಿಕೆಯ ಪ್ರಕಟನಾಲಯವೂ ಆ ನಗರಕ್ಕೇ ಹೋಗಿಬಿಟ್ಟಿತು. ಕೆಲವು ವಾರಗಳು ಸುಮ್ಮನಿದ್ದ (ನಿಂತಿದ್ದ) 'ಇಂಡಿಯಾ' ಪತ್ರಿಕೆ, ಪುದುಚೇರಿಯಿಂದ ಹೊಸ ಉತ್ಸಾಹದಿಂದ ಬೆಳಗಲಾರಂಭಿಸಿತು. ಬ್ರಿಟಿಷ್ ಇಂಡಿಯಾದಲ್ಲಿ ನೆಲೆಯಿಲ್ಲದ ದೇಶಭಕ್ತರು ಫ್ರೆಂಚರ ಇಂಡಿಯಾದಿಂದ ನಾಡಿನಬಿಡುಗಡೆಗೆ ಕೆಲಸ ಮಾಡಬಹುದೆಂಬ ಭಾರತಿಯಾರರ ಯುಕ್ತಿ, ಆನಂತರ ಮತ್ತಿಬ್ಬರು ಮಹಾದೇಶ ಭಕ್ತರಾದ ಅರವಿಂದ ಘೋಷರಿಗೂ ವ.ವೆ.ಸು. ಅಯ್ಯರ್ ಅವರಿಗೂ ದಾರಿ ತೋರಿಸಿತು.

ಪುದುಚೇರಿಯಲ್ಲಿ ಆಶ್ರಯ ಹೊಂದಿದ ದೇಶಭಕ್ತರುಗಳ ಒಗ್ಗಟ್ಟು, ಅವರ ಕುಟುಂಬಗಳಲ್ಲಿಯೂ ಉಂಟಾದುದರಲ್ಲಿ ಏನೂ ಆಚ್ಚರ್ಯವಿಲ್ಲ.

'ಭಾರತಿಯಾರರ ಪತ್ನಿ ಶೆಲ್ಲಮ್ಮಾ ನಮ್ಮೊಂದಿಗೆ ಪಳಗಿದಮೇಲೆ, ಭಾರತಿ, ಶ್ರೀನಿವಾಸಾಚಾರ್ಯರು, ಅಯ್ಯರ್ ಅವರ ಕುಟುಂಬ ಈ ಮೂರೂ ಕುಟುಂಬಗಳು ಒಂದೇ ಮನೆಯವರಂತೆ ಪಳಗಿದೆವು. ನಾವೆಲ್ಲರೂ ಸೇರಿ ದಿನವೂ ಕಡಲದಂಡೆಗೆ ಹೋಗುತ್ತಿದ್ದೆವು. ಅಲ್ಲಿ ಭಾರತಿಯಾರರು ಕಡಲನ್ನೂ ಆಕಾಶವನ್ನು ಕಂಡು ಪರವಶರಾಗಿ ತಮ್ಮನ್ನು ಮರೆತು ಹಾಡಲಾರಂಭಿಸಿಬಿಡುವರು ಎನ್ನುತ್ತಾರೆ ಲೇಖಕಿ.

ವಾಚಕರ ಮುಂದೆ ಇರುವ 'ಭಾರತಿ ನಿನೈವುಹಳ್' (ಭಾರತಿಯಾರರ ನೆನಪುಗಳು) ಎಂಬ ಈ ಕೃತಿಯ ಬರೆದ ಶ್ರೀಮತಿ ಯದುಗಿರಿಯಮ್ಮ ಮಂಡಯಂ ಶ್ರೀ ಶ್ರೀ. ಶ್ರೀನಿವಾಸಾಚಾರ್ಯರ ಹಿರಿಯ ಪುತ್ರಿ. ಪುದುಚೇರಿಯಲ್ಲಿ ಭಾರತಿಯಾರರು ವಾಸಿಸುತ್ತಿದ್ದಾಗ ಇವರು ಒಬ್ಬ ಪುಟ್ಟಬಾಲೆ. ಭಾರತಿಯಾರರೊಂದಿಗೆ ಹಲವು ವರ್ಷಗಳು ಹತ್ತಿರವಾಗಿ ಒಡನಾಡಿ ಅವರ ಮಮತೆಗೆ ಪಾತ್ರವಾಗಿದ್ದವರು. ತಮ್ಮ ಚಿಕ್ಕವಯಸ್ಸಿನಲ್ಲಿ ತಮಗೆ ಪರಿಚಯವಾಗಿದ್ದ ರೀತಿಯಲ್ಲಿ ಮಹಾಕವಿ

ಭಾರತಿಯಾರರನ್ನು ನಮಗೆ ವಿವರಿಸುತ್ತಾರೆ ಶ್ರೀಮತಿ ಯದುಗಿರಿಯಮ್ಮ.

ಭಾರತಿಯಾರರ ರಾಜಕೀಯ ಸ್ನೇಹಿತರಾದ ವ.ಉ. ಶಿಯವರು. ಬರಹಗಾರರಾದವ. ರಾ. ಭಾರತಿದಾಸನ್ ಇಬ್ಬರು, ಪತ್ನಿ ಶೆಲ್ಲಮ್ಮಾ ಪುತ್ರಿ ತಂಗಮ್ಮಾ ಇವರುಗಳೆಲ್ಲಾ ತಮ್ಮ ತಮ್ಮ ದೃಷ್ಟಿಕೋನಗಳಿಂದ ತಾವು ಕಂಡ ಭಾರತಿಯಾರರನ್ನು ಈಗಾಗಲೇ ವಿವರಿಸಿದ್ದಾರೆ. ಭಾರತಿಯಾರರ ಪ್ರೀತಿಗೆ ಪಾತ್ರಳಾದ ಒಬ್ಬ ಪುಟ್ಟ ಬಾಲೆ ಎಂಬ ದೃಷ್ಟಿಕೋನದಿಂದ ಭಾರತಿಯಾರರನ್ನು ಒಬ್ಬ ಮಾನವ ಮತ್ತು ಮನೆಯ ಯಜಮಾನನಾಗಿ ನಮ್ಮ ಕಣ್ಣು ಮುಂದೆ ನಿಲ್ಲಿಸುತ್ತಾರೆ. ಶ್ರೀಮತಿ ಯದುಗಿರಿಯಮ್ಮ ಈ ಕೃತಿಯಲ್ಲಿ ಅವರ ಮನೆ ಮಾತಿನ ಶೈಲಿ ಒಂದು ಹೊಸ ತರಹದ ರುಚಿಯನ್ನು ಕೊಡುತ್ತದೆ..

ಮೇಧಾವಿಯನ್ನು – ವಜ್ರದ ಹೊಳಪಿಗೆ ಹೋಲಿಸಬಹುದು ಸಾವಿರ ದಿಕ್ಕುಗಳಿಂದ ಸಾವಿರಾರು ರೀತಿಯಲ್ಲಿ ಪಸರಿಸುವ ಮೇಧಾವಿಗಳ ವ್ಯಕ್ತಿತ್ವವನ್ನು ಒಬ್ಬರು ಮಾತ್ರ ಕಾಣುವುದು ಬಹಳ ಕಠಿನ. ಒಬ್ಬೊಬ್ಬರೂ ತಮ್ಮ ದೃಷ್ಟಿಯಲ್ಲಿ ತಮಗೆ ತೋಚಿದಂತೆ ವರ್ಣಜಾಲಗಳನ್ನು ಹೆಣೆದು ಪ್ರಶಂಸಿಸುವುದು ಸಹಜ. ಕೆಲವು ಸಲ ತಾವು ಕಂಡುದೇ ನಿಜ ಎಂದು ಅವರುಗಳು ವಾದಮಾಡುವುದೂ ಉಂಟು ಅವರು ಕಂಡುದು ನಿಜವೇ ಇರಬಹುದು; ಆದರೆ ಅದಕ್ಕೆ ವ್ಯತಿರಿಕ್ತವಾದ ದಿಕ್ಕಿನಿಂದ ಬೇರೊಬ್ಬರು ಕಂಡುದೂ ನಿಜವೇ ಇರಬಹುದಲ್ಲವೇ? ಮೇಧಾವಿಯ ವ್ಯಕ್ತಿತ್ವದ ಪೂರ್ತಿ ಚರಿತ್ರೆಯ ಪದರವನ್ನು ಅರಿಯಬೇಕಾದರೆ, ಹಲವೊಂದು ವ್ಯಕ್ತಿತ್ವದ ದೃಷ್ಟಿಕೋನಗಳಿಂದ ಹಲವು ಜನರು ಅವರನ್ನು ವರ್ಣಿಸುವ ಎಲ್ಲಾ ವಿಚಾರಗಳನ್ನೂ ಒಟ್ಟು ಸೇರಿಸಿ ನೋಡಬೇಕು. ಹಾಗೆ ಸಿಗುವ ವಿಚಾರಗಳನ್ನು ಒಟ್ಟು ಸೇರಿಸಿ ನೋಡಬೇಕು. ಹಾಗೆ ಸಿಗುವ ಪರಿಪೂರ್ಣವಾದ ರೂಪದಿಂದ ಮಾತ್ರ ನಿಜವನ್ನು ತಿಳಿಯಬಹುದು.

ಭಾರತಿಯಾರರ ಪುದುಚೇರಿಯ ಬದುಕಿನಲ್ಲಿ ಸುಮಾರು 1912 ರಿಂದ 1918ರ ವರೆಗೆ ನಡೆದುಬಂದು ಹಲವು ವಿಶೇಷವಾದ ವಿಚಾರಗಳನ್ನು ಶ್ರೀಮತಿ ಯದುಗಿರಿಯಮ್ಮ ಈ ಕೃತಿಯಲ್ಲಿ ಒಟ್ಟು ಸೇರಿಸಿ, ನಮಗೆ ಹೆಣೆದು ಕೊಟ್ಟಿದ್ದಾರೆ. ಭಾರತಿಯಾರರ ಪರಿಪೂರ್ಣವಾದ ಬಾಳಿನ ಆಗುಹೋಗುಗಳನ್ನು ಅರಿಯಲು ಈ ಕೃತಿ ಅದಷ್ಟು ಸಹಾಯ ನೀಡುತ್ತದೆ.

ನಮ್ಮ ಅದೃಷ್ಟ ಹೀನತೆಯಿಂದ ನಾವುಗಳ ಈ ಲೇಖಕಿಯನ್ನು ಕಳೆದುಕೊಂಡಿದ್ದರೂ, ನಮ್ಮ ಅದೃಷ್ಟದಿಂದ ಸದ್ಯ ಭಾರತಿಯಾರರ ಸ್ನೇಹಿತರಾಗಿಯೂ, ತಮ್ಮ ಪತ್ರಿಕೆಯ ಬರಹಗಾರರಾಗಿದ್ದ ಭಾರತಿಯಾರರನ್ನು ಚೆನ್ನಾಗಿ ಕಂಡಿದ್ದ ಹಣ್ಣುಹಣ್ಣು ಮುದುಕರು ಮಂಡಯಂ ಶ್ರೀ. ಶ್ರೀನಿವಾಸಾಚಾರ್ಯರು ಈಗಲೂ ಬದುಕಿದ್ದಾರೆ. ಈ ಮುಖ್ಯ ಹಿರಿಯರು ಈ ಸಮಯ ದೆಹಲಿಯಲ್ಲಿ

ತಮ್ಮ ಕುಮಾರರೊಂದಿಗೆ ವಾಸಿಸುತ್ತಿದ್ದಾರೆ. ಮತ್ತೊಬ್ಬ ಸ್ನೇಹಿತ ಶ್ರೀ ಕುರಲಿಶುನೆಲ್ಲೆಯಪ್ಪನ್ ಅವರೂ ಇದ್ದಾರೆ. ಈ ಇಬ್ಬರು ಹಿರಿಯರೂ ಶ್ರೀ ಎಸ್. ದೊರೆಸ್ವಾಮಿ ಅಯ್ಯರೂ ತಾವು ಕಂಡ ಭಾರತಿಯನ್ನು ವಿವರಿಸಿ, ಹೊತ್ತಿಗೆಯಾಗಿ ಹೊರತಂದು. ತಮಿಳ್ ಮಕ್ಕಳು ಆ ಹೊತ್ತಿಗೆಯನ್ನು ಉಪಯೋಗಸಿ ಪ್ರಯೋಜನ ಹೊಂದುವಂತೆ ಮಾಡುವುದು ಭಾರತಿಯಾರರಿಗೆ ಪ್ರೀತಿ ಪಾತ್ರರಾದವರು ಮಾಡುವ ಮೊದಲ ಕರ್ತವ್ಯ ಎಂದು ನೆನೆಸುತ್ತೇನೆ.

ಹೇಗೆಂದರೆ, ಹೀಗೆ ಹಲವಾರು ದೃಷ್ಟಿಕೋನಗಳಿಂದ ಅವರ ಬದುಕಿನ ವಿವರಗಳು ಹೊರಬಂದರೆ, ಬಾರತಿಯಾರರ ಪರಿಪೂರ್ಣ ಬದುಕಿನ ಚಿತ್ರ ಹೊರಬರುವುದು. ಬಹಳ ದೂರದಲ್ಲಿರಲಾರದು.

ಚೆನ್ನೈ ರಾ.ಅ. ಪದ್ಮನಾಭನ್
3–9–54

ಮುನ್ನುಡಿ

ಪ್ರಪಂಚದಲ್ಲಿ ಮನುಷ್ಯನಿಗೆ ತನ್ನ ಮಕ್ಕಳಲ್ಲಿಯೂ, ನಂತರ ತನ್ನ ಶಿಷ್ಯರಲ್ಲಿಯೂ ಮಮತೆ ಹೆಚ್ಚು, ಇವರುಗಳಲ್ಲಿ ಅವರು ತನ್ನನ್ನು ಮರೆತು ತೋರುವ ಪ್ರೀತಿ ಅಳತೆಗೆ ಮೀರಿದದು.

ಸುಮಾರು ನಲವತ್ತು ವರುಷಗಳ ಹಿಂದೆ ಪುದುಚೇರಿಯಲ್ಲಿ ಭಾರತಿಯಾರರ 'ಶಿಷ್ಯೆಯಾಗಿಯೂ, ಅಭಿಮಾನ ಪುತ್ರಿಯಾಗಿಯೂ ಇರುವ ಭಾಗ್ಯ ನನಗೆ ಸಿಕ್ಕಿತು. ಇದನ್ನು ಹೇಳಿಕೊಳ್ಳುವುದರಲ್ಲಿ ನನಗೆ ಈಗ ನಾನರಿಯದಂತೆಯೇ ಒಂದು ಹೆಮ್ಮೆ ಉಂಟಾಗುತ್ತಿದೆ.

ಪುದುಚೇರಿಯಲ್ಲಿ ದೇಶಭಕ್ತರ ಗುಂಪಿಗೆ 'ಸ್ವದೇಶಿಗಳು' ಎಂದು ಆಕಾಲದಲ್ಲಿ ಸಾಧಾರಣವಾಗಿ ಹೇಳಲ್ಪಡುತ್ತಿತ್ತು. ಆ ಕಾಲದಲ್ಲಿ ನಾಡಿನ ಬಿಡುಗಡೆಗಾಗಿ ತಾವಾಗಿಯೇ ಆಗಲಿ ಅಥವಾ ನಿರ್ಬಂಧದಿಂದಾಗಲಿ ಪುದುಚೇರಿಯಲ್ಲಿ ವನವಾಸ ಮಾಡುತ್ತಿದ್ದ ದೇಶಭಕ್ತರಲ್ಲಿ ಕವಿಭಾರತಿಯಾರ್, ಶ್ರೀ ವ.ವೆ. ಶು ಅಯ್ಯರ್) (ವ.ವೆ. ಸುಬ್ರಹ್ಮಣಿಯ್ಯರ್) ಶ್ರೀ ಅರವಿಂದ ಘೋಷ್, ಭಾರತಿಯಾರರ 'ಇಂಡಿಯಾ' ಪತ್ರಿಕೆಯನ್ನು ನಡೆಸುತ್ತಿದ್ದ ನನ್ನ ತಂದೆ ಶ್ರೀ ಶ್ರೀನಿವಾಸಾಚಾರ್ಯರು, ಶ್ರೀ ತಿರುಮಲಾಚಾರ್ಯರು ಮುಖ್ಯವಾದವರು. ಮತ್ತು ಹಲವು ದೇಶಭಕ್ತರು ಪುದುಚೇರಿಗೆ ಆಗಾಗ ಬಂದು ಹೋಗುತ್ತಿದ್ದರು.

ಭಾರತಿಯಾರರಿಗೂ, ನನ್ನ ತಂದೆಗೂ ಚೆನ್ನೈಯಲ್ಲಿ ಇರುವಾಗಲೇ ಹತ್ತಿರದ ಬಂಧ ವಿತ್ತು. ಅದರಂತೆಯೇ ಅವರ ಕುಟುಂಬದೊಂದಿಗೆ ನಮ್ಮ ಕುಟುಂಬವೂ ಪಳಗಿತು.

ಭಾರತಿಯಾರರು ನಮ್ಮ ಮನೆಗೆ ಅಡಿಗಡಿಗೆ ಬರುವರು. ಕವಿತೆಯಾದರೂ, ಹಾಡಾದರೂ ತಾವು ರಚಿಸಿದ ಒಡನೆಯೇ ಹಾಡಿತೋರಿಸಿ ಆನಂದ ಪಡುವರು.

ಬರುವುದಕ್ಕೆ ಇದೇ ವೇಳೆ ಎಂದು ನಿಗದಿ ಪಡಿಸಿಕೊಂಡಿರಲಿಲ್ಲ. ತಮಗೆ ಇಷ್ಟ ಬಂದ ವೇಳೆಯಲ್ಲಿ ನಮ್ಮ ಮನೆಗೆ ಬಂದು ಬಿಡುವರು. ಹಲವು ಸಮಯಗಳಲ್ಲಿ ನಾನು ಉಪಾಧ್ಯಾಯರು ಹೇಳಿಕೊಟ್ಟ ಪಾಠಗಳನ್ನು ಓದಿಕೊಂಡೋ ಅಥವಾ ನನ್ನ ತಾಯಿ ಹೇಳಕೊಡುತ್ತಿದ್ದ ಪ್ರಬಂಧಗಳನ್ನು ಹಾಡಿಕೊಂಡೋ ಇರುತ್ತಿದ್ದೆ ಆದರೆ ಭರತಿಯಾರರು ಬಂದರೆಂದರೆ, ನನ್ನ ಗಮನವೆಲ್ಲಾ ಮಹಡಿಯ ಕಡೆಯೇ ಇರುತ್ತಿತ್ತು. ಮಹಡಿಯಲ್ಲಿ ಅವರು ನನ್ನ ತಂದೆಯ ಬಳಿ ಹಾಡಿತೋರಿಸುತ್ತಿದ್ದ ಮೊದಲ ಭಾಗವನ್ನು ನಾನು ಅವರಂತೆಯೇ ಹಾಡಲು ಪ್ರಯತ್ನಿಸುತ್ತಿದ್ದೆ. ನನ್ನನ್ನು ಮೇಲೆ ಮಹಡಿಗೆ ಕರೆದು ತಾವು ಬರೆದು ತಂದ ಬರಹವನ್ನು ನನಗೆ ಕೊಟ್ಟು ಬಿಡುವರು.

ಇದರಲ್ಲಿ ಆಗ ನನಗೆ ಯಾವ ವಿಶೇಷವೂ ತೋರಲಿಲ್ಲ. ಅವರು ಕೊಡುವ ಕಾಗದದ ಬರಹಗಳನ್ನು ಒಂದು ಪುಸ್ತಕದಲ್ಲಿ ಇಟ್ಟಿರುತ್ತಿದ್ದೆ. ದುರದೃಷ್ಟ ವಶಾತ್ ಆ ಪುಸ್ತಕ ಈಗ ನನ್ನ ಬಳಿ ಇಲ್ಲ. ನಳ ವರುಷ (ಸಂವತ್ಸರ) ಕಾರ್ತಿಕಮಾಸ 6ನೆ ತೇದಿ (1916) ಪುದುಚೇರಿಯಲ್ಲಿ ಹೊಡೆದ ಬಿರುಗಾಳಿ ಮಳೆಯಲ್ಲಿ ಆ ಪುಸ್ತಕ ಒಂದು ಗೋಡೆಯ ಅಡಿಯಲ್ಲಿ ಸಿಕ್ಕಿಕೊಂಡು ನಾಶವಾಗಿ ಬಿಟ್ಟಿತು.

ಭಾರತಿಯಾರರೊಂದಿಗೆ ಸ್ವಂತಿಕೆಯಿಂದ ಪಳಗಿದಾಗ ನಾನು ಬಹಳ ಚಿಕ್ಕ ಹುಡುಗಿಯಾಗಿದ್ದುದರಿಂದ, ಅವರ ಕವಿತೆಯಲ್ಲಿ ಹೊರಹೊಮ್ಮುತ್ತಿದ್ದ ಶ್ರೇಷ್ಠವಾದ ಅಭಿಪ್ರಾಯಗಳನ್ನು ಗ್ರಹಿಸುವ ಶಕ್ತಿ ಆಗ ನನಗಿರಲಿಲ್ಲ. ಈಗ ಜ್ಞಾಪಿಸಿಕೊಂಡು ನೋಡಿದರೆ, ಅವರು ಹೇಳಿದ ಒಂದೊಂದು ಪದದಲ್ಲಿಯೂ, ಲೋಕಜ್ಞಾನವೂ, ಅದಕ್ಕೂ ಮಿಂಚಿದ ಹಲವು ತಾತ್ಪರ್ಯ ಗೋಚರವಾಗುತ್ತದೆ.

ಭಾರತಿಯಾರರು ನಮ್ಮ ಮನೆಗೆ ಬಂದ ಒಡನೆಯೇ ನನ್ನ ಕಾಣಿಕೆಯಾಗಿ ಅವರಿಗೆ ಒಂದು ಚೊಂಬು ನೀರು ಎಲೆ, ಅಡಿಕೆ ಇವುಗಳನ್ನು ತಪ್ಪದೆ ಕೊಟ್ಟು ಬಿಡಬೇಕು; ಕೊಟ್ಟು ಬಿಡುತ್ತಿದ್ದೆ. ಹಲವು ಸಲ ಅದರೊಂದಿಗೆ ಶ್ರೀ ವ.ವೆ. ಶು. ಅಯ್ಯರ್ ಅವರೂ ಬರುವರು. ಆದರೆ ಅಯ್ಯರ್ ಮುಕ್ಕಾಲು ವಾಸಿ ಸಾಯಂಕಾಲ ಬರುವರು ಕೆಲಸಮಯ ಬೆಳಿಗ್ಗೆ ಬರುವರು. ಮಧ್ಯದ ಸಮಯದಲ್ಲಿ ಬರುತ್ತಲೇ ಇರಲಿಲ್ಲ.

ಭಾರತಿಯಾರರ ಹಿರಿಮೆಯನ್ನು ಅರಿತು ಅವರನ್ನು ಮನಸಾರ ಕೊಂಡಾಡುವ ಶಿಷ್ಯರುಗಳು, ಸಂಬಂಧಿಕರು. ಸಾಮಾನ್ಯ ಪ್ರಜೆಗಳು ಹಲವರಿದ್ದರು ಎಂದುಕೊಂಡರೂ ಕೂಡ, ಭಾರತಿಯಾರರು ಚಿಂತೆಗೀಡಾಗದೆ ತಮ್ಮ ಕವಿತಾ ರಚನೆಯಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳಲು ಅವರುಗಳಿಂದ ಸಾಧ್ಯವಾಗಲಿಲ್ಲ. ಭಾರತಿಯಾರರೋ ಲೋಕದ ಕಷ್ಟನಷ್ಟಗಳ ನಡುವೆಯೇ ಪ್ರಕೃತಿಯ ಆನಂದವನ್ನು ಕಂಡು ಅನುಭವಿಸುತ್ತಾ ಸದಾಕಾಲವೂ ಸಂತೋಷದಿಂದ ಕಾಲ ತಳ್ಳುತ್ತಿದ್ದರು.

ಭಾರತಿಯಾರರು. ತೀವ್ರ ಮುಂಚೂಣಿಯ ಚಿಂತಕರು. 'ತಮಿಳ್ ಪ್ರಪಂಚ ಈಗ ತಾನೇ ಒಂದು ಚಿಕ್ಕ ಮಗುವಿನ ತರಹ ಕಣ್ತೆರೆದು ಕೈಕಾಲಾಡಿಸಿ ಆಟವಾಡುತ್ತಿದೆ. ಇನ್ನೂ ನಾಲ್ಕು ದಿಕ್ಕಿನಲ್ಲಿಯೂ ಚೆನ್ನಾಗಿ ನೋಡುವ ಶಕ್ತಿ ಏರ್ಪಟ್ಟಿಲ್ಲವೇ! ಎಂದು ಅವರು ಪೇಚಾಡಿಕೊಳ್ಳುವರು.

ಹಳೆಯ ಸಂಪ್ರದಾಯಗಳಲ್ಲಿ ಕೆಲವೊಂದನ್ನು ಬೇರೊಂದಿಗೆ ಕಿತ್ತೆಸೆಯಬೇಕೆಂದು ಅವರು ತುಡಿಯುವರು ಶ್ರೀಮತಿ ಶೆಲ್ಲಮ್ಮಾವಿಗೆ ಈ ವಿಷಯಗಳಲ್ಲಿ ಅಭಿಪ್ರಾಯ ಭೇದ ಮಾಡುವುದು. ಶೆಲ್ಲಮ್ಮಾ ಅಡುಗೆಮನೆಯಲ್ಲಿ ಮಡಿಯಾಗಿ ಅಡುಗೆ

ಮಾಡುತ್ತಿರುವರು. ಆ ಸಮಯ ಭಾರತಿಯಾರರು ಹೊರಗಿನಿಂದ ಬಂದು, ಕೈ ಕಾಲುತೋಳೆದು ನೆಟ್ಟಗೆ ಬಳಗೆ ಹೋಗಿ, ಅಡಿಗೆ ಪಾತ್ರೆಗಳಲ್ಲಿರುವ ಅಡಿಗೆಯನ್ನು ಮುಟ್ಟಿ ಬಿಡುವರು. ಶೆಲ್ಲಮ್ಮಾ ಅದೆಲ್ಲಾ ಮುಸುರೆ, ಮುಟ್ಟಬೇಡಿ, ಎಂದು ಆಕ್ಷೇಪಿಸುವರು. ಭಾರತಿಯಾರರ ಅದಕ್ಕೆಲ್ಲಾ ಈಡುಕೊಡುತ್ತಲ್ಲೇ ಇರಲಿಲ್ಲ. ಇಬ್ಬರಿಗೂ ವಾಗ್ವಾದ ಜೋರಾಗುವುದು. ಕೊನೆಯಲ್ಲಿ ಇವರ ಮಾತೇ ನಿಲ್ಲುವುದು; ಶೆಲ್ಲಮ್ಮಾ ಮಾತನಾಡದೆ ಇದ್ದುಬಿಡುವರು.

ಯಾರು ಊಟಕ್ಕೆ ಕರೆದರೂ ಭಾರತಿಯಾರರು ಒಪ್ಪಿಕೊಂಡು ಬಿಡುವರು. ಜಾತಿ, ಮತ ಏನನ್ನೂ ನೋಡುತ್ತಿರಲಿಲ್ಲ. ಬಾಯಲ್ಲಿ ಹಾಡುವಂತೆಯೇ ನೆನಸಿದನ್ನು ಕಾರ್ಯದಲ್ಲಿಯೂ ಮಾಡಿಬಿಡುವರು. ಅದರಿಂದ ಎಷ್ಟು ಕಷ್ಟವಾದರೂ ಹಿಂತೆಗೆಯರು, ಯಾರು ಏನು ಹೇಳಿದರು ಅದಕ್ಕೆ ಬೆಲೆಕೊಡುತ್ತಿರಲಿಲ್ಲ.

ಭಾರತಿಯಾರರು ಯಾವ ಹಾಡನ್ನೂ ಬಹಳ ಗಂಭೀರತೆಯಿಂದಲೂ, ಭಾವನೆ ತುಂಬುವಂತೆಯೂ ಹಾಡುವರು.

ಕೇಳುವವರ ಮೈ ಪುಳಕಾಂಕಿತ ತಗೆದುಕೊಳ್ಳುವುದು ಕೆಲವು ಹಾಡುಗಳಲ್ಲಿ ಅವರು ತಮ್ಮ ಬದುಕನ್ನೇ ಚಿತ್ರಿಸಿದ್ದಾರೆ. ಸಾಧಾರಣವಾದ ಕುಮ್ಮಿ (ಜಾನಪದ) ಹಾಡುಗಳು, ಹಿಂದೂಸ್ತಾನಿ ಮೆಟ್ಟುಗಳು, ಭವ್ಯವಾದ ಕೀರ್ತನೆಗಳು ಈ ತರಹದ ಅನೇಕ ಹಾಡುಗಳನ್ನು ಕಟ್ಟಿದ್ದಾರೆ.

ಈಗಿನ ಕಾಲದಲ್ಲಿ ದೊಡ್ಡ ದೊಡ್ಡ ಹಾಡುಗಾರರು ಭಾರತಿಯಾರರ ಹಾಡುಗಳನ್ನು ಹಲವುರಾಗಗಳಲ್ಲಿ ಹಲವು ಮೆಟ್ಟುಗಳಲ್ಲಿ (ವರ್ಣಜಾಲಗಳಲ್ಲಿ) ಬಹಳ ಸುಂದರವಾಗಿ ಹಾಡುತ್ತಾರೆ. ಆದರೂ ಭಾರತಿಯಾರರು ಹಾಡಿದುದನ್ನು ನೇರಾಗಿ ಕೇಳಿದವರಿಗೆ ಇದು ತೃಪ್ತಿ ಕೊಡುವುದಿಲ್ಲ. ಅವರು ಹಾಡುತ್ತಿದ್ದ ಗಾಂಭೀರ್ಯವೂ, ತನ್ಮಯವಾಗಿ ಭಾವನೆ ಹೊರಹೊಮ್ಮುವಂತೆ ಹಾಡುತ್ತಿದ್ದುದೂ, ಬೇರೆಯವರು ಹಾಡುವಾಗ ಇಲ್ಲ.

ಇಂದು ಅವರ ಪ್ರಸಿದ್ಧಿ ಪಸರಿಸದ ಜಾಗವಿಲ್ಲ. ಅವರ ಕವಿತೆಗಳು ಬೆಳಗದ ಜಾಗವಿಲ್ಲ. ಇದನ್ನೆಲ್ಲಾ ಕಾಣಲು ಅವರು ಇಲ್ಲವಲ್ಲಾ ಎಂದು ನನ್ನ ಮನ ಅಡಿಗಡಿಗೆ ನೋಯುವುದು. ನಂತರ ಅವರ ಮಿಥ್ಯೆಯಾದ ಶರೀರ ಇಲ್ಲವಾದರೂ, ಎಂದೆಂದಿಗೂ ನಾಶವಾಗದ ಅವರ ಹಾಡುಗಳಿಂದ ಅವರು ಅಮರರಾಗಿರುವುದನ್ನು ಕಂಡು ಸಮಾಧಾನ ಹೊಂದುವೆ.

ಆ ಕಾಲದಲ್ಲಿ ದಿನಗಳಲ್ಲಿ) ಅವರು ಶಾಂತಿ ಸಮಾಧಾನಗಳಿಂದ ಬಾಳುವಂತೆ ಮಾಡಲು ಯಾರಿಂದಲೂ ಸಾಧ್ಯವಾಗಲಿಲ್ಲ. ಇಂದಾದರೂ ಕಣ್ಣೆದಿರೇ ಕಾಣುವ ಮಹಾನ್‌ಗಳನ್ನು ಕೊಂಡಾಡಿ, ಅವರುಗಳು ಶಾಂತಿ ಸಮಾಧಾನದಿಂದ

ಬಾಳುವಂತೆ ನೋಡಿಕೊಳ್ಳುವುದು ತಮಿಳ್ ಮಕ್ಕಳ ಮುಖ್ಯ ಕರ್ತವ್ಯ.

ಭಾರತಿಯಾರರ ಬಗ್ಗೆ ನನಗೆ ತಿಳಿದುದನ್ನು ಇತರರೂ ಅರಿಯಲಿ ಎಂದು ಏನೋ ಬರೆಯಲು ಪ್ರಾರಂಭಿಸಿದೆ. ಈ ಬರಹಗಳು 1938–39ರಲ್ಲಿ ಬರೆದದ್ದು. ಇದು ಈಗ ಪ್ರಕಟವಾಗುತ್ತಿದೆ. ನಾನು ಈಗಿನ ಕಾಲದ ಹೆಣ್ಣು ಮಕ್ಕಳ ಹಾಗೆ ವಿಶ್ವವಿದ್ಯಾಲಯದಲ್ಲಿ ಓದಿದವಳಲ್ಲ. ಮನೆಯಲ್ಲಿ ನಮ್ಮ ತಂದೆ ಹೇಳಿಕೊಟ್ಟ ಓದುಬರಹವನ್ನು ಆಧಾರವಾಗಿಟ್ಟುಕೊಂಡೇ ಈ ಕೃತಿಯನ್ನು ಬರೆದಿದ್ದೇನೆ. ಕೊರತೆಗಳನ್ನು ನೀಗಿಸಿ, ಸಾರವನ್ನು ಆಸ್ವಾದಿಸುವುದು ಹಿರಿಯರ ಕೆಲಸ.

ಬೆಂಗಳೂರು **ಮ.ಗೋ. ಯದುಗಿರಿ**

28–7–54

ಭಾರತಿಯಾರರ ನೆನಪುಗಳು

(1) 'ಏಲೇಲೋ ಪಾಟ್ಟು'

ಶ್ರೀ ಭಾರತಿಯಾರರಿಗೆ ಸಂಗೀತ ಕಛೇರಿಗಳಿಗಿಂತ, ಹಾವಾಡಿಗ, ಮಡಿವಾಳ, ಬತ್ತಕುಟ್ಟುವ ಹೆಣ್ಣು ಮಕ್ಕಳು, ಮೀನುಗಾರರು, ರೈತರು ಇವರುಗಳ ಜಾನಪದ ಹಾಡುಗಳೆಂದರೆ ಬಹಳ ಇಷ್ಟ (ತಮ್ಮ ಕೆಲಸದ ಶ್ರಮ ನೀಗುವಂತೆ ತಾನೇತಾನಾಗಿ ಅವರುಗಳು ಹಾಡಿಕೊಳ್ಳುವುದರಿಂದ ಭಾವನೆಗಳು ಅಡತಡೆಯಿಲ್ಲದೆ ಪ್ರವೇಶಿಸುತ್ತವೆ)

ಒಂದು ದಿನ ಸಂಜೆ ಪುದುಚೇರಿಯ ಕಡಲ ತೀರದಲ್ಲಿ ನಮ್ಮ ಮನೆಯ ಮಕ್ಕಳು ಆರುಜನ, ಶ್ರೀಮತಿ ಶೆಲ್ಲಮ್ಮಾ ಮತ್ತು ಭಾರತಿಯಾರರು ಮುಂತಾಗಿ ಎಂಟು ಜನವೂ ಸೇರಿ ತಮಾಷೆಯಾಗಿ ಮಾತನಾಡುತ್ತಿದ್ದೆವು. ಮೀನು ಹಿಡಿಯುವರು. ಮೀನುಗಳನ್ನು ತುಂಬಿಕೊಂಡು ಸಂತೋಷವಾಗಿ ಹಾಡುತ್ತಾ ದೋಣಿಯನ್ನು ದಡಮುಟ್ಟಿಸುತ್ತಿದ್ದರು. ನಮ್ಮೊಂದಿಗೆ ಮಾತನಾಡುತ್ತಿದ್ದ ಭಾರತಿಯವರು ಅವರ ಹಾಡಿಗೆ 'ಶಭಾಶ್' ಎಂದು ಹೇಳಲಾರಂಭಿಸಿದರು. (ಲೇಖಕಿ) ನಾನು: ಇದೇನದು ಆಶ್ಚರ್ಯ! ಅವರುಗಳು ಅರ್ಥರಾಗ ತಾಳಗಳಿಲ್ಲದೆ ಹಾಡುವ ಹಾಡನ್ನು ನೀವು ಇಷ್ಟೊಂದು ಮೆಚ್ಚುತ್ತೀರಿ ! ನಮಗೆಲ್ಲಾ ಏನೂ ತಿಳಿಯುವುದಿಲ್ಲ. ಎಂದೆ!

ಶೆಲ್ಲಮ್ಮಾ: ಅವರ ಸ್ವಭಾವ ನನಗೆ ಗೊತ್ತಿಲ್ಲವೆ? ಬೀದಿಯಲ್ಲಿ ಮರಿಯಮ್ಮನ ತಮಟೆ ಬಡಿಯುವವನು ಬಂದರೆ ತನ್ನನ್ನು ಮರೆತು ಇವರು ಕುಣಿದಾಡುತ್ತಾರೆ, ಈಗ ಸಂಜೆಯ ಹೊತ್ತು, ಕಡಲ ದಂಡೆ ಅಲೆಗಳ ಕಲರವ ಇದರೊಂದಿಗೆ ಮೇಳೈಸುವ ಅರ್ಥವಿಲ್ಲದ ಹಾಡು, ಕೇಳಬೇಕಾ?

ತಕ್ಷಣ ಭಾರತಿಯಾರರು ಎದ್ದರು. ಒಂದು ಪೆನ್ಸಿಲ್ ಕಾಗದವನ್ನೆತ್ತಿಕೊಂಡು ಆ ಮೀನುಗಾರನ ಬಳಿ ಹೋದರು. ಅವರುಗಳು ಹಾಡುವ ಹಾಡಿನ ಪ್ರತಿ ಸಾಲನ್ನು ಅಲ್ಲಿದ್ದ ಒಬ್ಬ ವಯಸ್ಸಾದ ಮುದುಕನನ್ನು ಬಿಡಿಸಿ ಹೇಳುವಂತೆ ಕೇಳಿದರು. ಅದರಲ್ಲಿದ್ದ ತಪ್ಪುಗಳನ್ನು ಸರಿಪಡಿಸಿ ತಿದ್ದಿ ಬರೆದುಕೊಂಡು ನಮ್ಮ ಬಳಿ ಬಂದರು.

'ನೀವೆಲ್ಲಾ ನನ್ನನ್ನು ಗೇಲಿ ಮಾಡುತ್ತೀರಲ್ಲಾ? ಪ್ರಪಂಚದ ಅಸ್ತಿತ್ವವನ್ನು (ಆರಂಭ) ಆ ಮೀನುಗಾರನು ನನಗೆ ಉಪದೇಶ ಮಾಡಿದ' ಎಂದರು.

ಶೆಲ್ಲಮ್ಮಾ:– ಆಹಾ! ನೀವು ಹೊಲೆಯರಿಂದ ಹಿಡಿದು ಮೀನುಗಾರನ ತನಕ ಎಲ್ಲರಿಗೂ ಶಿಷ್ಯರೇ! ಆದಿ ದೈವವಾದ ನಮ್ಮ ಗುರುವಿಗೆ ಮಾತ್ರ ಶಿಷ್ಯರಲ್ಲ!

ಭಾರತಿ: ಇದೋನೋಡು ಶೆಲ್ಲಮ್ಮಾ – ಅರ್ಥವಿಲ್ಲದ ಗೊಡ್ಡು ನಂಬಿಕೆಗಳನ್ನು ನನಗೆ ಹೇಳಬೇಡ. ಇಂತಹ ತಿರುಳಿಲ್ಲದ, ನಿಜವಲ್ಲದ ವಿಚಾರಗಳನ್ನು ನಾನು ನನ್ನ ಪ್ರಾಣ ಹೋದರೂ ನಂಬುವುದಿಲ್ಲ. ಮೀನುಗಾರನು ಅವನ ಕೆಲಸವನ್ನು ಅವನು ಮಾಡಿದರೂ ನಮ್ಮಿಬ್ಬರ ಉಸಿರು ಒಂದೇ.

ನಡುವೆ ನಾನು: ಇದೇನಿದು! ತಮಾಷೆಯಾಗಿ ಆರಂಭಿಸಿದುದು ಜಗಳಕ್ಕೆ ಎಡೆಕೊಡುತ್ತಿದೆಯಲ್ಲಾ! ಮೀನುಗಾರನ ಹಾಡಿನ ಅರ್ಥವನ್ನು ಅಂದವನ್ನೂ ನಮಗೆ ತಿಳಿಸಿ ಎಂದೆ.

ತಾವು ಬರೆದು ತಂದ ಕಾಗದವನ್ನಿಟ್ಟುಕೊಂಡು ಭಾರತಿಯಾರರು ಹಾಡಲಾರಂಭಿಸಿದರು. ಅರ್ಧಗಂಟೆ ಸರಿದು ಹೋಯಿತು. ಎಲ್ಲರೂ ಆ ಹಾಡಿನಲ್ಲಿ ತನ್ಮಯರಾಗಿದ್ದೆವು.

ಅವರು ಹಾಡಿದ ಮೆಟ್ಟು (ರಾಗ), ಕಷ್ಟ ಪಡದೆ ಹಾಡಿದ್ದು – ಈಗಲೂ ನನ್ನ ಕಿವಿಯಲ್ಲಿ ಉಲಿಯುತ್ತಿದೆ.

ಅವರು ಹಾಡಿದ ಕೂಡಲೇ ನನ್ನ ಅಣ್ಣ 'ಈ ಹಾಡಿನ ಅರ್ಥವನ್ನು ನಮಗೆ ಹೇಳಲೇ ಇಲ್ಲ. ಆಗಲೇ ಗಂಟೆ ಎಂಟು. ಹೊರಡುವುದಕ್ಕೆ ಮುಂಚೆ ಅದರ ತಾತ್ಪರ್ಯವನ್ನು ತಿಳಿಸಿ!' ಎಂದ. ಆ ಹಾಡಿನ ಅಂದದಲ್ಲಿ ಮುಳುಗಿಹೋದ ನಮಗೆ ಆಗ ತಾನೇ ಸಮಯದ ಅರಿವಾಯಿತು.

ಭಾರತಿ: ಚಾಮಿ, ಈ ಪ್ರಪಂಚ ಹುಟ್ಟುವುದಕ್ಕೆ ಮೊದಲು ಏನಿತ್ತು ಹೇಳು ನೋಡೋಣ?

ಚಾಮಿ (ನನ್ನ ಅಣ್ಣ): ನಾವು ನಿಮ್ಮನ್ನು ಕೇಳಿದರೆ ನೀವು ನಮ್ಮನ್ನೇ ಪ್ರಶ್ನಿಸುತ್ತೀರಲ್ಲಾ! ನನಗೇನು ಗೊತ್ತು?

ಭಾರತಿ: ನಾನು ಗುರು ಮಾತ್ರವಲ್ಲ. ಶಿಷ್ಯ-ಗುರು ಇಬ್ಬರಾಗಿ ಇರುವ ಒಬ್ಬ ಹುಚ್ಚ (ಮರುಳ) ನಾನೇ ಎಲ್ಲಾ ಹೇಳಿ ಬಿಟ್ಟರೆ, ನಿನಗೆ ತಿಳಿದ ವಿಷಯವನ್ನು ನಾನು ಹೇಗೆ ಅರಿಯಲಿ?

ನಾನು: ಭೂಮಿ ಹುಟ್ಟುವುದಕ್ಕೆ ಮೊದಲು ಬರಿಯ ನೀರು ಇತ್ತೆಂದು ನಮ್ಮ 'ನಾಲಾಯಿರ ದಿವ್ಯ ಪ್ರಬಂಧ'ದಲ್ಲಿದೆ. ಕ್ಷೀರ ಸಾಗರದಲ್ಲಿ ಆಲದೆಲೆಯ ಮೇಲೆ ಪವಡಿಸಿದ – ನಮ್ಮ ದೇವರಿದ್ದನಂತೆ !

ಭಾರತಿ: ಚೆನ್ನಾಗಿ ಹೇಳಿದೆಯಲ್ಲಾ ! ನಮ್ಮ ದೇವರು ಬೇರೆ, ನಿಮ್ಮ ದೇವರು ಬೇರೆಯೇ? ಇನ್ನೂ ಈ ಹಳೆಯ ಪಿತ್ಥ ಬಿಡಲಿಲ್ಲವೆ?

ನಾನು: ನಾನು ಇನ್ನೂ ಚಿಕ್ಕವಳು; ನನಗೆ ಅಷ್ಟೆಲ್ಲಾ ಅರಿವು ಇಲ್ಲ. ಹೀಗೆಯೇ ಹೊತ್ತಾಗಿ ಬಿಡುತ್ತದೆ.

ನೀವು ಆ ಹಾಡಿನ ಅರ್ಥ ತಿಳಿಸಿ! ನಾನು ಅವರ ಅಂಗಿಯನ್ನು ಹಿಡಿದು ಎಳೆದೆ

ಭಾರತಿ: ಆದಿಪುರುಷನು ಮೊಟ್ಟಮೊದಲು ತಾನೇ ಮೀನಾಗಿ ಅವರತರಿಸಿದ. ನಂತರ ಆಮೆಯಾಗಿ ನೀರಿನಲ್ಲಿ ನೆಲದಲ್ಲೂ ಬಾಳುವ ಪ್ರಾಣಿಯಾದ. ಆನಂತರ ಹಂದಿಯಾಗಿ (ಸೂಕರ) ನೆಲದಲ್ಲಿ ಹೆಚ್ಚಾಗಿ, ನೀರಿನಲ್ಲಿ ಕಡಿಮೆಯಾಗಿ ವಾಸಿಸಲಾರಂಭಿಸಿದ. ನರಸಿಂಹನಾಗಿ ಅರ್ಧ ಮೃಗವಾಗಿ ಅರ್ಧ ಮನುಷ್ಯನಾಗಿ ಇದ್ದ. ಈ ಮೃಗರೂಪದಲ್ಲಿ ಎಂತಹ ತತ್ವ ಅಡಗಿದೆ! ಎಂದು ವರ್ಣಿಸಿದ್ದಾರೆ. ಏಲೇಲೋ ಹಾಡಿನಲ್ಲಿ ಭಾರತವಂತೆ, ಪುರಾಣವಂತೆ, ಸಂಗೀತ ಕಛೇರಿಯಂತೆ! ಅನುಭವಿಸಲಾರದ ಜನಗಳು!

ಶೆಲ್ಲಮ್ಮಾ: ಏಕೆ ನಿಲ್ಲಿಸಿ ಬಿಟ್ಟರಿ? ಮೇಲೆ ಹೇಳಿ

ಭಾರತಿ: ಬಂದೆಯಾ ದಾರಿಗೆ ! ಈಗ ಹಾಡು ಹಿಡಿಸಿತೆ ನನ್ನನ್ನು ತಮಾಷೆ ಮಾಡಿದೆಯಲ್ಲಾ?

ಶೆಲ್ಲಮ್ಮಾ:- ಇದೆಲ್ಲಾ ನನಗೆ ಗೊತ್ತೇ? ಅವರುಗಳ ಹಳ್ಳಿಯ ಕಚಪಿಚ ಉಚ್ಚಾರಣೆಯಲ್ಲಿ ಏನೂ ಗೊತ್ತಾಗುವುದೇ ಇಲ್ಲ !

ಭಾರತಿ: ಗಮನವಿಟ್ಟು ಕೇಳಿದರೆ ತಿಳಿಯುತ್ತದೆ. ನಂತರ ಮಹಾವಿಷ್ಣು ಕುಬ್ಜನಾಗಿ ಹುಟ್ಟಿ, ಮನುಷ್ಯನಿಗೆ ಮೂಲ ಪುರುಷನಾದನಂತೆ, ಮನುಷ್ಯನಾದ ಮೇಲೆ ಬದುಕಲು ಒಂದು ನಿಯಮವಿರಬೇಕಲ್ಲವೆ? ಶ್ರೀ ರಾಮನಾಗಿ ಹುಟ್ಟಿ – ಧರ್ಮವನ್ನು ಪಾಲಿಸಿದನಂತೆ. ನಂತರ ಬರೀ ಧರ್ಮವೇ ಆದರೆ – ಅದರಲ್ಲಿ ಸಾರವಿಲ್ಲ ಎಂದು. ಕೃಷ್ಣನಾಗಿ ಹುಟ್ಟಿ, ಸಮಯಕ್ಕೆ ತಕ್ಕಂತೆ ನಡೆದುಕೊಳ್ಳುವ ಯುಕ್ತಿಗಳನ್ನೂ, ಧರ್ಮವನ್ನೂ ಲೋಕ ನೀತಿಯನ್ನೂ, ತನ್ನ ಮುತ್ತು ಅರ್ಜುನನ ಮೂಲಕ ಪ್ರತಿಪಾದಿಸಿದನಂತೆ. ಬುದ್ಧನಾಗಿ ಹುಟ್ಟಿ ತ್ಯಾಗ, ಅಹಿಂಸೆಗಳನ್ನು ಎತ್ತಿ ಹಿಡಿದೆ. ಕಲ್ಕಿಯಾಗಿ ಹುಟ್ಟಿ ಎಲ್ಲ ಮತಗಳನ್ನೂ ಒಂದಾಗಿಸುತ್ತಾನೆ. ಅದನ್ನು ನಾವು ನೋಡುವುದಿಲ್ಲ. ಒಂದು ವೇಳೆ ನಮ್ಮ ಮುಂದಿನವರು ನೋಡ ಬಹುದೇನೋ! ಇದುವೇ ಈಹಾಡಿನ ಅರ್ಥ.

ಶೆಲ್ಲಮ್ಮಾ: ಇದೇನು ಶಿವನ ಹೆಸರೇ ಇಲ್ಲ?

ನಾನು: ವಿಷ್ಣುವೇ ಈ ಹತ್ತು ಅವತಾರಗಳನ್ನು ಎತ್ತಿದುದು: ಅವನೇ ಮೂಲಪುರುಷ.

ಭಾರತಿ: ಶಿವನೇನು? ವಿಷ್ಣುವೇನು? (ಇಬ್ಬರೂ ಒಂದೇ, ಎಲ್ಲವೂ ಒಬ್ಬನೇ!

ನೀನು ಶಿವ ಎನ್ನುತ್ತೀಯ, ಯದುಗಿರಿ ವಿಷ್ಣು ಎನ್ನುತ್ತಾಳೆ. ನಾನು ಎಲ್ಲರೂ ಒಂದೇ ಎನ್ನುತ್ತೇನೆ, ಹೊತ್ತಾಯಿತು ಬನ್ನಿ, ಹೊರಡಿ, ಹೋಗೋಣ' ಎಂದು ಭಾರತಿ ಎದ್ದರು. ನಾವೂ ಎಲ್ಲರೂ ಎದ್ದು ಮಾತಾಡುತ್ತಾ ಮನೆ ಸೇರಿದೆವು.

ಈ ಸಂಭವ ನಡೆದು ಎಷ್ಟು ವರ್ಷಗಳಾಗಿ ಹೋಯಿತು! ಆದರೂ ಇಂದಿಗೂ ನನ್ನ ಮನಃಚಕ್ಷುವಿನಲ್ಲಿ ಈಗ ತಾನೇ ನಡೆದಂತೆ ನಾನು ಹಗಲುಗನಸು ಕಾಣುವುದುಂಟು.

(2) 'ವಿಟ್ಟುವಿಡುದಲ್ಯೆ'

ಒಂದು ಶುಕ್ರವಾರ ಸಂಜೆಯ ಸಮಯದಲ್ಲಿ ಸ್ವಾಮಿನಾಥ ದೀಕ್ಷಿತರ ಮಗಳು ಮೀನಾ, ನಾನು ಇಬ್ಬರೂ ಈಶ್ವರನ್ ಧರ್ಮರಾಜಾ ಬೀದಿಯಲ್ಲಿರುವ ಭಾರತಿಯಾರರ ಮನೆಗೆ ಹೋದೆವು. ಶೆಲ್ಲಮ್ಮಾ ಎಂದಿನಂತೆ ಲವಲವಿಕೆ ಯಾಗಿರಲಿಲ್ಲ. ತಿಂಗಳ ಕೊನೆ.

ನಾವೆಲ್ಲರೂ ಸಾಧಾರಣವಾಗಿ ಎಂದಿನಂತೆ ಮಾತಾಡುತ್ತಿದ್ದೆವು. ಮೀನಾ ಆರು ಗಂಟೆಯ ಹೊತ್ತಿಗೆ ಮನೆಗೆ ಹೋದಳು. ನಂತರ ಭಾರತಿಯಾರರು ಹೊರಗೆ ಹೋದರು. ಮನೆಯಲ್ಲಿ ನಾನು ಮತ್ತು ಶೆಲ್ಲಮ್ಮಾ ಇಬ್ಬರೇ. ಇಬ್ಬರೂ ಸ್ವಲ್ಪ ಹೊತ್ತು ಸುಮ್ಮನಿದ್ದೆವು. ಐದು ನಿಮಿಷದ ನಂತರ ಮಾತಾಡಲಾರಂಭಿಸಿದೆವು.

ನಾನು:– ಶೆಲ್ಲಮ್ಮಾ, ಮೈ ಚೆನ್ನಾಗಿಲ್ಲವೆ? ಏನೋ ಒಂದು ತರಹ ಇರುವಿರಲ್ಲಾ?

ಶೆಲ್ಲಮ್ಮಾ:– ಮೈಗೇನೂ ಇಲ್ಲ ಯದುಗಿರಿ, ಮನಸ್ಸಿನಲ್ಲಿ ಚಿಂತೆ ಹುಳುವಿನಂತೆ ಕೊರೆಯುತ್ತಿದೆ. ಯಾರೊಂದಿಗಾದರೂ ತೋಡಿಕೊಂಡರೆ ಕಡಿಮೆಯಾಗ ಬಹುದೇನೋ. ನೀನೋ ಚಿಕ್ಕವಳು, ನಿನ್ನ ಬಳಿ ಹೇಳಿ ಏನು ಪ್ರಯೋಜನ?

ನಾನು:– ಪರವಾಗಿಲ್ಲ, ಏನೆಂದು ಹೇಳಬಾರದೆ?

ನಾನು ಭಾರತಿಯಾರರನ್ನು ಕೇಳುತ್ತೇನೆ. 'ಮಹಿಳಾ ವಿಮೋಚನೆಯ ಬಗ್ಗೆ ಬಾಯಲ್ಲಿ ಹೇಳುತ್ತೀರಲ್ಲಾ? ತಾವು ನಡೆಯಲ್ಲಿ ಹೀಗೆ ಮಾಡಬಹುದೇ?' ಎಂದು ಕೇಳುತ್ತೇನೆ' – ಶೆಲ್ಲಮ್ಮಾ ಹೇಳಿದರು. 'ಅಯ್ಯೋ ಮಗುವೆ! ನಿನಗೇನೂ ಗೊತ್ತಾಗುವುದಿಲ್ಲ. ಈಗ ತಿಂಗಳ ಕೊನೆ. ಹಾಲಿನವನಿಗೆ ಹೋದ ತಿಂಗಳ ಬಾಕಿ ಕೊಟ್ಟಿಲ್ಲ. ಅವನು ನಿನ್ನೆ ಬಂದು ಕೇಳಿದ. ಬರುವ ತಿಂಗಳು ಕೊಡುತ್ತೇನೆ ಎಂದೆ. ಅವನು ಆಗುವುದಿಲ್ಲ ಎಂದ. ನಾನು ಅವನನ್ನು ಸಮಾಧಾನ ಮಾಡಿ ಕಳುಹಿಸಿದೆ. ಇವರು (ಭಾರತಿ) ನೋಡು – ಈ ದಿನ 'ಸ್ವದೇಶಮಿತ್ರನ್' ಪತ್ರಿಕೆಗೆ ಕಳುಹಿಸಬೇಕಾದ ಲೇಖನವನ್ನು ಕಳುಹಿಸಲೇ ಇಲ್ಲ. ಅವರು ಹೇಗೆ

ಹಣ ಕಳುಹಿಸುತ್ತಾರೆ? ಇವತ್ತು ಬೆಳಿಗ್ಗೆ ಸ್ನಾನ ಮಾಡಿ ಕಾಫಿ ಕುಡಿದು, ಎಲೆ ಅಡಿಕೆ ಎಲ್ಲಾ ಕ್ರಮವೂ ಆದ ಮೇಲೆ, ಇವರಿಗೆ ಎಷ್ಟೆಷ್ಟೋ ಹೇಳಿ ಮೇಜಿನ ಮೇಲೆ ಕಾಗದ, ಪೆನ್ನು, ಇಂಕ್‌ಬುಡ್ಡಿ ಎಲ್ಲವನ್ನೂ ಅಣಿ ಮಾಡಿಬಿಟ್ಟು, ಅಕ್ಕಿಯನ್ನು ಆರಿಸಿ ಇಟ್ಟೆ, ನಂತರ ಸ್ನಾನಕ್ಕೆ ಹೋದೆ. ಇವರಿಗೆ (ಬರೆಯಲು ಸಾಧ್ಯವಾಗಲಿಲ್ಲ). ಮೊರದಲ್ಲಿದ್ದ ಅಕ್ಕಿಯಲ್ಲಿ ಸ್ವಲ್ಪ ಭಾಗವನ್ನು ತೆಗೆದುಕೊಂಡು ಹೋಗಿ, ಹಿತ್ತಲಲ್ಲಿ ಚೆಲ್ಲಿ – ಅದನ್ನು ಹೆಕ್ಕಿ ತಿನ್ನುವ ಗುಬ್ಬಿಗಳನ್ನು ನೋಡಿ ಹಾಡುತ್ತಿದ್ದರು.

ಅಕ್ಕಿ ತೊಳೆದು ಒಲೆಯ ಮೇಲಿಡಲು ಬಂದು ನೋಡುತ್ತೇನೆ! ನಾನಿಟ್ಟ ಅಕ್ಕಿಯಲ್ಲಿ ಕಾಲುಭಾಗ ಕೂಡ ಇಲ್ಲ! ನನಗೆ ಅಳು ಬಂದು ಬಿಟ್ಟಿತು. ಇವರು ಅದನ್ನು ನೋಡಿ – 'ಇಲ್ಲಿ ಬಾ ಶೆಲ್ಲಮ್ಮಾ – ಈ ಗುಬ್ಬಿಗಳನ್ನು ನೋಡು! ಎಷ್ಟು ಸಂತೋಷದಿಂದಿವೆ! ನಾವೂ ಏಕೆ ಹೀಗಿರಬಾರದು? ನೀನೂ ಯಾವಾಗಲೂ ಗೊಣಗುತ್ತೀಯಾ – ನಾನೂ ಯಾವಾಗಲೂ ಸಿಟ್ಟಿಗೇಳುತ್ತೇನೆ. ಈ ಗುಬ್ಬಿಗಳು ನಮಗೆ ಹೊಂದಾಣಿಕೆಯನ್ನು ಕಲಿಸಿ ಕೊಡುತ್ತವೆ. ನಾವು ಅದನ್ನು ನೋಡದೆ ಅಲಕ್ಷಿಸುತ್ತೇವೆ. ನಮಗಿಂತ ಮೂಢರು ಯಾರಾದರೂ ಇದ್ದಾರೆಯೆ ಈ ಲೋಕದಲ್ಲಿ?' ಎಂದರು.

ನನಗೂ ಸಹಿಸಲಿಲ್ಲ. 'ನನ್ನ ಸಿಟ್ಟನ್ನು ಏಕೆ ಕೆರಳಿಸುತ್ತೀರೆ? ಮಕ್ಕಳು ಅಣ್ಣಿಯಮ್ಮ (ಪೊನ್ನು ಮುರುಗೇಶ ಪಿಳ್ಳೆಯವರ ಪತ್ನಿ) ಮನೆಯಿಂದ ಬರುವ ವೇಳೆಗೆ ಒಲೆ ಹಚ್ಚಿ ಅಡಿಗೆ ಮಾಡಲು, ಆರಿಸಿ ಇಟ್ಟಿದ್ದ ಅಕ್ಕಿಯನ್ನು ಗುಬ್ಬಿಗಳಿಗೆ ಹಾಕಿಬಿಟ್ಟಿರಲ್ಲಾ! ಮತ್ತೆ ಆರಿಸಲು ಹತ್ತು ನಿಮಿಷವಾದರೂ ಆಗುತ್ತದೆ. ನಿಮಗೆ ಹಣ ಬರಲು ಇನ್ನೂ ಎಷ್ಟು ದಿನವೋ ಏನೋ? ನೀವಿನ್ನೂ ಲೇಖನವನ್ನು ಬರೆಯಲೇ ಇಲ್ಲ. ಹಾಲಿನವನು ಬಂದು ಮಾನ ತೆಗೆಯುತ್ತಾನೆ. ಕೆಲಸದವಳು ಎರಡು ದಿನಗಳಿಂದ ಬರಲೇ ಇಲ್ಲ. ನೀವು ಇದನ್ನೆಲ್ಲಾ ಯೋಚಿಸಬೇಡವೇ? ಗುಬ್ಬಿಯಂತೆ ಸಂತೋಷವಾಗಿರು ಎನ್ನುತ್ತೀರಲ್ಲಾ! ದೇವರಿಗೆ ಕಣ್ಣೇ ಇಲ್ಲ. ಈ ಮಕ್ಕಳನ್ನು ಕೊಟ್ಟು ನನ್ನನ್ನು ಹಿಂಸಿಸುತ್ತಾನೆ' ಎಂದು ಹೇಳಿಕೊಂಡೇ ಹೇಗೋ ಕೆಲಸವನ್ನು ಮುಗಿಸಿದೆ.

ಅಡಿಗೆ ಮನೆಯಿಂದ ಹೊರಗೆ ಬಂದರೆ, ಇವರು ಶಕುಂತಲಾ ಪಾಪಾವಿಗೆ 'ವಿಟ್ಟು ವಿಡುದಲೈಯಾಹಿ' ಎಂಬ (ಬಿಟ್ಟು ಬಿಡುಗಡೆಯಾಗಿ) ಹಾಡನ್ನು ಹಾಡಿ ತೋರಿಸುತ್ತಿದ್ದಾರೆ. ಮಗುವೂ ಸಂತೋಷದಿಂದ ಕುಣಿದಾಡುತ್ತಿದ್ದಾಳೆ! ಹಾಡಿನ ಆನಂದದಲ್ಲಿ ಇವರು ಮೈಮರೆತಿದ್ದಾರೆ. ಗುಬ್ಬಿಗಳೋ ಅಕ್ಕಿಯನ್ನು ಹೆಕ್ಕಿ ಹೆಕ್ಕಿ ತಿನ್ನುತ್ತಿವೆ. ತಂಗಮ್ಮ (ಮಗಳು) ಮಾತಾಡದೆ ಕುಳಿತಿದ್ದಾಳೆ. 'ಈ ಮನೆಯಲ್ಲಿ ಎಲ್ಲರೂ ಸಂತೋಷದಿಂದಿರುವಾಗ ನಾನೇಕೆ ಅದನ್ನು ಕೆಡಿಸಲಿ?' ಎಂದು ನಾನೂ ಅಲ್ಲಿಯೇ ಕುಳಿತೆ.

ಕುಣಿತ, ಹಾಡು ಎಲ್ಲವೂ ಮುಗಿಯಲು 12 ಗಂಟೆ ಆಯಿತು. ಶಕುಂತಲಾ 'ಅಪ್ಪ, ಬಾ – ಹಸಿವಾಗುತ್ತದೆ, ಊಟ ಮಾಡೋಣ' ಎಂದಳು. ಇವರೂ ಎದ್ದು ಬಂದು ಊಟಕ್ಕೆ ಕುಳಿತರು. ನನ್ನನ್ನು ನೋಡಿ 'ಶೆಲ್ಲಮ್ಮಾ, ಇನ್ನೂ ಕೋಪ ಹೋಗಲಿಲ್ಲವೆ? ಇದೋ ನೋಡು! ಈ ಗುಬ್ಬಿ ಹಾಡನ್ನು ಪತ್ರಿಕೆಗೆ ಕಳುಹಿಸುತ್ತೇನೆ. ಮೊದಲ ತೇದಿ ನಿನ್ನ ಕೈಗೆ ಹಣ ಬಂದು ಬಿಡುತ್ತದೆ, ಭಯಬೇಡ' ಎಂದರು.

'ಅವರು ಬಹಳ ಒಳ್ಳೆಯವರು. ಸುಳ್ಳುಪಳ್ಳು ಗೊತ್ತಿಲ್ಲ. ಕೈಯ್ಯಲ್ಲಿದ್ದರೆ ವಂಚನೆಯಿಲ್ಲ. ಆದರೆ ಲೇಖನವನ್ನು (ಪ್ರಬಂಧವನ್ನು) ಸಮಯಕ್ಕೆ ಸರಿಯಾಗಿ ಕಳುಹಿಸದಿದ್ದರೆ, ಪತ್ರಿಕೆಯವನು ಹಣ ಕಳುಹಿಸುವನೆ? ಅವರ ಈ ಸ್ವಭಾವ ನನಗೆ ಹಿಡಿಸುವುದಿಲ್ಲ.'

ನಾನು:– ನಾನು ಇದಕ್ಕೆ ಉತ್ತರಿಸಲಿಲ್ಲ. ನಾನೇನು ಹೇಳಲಿ? ಆದರೂ, ಸಮಾಧಾನವಾಗಿ, 'ಈ ದಿನ ಟಪಾಲಿನಲ್ಲಿ ಏನೋ ಒಂದು ಹೋಗಿದೆಯಲ್ಲ? ಹಾಡಾದರೇನು? ಲೇಖನವಾದರೇನು?' ಎಂದೆ.

ಶೆಲ್ಲಮ್ಮಾ:– ನೀನೂ ಅವರಿಗೆ ಸರಿಯಾದ ಮಗಳೇ! ಅವರು ಏನು ಮಾಡಿದರೂ ಸರಿ ಎನ್ನುತ್ತೀಯಾ! ನಿನ್ನೊಡನೆ ಹೇಳಿಕೊಂಡಿದ್ದರಿಂದ ಸ್ವಲ್ಪ ಬೇಸರ ಕಡಿಮೆಯಾಯಿತು, ಅದೇ ಸಾಕು, ಎಂದರು ಆ ಉತ್ತಮಿ.

ಭಾರತಿಯಾರರು ಬಂದರು.

ಭಾರತಿ:– ಯದುಗಿರಿ, ಈ ದಿನ ಒಂದು ಹೊಸ ಹಾಡನ್ನು ರಚಿಸಿದ್ದೇನೆ, ನೋಡಿದೆಯಾ?

ನಾನು:– ಇಲ್ಲ, ಶೆಲ್ಲಮ್ಮಾ ಹೇಳಿದರು – ಎಲ್ಲಿ ತೋರಿಸಿ!

ಭಾರತಿ ಮೇಜಿನಿಂದ ಕಾಗದವನ್ನು (ಬರಹವನ್ನು) ತೆಗೆದರು.

ಶೆಲ್ಲಮ್ಮಾ:– ನಿಮ್ಮ ಬಾಯಿಂದ ಬಂದ ಪ್ರತಿಯೊಂದು ಪದವನ್ನೂ ಯದುಗಿರಿ ಹಾಗೆಯೇ ಮನಸ್ಸಿನಲ್ಲಿ ಹಿಡಿದಿಟ್ಟುಕೊಳ್ಳುತ್ತಾಳೆ. – ಲೋಕಜ್ಞಾನ ತಿಳಿಯದ ಮಗು! ಬೆಳಿಗ್ಗೆ ನಡೆದದ್ದನ್ನು ಹೇಳಿದೆ. 'ಹಾಡಾದರೇನು? ಲೇಖನವಾದರೇನು?' ಎಂದಳು.

ಭಾರತಿ:– ಅವಳು ಹೇಳಿದುದೇ ಸರಿ. ನಾನು ಹೇಳುವುದು, ಈಗ ನಿನಗೆ ರುಚಿಸುವುದಿಲ್ಲ ಇದೋ ನೋಡು ಯದುಗಿರಿ – ನಾನು ನೋಡುತ್ತೇನೋ ಇಲ್ಲವೋ! ನೀನು ಖಂಡಿತ ನೋಡುವೆ. ಈ ಚಿಕ್ಕಚಿಕ್ಕ ಹಾಡುಗಳು ಎಲ್ಲರ ಬಾಯಲ್ಲಿಯೂ ನಲಿದಾಡುವುದನ್ನು ನೀನು ನೋಡೇ ನೂಡುತ್ತೀಯಾ! ಈ ತಮಿಳ್ ಪ್ರಪಂಚ ಕಣ್ ತೆರೆಯಲಿಲ್ಲ. ತೆರೆದರೂ ಇನ್ನೂ ಶೈಶವಾವಸ್ಥೆಯಲ್ಲಿದೆ.

ಹೀಗೆ ಹೇಳಿ, 'ತಗೋ, ಹಾಡು ಬರೆದ ಕಾಗದ' ಎಂದು ನನಗೆ ಆ ಹಾಳೆಯನ್ನು ಕೊಟ್ಟು, ಒಂದು ಸಲ ಹಾಡಿಯೂ ತೋರಿಸಿದರು.

ಈ ಹಾಡಿನ ಮೊದಲನೆಯ ಚರಣ, ನಾನು ಕಲಿತದ್ದು 'ವಾನ ಒಳಿಯಿನ್ ಮಧುವಿನ್ ಶುವೆಯುಂಡು (ಬಾನು ಪ್ರಕಾಶದ ಮಧುವಿನ ಸವಿ ನೋಡಿ) ಎಂದು. ನಂತರ ಬಂದ ಪ್ರಕಟನೆಗಳಲ್ಲಿ 'ವನೊಳುಯೆನ್ನು ಮಧುವಿನ್ ಶುವೈ ಉಂಡು' ಎಂದಿದೆ. ಒಂದು ವೇಳೆ ಭಾರತಿಯವರೇ 'ವಾನೊಳಿಯಿನ್ ಮಧುವಿನ್ ಶುವೈಯುಂಡು' ವಾನೊಳಿಯಿನ್ ಮಧುವಿನ್ ಶುವೈಯುಂಡು' (ಎರಡಕ್ಕೂ ಅರ್ಥದಲ್ಲಿ ಹೆಚ್ಚಿನ ವ್ಯತ್ಯಾಸ ಕಾಣುವುದಿಲ್ಲ).

ನಂತರ ಅದನ್ನು ಬದಲಾಯಿಸಿರಬಹುದು.

೩. 'ಭಾರತ ದೇಶಮೆನ್ರು ಪೆಯರ್ ಶೊಲ್ಲುವಾರ್'

(ಭಾರತ ದೇಶವೆಂದು ಹೆಸರು ಹೇಳುವವರು)

ಪುದುಚೇರಿಯಲ್ಲಿ ದೇಶಭಕ್ತರೆಲ್ಲಾ (ಸ್ವಾತಂತ್ರ್ಯ ಹೋರಾಟಗಾರರು) ಭಾನುವಾರ ಸಮುದ್ರ ಸ್ನಾನಕ್ಕೆ ಹೋಗುವುದು ವಾಡಿಕೆ. ಬೆಳಿಗ್ಗೆ ಏಳು ಗಂಟೆಗೆ ಹೋದರೆ ಹತ್ತು ಗಂಟೆಗೆ ಹಿಂತಿರುಗುತ್ತಿದ್ದೆವು. ನನ್ನ ತಂದೆ (ಶ್ರೀನಿವಾಸಾಚಾರ್ಯರು), ಭಾರತಿಯಾರರು, ಅಯ್ಯರ್ (ವ.ವೆ. ಸುಬ್ರಹ್ಮಣ್ಯ ಅಯ್ಯರ್), ತಿರುಮಲಾಚಾರ್ಯರು, ಇವರಲ್ಲದೆ ನಾಗಸಾಮಿ ಎಂಬುವರೂ ನಮ್ಮೊಂದಿಗೆ ಬರುತ್ತಿದ್ದರು. (ನಾಗಸಾಮಿ ಎನ್ನುವವರು ಯಾರೆಂದರೆ – ನಮ್ಮ ತಂದೆಯ ಮೇಲ್ವಿಚಾರಣೆಯಲ್ಲಿ ಪ್ರಕಟವಾಗುತ್ತಿದ್ದ 'ಇಂಡಿಯಾ' ಎಂಬ ಪತ್ರಿಕೆಯ ಕಾರ್ಯಾಲಯದಲ್ಲಿದ್ದವರು. ಈ ಪತ್ರಿಕೆಗೆ ಭಾರತಿಯಾರರೂ ಲೇಖನ ಬರೆಯುತ್ತಿದ್ದರು. ಅಯ್ಯರ್ ಪುದುಚೇರಿಗೆ ಬಂದ ಮೇಲೆ ಅವರ ಮನೆಯಲ್ಲಿದ್ದರು. (ಈ ಪುಸ್ತಕ ಪ್ರಕಟವಾದ ಸಮಯದಲ್ಲಿ ಅವರು ಅರವಿಂದರ ಆಶ್ರಮದಲ್ಲಿದ್ದಾರೆ).

ಹಿರಿಯರೊಂದಿಗೆ ನಾವು ನಾಲ್ಕೈದು ಮಕ್ಕಳೂ ಹೊರಡುತ್ತಿದ್ದೆವು. ನಮ್ಮ ಹಿಂದೆ ಒಂದು ಫರ್ಲಾಂಗು ದೂರದಲ್ಲಿ ಮಫ್ತಿಯಲ್ಲಿ ಬರುತ್ತಿದ್ದ ಐದು ಜನ ಪೊಲೀಸಿನವರೂ ಬರುತ್ತಿದ್ದರು. ಒಂದು ಸಲ ಹೀಗೆಯೇ ಹೋಗುತ್ತಿದ್ದಾಗ 'ಗೌರ್ಲ' ಬೀದಿಯಲ್ಲಿ ಒಬ್ಬ ಹಾವಾಡಿಗ ಒಂದು ಹಾವನ್ನು ನೆಲದಲ್ಲಿ ಬಿಟ್ಟು ಆಡಿಸಿ ತೋರಿಸುತ್ತಿದ್ದ. ಬಿಳಿಯವನ (ಆಂಗ್ಲರವನ) ಮನೆಯ ಕೆಲಸದಾಳು ಅವನಿಗೆ ಕಾಲಾಣೆಯನ್ನು ಕೊಟ್ಟು ಹೋಗು ಎಂದು ಹೇಳುತ್ತಿದ್ದ. 'ಹಾವಿಗೆ ಹಾಲು ಹಾಕಲು ಕಾಲಾಣೆ ಸರಿಯಾಯಿತು. ನನಗೆ ಒಂದು ಹಿಡಿ ಅಕ್ಕಿ ಹಾಕು ದೊರೆಯೇ' ಎಂದು ಬೇಡುತ್ತಿದ್ದ. ಅದೇ ಸಮಯಕ್ಕೆ ಸರಿಯಾಗಿ ನಾವು

ಅಲ್ಲಿಗೆ ತಲುಪಿದೆವು.

ನಮ್ಮನ್ನು ನೋಡಿ ಹಾವಾಡಿಗನು ತನ್ನ ಪುಂಗಿಯನ್ನು ಮತ್ತೆ ಊದಲಾರಂಭಿಸಿದ. ಹಾವೂ ಕೂಡ ಸಂತೋಷವಾಗಿ ನಲಿದಾಡುತ್ತಿತ್ತು. ನಾವೆಲ್ಲರೂ ಅಲ್ಲಿ ನಿಲ್ಲದೇ ಹೋದುದನ್ನು ಕಂಡು, ಹಾವಾಡಿಗ 'ಅಯ್ಯಾ, ಧರ್ಮವಂತರೇ, ಛಳಿ ಸಹಿಸಲಾಗುತ್ತಿಲ್ಲ. ಅನ್ನ ಕಂಡು ಎರಡು ದಿನವಾಯಿತು. ಕಣ್ಣುತ್ತಲೆ ಬರುತ್ತಿದೆ. ಏನಾದರೂ ಕೊಡಿ. ನಿಮಗೆ ಪುಣ್ಯ ಬರುತ್ತದೆ' ಎಂದು ಗೆಂಜಿದ.

ನಮ್ಮ ತಾಯಿ – ಸಮುದ್ರ ರಾಜ, ಬರಿಗೈಯಲ್ಲಿ ಹೋಗಿ ಸ್ನಾನ ಮಾಡಬಾರದು ಎಂದು ಹೇಳಿ, ನಮ್ಮಗಳ ಒಬ್ಬೊಬ್ಬರ ಕೈಯ್ಯಲ್ಲಿಯೂ ಒಂದು ಅರಿಶಿನದ ಪೊಟ್ಟಣ ಮತ್ತು ಕಾಲಾಣೆಯನ್ನು ಕೊಟ್ಟು ಕಳುಹಿಸಿದ್ದರು. ನನ್ನ ಅಣ್ಣ ತನ್ನ ಕಾಲಾಣೆಯನ್ನು ಹಾವಾಡಿಗನಿಗೆ ಕೊಟ್ಟುಬಿಟ್ಟ, ನನ್ನ ಕೈಯ್ಯಲ್ಲಿದ್ದ ಕಾಲಾಣೆಯನ್ನು ನೋಡಿ, ಹಾವಾಡಿಗ 'ಅಮ್ಮಾ, ಅದನ್ನೂ ಕೊಡು. ಕಾಲಾಣೆಗೆ ಇಡ್ಲಿ ತೆಗೆದು ತಿನ್ನುತ್ತೇನೆ' ಎಂದ. ನಾನು 'ಇಲ್ಲ ಇಲ್ಲ, ಇದನ್ನು ಸಮುದ್ರರಾಜನಿಗೆ ಅರ್ಪಿಸು ಎಂದು ನಮ್ಮ ತಾಯಿ ಹೇಳಿದ್ದಾರೆ' ಎಂದು ಹೇಳಿ ಮುಂದೆ ನಡೆದೆ.

ಎಲ್ಲರಿಗಿಂತ ಮುಂದೆ ಇದ್ದ ಭಾರತಿಯಾರರಿಗೆ ಏನು ತೋಚಿತೋ ಏನೋ – ತಾವು ಹೊದ್ದುಕೊಂಡಿದ್ದ ಮೇಲು ಪಂಚೆಯನ್ನು ಉಟ್ಟುಕೊಂಡು, ಉಟ್ಟುಕೊಂಡಿದ್ದ ಪಂಚೆಯನ್ನು ಬಿಚ್ಚಿ ಹಾವಾಡಿಗನಿಗೆ ಕೊಟ್ಟುಬಿಟ್ಟರು.

ಮತ್ತೆ ಎಲ್ಲರೂ ಒಟ್ಟಿಗೆ ಸೇರಲು ನಾವುಗಳು ಒಂದು ಕಡೆ ನಿಂತೆವು. ಭಾರತಿಯಾರರ ನಡತೆ ನಮ್ಮನ್ನು ಭ್ರಮಿಸುವಂತೆ ಮಾಡಿತು. ಹಿಂದಿನ ದಿನ ತೆಗೆದ ಹೊಸಪಂಚೆಯನ್ನು ಭಿಕ್ಷುಕನಿಗೆ ಕೊಡುವುದು 'ಅಷ್ಟು ಸರಿ' ಎಂದು ನನಗೆ ಅನ್ನಿಸಲಿಲ್ಲ. ಆ ಹಾವಾಡಿಗ ಅವರನ್ನು ಮನಸಾರ, ಬಾಯಿತುಂಬಾ ಹೊಗಳಿ ಹಾರೈಸಿದ. ಅವನಿಗೆ ನನ್ನ ಮೇಲೆ ಕೋಪ. ಕಾಲಾಣೆಯನ್ನು ತೋರಿಸಿ ತನಗೆ ಕೊಡಲಿಲ್ಲವೆಂದು.

ಎಲ್ಲರೂ ಮರಳುದಂಡೆಯವರೆಗೆ ಮಾತಾಡದೆ ಬಂದೆವು. ನೀರಿನ ತೀರ ಬಂದ ಒಡನೆ ದೊಡ್ಡವರು ಮಕ್ಕಳ ಕೈಗಳನ್ನು ಹಿಡಿದುಕೊಂಡರು. ಭಾರತಿಯಾರರು ನನ್ನ ಕೈಯ್ಯನ್ನು ಹಿಡಿದುಕೊಂಡರು. ಸ್ನಾನಕ್ಕೆ ಮೊದಲು, ನನ್ನ ಕೈಯ್ಯಲ್ಲಿದ್ದ ಕಾಲಾಣೆಯನ್ನು ಸಮುದ್ರದ ನೀರಿನಲ್ಲಿ ಹಾಕಿ, ಅರಿಶಿನ ಹಚ್ಚಿಕೊಂಡು, ಅವರ ಕೈಯ್ಯನ್ನು ಹಿಡಿದುಕೊಂಡು ಸ್ನಾನಕ್ಕೆ ಇಳಿದೆ.

ಭಾರತಿ:– ನೀನು ಹಾಕಿದ 1/4 ಆಣೆ ಯಾತಕ್ಕಾಗಿ?

ನಾನು:– ಸಮುದ್ರ ರಾಜನಂತೆ, ಅದರಲ್ಲಿ ಸ್ನಾನಕ್ಕೆ ಮೊದಲು

ಕಾಲಾಣೆಯನ್ನೋ ಅಥವಾ ನಿಂಬೆಹಣ್ಣನ್ನೋ ಹಾಕಬೇಕಂತೆ. ಇಲ್ಲದಿದ್ದರೆ ಅದಕ್ಕೆ ಕೋಪ ಬರುತ್ತದಂತೆ.

ಭಾರತಿ:– ಇದೆಲ್ಲಾ ಯಾರು ಹೇಳಿದರು?

ನಾನು:– ನನ್ನ ತಾಯಿಗೆ ಎಲ್ಲಾ ಗೊತ್ತು. ಅವರೇ ಹೇಳಿದರು. ಅಣ್ಣ ಹಾವಾಡಿಗನಿಗೆ ಕೊಟ್ಟುಬಿಟ್ಟ, ಕಡಲು ಅವನ ಮೇಲೆ ಕೋಪಿಸಿಕೊಳ್ಳುತ್ತದೆ. ಅವನನ್ನು ನೀವು ಭದ್ರವಾಗಿ ಹಿಡಿದುಕೊಳ್ಳಿರಿ.

ಭಾರತಿ:– ಅವನು ಅಯ್ಯರ್ ಕೈಯ್ಯನ್ನು ಹಿಡಿದುಕೊಂಡಿದ್ದಾನೆ. ಭಯವಿಲ್ಲ. ನಾನು ಹೇಳುವುದನ್ನು ಕೇಳುತ್ತೀಯಾ?

ನಾನು:– ಏನು ಹೇಳಿರಲ್ಲಾ!

ಭಾರತಿ:– ನಿನ್ನ ಕಾಲಾಣೆಯನ್ನು ಆ ಭಿಕ್ಷುಕನಿಗೆ (ಹಾವಾಡಿಗ) ಹಾಕಿದ್ದರೆ, ಅವನು ಅವನ ಮಗುವಿಗೆ ಅನ್ನ ಹಾಕುತ್ತಿದ್ದ. ನೀನು ಕಡಲಿಗೆ ಹಾಕಿದ ಕಾಸು ಈಗ ಮರಳಿನಲ್ಲಿ ಮುಚ್ಚಿ ಹೋಗುತ್ತದೆ. ಯಾರಿಗೂ ಒದಗುವುದಿಲ್ಲ. ದಂಡವಲ್ಲವೇ? ನೀನು ತಿಂಡಿ ತಿನಿಸುಗಳನ್ನಾದರೂ ಹಾಕಿದ್ದರೆ ಮೀನುಗಳು ತಿನ್ನುತ್ತಿದ್ದವು. ಅವು ಕಾಸನ್ನು ಏನು ಮಾಡುತ್ತವೆ?

ನಾನು:– ನೀವು ಹೇಳುವುದು ಸರಿ. ಆದರೆ ಅಮ್ಮ ಹೇಳಿದರಲ್ಲಾ! ಅವರಿಗೆ ತಿಳಿಯದೇ?

ಭಾರತಿ:– ಇದೆಲ್ಲಾ ಅರ್ಥವಿಲ್ಲದ ಸಂಪ್ರದಾಯ. ಹಿಂದಿನ ಕಾಲದಲ್ಲಿ ಕೊಳಗಳಲ್ಲಿ ಸ್ನಾನ ಮಾಡುವವರು ಕಾಸುಗಳನ್ನು ಕೊಳದಲ್ಲಿ ಹಾಕಿದರೆ, ಕೊಳವನ್ನು ಸ್ವಚ್ಛ ಮಾಡುವ (ಕರ್ರೈಯಾನ್) ಜನರಿಗೆ ಆ ಕಾಸುಗಳು ಸಿಕ್ಕುತ್ತಿದ್ದವು. ಅದರಿಂದ ಅವರ ಜೀವನ ಸಾಗುತ್ತಿತ್ತು. ನಮ್ಮ ಹಿರಿಯರು ಕೊಳಗಳಿಗೆ ಹಾಕುತ್ತಿದ್ದ ದುಡ್ಡನ್ನು ನೀನು ಸಮುದ್ರಕ್ಕೆ ಹಾಕುತ್ತೀಯಲ್ಲಾ? ಇಲ್ಲಿ ಶುದ್ಧ ಮಾಡುವುದು ಅಲೆಗಳು. ಅದಕ್ಕೆ ನಿನ್ನ ಕಾಸಿನಿಂದ ಯಾವ ಪ್ರಯೋಜನವೂ ಇಲ್ಲ.

ನಾನು:– ಹಾಗಾದರೆ, ಅಲ್ಲಿ ನಾನು ಹಾಕಿರುವ ಕಾಸನ್ನು ತೆಗೆದುಕೊಂಡು ಬಿಡಿ. ಹೋಗುವಾಗ ಯಾರಾದರೂ ಭಿಕ್ಷುಕನಿಗೆ ಹಾಕಿಬಿಡೋಣ.

ಭಾರತಿ:– ಹೋದರೆ ಹೋಗಲಿ. ಇನ್ನು ಮೇಲೆ ಹೀಗೆ ಮಾಡಬೇಡ.

ನಾನು:– ಅದು ಸರಿ. ನೀವು ನಿಮ್ಮ ಹೊಸ ಪಂಚೆಯನ್ನೇ ಕೊಟ್ಟುಬಿಟ್ಟಿರಲ್ಲಾ – ಶೆಲ್ಲಮ್ಮಾ ನೋಡಿದರೆ ಏನು ಹೇಳುವರೋ? ಮೇಲಿದ್ದ ಹಳೆಯ ಪಂಚೆಯನ್ನು ಕೊಟ್ಟಿದ್ದರೆ ಸಾಕಾಗಿತ್ತಲ್ಲಾ?

ಭಾರತಿ:– ನನಗೆ ನಾಲ್ಕಾರು ಜನ ಕೊಡುತ್ತಾರೆ. ಅವನಿಗೆ ಯಾರು ಕೊಡುತ್ತಾರೆ? ನಾನೇ ಚಿಂತಿಸಲಿಲ್ಲ. ನಿನಗ್ಯಾಕೆ ಚಿಂತೆ?

ನಾನು ಬದಲು ಹೇಳಲಿಲ್ಲ.

ಸುಮಾರು ಎದೆಯಮಟ್ಟದ ನೀರಿಗಿಳಿದೆವು. ದೊಡ್ಡವರು ಚಿಕ್ಕವರನ್ನು ಎತ್ತಿಕೊಂಡು, ಅಲೆಗಳಲ್ಲಿ ಮುಳುಗಿಸಿ ಸ್ನಾನ ಮಾಡಿಸಿದರು. ಸುಮಾರು ಹನ್ನೊಂದು ಗಂಟೆ ವೇಳೆಗೆ ಮನೆಗೆ ಹಿಂತಿರುಗಿದೆವು.

ನಮ್ಮ ಮನೆಯಲ್ಲಿ ಮುಂದಿನ ಅಂಗಳದಲ್ಲಿ ಒಂದು ನಲ್ಲಿ. ಅಲ್ಲಿ ತೊಟ್ಟಿಯಲ್ಲಿ ನೀರು ತುಂಬಿರುತ್ತಿತ್ತು. ನಾವುಗಳು ಮನೆಯ ಹಿಂದಿನ ಬಚ್ಚಲುಮನೆಯಲ್ಲಿ ಬಿಸಿ ನೀರಿನಲ್ಲಿ ಸ್ನಾನ ಮಾಡಿ, ಬೇರೆ ಬಟ್ಟೆ ಹಾಕಿಕೊಂಡು ಮಹಡಿಗೆ ಹೋದೆವು. ಭಾರತಿ, ಅಯ್ಯಾ (ಈ ಲೇಖಕಿಯ ತಂದೆ ಶ್ರೀನಿವಾಸಾಚಾರ್ಯರು) ಎಲ್ಲರೂ ತೊಟ್ಟಿಯಲ್ಲಿ ಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿದ್ದರು.

ನನ್ನ ದೊಡ್ಡಪ್ಪನನ್ನು ಭಾರತಿಯಾರರು 'ಅಣ್ಣಾ' ಎಂದು ಕರೆಯುವರು.

ಭಾರತಿ:– 'ಅಣ್ಣಾ – ನಾನು ಹಾವಾಡಿಗನಿಗೆ ಪಂಚೆ ಕೊಟ್ಟಿದ್ದು ಯದುಗಿರಿಗೆ ಬಹಳ ಯೋಚನೆಯಾಗಿಬಿಟ್ಟಿತ್ತು. 'ಇದೋ ನೋಡು ಯದುಗಿರಿ! ಒಂದು ಪಂಚೆ ಅವನಿಗೆ ಕೊಟ್ಟೆ, ಅದಕ್ಕೆ ಬದಲು ಅಯ್ಯಾ ನನಗೆ ಎರಡು ಪಂಚೆಗಳನ್ನು ಕೊಟ್ಟುಬಿಟ್ಟರು. ಯಾರು ಧಾರಾಳಿ – ಈಗ ಹೇಳು ನೋಡೋಣ?

ನಾನು:– ಅದು ಸರಿ – ಆ ಹಾವಾಡಿಗ ಹಾಡಿದ ಮೆಟ್ಟು ಚೆನ್ನಾಗಿತ್ತು. ಆ ಮೆಟ್ಟಿನಲ್ಲಿ ನಾವು ಹಾಡಿದರೆ ಎಷ್ಟು ಚೆನ್ನಾಗಿರುತ್ತದೆ!

ಭಾರತಿ:– ನಾಳೆ ನಿನಗೆ ಆ ಮೆಟ್ಟಿನಲ್ಲಿ (ರಾಗದಲ್ಲಿ) ಹೇಳಿಕೊಡುತ್ತೇನೆ. ನಮ್ಮಲ್ಲಿ ಯಾರ ಕೈ ಧಾರಾಳ – ಈಗ ಹೇಳು.

ನಾನು:– ನೀವೆಲ್ಲರೂ ಒಂದೇ ಅಲ್ಲವೆ? ಇಬ್ಬರ ಕೈಯೂ ಧಾರಾಳವೆ! ನಾನು ಮಾಡಿದ್ದು ತಪ್ಪು. ಇನ್ನು ಮೇಲೆ ಮಾಡುವುದಿಲ್ಲ.

ಭಾರತಿಯವರಿಗೆ ಬಹಳ ಸಂತೋಷವಾಯಿತು. ಅಲ್ಲಿದ್ದವರಿಗೆ ಕಡಲ ದಂಡೆಯಲ್ಲಿ ನಡೆದ ನಮ್ಮಿಬ್ಬರ ಸಂಭಾಷಣೆಯನ್ನು ಇಂಗ್ಲೀಷಿನಲ್ಲಿ ವಿವರಿಸಿದರು.

ಮರುದಿನ ಸಾಯಂಕಾಲ ಭಾರತಿಯಾರರು ಬಂದರು. ನಮ್ಮನ್ನೆಲ್ಲಾ ಮಹಡಿಗೆ ಕರೆದರು. ಹೋದೆವು. ಮೊದಲು 'ವಂದೇ ಮಾತರಂ' ಹಾಡನ್ನು ಹಾಡಿದರು.

ನಂತರ –

'ಭಾರತ ದೇಶಮೆನ್ರು ಪೆಯರ್ ಶೊಲ್ಲುವಾರ್

'ಭಾರತ ದೇಶವೆಂದು ಹೆಸರು ಹೇಳುವವರು – ತುಡಿವ

'ಭಯಬಿಟ್ಟೆರಿವರು – ದುಃಖವೆಂಬ ಹಗೆಯನ್ನು ಗೆಲ್ಲುವರು

'ಭಾರತ ಯುದ್ಧ ಗೆದ್ದ ಕೃಷ್ಣನ ಕರುಣೆಯಿಂದ – ಭವ

ಬಂಧನ ಬಿಡಿಸಿಕೊಳ್ಳುವರು – ಸಮೃದ್ಧಿ ಸಂತಸ ಹೊಂದುವರು

ಎಂದೂ ತದನಂತರ

'ಭಾರತ ರಾಣಿಯ, ಕೃಷ್ಣನ ದಯೆಯಿಂದ ಭವ

ಬಂಧನ ಬಿಡಿಸಿಕೊಳ್ಳುವರು – ಸಮೃದ್ಧಿ ಸಂತಸ ಹೊಂದುವರು'

ಎಂದು ಹದಿನಾಲ್ಕು ಸಾಲುಗಳನ್ನು (ಅಡಿಗಳನ್ನು) ಹಾಡಿದರು.

ಕೀಟಲೆ ಪ್ರಶ್ನೆಗಳನ್ನು ಕೇಳುವುದರಲ್ಲಿ ನಾನು ಎತ್ತಿದ ಕೈ. ಅದು ನನಗೆ ಬಹಳ ಇಷ್ಟ ಅಯ್ಯರ್ ಅವರನ್ನೂ ಭಾರತಿಯಾರರನ್ನೂ ಏನಾದರೊಂದು ಕೇಳುತ್ತಲೇ ಇರುತ್ತಿದ್ದೆ. ಅವರುಗಳೂ ಬೇಸರಿಸದೆ ಉತ್ತರಿಸುತ್ತಲೇ ಇರುತ್ತಿದ್ದರು. ಅದರಂತೆಯೇ ಈಗಲೂ ಕೇಳಿದೆ.

'ಅದೆಲ್ಲಾ ಸರಿ. ಇವೆಲ್ಲಾ ಯಾವಾಗ ಕೈಗೂಡುತ್ತದೆ? ನಾವು ಕಾಣಲು ಸಾಧ್ಯವೆ? ಸೂಜಿಯನ್ನೂ ಮೊಳೆಯನ್ನೂ ತಯಾರಿಸಲು ದೊಡ್ಡ ದೊಡ್ಡ ಯಂತ್ರಗಳು ಬೇಡವೇ? ಸೂಜಿಯೂ, ಮೊಳೆಯೂ ದೇಶಕ್ಕೆ ಅಷ್ಟು ಮುಖ್ಯವೆ? ಆಯುಧಗಳು ಬಹಳ ಮುಖ್ಯ. ಅದನ್ನು ಒಂದೇಮಾತಿನಲ್ಲಿ ಹೇಳಿ ಮುಗಿಸಿಬಿಟ್ಟಿರಲ್ಲಾ!' ಎಂದೆ.

ಭಾರತಿ:– ಮಕ್ಕಳು ಕೇಳುವ ಪ್ರಶ್ನೆಗಳಿಗೆ ಉತ್ತರಿಸುವುದು ಬಹಳ ಕಷ್ಟ.'ಸೂಜಿ ಇಲ್ಲದಿದ್ದರೆ ಬಟ್ಟೆ ಹೊಲಿಯುವುದು ಹೇಗಮ್ಮಾ? ಹೊಟ್ಟೆಗಿಂತ ಬಟ್ಟೆ ಬಹಳ ಮುಖ್ಯವಲ್ಲವೇ? ಮೊಳೆ ಇಲ್ಲದಿದ್ದರೆ ನಿನಗೆ ಪೆಟ್ಟಿಗೆ ಬೇಡವೆ? ಪಟಗಳನ್ನು ಗೋಡೆಗೆ ಹಾಕಲು ಮೊಳೆ ಬೇಡವೆ?' ಎಂದು ನನ್ನನ್ನು ಕೇಳಿದರು.

ನಾನು ಏನೂ ಹೇಳಲಿಲ್ಲ.

ಈಗ ಹೊರಬಂದಿರುವ ಪುಸ್ತಕಗಳಲ್ಲಿ ಈ ಹಾಡಿನ ನಾಲ್ಕು ಸಾಲುಗಳು ಕಾಣೆಯಾಗಿವೆ.

ಮೊದಲಿನ ಪಾಠದಲ್ಲಿ – ಮೊದಲೇ ಬರೆದಿರುವ ನಾಲ್ಕು ಸಾಲುಗಳಲ್ಲಿ

'ಭಾರತ ಪೋರ್‌ವೆನ್ರ ಕಣ್ಣ ನರುಳಾಲ್ – ತುಯರ್

ಭಾರ ಮರುವಾರ್ – ಶೆಲ್ವಭಾರ ಮುರುವಾರ್

ಎಂಬ ಸಾಲುಗಳೂ

'ಭಾರತ ರಾಣಿಯಿನ್ ಕಣ್ಣನರುಳಾಲ್ – ತುಯರ್

ಭಾರಮರುವಾರ್ – ಶೆಲ್ವಭಾರ ಮುರುವಾರ್'

ಎಂಬ ಸಾಲುಗಳೂ ಈಗಿನ ಪುಸ್ತಕಗಳಲ್ಲಿಲ್ಲ.

(4) ' ಮನತ್ತಿಲ್ ಉರುದಿವೇಂಡುಂ

(ಮನದಲ್ಲಿ ಧೃಡ ಬೇಕು)

ಪುಷ್ಯ (ತೈ) ಮಾಸ – ಕ್ರಿಸ್‌ಮಸ್ ಹಬ್ಬದ ಅನಂತರ. ಕೊಡಿಯಾಲ ರಂಗಸ್ವಾಮಿ ಅಯ್ಯಂಗಾರ್ಯರೂ, ಚಕ್ರವರ್ತಿ ರಾಜಗೋಪಾಲಚಾರಿಯವರೂ ಪುದುಚೇರಿಗೆ ಬಂದಿದ್ದರು. ಅವರುಗಳು ನಮ್ಮ ತಂದೆಗೆ ನೆಚ್ಚಿನ ಸ್ನೇಹಿತರು. ಮಾತಿನ ನಡುವೆ ರಂಗಸ್ವಾಮಿ ಅಯ್ಯಂಗಾರರು ಭಾರತಿಯವರ ಸ್ಥಿತಿಗತಿಗಳನ್ನು ಅರಿತುಕೊಂಡರು.

'ತಮಿಳ್' ತಾಯಿಯ ಕರುಣೆಯೊಂದಲೋ, ಅಥವಾ ಭಾರತಿಯಾರರ ಕವಿತೆಗಳ (ಹಾಡುಗಳ) ಚೆಲುವನ್ನು ಆಸ್ವಾದಿಸಿಯೋ ಏನೋ – ಅವರಿಗೆ ಕೆಲ ನೂರು ರೂಪಾಯಿಗಳನ್ನು ಕೊಡುಗೆಯಾಗಿ ಕೊಟ್ಟರು.

ಆ ಸಂದರ್ಭ ಬಹಳ ಇಕ್ಕಟ್ಟಾಗಿತ್ತು.

ದೆಹಲಿಯಲ್ಲಿ ಗುಂಡು ಹಾಕಿದ ಸಮಯ ಕಾಲ – ದೇಶಭಕ್ತರ ಬದುಕಿನಲ್ಲಿ ದೊಡ್ಡ ಸಂಕಟ ಸಮಯ (ದೊಡ್ಡ ಪರೀಕ್ಷೆಯ ಸಮಯ)

ಹಣ ಬಂದ ಕೂಡಲೇ, ಶೆಲ್ಲಮ್ಮಾ ಸ್ವಲ್ಪ ಸವರನ್ (ಚಿನ್ನ)ವನ್ನು ತೆಗೆದು ಕೆಲ ಒಡವೆಗಳನ್ನು ಮಾಡಿಸಿ, ಮಿಕ್ಕ ಹಣದಲ್ಲಿ ಅಕ್ಕಿ, ಬೇಳೆ (ತೊಗರಿ), ಹುಣಿಸೇ ಹಣ್ಣು, ಮೆಣಸಿನಕಾಯಿ ಮೊದಲಾದ ವರ್ಷಾರತರದ ಸಾಮಾನುಗಳನ್ನು ತೆಗೆದು ತುಂಬಿದರು.

ಪುದುಚೇರಿಯಲ್ಲಿ 'ಒಂದು ಕೂಲಿ' ಎಂದರೆ 12 ಸೇರು – 12 ಸೇರು ಅಕ್ಕಿ ಕುಟ್ಟಿದರೆ, 1/4 ಸೇರಿ ಅಕ್ಕಿ, 1 ಸೇರು ನುಚ್ಚು ಕುಟ್ಟಿದವರಿಗೆ ಕೂಲಿಯಾಗಿ ಕೊಡುವುದು ಪದ್ಧತಿ. ಈಗಿನಂತೆ ಆಗ ಯಂತ್ರಗಳು ಚಾಲ್ತಿಯಲ್ಲಿರಲಿಲ್ಲ. ಕೂಲಿ ಹೆಂಗಸರು ನಮ್ಮಗಳ ಮನೆಗೆ ಬಂದು ಭತ್ತ ಕುಟ್ಟಿ, ಸೋಸಿ ಶುದ್ಧ ಮಾಡಿಕೊಟ್ಟು ಹೋಗುತ್ತಿದ್ದರು.

ಒಂದು ದಿನ ಒಬ್ಬ ಕೂಲಿ ಹೆಂಗಸು ಭಾರತಿಯಾರರ ಮನೆಗೆ ಬಂದು ಭತ್ತ ಕುಟ್ಟುತ್ತಿದ್ದಳು. ಭಾರತಿಯಾರರು 'ಹೊನ್ನ ಬಾಲದ ನರಿಯೋ ಅಥವಾ ಬಾಲ ಕತ್ತರಿಸಿದ ನರಿಯೋ' ಜ್ಞಾಪಕವಿಲ್ಲ. (ಸೂಚನೆ: ಹೊನ್ನ ಬಾಲದ ನರಿ .....) – ಅನಿಬೆಸೆಂಟರ್ ಬಗ್ಗೆ ಇಂಗ್ಲೀಷಿನಲ್ಲಿ ಕಥೆ (ಲೇಖನ) ಬರೆಯ ಲಾರಂಭಿಸಿದ್ದರು. ಅದರ ಮೇಲೆ ಅವರಿಗೆ ಬುದ್ಧಿ ಓಡಲಿಲ್ಲ. ಶೆಲ್ಲಮ್ಮಾ ಇದನ್ನು ಅರಿತುಕೊಂಡರು.

ಶೆಲ್ಲಮ್ಮಾ:– ಈ ದಿನ ಬೇಡ. ನಾಳೆಗೆ ಬಂದು ಕುಟ್ಟುವಂತೆ ಹೇಳುತ್ತೇನೆ.

ಭಾರತಿ:– ಬೇಡ. ಅವಳ ಕೆಲಸ ಅವಳು ಮಾಡಲಿ. ನೀನೇಕೆ ತಡೆಯುತ್ತೀಯಾ?

ಶೆಲ್ಲಮ್ಮಾ:– ನಿಮಗೆ ತೊಂದರೆಯಾಗುತ್ತೆಂದು ತೋರುತ್ತದೆ. ಏನೋ ಬರೆಯಲು ಕುಳಿತಿರುವಿರಿ. ಕುಟ್ಟುವ ಶಬ್ದವಾಗುತ್ತದೆ.

ಭಾರತಿ:– ಆ ಶಬ್ದ ಪರಾಶಕ್ತಿಯನ್ನು ವರ ಬೇಡುವಂತೆ ನನ್ನನ್ನು ದೂಡುತ್ತಿದೆ. ತಡೆಯಬೇಡ.

ಶೆಲ್ಲಮ್ಮಾ:– ಪರಾಶಕ್ತಿಯನ್ನು ಮೊದಲು ಹೊಟ್ಟೆ ತುಂಬಿಸುವಂತೆ ಕೇಳಿ.

ಭಾರತಿ:– ನೀನೇನು ನನ್ನನ್ನು (ದಾಸ್ಯಕ್ಕೆ, ಊಳಿಗಕ್ಕೆ) ಗುಲಾಮಗಿರಿಗೆ ತಳ್ಳುತ್ತೀಯಲ್ಲಾ? ನನ್ನ ಕೈಯ್ಯಲಿದ್ದುದನ್ನು ನಿನಗೆ ಕೊಟ್ಟುಬಿಟ್ಟಿದ್ದೇನೆ. ನನ್ನನ್ನು ಒತ್ತಾಯ ಮಾಡಬೇಡ.

ಶೆಲ್ಲಮ್ಮಾ:– ನಾನು ನಿಮ್ಮನ್ನು ಒತ್ತಾಯ ಮಾಡಲಿಲ್ಲ. ಪುಸ್ತಕ ಅಚ್ಚಿಡುವುದಾಗಿ ಹೇಳಿದಿರಿ. ಕೈಯ್ಯಲ್ಲಿ ಹಣವಿರುವಾಗ ಹಾಕಿದರೆ ಒಳ್ಳೆಯದು.

ಭಾರತಿ: ಇದೋ ನೋಡು, ಹೀಗೆ ಪೀಡಿಸಿದರೆ ತಲೆ ಮೇಲೆ ಒಂದು ಬಟ್ಟೆ ಹಾಕಿಕೊಂಡು ನಾನು ಹೊರಟು ಹೋಗುತ್ತೇನೆ.

ಶೆಲ್ಲಮ್ಮಾ:– ನೀವು ಈ ಕಡೆ ಹೋದರೆ, ನಾನೂ ಆ ಕಡೆ ಹೊರಟು ಹೋಗುತ್ತೇನೆ. ಈ ಕಷ್ಟ ಯಾತಕ್ಕೆ? ಮಕ್ಕಳನ್ನು ಯಾರಾದರೂ ಬೆಳೆಸಿಕೊಳ್ಳಲಿ!

ಭಾರತಿ:– ಏನು! ನನ್ನ ಮಕ್ಕಳನ್ನು ಸಾಕುವ ಶಕ್ತಿ ನನಗಿಲ್ಲವೆ? ಯಾರೊಂದಿಗೆ ಮಾತಾಡುತ್ತೀಯ?

ಶೆಲ್ಲಮ್ಮಾ:– ನಾನು ನಿಮ್ಮ ಹಾಗೆ ಪರಾಶಕ್ತಿಯನ್ನು ವರ ಬೇಡಲಾರೆ. ನಿಮ್ಮನ್ನು ತಾನೇ ವರ ಕೇಳಬೇಕು! ಇದಕ್ಕೆ ಕೋಪವೇಕೆ? ಇದರಲ್ಲೇನು ತಪ್ಪು?

ಭಾರತಿ:– ನನಗೆ ಹೇಳಿದ ಮೇಲೆ – ನನ್ನ ಹೊಣೆ (ಜವಾಬ್ದಾರಿ) ನನಗೆ ತಿಳಿಯದೆ? ಮಕ್ಕಳ ಮಾತನ್ನು ತೆಗೆಯುತ್ತೀಯ – ಅವು ಯಾವ ಪಾಪವನ್ನೂ ಅರಿಯವು.

ಶೆಲ್ಲಮ್ಮಾ:– ನಾನು ಅವುಗಳನ್ನು ಹೇಳಲಿಲ್ಲ, ನೀವು ತಲೆ ಮೇಲೆ ಬಟ್ಟೆ ಹಾಕಿಕೊಂಡು ಹೋದರೆ – ನಾನೂ ಹೋಗುತ್ತೇನೆ ಅಷ್ಟೆ ಎಂದೆ.

ಭಾರತಿ:– ನನ್ನನ್ನು ರೇಗಿಸಬೇಡ. ನನ್ನ ಹೊಣೆ ನನಗೆ ಗೊತ್ತು. ನೀನು ನಿನ್ನ ಕೆಲಸ ನೋಡಿಕೊ.

ಶೆಲ್ಲಮ್ಮ ತಮ್ಮ ಕೆಲಸಗಳನ್ನು ಗಮನಿಸಲು ಹೋದರು. ಭಾರತಿ ಏನೋ ಬರೆದರು. ಕೈ ಓಡಲಿಲ್ಲ.

ಆ ಹೆಂಗಸು ಹಾಡುತ್ತಿದ್ದ ಬತ್ತ ಕುಟ್ಟುವ ಹಾಡಿನ ಮೇಲೆ ಗಮನ ಹೋಯಿತು. ಅವಳು ಕಡೆಯಲ್ಲಿ 'ಹೂಂ–ಹೂಂ' ಎಂದು ಹೂಂಕರಿಸುತ್ತಿದ್ದುದು

ಭಾರತಿಯಾರರಿಗೆ 'ಬೇಕು–ಬೇಕು' ಎಂದು ಕೇಳು ಎಂಬಂತೆ ಅವರನ್ನು ದೂಡುವಂತೆ ತೋರಿತು. ಒಂದು ಹಾಳೆಯನ್ನು ತೆಗೆದರು. ಅದರಲ್ಲಿ 'ಮನದಲ್ಲಿ ದೃಡಬೇಕು' ಎನ್ನುವ ಹಾಡನ್ನು ಬರೆದರು. ನಂತರ ಮೊದಲು ಬರೆಯುತ್ತಿದ್ದ ಲೇಖನವನ್ನು ಬರೆದು ಮುಗಿಸಿದರು. ಅದನ್ನು ಪ್ರಕಟನಾಲಯಕ್ಕೆ ಅಚ್ಚಿಡಲು ಕಳುಹಿಸಿದರು.

ಅಂದು ಸಂಜೆ ನಾನು ಅವರ ಮನೆಗೆ ಹೋದೆ. ಶೆಲ್ಲಮ್ಮಾ ಅಕ್ಕಿ ಅಳೆಯುತ್ತಿದ್ದರು. ಭಾರತಿಯಾರರು ಹೊರಗಡೆಯಿಂದ ಬಂದರು. ನನ್ನ ಕ್ಷೇಮಲಾಭಗಳನ್ನು ವಿಚಾರಿಸಿ ನಂತರ 'ಯದುಗಿರಿ, ನಾನು ಇಂದು ಒಂದು ಹೊಸ ಮಂತ್ರ ಮಾಡಿದೆ' ಎಂದರು.

'ನನಗೆ ಆ ಮಂತ್ರವನ್ನು ಹೇಳಿ ಕೊಡಿ' ಎಂದೆ.

'ಇವರು ಪರಾಶಕ್ತಿಯನ್ನು ವರ ಕೇಳುತ್ತಾರೆ. ನಾವು ಇವರನ್ನು ವರ ಕೇಳುತ್ತೇವೆ' ಎಂದರು ಶೆಲ್ಲಮ್ಮಾ.

ಭಾರತಿಯಾರರು ತಮ್ಮ ಹಾಡನ್ನು ಹಾಡಲಾರಂಭಿಸಿದರು. ಬತ್ತ ಕುಟ್ಟುವ ಹೆಂಗಸು ದಿಗ್ಭ್ರಮಿಸಿ (ಅಚ್ಚರಿಯಿಂದ) ನಿಂತುಬಿಟ್ಟಳು.

ಬಹಳ ಸಿಟ್ಟಿನಿಂದ 'ಏನಯ್ಯಾ, ನನ್ನನ್ನು ಪರಿಹಾಸ ಮಾಡುತ್ತೀಯಾ? ನಮಗೆ ಬತ್ತ ಕುಟ್ಟುವ ಶ್ರಮ ತಿಳಿಯದಿರಲು ನಾವು ಏನೋ ಹಾಡಿಕೊಂಡರೆ ಅದನ್ನು ನೀವು ಹೀಗೆ ಅವಹೇಳನ ಮಾಡಬಹುದೇ? ಇದು ನಮ್ಮ ಬಾಳುವೆಯನ್ನು ಅವಮಾನಿಸಿದಂತಲ್ಲವೆ?' ಎಂದು ಜಗಳಕ್ಕೆ ಬಂದಳು.

'ಅಯ್ಯೋ, ಅಮ್ಮ, ಏಕೆ ಕೋಪಿಸಿಕೊಳ್ಳುತ್ತೀಯಾ? ಬತ್ತ ಕುಟ್ಟುವ ಎಲ್ಲ ಹೆಂಗಸರ ಹಾಡಿಗಿಂತ ನಿನ್ನ ಹಾಡು ನನಗೆ ಹೊಸಮಾದರಿ ಎನಿಸಿತು. ಅದರಂತೆ ಇದು ತೋರಿಸಬೇಕು. ನಾನು ಗೇಲಿ ಮಾಡಲಿಲ್ಲ. ನಿನಗೇಕೆ ಕೋಪ?' ಎಂದು ಸಮಾಧಾನ ಹೇಳಿದರು. ಆದರೂ ಅವಳು ಕೇಳಲಿಲ್ಲ.

'ಚಿಕ್ಕವರು ಮಾಡಿದರೆ ನೀವು ಕೋಪಿಸಿಕೊಳ್ಳುತ್ತೀರಿ. ನೀವೇ ಮಾಡಿದರೆ ಯಾರು ಕೋಪಿಸಿಕೊಳ್ಳುವುದು?' ಎಂದಳು.

ಶೆಲ್ಲಮ್ಮಾ:– 'ಏ ಹೆಣ್ಣೇ! ನಿನ್ನನ್ನು ಅವರು ಗೇಲಿ ಮಾಡಲಿಲ್ಲ. ನಿನ್ನ ಜ್ಞಾಪಕ ಎಂದೆಂದೂ ಇರುವಂತೆ – ನೀನು ಹಾಡಿದ ಹಾಡಿನ ಮೆಟ್ಟಿನಲ್ಲಿಯೇ ಕವಿತೆ ಬರೆದಿದ್ದಾರೆ. ಹುಚ್ಚಳಂತೆ ಜಗಳವಾಡಬೇಡ. ನಿನ್ನ ಕೂಲಿಯಾದ ನುಚ್ಚು, ಅಕ್ಕಿಯನ್ನು ತೆಗೆದುಕೊಂಡು ಹೋಗು' ಎಂದರು.

ಆ ಹೆಂಗಸು 'ಅವರು ಹಾಡು ಬರೆಯುತ್ತಾರೆಯೇ ಅಮ್ಮಾ! ನನಗೇನು ಗೊತ್ತು – ಆಶ್ಚರ್ಯ! ನನ್ನ ಹಾಗೆಯೇ ಹಾಡುತ್ತಾರೆ. ಎಷ್ಟು ಬೇಗ ಹಾಡು

ಕಟ್ಟಿಬಿಟ್ಟರು! ... ನಾನು ಬರ್ತೀನಿ ಅಮ್ಮಾ' ಎಂದು ಹೇಳಿ ಹೊರಟು ಹೋದಳು.

ಭಾರತಿ:– ಇವತ್ತು ಬೆಳಿಗ್ಗೆ ಎದ್ದ ಘಳಿಗೆ ಚೆನ್ನಾಗಿಲ್ಲ. ಇಬ್ಬರ ಜೊತೆಯಲ್ಲಿ ಜಗಳ!

ನಾನು:– ಬೇರೆ ಯಾರ ಜೊತೆಯಲ್ಲಿ ಜಗಳವಾಡಿದಿರಿ?

ಭಾರತಿ:– 'ಬೇರೆ ಯಾರು? ಹೆಂಡತಿಯ ಜೊತೆಯಲ್ಲಿ.'

ನಾನು:– ನೀವು 'ಮಹಿಳಾ ವಿಮೋಚನೆ'ಯ ಬಗ್ಗೆ ಹಾಡಿನಲ್ಲಿ ಕೊಂಡಾಡಿಬಿಟ್ಟು ಹೆಂಡತಿಯೊಂದಿಗೆ ಜಗಳವಾಡಿದರೆ ಏನು ಪ್ರಯೋಜನ?

ಶೆಲ್ಲಮ್ಮಾ: ಹೇಳು ಯದುಗಿರಿ, ಇಂದು ಇವರು ಮಾಡಿದುದು ನ್ಯಾಯವೇ ಎಂದು ಕೇಳು.

ಭಾರತಿ:– ನೀನು ಹೇಳಿದುದು ಸರಿ; ಆದರೆ ಕೆಲವು ಸಲ ಕೆಲವನ್ನು ಹೇಳಬಾರದು.

ನಾನು:– ಏನು ವಿಷಯ ಹೇಳಬಾರದೇ?

ಶೆಲ್ಲಮ್ಮಾ:– ಇವರು ತಲೆಮೇಲೆ ಬಟ್ಟೆ ಹಾಕಿಕೊಂಡು ಹೋದರೆ, ನನಗೆ ಹೋಗಲು ಗೊತ್ತಿಲ್ಲವೇ?

ನಾನು:– ನಿಮ್ಮ ಹಾಗೆಯೇ ತಾನೇ ಶೆಲ್ಲಮ್ಮಾ ಕೂಡ. ಅವರೂ ಏಕೆ ಹೋಗಬಾರದು? ಅವರಿಗೆ ಆ ವಿಷಯದಲ್ಲಿ ಬಿಡುಗಡೆ ಇಲ್ಲವೇ?

ಭಾರತಿ:– ನೀನು ಚಿಕ್ಕವಳು, ನಿನಗೆ ತಿಳಿಯುವುದಿಲ್ಲ. ಮೊಂಡು ದನವನ್ನು ಸ್ವಲ್ಪ ಬಿಟ್ಟೇ ಹಿಡಿಯಬೇಕು. ಒಂದೇ ಸಲ ಎಳೆದರೆ ಓಡಿ ಹೋಗಿಬಿಡುತ್ತದೆ. ಒಂದು ವೇಳೆ ನಾನು ಹೋದರೂ ಹೋದೇನು, ಶೆಲ್ಲಮ್ಮಾ ಹೋಗಲಾರಳು, ಬಿಡುಗಡೆ ಇದ್ದರೂ ಜವಾಬ್ದಾರಿ ದೊಡ್ಡದು.

ನಾನು:– ನೀವು ಒಗಟಿನಂತೆ ಮಾತನಾಡಿದರೆ ನನಗೇನು ತಿಳಿಯುತ್ತದೆ? ಸ್ವಲ್ಪ ವಿವರವಾಗಿ ಹೇಳಿ.

ಭಾರತಿ:– ಶೆಲ್ಲಮ್ಮಾ, ನೀನೇ ಹೇಳು. ನಿನ್ನ ಮನಸ್ಸು ಹಗುರವಾಗುತ್ತದೆ.

ಶೆಲ್ಲಮ್ಮಾ ನಡೆದುದನ್ನು ಹೇಳಿದರು.

ನಾನು:– ಮಕ್ಕಳನ್ನು ಕಂಡರೆ ನಿಮಗೆ ಮಾತ್ರ ಮಮತೆ (ಅಭಿಮಾನ). ಶೆಲ್ಲಮ್ಮಾವಿಗೆ ಇಲ್ಲವೇ?'

ಭಾರತಿ: ಇಬ್ಬರೂ ಒಂದೇ. ಆದರೆ ಅವಳು ಪೋಷಿಸುವವಳು. ನಾನು ಸಂವಾದಿಸುವವನು. ಇಬ್ಬರ ಮಧ್ಯೆ ಅಧಿಕಾರ ಧೋರಣೆ ಬೇಕಾಗಿಲ್ಲ.

ನಾನು:– ಶೆಲ್ಲಮ್ಮಾ, ಸರಿ ಹಾಗಾದರೆ, ಇನ್ನುಮೇಲೆ ನಿಮಗೆ ಇಷ್ಟ ಬಂದಾಗ

ಅಡಿಗೆ ಮಾಡಬಹುದು;

ಭಾರತಿ:– 'ಹಾಗಲ್ಲ, ಮಾಡುವ ಕೆಲಸವನ್ನು ಕ್ರಮವಾಗಿಯೂ, ಸರಿಯಾಗಿಯೂ ಮಾಡಬೇಕು. ಅದರಂತೆ, ಮನುಷ್ಯ ಕ್ರಮವರಿತರೆ ಒಳ್ಳೆಯದು.

ಶೆಲ್ಲಮ್ಮಾ:– ನನಗೆ ಕ್ರಮ ಗೊತ್ತಿಲ್ಲ.

ಭಾರತಿ:– ನೀನು ಕೊಟ್ಟ ಚುರುಕು ಯಾವ ಮಟ್ಟ ಮುಟ್ಟಿತು ಗೊತ್ತೇ? ಕಥೆಯನ್ನು ಬರೆದು ಮುಗಿಸಿ ಅಚ್ಚಿಡಲೂ ಕೊಟ್ಟು ಬಂದೆ.

ಶೆಲ್ಲಮ್ಮಾ:– ಗಂಡನ ಮೇಲೆ ಅವದೂರುಗಳನ್ನು ಹೇಳುವವರನ್ನು ಕಂಡರೆ ನನಗೆ ಬಹಳ ಕೋಪ ಬರುತ್ತದೆ. ನನಗೆ ಹಿಡಿಸುವುದೇ ಇಲ್ಲ. ಆದರೆ ಸಹಿಸಲಸಾಧ್ಯವಾದರೆ ಕದ, ಗೋಡೆಗಳ (ಕಂಬಗಳ) ಜೊತೆಯಲ್ಲಾದರೂ ಹೇಳಿಕೊಳ್ಳೋಣವೆನಿಸುತ್ತದೆ.

ಭಾರತಿ:– ಬೆಳಗಿನ ಪ್ರಬೋಧನೆ! ಮುಗಿದು, ಕೆಲಸವೂ ಮುಗಿಯಿತು. ನೀನೂ ಬಾ ಯದುಗಿರಿ, ಕಡಲತೀರಕ್ಕೆ ಹೋಗೋಣ.

ಕಡಲ ದಂಡೆಗೆ ಎಲ್ಲರೂ ಹೊರಟೆವು. ಆಗ ಅವರು ಹೇಳಿದ ಮಾತುಗಳನ್ನು (ತಮಿಳ್) ಪ್ರಪಂಚಪೂರ್ತಿ ಅರಿಯಬೇಕೆಂದು ನನ್ನ ಇಚ್ಛೆ.

ಭಾರತಿ:– ನೀವುಗಳು ಮನೆಯಲ್ಲಿ ದೇಹ ಶ್ರಮಪಟ್ಟು ಕೆಲಸ ಮಾಡುತ್ತೀರಿ. ನಿಮ್ಮನ್ನು ಅಲಕ್ಷಿಸುವುದು ಬಹಳ ತಪ್ಪು. ಮಕ್ಕಳನ್ನು ಬೆಳೆಸುತ್ತೀರಿ. ಮಕ್ಕಳಿಗೆ ಕಾಲಾಕಾಲಕ್ಕೆ ಮಾಡಬೇಕಾದ ಕರ್ತವ್ಯವನ್ನು ಹೇಳಿಕೊಡುತ್ತೀರಿ. ಈಗ ಮೊದಲಿನಂತಲ್ಲ. ಅವರವರ ಹೊಣೆ ಅವರಿಗೆ ತಿಳಿಯದಿದ್ದರೆ, ಅವರಿಗೆ ಅದನ್ನು ತಿಳಿಸಬೇಕು. (ಆದರೆ) ನಿರ್ಬಂಧಿಸಬಾರದು. ಆದರೆ ಶೆಲ್ಲಮ್ಮಾ ಹೇಳಿದುದು ಸರಿ. ನನ್ನ ಕವಿತೆಯ ಹುಚ್ಚು ನನ್ನನ್ನು ಎಳೆದೊಯ್ಯಿತು. ಆ ನಿಟ್ಟಿನಲ್ಲಿ ಒಂದೆರಡು ಮಾತು ನಡೆಯಿತು. ಮನೆಯಲ್ಲಿ ಮುದ್ದುಮುದ್ದಾದ ಗಿಳಿಗಳಂತೆ ಎರಡು ಮಕ್ಕಳು. ಅವರಿಗೆ ಹೊನ್ನ ಕವಚ ಮಾಡಿ ಹಾಕಿ ಸಂತೋಷಿಸಬಹುದು. ಆದರೆ ನಮಗೆ ಆ ಭಾಗ್ಯವಿಲ್ಲ. ಪಂಡಿತರ ಬಡತನ ಪುರಾಣ ಪ್ರಸಿದ್ಧ. ತಮಿಳಿಗೆ ವೈಭವವಿಲ್ಲ. 'ತಮಿಳು ಭಾಷೆ ಕಂಡ ಲಕ್ಷ್ಮಿಯನ್ನು ನಾನಾ ವಿಧದಲ್ಲಿ ಕೊಂಡಾಡಿದರೆ ಕೃಪೆ ಬರಬಹುದು. ಮನೆಯ ಯಜಮಾನಿ ಎಲ್ಲವನ್ನೂ ಸಲೀಸಾಗಿ ನಡೆಸಿಕೊಂಡು ಹೋದರೆ ಯಜಮಾನನು ಚಿಂತೆಯಿಲ್ಲದೆ ಆರೋಗ್ಯವಾಗಿರಬಹುದು. ಯಜಮಾನಿಗೆ ಮುಖ್ಯವಾಗಿ ಬೇಕಾದುದು ಹಣ. ಹಣವಿದ್ದಿದ್ದರೆ ನನ್ನ ಶೆಲ್ಲಮ್ಮಾ ಪ್ರಪಂಚವನ್ನೇ ಆಳಬಲ್ಲಳು. ಅದಿಲ್ಲದಿರುವುದರಿಂದ ನನ್ನನ್ನು ಕಟ್ಟಿ ಹಾಕುತ್ತಾಳೆ. ಕೇಳುತ್ತಾಳೆ, ಜಗಳವಾಡುತ್ತಾಳೆ, ಮತ್ತೆ ನನಗೆ ಬಲವಂತವಾಗಿ, ಊಟ ಮಾಡಿಸುತ್ತಾಳೆ – ಇದನ್ನು ಲೋಕ ಅರಿಯಬೇಕು. ನಮ್ಮ ಕಷ್ಟ ತೀರಬೇಕು.

ಮಿಂಚಿಹೋದ, ವಿಷಯವನ್ನು ಚಿಂತಿಸುವವನು ಮೂಢ. ನಾವುಗಳು ದಿನವೂ ಬಟ್ಟೆಯನ್ನು ಒಗೆದು ಮಡಿ ಮಾಡುವಂತೆ ನಮ್ಮೊಳಗಿನ ಕಲ್ಮಷಗಳನ್ನೂ, ಕಷ್ಟಗಳನ್ನೂ ಕಳೆದು ಬಿಡಬೇಕು, ಸೂರ್ಯನು ದಿನವೂ ಹೊಸದಾಗಿ ಉದಯಿಸುವ ಹಾಗೆ. ಹೊಸ ಹೊಸ ವಿಷಯಗಳನ್ನು ಅರಿತು, ನೋಡಿ ಆನಂದಿಸಬೇಕು. ನನ್ನ ಶೆಲ್ಲಮ್ಮಾ ನನ್ನ ಉಸಿರು, ನನ್ನ ಭಾಗ್ಯ, ನನಗೆ ಅವಳೇ ಎಲ್ಲಾ! ಅವಳು ನನ್ನ ಭಾಗ್ಯಲಕ್ಷ್ಮಿ' ಎಂದರು.

ಅವರ ಮನದಾಳವನ್ನು (ಮನದ ನೋವನ್ನು) ಈಗಲಾದರೂ ಈ ತಮಿಳು ಲೋಕ ಅರಿಯಬೇಕು. ಅವರಂತಹ ಕವಿಗಳ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸುವುದೇ ತಮಿಳು ಭಾಷೆಯ ಮುಖ್ಯ ಕರ್ತವ್ಯ. ಅವರ ಮನ ನೋಯಿಸದೆ ಅವರನ್ನು ಕಾಪಾಡಿದ್ದರೆ, ಇನ್ನೂ ಸ್ವಲ್ಪ ಕಾಲ ಅವರು ನಮ್ಮೊಂದಿಗೆ ಇರುತ್ತಿದ್ದರೋ ಏನೋ, ಯಾರಿಗೆ ಗೊತ್ತು ದೈವೇಚ್ಛೆ!

(5) 'ಮೂನ್ರು ಕಾದಲ್'

(ಮೂರು ತರಹ ಪ್ರೇಮ)

ಪುದುಚೇರಿಯಲ್ಲಿ 'ಡ್ಯೂಪ್ಲೆಕ್ಸ್' ಬಂಡೆಯ ಮುಂದುಗಡೆ ಪ್ರತಿ ಗುರುವಾರ 'ಬ್ಯಾಂಡ್' (ಪಾಶ್ಚಾತ್ಯ ವಾದ್ಯವೃಂದ) ನುಡಿಸುವುದು ಪದ್ಧತಿ. ಬ್ಯಾಂಡ್ ನುಡಿಸುವವರು ಸುಮಾರು ಒಂದು ಗಂಟೆಯ ಅವಧಿ ನಿಂತುಕೊಂಡೇ 'ಬ್ಯಾಂಡ್' ನುಡಿಸುವರು. ಪಾಶ್ಚಾತ್ಯರ (ಪರಂಗಿಯವರ) ಮಕ್ಕಳು ಅದರ ಸುತ್ತಲೂ ಕುಣಿದಾಡುವರು. ನೋಡಲು ಬಹು ಸುಂದರವಾದ ದೃಶ್ಯ.

ಭಾರತಿಯಾರರಿಗೆ ಜನರ ಗುಂಪು ಹಿಡಿಸುವುದಿಲ್ಲ. ನಮ್ಮನ್ನು ಮರಳುದಂಡೆಗೆ ಕರೆದುಕೊಂಡು ಹೋದರು. ಹೋಗುವಾಗ ತಂಗಮ್ಮ 'ಅಪ್ಪಾ, ಇವರುಗಳ ಸಂಗೀತ ಒಂದು ನಮೂನೆಯಾಗಿದೆ. ತಾರ (ಹೆಚ್ಚು) ಶ್ರುತಿಯಲ್ಲಿ ನುಡಿಸುತ್ತಾರೆ. ಇದೇ ರೀತಿ ನಾವು ಹಾಡಿದರೆ ಚೆನ್ನಾಗಿರುವುದೆ?' ಎಂದು ಕೇಳಿದಳು.

ಭಾರತಿ: ಅದು ಒಂದು ರೀತಿ ಸಂಗೀತ. ಕೆಳಗಿನ (ಮಂದ್ರ) ಸ್ಥಾಯಿಯಿಂದ ಮೇಲಿನ (ತಾರ) ಸ್ಥಾಯಿಗೆ ಒಂದೇ ಸಲಕ್ಕೆ ಜಿಗಿಯುತ್ತದೆ. ನಾವು ಹಂತಹಂತವಾಗಿ ಮೇಲೇರುತ್ತೇವೆ. ಹಂತಹಂತವಾಗಿ ಕೆಳಗಿಳಿಯುತ್ತೇವೆ. ಅವರುಗಳು ಕೆಳಗಿನ ಸ್ಥಾಯಿಯಲ್ಲಿ ಒಂದು ಸ್ವರವನ್ನೂ, ಮೇಲಿನ ಸ್ಥಾಯಿಯಲ್ಲಿ ಒಂದು ಸ್ವರವನ್ನೂ ಹಾಡುತ್ತಾರೆ.

ತಂಗಮ್ಮ:– ನಾವೂ ಆ ರೀತಿ ಹಾಡಿದರೆ ಚೆನ್ನಾಗಿರಬಹುದೇ? ಹಾಡಲು

ಸಾಧ್ಯವೆ?

ಭಾರತಿ:– ಹಾಡುವ ಕ್ರಮದಲ್ಲಿ ಹಾಡಿದರೆ ಚೆನ್ನಾಗಿರುತ್ತದೆ.

ತಂಗಮ್ಮ:– ನಾಳೆ ಸರಸ್ವತಿ ಹಬ್ಬ. ಸರಸ್ವತಿಯ ಮೇಲೆ ಈ ಮೆಟ್ಟಿನಲ್ಲಿ ಒಂದು ಹಾಡು ಹಾಡು ಅಪ್ಪಾ.

ಭಾರತಿ:– ಆಗಲಿ.

ಬ್ಯಾಂಡಿನವರು ಮೊದಲ ಹಾಡನ್ನು ಮುಗಿಸಿ, ಬೇರೊಂದು ಹಾಡನ್ನು ಪ್ರಾರಂಭಿಸಿದರು.

ನಾನು:– ಈ ಮೆಟ್ಟಿನಲ್ಲಿ ಲಕ್ಷ್ಮಿಯ ಮೇಲೆ ಹಾಡಿದರೆ ಚೆನ್ನಾಗಿರುತ್ತದೆ.

ಭಾರತಿ:– ಯದುಗಿರಿ, ನೀನು ಹೇಳಿದಂತೆ ಈ ಮೆಟ್ಟಿನಲ್ಲಿ ಲಕ್ಷ್ಮಿಯ ಮೇಲೆ ಹಾಡುತ್ತೇನೆ.

ಶೆಲ್ಲಮ್ಮಾ:– ಕಲ್ಕತ್ತಾ, ಕಾಶಿ ಅಲ್ಲೆಲ್ಲಾ ದುರ್ಗಾ ಪೂಜೆ ಮಾಡುತ್ತಾರೆ. ಪರಾಶಕ್ತಿಯ ಮೇಲೆ ಹಾಡಿದರೆ ನಮ್ಮ ಕಷ್ಟ ತೀರುತ್ತದೆ.

ಆ ಸಮಯ ಬ್ಯಾಂಡ್‌ನವರು, ಕೆಳಗಿನ ಸ್ಥಾಯಿಯಲ್ಲಿ ನಾಲ್ಕು ಸಾಲು, ಮೇಲಿನ ಸ್ಥಾಯಿಯಲ್ಲಿ ನಾಲ್ಕು ಸಾಲುಗಳನ್ನು ನುಡಿಸಿದರು.

ಭಾರತಿ:– ಶೆಲ್ಲಮ್ಮಾ, ನೀನು ಹೇಳಿದುದು ಸರಿ. ತಂಗಮ್ಮಾ ಸರಸ್ವತಿಯ ಮೇಲೆ ಕೇಳಿದಳು. ಯದುಗಿರಿ ಲಕ್ಷ್ಮಿಯ ಮೇಲೆ ಕೇಳಿದಳು. ನೀನು, ಕಾಳಿಯ ಮೇಲೆ ಕೇಳಿದೆ. ಇವರು (ವಾದ್ಯವೃಂದದವರು) ಮೂರು ಹಾಡುಗಳನ್ನು ನುಡಿಸಿದರು. ನಾಳೆ ನಾನು ಮೂರು ದೇವಿಯರ ಮೇಲೆಯೂ ಹಾಡಿ ತೋರಿಸುತ್ತೇನೆ.

ತಂಗಮ್ಮಾ:– ಅಪ್ಪಾ, ಮೂರು ಮೆಟ್ಟುಗಳನ್ನೂ ಹೇಗೆ ಹಾಡುತ್ತೀರಿ?

ಭಾರತಿ:– ಮೊದಲು ಸರಸ್ವತಿ, ಎರಡನೆಯದು ಲಕ್ಷ್ಮಿ, ಮೂರನೆಯದು ಕಾಳಿ (ಪಾರ್ವತಿ ಅಥವಾ ಪರಾಶಕ್ತಿ) ಮೂರು ಹೆಸರುಗಳನ್ನೂ ಮೂರು ರಾಗದಲ್ಲಿ ಹಾಡುವುದು.

ತಂಗಮ್ಮಾ:– ನೀವು ಹಾಡಿರುವುದೆಲ್ಲಾ ಜಾನಪದ ಧಾಟಿಯಲ್ಲಿ. ಎಲ್ಲಾ ಹಾಡುಗಳೂ ಒಂದೇ ಧಾಟಿಯಲ್ಲಿರಬೇಕಾಗಿಲ್ಲ.

ಭಾರತಿ:– ನಿಮಗೆ ಯಾವ ಮೆಟ್ಟು (ರೀತಿ, ತರಹ) ಬೇಕೋ ಹಾಗೆಯೇ ಹಾಡಿ ಕೊಡುತ್ತೇನೆ.

ತಂಗಮ್ಮಾ:– ಆ ಬ್ಯಾಂಡಿನವರ ಮೆಟ್ಟುಗಳು ನಮಗೆ ಬಹಳ ಹಿಡಿಸಿದುದರಿಂದ ಕೇಳುತ್ತೇವೆ.

ಮರುದಿನ 'ಮೂಲಾ' ನಕ್ಷತ್ರ, 'ಸರಸ್ವತಿ ಹಬ್ಬ'ವನ್ನು ಕೆಲವರು ಮೂಲಾ ನಕ್ಷತ್ರದಲ್ಲಿಯೂ, ಕೆಲವರು ಮಹಾನವಮಿಯಲ್ಲೂ ಆಚರಿಸುವುದು ಪದ್ಧತಿ. ನಮಗೆ ಮಹಾನವಮಿ, ಎರಡು ಗೊಂಬೆಗಳನ್ನು ಶಾಸ್ತ್ರಕ್ಕಾಗಿ ಇಟ್ಟಿದ್ದೆವು. ನಾನೂ, ನನ್ನ ತಂಗಿಯರೂ ಗೊಂಬೆಗಳಿಗೆ 'ಆರತಿ' ಎತ್ತುವುದಕ್ಕೆ ಸರಿಯಾಗಿ ಭಾರತಿಯಾರರು ಬಂದರು. 'ಯದುಗಿರಿ, ನಿನ್ನ 'ಕೊಲುಪ್ಪು' (ಗೊಂಬೆ ಕೂಡಿಸುವುದು)ಗೆ ನಾನು ಹೊಸ ಹಾಡು ಹಾಡುತ್ತೇನೆ. ನಂತರ ನಿಮ್ಮ ಶಾಸ್ತ್ರವನ್ನು ಮುಂದುವರಿಸು' ಎಂದರು.

ಎಲ್ಲರೂ ಸಾಲಾಗಿ ಕುಳಿತುಕೊಂಡೆವು. ಭಾರತಿಯಾರರು ಮುನ್ನಾದಿನ ತಿಳಿಸಿದಂತೆ, ಸರಸ್ವತಿ, ಲಕ್ಷ್ಮಿ, ಕಾಳಿ ಮೂರು ದೇವಿಯರ ಮೇಲೂ ಹಾಡಿದ 'ಪಿಳ್ಳೆ ಪ್ರಾಯತ್ತಿಲೆ' (ಚಿಕ್ಕ ವಯಸ್ಸಿನಲ್ಲೇ) ಎಂದು ಪ್ರಾರಂಭವಾಗುವ ಹಾಡನ್ನು 'ಸರಸ್ವತೀ ಮನೋಹರಿ, ಶ್ರೀ ರಾಗ, ಪುನ್ನಾಗವರಾಳಿ' ಈ ಮೂರು ರಾಗಗಳಲ್ಲಿಯೂ ಹಾಡಿದರು. ಆ ಹಾಡು ನಮ್ಮನ್ನು ರೋಮಾಂಚನಗೊಳಿಸಿತು. ಆ ಹಾಡಿನ್ಲಿ ಭಾರತಿಯಾರರು ಸ್ವಲ್ಪಮಟ್ಟಿಗೆ ತಮ್ಮ ಬದುಕನ್ನೂ ಚಿತ್ರಿಸಿದ್ದಾರೆ.

ಟಿಪ್ಪಣಿ:– (ಅನುವಾದಕಿ) ಈ ದಿನ ನನಗೆ ಸುದಿನ. ಈವತ್ತು ಮಹಾನವಮಿ. ಅಮೆರಿಕದ ಸ್ಯಾಂಡಿಯಾಗೊ ಸಿಟಿಯಲ್ಲಿ ನಮ್ಮ ಮಗ ಮಂಜಿಯ ಮನೆಯಲ್ಲಿ ಕುಳಿತು – ನಮ್ಮ ಅತ್ತೆಯವರು ಬರೆದ 'ಭಾರತಿ ನಿನೈವುಹಳ್' ಎಂಬ ಪುಸ್ತಕದ ಕನ್ನಡ ಅನುವಾದಕ್ಕೆ ಕೈ ಹಾಕಿದ್ದೇನೆ. ಬರೆಯಲು ಪ್ರಾರಂಭಿಸಿ, 5–6 ದಿನಗಳಾದವು. ಐದನೆಯ ಅಧ್ಯಾಯ 'ಸರಸ್ವತಿ ಹಬ್ಬ' ಆಚರಣೆಯ ದಿನದಂದು ಭಾರತಿಯವರು ಹಾಡಿದ ಹಾದನ್ನು ನಮ್ಮ ಅತ್ತೆಯವರು ನೆನೆಸಿಕೊಂಡಿದ್ದಾರೆ. ಅದನ್ನು ಬರೆಯುವ ಸಂದರ್ಭ ನನಗೆ ಇವತ್ತೇ ಸಿಕ್ಕಿರುವುದು ನನ್ನ ಪುಣ್ಯ. ಇದೆಂಥಾ ಕಾಕತಾಳೀಯ? ನನ್ನ "ಶ್ರೀ'ಯವರನ್ನು ನೆನೆಸಿಕೊಂಡು ಬರೆಯುತ್ತಿದ್ದೇನೆ.

ಪುಷ್ಪ

(6) 'ಶೆನ್ದಮಿಳ್ ನಾಡೆನುಂ ಪೋದಿನಿಲೇ'

ಚೆನ್ನೈಯಲ್ಲಿದ್ದ ಒಂದು ಸಂಘದವರು ನಮ್ಮ ಭಾರತ' ದೇಶವನ್ನು ಕುರಿತಂತೆ ಒಂದು ಸುಂದರವಾದ ಕವಿತೆ (ಹಾಡು)ಯನ್ನು ಬರೆದು ಕಳುಹಿಸುವವರಿಗೆ ಮೊದಲನೆಯ ಬಹುಮಾನ 300 ರೂಪಾಯಿ, ಎರಡನೆಯದು 200 ರೂಪಾಯಿ, ಮೂರನೆಯದು 100 ರೂಪಾಯಿ ಎಂದು ಒಂದು ದಿನಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಅದಕ್ಕೆ ಬರೆದು ಕಳುಹಿಸುವಂತೆ, ನಾವೆಲ್ಲರೂ ಭಾರತಿಯಾರರನ್ನು ಒತ್ತಾಯಿಸಿದೆವು. ಅವರೂ ಒಪ್ಪಿಕೊಂಡರು. ಈ ಸ್ಪರ್ಧೆಗೆಂದು ಅವರು 'ಶೆನ್ದಮಿಳ್ ನಾಡೆನುಂ ಪೋದಿನಿಲೇ' ಎಂಬ ಹಾಡನ್ನು ರಚಿಸಿದರು. ಸೂಚಿಸಿದ ದಿನಾಂಕದೊಳಗೆ

ಕಳುಹಿಸಿಯೂ ಬಿಟ್ಟರು.

ಆ ಹಾಡಿನಲ್ಲಿದ್ದ ಒಂದೊಂದು ಪದಕ್ಕೂ (ಅಕ್ಷರಕ್ಕೂ) ಲಕ್ಷಲಕ್ಷ ಕೊಡಬಹುದು. ಹತ್ತು ಸಾಲುಗಳಿಗೆ ಹತ್ತು ಕೋಟಿ, ಹತ್ತು ಲಕ್ಷ, ಹತ್ತು ಸಾವಿರ – ಕಡೆಯ ಪಕ್ಷ ಹತ್ತು ನೂರಾದರೂ ಕೊಡಬಹುದು. ಆದರೆ ಆ ಸಂಘದಿಂದ ಬಂದ ಬಹುಮಾನವೋ ಮೂರನೆಯದಾದ 100 ರೂಪಾಯಿ ಮಾತ್ರ! ಆದರೆ ಭಾರತಿಯಾರರು ಅದರ ಬಗ್ಗೆ ಸ್ವಲ್ಪವೂ ತಲೆ ಕೆಡಿಸಿಕೊಳ್ಳಲಿಲ್ಲ. ವ.ವೆ.ಸು. ಅಯ್ಯರ್ ಅವರು ತೀರ್ಪುಗಾರರ ಬಗ್ಗೆ ಬಹಳ ಬೇಸರ ಪಟ್ಟುಕೊಂಡರು.

'ಮೊದಲನೆಯ ಬಹುಮಾನ ಪಡೆದ ಹಾಡಾಗಲಿ ಅಥವಾ ಎರಡನೆಯ ಬಹುಮಾನ ಪಡೆದ ಹಾಡಾಗಲಿ ಈ ಹಾಡಿನ ಒಂದು ಸಾಲಿಗೆ (ಪಾದಕ್ಕೆ) ಕೂಡ ಸಮನಾಗಲಾರದು. ಈ ಮಾಧುರ್ಯವೂ, ನಾದವೂ, ತತ್ವವೂ (ತಿರುಳೂ) ಆ ಹಾಡುಗಳಲ್ಲಿಲ್ಲ. ಬೆಟ್ಟಕ್ಕೂ–ಮಡುವಿಗೂ (ಅಜಗಜಾಂತರ) ಇರುವ ವ್ಯತ್ಯಾಸ. ಉದುರಿದ ಹೂಗಳು ಅನೇಕ. ಅದನ್ನು ಕಟ್ಟಿ ಮಾಲೆಯಾಗಿಸಲು ಒಂದು ಬಾಳೆನಾರಿಗೂ ಗತಿಯಿಲ್ಲ' ಎಂದು ಅಯ್ಯರ್ ಅವರು ಪೇಚಾಡಿದರು. ಸಾಮಾನ್ಯ ಜನರಿಗೆ ಈ (ಕವಿತೆಯ) ಕವಿಯ ಹಿರಿಮೆ ತಿಳಿಯಲಿಲ್ಲವೇ? ಎಂದು ಅವರು ಅಡಿಗಡಿಗೆ ಹೇಳುವುದುಂಟು.

ಭಾರತಿ:– ಇದು ಮೊದಲೇ ಗೊತ್ತಿದ್ದ ವಿಷಯ. ಅವರ ಸಂಘದಲ್ಲಿ ಯಾರಿಗೋ ಬಹುಮಾನ ಕೊಡಬೇಕೆಂದು ಮೊದಲೇ ನಿಶ್ಚಯಿಸಿರುತ್ತಾರೆ. ಜನರ ಕಣ್ಣೊರೆಸಲು ಈ ರೀತಿ ಹುಡುಕುತ್ತಾರೆ. ಅಷ್ಟೇ! ಈ ವಿಷಯಕ್ಕೆ ನೀವೇಕೆ ಬೇಜಾರು ಮಾಡಿಕೊಳ್ಳುತ್ತೀರಿ? ನನ್ನ ಪ್ರಾಪ್ತ ಅಷ್ಟೇ ಎನ್ನುವರು.

ಆಳ್ವಾರುಗಳ 'ದಿವ್ಯಪ್ರಬಂಧ'ಗಳನ್ನು ಹೆಕ್ಕಿ ತೆಗೆದು, ಪ್ರಕಾಶಕ್ಕೆ ಬರುವಂತೆ ಮಾಡಿದ 'ಎಂಬೆರುಮಾನ್' (ರಾಮಾನುಜಾಚಾರ್ಯ) ರಂತೆ ಭಾರತಿಯಾರರ ಕವಿತೆಗಳನ್ನು ಎತ್ತಿ ತೋರಿಸುವ ಜನಗಳಿಲ್ಲ ಎಂದು ಅಯ್ಯರ್‌ರವರು ಹೇಳುವರು.

ಭರತಿಯಾರರು ಮರಣಿಸಿದನಂತರ ಅವರ ಕವಿತೆಗಳು ನಾಡಿನಲ್ಲಿ ಮೊಳಗುವುದನ್ನು ನೋಡಿ, ಅಯ್ಯರ್ ಅವರು ಆನಂದಿಸಿದರು. ಅಂದು ಮೂರನೆಯ ಬಹುಮಾನ ಪಡೆದ ಕವಿತೆಯೆ ಇಂದು ಹಲವು ರಾಗಗಳ್ಲಿ ಹಾಡಲ್ಪಟ್ಟು ಮೊಳಗುತ್ತಿದೆ. ಮೊದಲನೆಯ, ಎರಡನೆಯ ಬಹುಮಾನ ಪಡೆದ ಕವಿತೆಗಳಾದರೋ, ಅವುಗಳ ಸೊಲ್ಲೇ ಇಲ್ಲದಂತೆ ಅಡಗಿಹೋಗಿದೆ.

ಇದೆಲ್ಲಾ ನಡೆದ ಸ್ವಲ್ಪ ಕಾಲದ ನಂತರ ನನ್ನ ಹಿರಿಯ ತಮ್ಮ ಹೋಗಿ ಬಿಟ್ಟ (ತೀರಿಕೊಂಡ) ಸಾಧಾರಣವಾದ ಶೀತಭೇದಿ, ಹಲವು ರೀತಿಯ ಔಷಧಿಗಳಿಂದಲೂ ಗುಣವಾಗಲಿಲ್ಲ. ಮಗು ತೀರಿಕೊಂಡ ಆಘಾತದಲ್ಲಿ ನಮ್ಮ

ತಂದೆಯವರ ಮನಸ್ಸು ಛಿದ್ರಛಿದ್ರವಾಗಿಹೋಯಿತು (ಒಡೆದು) 'ಸ್ವದೇಶಿ' ಹಡಗಿಗೆ ಲೆಕ್ಕ ಇಲ್ಲದಷ್ಟು ಹಣ ಸುರಿದಾಗಲೂ, 'ಇಂಡಿಯಾ' ಪತ್ರಿಕೆ ತಡೆಹಿಡಿದಾಗಲೂ, ಸರ್ಕಾರವು ಹಲವು ದುಷ್ಕೃತ್ಯಗಳನ್ನು ನಡೆಸಿದಾಗಲೂ ಧೈರ್ಯವಾಗಿದ್ದ ಅವರು ಈ ಘಟನೆಯಿಂದ ಬಹಳ ದುರ್ಬಲರಾಗಿ ಬಿಟ್ಟರು. (ಮೊದಲೇ ಬಲಹೀನ. ಅದರಲ್ಲಿ ಈ ಘಟನೆ ರೋಗಿಷ್ಟನನ್ನು ಮೇಲೆತ್ತಿ ಹಾಕಿದಂತೆ ಆಯಿತು.) ಈ ದುಃಖದ ವೇಳೆಲ್ಲಿ ಅಯ್ಯರ್, ಭಾರತಿಯಾರ್ ಇಬ್ಬರೂ ಎಡೆಬಿಡದೆ ಅವರ ಜೊತೆಯಲ್ಲಿದ್ದು ಮಾತಾಡುತ್ತಾ, ಚದುರಂಗವಾಡುತ್ತಾ ದಿನ ಕಳೆಯುತ್ತಿದ್ದರು. ಸಂಜೆ 'ಅರವಿಂದರ' ಮನೆಗೆ ಹೋಗಿ ವೇದ, ಉಪನಿಷತ್ತು, ಇವುಗಳ ಬಗ್ಗೆ ಚಿಂತನೆ ನಡೆಸುತ್ತಿದ್ದರು. ರಾತ್ರಿ ಹತ್ತು – ಹನ್ನೊಂದರ ವೇಳೆಗೆ ಮನೆ ಸೇರುತ್ತಿದ್ದರು.

ಮಗು ತೀರಿದಂದು ಅದನ್ನು ಮಣ್ಣು ಮಾಡಿ, ಎರಡು ಗಂಟೆಯ ವೇಳೆಗೆ ಎಲ್ಲರೂ ವಾಪಸ್ಸು ಬಂದರು. ಹೊಟ್ಟೆಯಲ್ಲಿ ಬಹಳ ಸಂಕಟ, ಭಾರತಿಯಾರರಿಗೆ ಏನೂ ಬೇಕಾಗಿರಲಿಲ್ಲ. ತಮಗೆ ಒಂದು ವರ ಕೊಡುವಂತೆ ದೇವಿಯನ್ನು ಬೇಡಿದರು. ಕೇಳ್ವನ್ ಎಂಬ – ಶೀರ್ಷಿಕೆಯಲ್ಲಿ ಜಾನಪದ (ನೋಂಡಿಶಿಂದು) ಧಾಟಿಯ ಆ ಮೆಟ್ಟಿನಲ್ಲಿ 'ನಲ್ಲದೋರ್ ವೀಣೈಶೆಯ್‌ದೇಕ' (ಒಳ್ಳೆಯ ವೀಣೇಯೊಂದನ್ನು ತಯಾರಿಸಿದೆ' ಎಂಬ ಹಡನ್ನು ಹಾಡಿದರು. ಚಿಕ್ಕ ಮಕ್ಕಳಾದ ನಮಗೆ ಅದನ್ನು ಹಾಡಿ ತೋರಿಸಿದರು.

ಮಗು ತೀರಿಹೋದ ದುಃಖದಲ್ಲಿ ನನ್ನ ತಾಯಿಗೆ ಶೀತಬೇದಿ ಇನ್ನೂ ಕೆಲವು ರೋಗಗಳು ಅಂಟಿಕೊಂಡು ಬಹಳ ಕಷ್ಟಪಟ್ಟರು. ಔಷಧಿಗಳಿಂದ ಗುಣವಾಗಲಿಲ್ಲವೆಂದು ಪ್ರಕೃತಿ ವೈದ್ಯದಿಂದ ಗುಣಪಡಿಸಲು ನೋಡಿದರು. ಮನೆಯಲ್ಲಿಯೇ ಕುಳಿತಿದ್ದರೆ ದುಃಖ ಜಾಸ್ತಿಯಾಗುತ್ತದೆಂದು ಎಣಿಸಿ ಶೆಲ್ಲಮ್ಮಾ, ನನ್ನ ತಾಯಿ, ನಾನು, ನನ್ನ ಸಹೋದರಿಯರು ಎಲ್ಲರೂ ಸೇರಿ, ಬೇಳಗಿನ ಹೊತ್ತು ಅಲ್ಲಿಯೇ ಇದ್ದ 'ಪಾತಾಳಗಂಗೆ' ಎಂಬ ನಡಬಾವಿಗೆ ಹೋಗಿ ಸ್ನಾನ ಮಾಡಿ ಬರುತ್ತಿದ್ದೆವು. ಸಾಯಂಕಾಲ ಆರುಗಂಟೆಗೆ ಶೆಲ್ಲಮ್ಮಾ ಬಂದು ಒತ್ತಾಯಿಸಿ (ಬಲವಂತವಾಗಿ) ನಮ್ಮೆಲ್ಲರನ್ನೂ ಕಡಲದಂಡೆಗ ಎಕರೆದೊಯ್ಯುವರು. ರಾತ್ರಿ ಒಂಬತ್ತರ ವೇಳೆಗೆ ಮನೆಗೆ ಹಿಂತಿರುಗುವೆವು. ಕೆಲದಿನಗಳಲ್ಲಿ. ಬೆಳಿಗ್ಗೆ 6 ಗಂಟೆಗೆ ಎದ್ದು 'ಪಾತಾಳಗಂಗೆಗೆ' ಹೋಗಿ ಎಣ್ಣೆ ಸ್ನಾನಮಾಡಿ ಬರುತ್ತಿದ್ದೆವು. ಹೀಗೆ ಮೂರು ತಿಂಗಳ ಕಾಲ ನಡೆಯಿತು.

ಅಯ್ಯರ್ ಅವರೂ, ನನ್ನ ತಂದೆಯವರೂ ಚದುರಂಗ ಆಡುತ್ತಾ ಕಾಲ ಕಳೆಯುವರು.

ಒಂದು ಕಾರ್ಡ್‌ಬೋರ್ಡಿನಲ್ಲಿ (ರಟ್ಟು) ಚೌಕಗಳನ್ನು ಬರೆದು ಅದರಲ್ಲಿ ಅಕ್ಷರಗಳ ಮೂಲಕ ಆಟ ಆಡುವರು ರಾಜ, ಮಂತ್ರಿ, ಆನೆ, ಕುದುರೆ, ಒಂಟೆ,

ಕಾಲಾಳು ಇವುಗಳು ಮೊದಲ ಅಕ್ಷರವನ್ನು ಬರೆದು ಆಡುವರು. ನನ್ನ ತಂದೆ ಅಡಿಗಡಿಗೆ ಎದೆನೋವು, ತಲೆನೋವು ಎಂದು ಒದ್ದಾಡುವರು. ಭಾರತಿಯವರೂ, ಅಯ್ಯರ್ ಅವರೂ ಎಡೆ ಬಿಡದೆ ಅವರ ಬಳಿ ಇರುತ್ತಿದ್ದರು.

ಒಂದು ದಿನ ಸಂಜೆ ನಾವೆಲ್ಲರೂ 'ವಿಲ್ಲಿಯನೂರ್' ಎಂಬ ನದಿಯಲ್ಲಿ ಸ್ನಾನ ಮಾಡಲು ಹೋದೆವು. ಅಲ್ಲಿ ಯಾವುದೋ ಒಂದು ಉತ್ಸವ 'ಆರಿದ್ರಾ' ದರ್ಶನ ಎಂದು ಜ್ಞಾಪಕ 'ಸ್ವಾಮಿನಾಥನ್' ಎಂಬ ಹುಡುಗ ನಮ್ಮ ಜೊತೆಗೆ ಬಂದ. ಅವನ ಬಂಧುಗಳ ಮನೆಯಲ್ಲಿಯೇ ತಂಗಿದೆವು. ನದಿಯಲ್ಲಿ ಮಿಂದು, ಊರು ಸುತ್ತಿ ನೋಡಿ ಬಿಟ್ಟು ಊಟ ಮಾಡಿದೆವು.

ಸುಮಾರು ಎರಡು ಗಂಟೆಯ ವೇಳೆಗೆ ಗಾಡಿಗೊತ್ತು ಮಾಡಿಕೊಂಡು ಸ್ವಾಮಿನಾಥನೊಡನೆ ಹೊರಟೆವು. ಪುದುಚೇರಿಗೆ ಮೂರು ಮೈಲಿದೂರ ಎಂದು ನೆನಪು. ಅರ್ಧ ದಾರಿಯಲ್ಲಿ ಗಾಡಿಯ ಚಕ್ರ ಮುರಿದು ಹೋಯಿತು. ಬೇರೆ ಗಾಡಿ ಸಿಕ್ಕಲಿಲ್ಲ. ಚಿಕ್ಕಮಗುವಾದ ರಂಗನಾಯಕಿಯನ್ನು ಆಳಿನಕೈಗೆ ಎತ್ತಿಕೊಳ್ಳಲು ಕೊಟ್ಟು, ನಾವೆಲ್ಲರೂ ಮಾತಾಡಿಕೊಂಡೇ ನಡೆದು ಬಂದು ಮನೆ ಸೇರಿದೆವು.

ಭಾರತಿಯಾರರಿಗೆ ಬಹಳ ಆಶ್ಚರ್ಯ ! ಶೆಲ್ಲಮ್ಮಾ ಕುಡ ಅಷ್ಟು ದೂರ ನಡೆದು ಬಿಟ್ಟರಲ್ಲಾ ಎಂದು. ಎಂದಾದರೂ ಕಾಲುನೋವು ಎಂದರೆ ಏನು ಶೆಲ್ಲಮ್ಮಾ, 'ಆರಿದ್ರಾದರ್ಶನ' ಮಾಡಿಬಿಟ್ಟು ಬಂದೆಯಾ' ಎಂದು ತಮಾಷೆ ಮಾಡುವರು.

ಆ ದಿನಗಳಲ್ಲಿ ನಾವುಗಳು ಅವರುಗಳನ್ನು ಬಿಟ್ಟಿದ್ದುದೇ ಇಲ್ಲ. ಬೆಳಿಗ್ಗೆ 'ಪಾತಾಳಗಂಗೆ' ಸಂಜೆ ಸಮುದ್ರ ತೀರ. ಹೀಗೆ ಆರು ತಿಂಗಳು ಜಾರಿದವು.

ಈ ಮದ್ಯೆ 'ಖಗೋಳ ಶಾಸ್ತ್ರ (Astronomy) ದ ಹುಚ್ಚು ಎಲ್ಲರನ್ನೂ ಹಿಡಿದುಕೊಂಡಿತ್ತು. ಅಲ್ಲಿ ಒಂದು (ಸಮುದ್ರ ತೀರ) ಕಡೆ ದುರ್‌ಬೀನ್ (ಭೂತಗನ್ನಡಿ ಅಥವಾ ಟೆಲಿಸ್ಕೋಪ್ ಇರಬಹುದು) ಇಟ್ಟಿರುತ್ತಿದ್ದರು. ಯಾರು ಹೋದರೂ, ನೋಡಬೇಕೆಂದರೂ ತೋರಿಸುವರು. ಹೀಗೆ ಹೊತ್ತು ಕಳೆಯುತ್ತಿದ್ದೆವು.

(7) ಪೆಣ್‌ಹಳ್ ವಿಡುದಲೈ

(ಮಹಿಳಾ ವಿಮೋಚನೆ)

'ಮಾಶಿಮಖಂ' ಎಂಬ ದಿನದಂದು ಹೆಂಗಸರು, ಗಂಡಸರು, ಎಲ್ಲರೂ

ದೇವರ ಉತ್ಸವದೊಂದಿಗೆ ಸಮುದ್ರ ತೀರಕ್ಕೆ ತೆರಳಿದ್ದೆವು. ಪುದುಚೇರಿಯಲ್ಲಿ ಈ ಉತ್ಸವದ ದೃಶ್ಯ ಬಹಳ ಚೆನ್ನಾಗಿರುತ್ತದೆ. ಅಂದು ಸಂಜೆ ಭಾರತಿಯಾರರು ಪುಟ್ಟ ಶಕುಂತಲಾವಿನೊಂದಿಗೆ ನಮ್ಮ ಮನೆಗೆ ಬಂದರು. ನನ್ನ ಕಡೆಯ ತಂಗಿ ರಂಗನಾಯಕಿ, ಶಕುಂತಲಾ ಇಬ್ಬರಿಗೂ ಒಂದೇ ವಯಸ್ಸು (ಸಮವಯಸ್ಸು).

ಶಕುಂತಲಾ: – ನಿಮ್ಮ ಮನೆಯಲ್ಲಿ ಇವತ್ತು ಏನಡಿಗೆ?

ರಂಗನಾಯಕಿ : – ಗೋರಿಕಾಯಿ ಪಲ್ಯ, ತೆಂಗಿನ ತುರಿಯ ಮೊಸರು ಪಚ್ಚಡಿ, ಹೆಸರು ಬೇಲೆ ಪಾಯಸ.

ಶಕುಂತಲಾ: ಇವತ್ತೇನು ವಿಶೇಷ?

ರಂಗನಾಯಕಿ:– ಸಮುದ್ರ ಸ್ನಾನ ಮಾಡಿದೆವು. ದೇವರ ದರ್ಶನ ವಾಯಿತು ಬೇಳೆ ಪಾಯಸ ಉಂಡೆವು.

ಶಕುಂತಲಾ:– (ಹೋಗಮ್ಮಾ ಇವತ್ತೇನು ವಿಶೇಷ ಹೇಳು?

ರಂಗನಾಯಕಿ:– ನನಗೆ ಗೊತ್ತಿಲ್ಲಮ್ಮ!

ಶಕುಂತಲಾ:– 'ಅಯ್ಯೋದಡ್ಡಿ ! ಇವತ್ತು ಮಾಶಿಮಖಂ' ಕಣೇ ಮಾಶಿಮಖಂ

ಈ ವರೆಗೆ ಅವರುಗಳು ಮಾತಾಡುತ್ತಿದ್ದುದನ್ನು ಗಮನಿಸುತ್ತಿದ್ದ ಭಾರತಿಯಾರರು ಗಲಗಲವೆಂದು ನಕ್ಕು ಪಾಪಾ, ಇಲ್ಲಿ ಓಡಿಬನ್ನಿ, ನೀವಿಬ್ಬರೂ ಗಿಳಿಗಳಂತೆ ಮಾತನಾಡುತ್ತೀರಿ. ಒಂದು ಬಂಗಾರದ ಗಿಳಿ, ಮತ್ತೊಂದು ಕಬ್ಬಿಣದ ಗಿಳಿ, ಯಾರು ಯಾವ ಗಿಳಿಯಾಗುತ್ತೀರಿ? ಎಂದು.

ಶಕುಂತಲಾ:– ನಾನೇ ಬಂಗಾರದ ಗಿಳಿ (ಗಿಣಿ) ರಂಗಾ ಕಬ್ಬಿಣದ ಗಿಳಿ. ಸರಿತಾನೇ ! ಅಪ್ಪಾ?

ರಂಗನಾಯಕಿ:– ನಾನೇ ಬಂಗಾರದ ಗಿಳಿ, ನೀನು ಕಬ್ಬಿನದ ಗಿಳಿಯಾಗಿರು.

ಶಕುಂತಲಾ:– ಅದೆಲ್ಲಾ ಆಗುವುದಿಲ್ಲ. ನನ್ನ ಅಪ್ಪ ತಾನೇ ಹೇಳಿದರು! ನಾನೇ ಬಂಗಾರದ ಗಿಣಿ

ರಂಗನಾಯಕಿ:– ಹೋಗಮ್ಮಾ, ನೀನು ಜಗಳವಾಡಬೇಡ, ನಾವಿಬ್ಬರೂ ಬಂಗಾರದ ಗಿಳಿಗಳೇ!

ಭಾರತಿಯಾರರಿಗೆ ಸಂತೋಷ ತಡೆಹಿಡಿಯಲಾಗಲಿಲ್ಲ, ರಂಗನಾಯಕಿಯನ್ನು ಎತ್ತಿಕೊಂಡು ನಮ್ಮ ತಂದೆಯವರ ಬಳಿಗೆ ಹೋದರು. ನಾನು ಮಕ್ಕಳ ಮನ ನೋಯಿಸಿದೆ. ಈ ಮಗು ಅದನ್ನು ಸರಿಪಡಿಸಿ ಬಿಟ್ಟಿತು. ಎಂದು ಹೇಳಿ ಅವರುಗಳ ಸಂಭಾಷಣೆಯನ್ನು ನಮ್ಮ ತಂದೆಗೆ ಹೇಳಿದರು. ತದನಂತರ ಅವರು ನನ್ನ ತಂಗಿಯನ್ನು 'ಬಂಗಾರದ ಗಿಣಿ' ಎಂದೇ ಕರೆಯಲಾರಂಭಿಸಿದರು.

ರಂಗನಾಯಕಿ:– ನಾನು ಹೇಳಿದುದು ತಪ್ಪೇ? ನಾವಿಬ್ಬರೂ ಬೆಳ್ಳಗಿಲ್ಲವೇ?

ಭಾರತಿ:– ನೀನು ಹೇಳಿದುದು ಸರಿ ನೀವಿಬ್ಬರೂ ಬಂಗಾರದ ಗಿಳಿಗಳೇ ಅಮ್ಮಾ!

ರಂಗನಾಯಕಿ:– ಶಕುಂತಲಾವನ್ನು ಏತಕ್ಕೇ ಎತ್ತಿಕೊಳ್ಳಲಿಲ್ಲ!

ಭಾರತಿ 'ಬಾ ಮಗು ಶಕುಂತಲಾ! ರಂಗಾ ನಿನ್ನನ್ನೂ ಬಂಗಾರದ (ಚಿನ್ನದ) ಗಿಣಿಯಾಗಿಸಿ ಬಿಟ್ಟಳಲ್ಲಾ!

ಶಕುಂತಲಾ: 'ಹೋಗಪ್ಪಾ! ನಾನು ಬರುವುದಿಲ್ಲ. ನೀನೇ ಎತ್ತಿಕೊಂಡು ಹೋಗು!

ಭಾರತಿಯಾರರು ಅವರುಗಳನ್ನು ತಮ್ಮ ಪಾಡಿಗೆ ಆಡಿಕೊಳ್ಳಲು ಬಿಟ್ಟರು. ನಾನು ನನ್ನ ಪಾಠಗಳನ್ನು ಮುಗಿಸಿಕೊಂಡು ಬಂದೆ. 'ಯದುಗಿರಿ' ಈ ದಿನ ತಂಗಮ್ಮಾ ಮಾಡಿದ ತಮಾಷೆಯನ್ನು ನೀನು ಕೇಳಿದೆಯಾ?

ನಾನು:– ಏನು ಮಾಡಿದಳು?

ಭಾರತಿ:– ಸಮುದ್ರ ಸ್ನಾನಮಾಡಿ, ಅಡಿಗೆ ಮಾಡಲು ತಡವಾಗುತ್ತದೆಂದು – ದಾರಿಯಲ್ಲಿ ಒಂದು ಹೋಟಲ್ಲಿಗೆ ಇಬ್ಬರನ್ನೂ ಕರೆದುಕೊಂಡುಹೋದೆ. ಶಕುಂತಲಾ ಊಟ ಮಾಡಿದಳು. ತಂಗಮ್ಮಾ ಒಪ್ಪಲಿಲ್ಲ. (ಮಡಿಯಾಗಿ) ಸಮುದ್ರದಲ್ಲಿ ಮಡಿಯಾಗಿ ಸ್ನಾನ ಮಾಡಿ, ಎಂಜಲು ಮೇಜಿನ ಮೇಲೆ ತಿನ್ನುವುದಿಲ್ಲ ಎಂದಳು. ಅವಳಿಗೆ ಬೇರೆ ಕಡೆ ಒಂದು ಮಣೆ ಹಾಕಿ ಕೂಡಿಸಿ, ಬೇರೆ ಇಡ್ಲಿ ತರುವಂತೆ ಹೇಳಿದೆ. ಹೋಟೆಲ್ ಮಾಣಿ ಗಾಜಿನ ಲೋಟದಲ್ಲಿ ನೀರು ತಂದ. ತಂಗಮ್ಮಾ ಆ ನೀರು ಬೇಡವೆಂದಳು ಅಲ್ಲಿದ್ದ ಕಂಚಿನ ಲೋಟದಲ್ಲಿ ನೀರು ತಂದ. ಮೇಜಿ ಮೇಲಿದ್ದ ಲೋಟಕ್ಕೆ ಹುಳಿ ಹಾಕಿ ಶುದ್ಧ ಮಾಡಿಲ್ಲ. ಬೇಡ ಎಂದಳು. ಮಾಣಿಗೆ ಸಾಕುಸಾಕಾಗಿ ಹೋಯಿತು. ಕಡೆಯಲ್ಲಿ ಒಂದು ಬೆಳ್ಳಿ ಲೋಟದಲ್ಲಿ ನೀರು ತಂದುಕೊಟ್ಟ. ಅಷ್ಟರೊಳಗೆ ಇಡ್ಲಿ ತಣ್ಣಗಾಗಿ ಬಿಟ್ಟಿತು. ಬೇರೆ ಇಡ್ಲಿ ತಂದ. ಅಲ್ಲಿ ಎಲ್ಲರೂ ತಂಗಮ್ಮಾವಿನ ಕಣಿಯನ್ನೇ ನೋಡುತ್ತಿದ್ದರು. ನಂತರ ಹೋಟೆಲಿನವನಿಗೆ ದುಡ್ಡುಕೊಟ್ಟು ಬಿಟ್ಟು, ಹೊರಗೆ ಬಂದು, ಏನು ಅಮ್ಮಾ? ಇಷ್ಟು ಕಣಿಮಾಡುತ್ತೀಯಾ? ನೀನೇನು ಮುದುಕಿಯೇ ಮಡಿಮಾಡಲು ಎಂದೆ.

ಅದಕ್ಕೆ ತಂಗಮ್ಮಾ 'ಮುದುಕಿಯಲ್ಲದಿದ್ದರೂ ಕಂಡವರ ಎಂಜಲನ್ನೆಲ್ಲಾ ತಿನ್ನಬೇಕೆಂದಿದೆಯೆ? ನನಗೆ ಇದೆಲ್ಲಾ ಹಿಡಿಸುವುದಿಲ್ಲ. ವಾಂತಿಗೆ ಬರುತ್ತದೆ. ಅವನು ಒಂದು ತೊಟ್ಟಿ ನೀರಿನಲ್ಲಿ ಅಷ್ಟು ಎಂಜಲು ಲೋಟಗಳನ್ನು ಹಾಕಿದ. ಹಾಗಾದರೂ ಈ ಹೊಟ್ಟೆ ತುಂಬಿಸಿಕೊಳ್ಳಬೇಕಾ? ನಾವು ಹೋಟೆಲಿಗೆ ಹೋಗುವಾಗ ಕಾಫಿ ಕುಡಿಯುತ್ತಿದ ಒಬ್ಬ ಕುಷ್ಠರೋಗಿಯ ಲೋಟವನ್ನೂ

ಅದರಲ್ಲೇ ಹಾಕಿದ. ಊಟ ಮಾಡಲು ಒಂದು ಗಂಟೆ ತಡವಾದರೆ ಜೀವ ಹೋಗಿ ಬಿಡುತ್ತದೆಯೆ? ಹೋಟೆಲ್ ಬಹಳ ಗಲೀಜು ನನ್ನ ದೊಡ್ಡಮ್ಮ ಬಿಡಿಸಿದ ಹಲಸಿನ ತೊಳೆಯನ್ನು ಕೊಂಡರೆ, ಅದು ಗಲೀಜು ಎನ್ನುವಳು. ಇಲ್ಲಿ ಊಟ ಮಾಡಿದುದನ್ನು ನೋಡಿದ್ದರೆ ಸಹಿಸಿಕೊಳ್ಳುತ್ತಲೇ ಇರಲಿಲ್ಲ. ನನಗೆ ನನ್ನ ಅಮ್ಮ ಶೆಲ್ಲಮ್ಮಾ ಮಾಡುವುದೇ ಸಾಕು. ನನಗ ಅವರುಗಳು ಮಾಡುವುದೇ ಸರಿಯಾಗಿ ಒಗ್ಗುತ್ತದೆ' ಎಂದಳು.

ನಾನು:– ತಂಗಮ್ಮಾವಿಗೆ ಹೋಟೆಲ್ ಅಭ್ಯಾಸವಿಲ್ಲ. ನಮ್ಮ ತಾಯಿ ಗೋಡಂಬಿ, ಏಲಕ್ಕಿ ಮಿಠಾಯನ್ನು ಕೂಡ ಹೋಟೆಲ್‌ನಲ್ಲಿ ತೆಗೆದುಕೊಳ್ಳಲು ಬಿಡುವುದಿಲ್ಲ

ಭಾರತಿ:– ದೊಡ್ಡವರು ಹೇಗಾದರೂ ಇರಲಿ! ಚಿಕ್ಕವರಿಗೆ ಏಕೆ ಕಟ್ಟುಪಾಡು?

ನಾನು:– ಒಳ್ಳೆಯ ಅಭ್ಯಾಸವನ್ನು ಚಿಕ್ಕಂದಿನಿಂದಲೇ ಬೆಳೆಸಿಕೊಳ್ಳುವುದು ಒಳ್ಳೆಯದಲ್ಲವೇ?

ಭಾರತೀ:– ತಂಗಮ್ಮಾವನ್ನು ಇನ್ನು ಎಲ್ಲಿಗೂ ಕರೆದುಕೊಂಡು ಹೋಗುವುದಿಲ್ಲ.

ನಾನು:– ಅವಳು ಹೇಳಿದ್ದು ಸರಿತಾನೇ? ಕುಷ್ಠರೋಗಿ, ಕ್ಷಯರೋಗಿ, ಚರ್ಮರೋಗಿ ಮುಂತಾದವರ ಎಂಜಲನ್ನು ನಾವು ಏಕೆ ತಿನ್ನಬೇಕು?'

ಭಾರತಿ: ನೀನು ಅವರುಗಳ ಪರ ವಕೀಲ್, ನಾನು ಮಾತನಾಡಿ ಪ್ರಯೋಜನವಿಲ್ಲ.

ನಾನು:– ನೀವು ಸರಿಯಾಗಿ ತಿಳಿಸಬಾರದೇ? ನಾನು ವಾದ ಮಾಡುತ್ತಿಲ್ಲ.

ಭಾರತಿ: ನಮ್ಮ ಹಿರಿಯರು ಎಂಜಲಿನ ವಿಷಯದಲ್ಲಿ ನಿರ್ಬಂಧ ಇಟ್ಟಿರುವುದು ಒಳ್ಳೆಯದೇ. ಆದರೆ ನಾವು ಜಾತಿಭೇದ ಮಾಡುವುದು ಬಹಳ ತಪ್ಪು. ಬ್ರಾಹ್ಮಣ ಕ್ಷಯರೋಗಿಯಾದರೂ ಅವನ ಬಳಿ ಊಟ ಮಾಡಿದರೆ ಮಡಿ. ಶೂದ್ರನು ಸುದೃಡಪಾಗಿದ್ದರೂ ಅವನ ಬಳಿ ಊಟ ಮಾಡಿದರೆ ಮೈಲಿಗೆ! ಒಂದು ಸಲ ಪ್ರಯಾಣ ಮಾಡುತ್ತಿದ್ದಾಗ ರೈಲಿನಲ್ಲಿ ಇನ್ನೊಂದು ತಮಾಷೆ ನೋಡಿದೆ. ಒಂದು ಚಿಕ್ಕ ಕಂಪಾರ್ಟ್‌ಮೆಂಟಿನಲ್ಲಿ ಯುವ ವಯಸ್ಸಿನ ಗಂಡ, ಹೆಂಡತಿ, ನಾನು ಮೂವರೇ. ಇದ್ದೆವು. ಆ ಪುರುಷನೂ ನಾನೂ ಲೋಕಾಭಿರಾಮವಾಗಿ ಹರಟೆ ಹೊಡೆಯುತ್ತಿದ್ದೆವು. ನಂತರ ಅವನು ಕಾಫಿ ತರಲು ಕೆಳಗೆ ಇಳಿದು ಹೋದನು. ಆಗ ಆ ಹೆಣ್ಣು ಮಗಳು ನನ್ನ ಹೆಸರು, ಊರು ಎಲ್ಲವನ್ನೂ ವಿಚಾರಿಸಿದಳು. ಗಂಡನ ತಲೆ ಕಂಡೊಡನೆ ಬಾಯಿಬೀಗ! ನಂತರ ನಾನು ಎಲೆ ಅಡಿಕೆ ತರಲು ಕೆಳಗಿಳಿದರೆ, ಆಗ ಅವರುಗಳು ಸಂತೋಷವಾಗಿ ನಗುನಗುತ್ತಾ ಮಾತಾಡುತ್ತಿದ್ದರು. ನನ್ನ ತಲೆ ಕಂಡೊಡನೆ ಬಾಯಿಬೀಗ! ಇದು ಏನು ಪದ್ಧತಿ? ಇದು ಶುದ್ಧ ಮೂರ್ಖತನ! ದೊಡ್ಡ ಉಪನ್ಯಾಸವನ್ನೇ ಮಾಡಿಬಿಡಬೇಕೆಂದು ನನ್ನ ಮನಸ್ಸು

ತುಡಿಯಿತು. ಬಹಳ ಕಷ್ಟಪಟ್ಟು ಮನಸ್ಸನ್ನು ತಡೆದೆ.

ನಾನು:– ತನ್ನ ಯಜಮಾನನ ಮುಂದೆ ಮಾತನಾಡಲು ಆಕೆಗೆ ಧೈರ್ಯವಿಲ್ಲ. ಕುತೂಹಲ ತಡೆಯಲಾರದೆ ಅವನ ಇಲ್ಲದಿರುವಾಗ ನಿಮ್ಮನ್ನು ವಿಚಾರಿಸಿದಳು.

ಭಾರತಿ:– ಇದು ಒಳ್ಳೆಯ ಗುಲಾಮಗಿರಿ!

ಅವಳನ್ನು ಕೇಳಬೇಕೆಂದುಕೊಂಡೆ ಸುಮ್ಮನೆ, ನನಗೇಕೆ ಇಲ್ಲದೆ ತರಲೆ ಎಂದು ಸುಮ್ಮನಿದ್ದೆ.

ನಾನು:– ಹೆಂಗಸರಿಗೆ ಈ ದಾಸ್ಯಭಾವದಿಂದ ಮುಕ್ತಿ ದೊರೆತರೆ, ಅವರುಗಳು ಧೈರ್ಯವಾಗಿ ನಾಲ್ಕು ಜನರೊಂದಿಗೆ ಮಾತನಾಡಬಹುದು. ಈಗಲಾದರೋ – ತಲೆ ಮೇಲೆ ಹೊಡೆದರೆ ತಲೆತಗ್ಗಿಸಿ ಎದುರಿಗೆ ಬರುವ ಗಾಡಿ, ಹಸು, ಕುರಿಗಳನ್ನು ಕೂಡ ನೋಡದಂತೆ ಹೋಗುತ್ತಾರೆ.

ಭಾರತಿ:– ಇದೋನೋಡು ಯದುಗಿರಿ, ನಾನು ಮಹಿಳಾ ವಿಮೋಚನೆ (ಮಹಿಳೆಯರ ಬಿಡುಗಡೆ) ಯ ಬಗ್ಗೆ ಒಂದು ದೊಡ್ಡ ಪ್ರಬಂಧವನ್ನು ಬರೆಯುತ್ತೇನೆ. ಕವಿತೆಗಳನ್ನೂ ಬರೆಯುತ್ತೇನೆ. ನೀವುಗಳು ಈ ಹಳೆಯ ಕಂದಾಚಾರಗಳನ್ನೆಲ್ಲಾ ಬಿಟ್ಟು ಬಿಡಬೇಕು.

ನಾನು: ನೀವು ಬಿಡುಗಡೆ (ವಿಮೋಚನೆ) ಕೊಟ್ಟಂತಾಗಲಿಲ್ಲವಲ್ಲಾ? ನೀವು ಹೊಸ ರೀತಿಯ ಕಟ್ಟಳೆ ಹಾಕುತ್ತಿದ್ದೀರಿ! ಇದರಲ್ಲಿ ಬಿಡುಗಡೆ ಎಲ್ಲಿ ಬಂತು?

ಭಾರತಿ:– ನಿನಗೆ ಗೊತ್ತಿಲ್ಲ ಹಳೆಯ ಶಾಸ್ತ್ರಗಳು ಈ ಕಾಲಕ್ಕೆ ಸರಿಹೊಂದುವುದಿಲ್ಲ. ನಮ್ಮ ದೇಶಕ್ಕಿಂತ ಮತ್ತೆಲ್ಲಾ ದೇಶಗಳೂ ಮುಂದುವರಿದು ಮುಂಚೂಣಿಯಲ್ಲಿವೆ. ಹೆಂಗಸರ ದಾಸ್ಯದಿಂದ ನಮ್ಮ ದೇಶ ಹಿಂದುಳಿದಿದೆ.

ನಾನು:– ನೀವು ಏನು ಹೇಳಿದರೂ – ಮಹಿಳೆಯರಿಂದಲೇ ಈ ದೇಶ ನೆಲೆಯಾಗಿ ಭದ್ರವಾಗಿ ನಿಂತಿದೆ' ಎಂದು ನಾನು ಹೇಳುತ್ತೇನೆ.

ನಾನು:– ನೀವು ಗಂಡಸರು ಮಿಲ್ ಪಂಚೆಯನ್ನು ಉಡುತ್ತೀರಿ, ನಾವು ಹೆಂಗಸರು ಕೈ ಮಗ್ಗದಲ್ಲಿ ನೇಯ್ದ ಸೀರೆಗಳನ್ನು ಉಡುತ್ತೇವೆ. ಸಂಪ್ರದಾಯಗಳು, ಹಬ್ಬ ಹರಿದಿನಗಳು. ಆಚಾರ ವಿಚಾರಗಳು, ಪುರಾಣಗಳು ಇತಿಹಾಸಗಳು, ನೀತಿಕಥೆಗಳು ಎಲ್ಲವೂ ನಮ್ಮಂಥ ಮಹಿಳೆಯರಿಂದಲೇ ಕಾಪಾಡಲ್ಪಟ್ಟಿವೆ. ಇಂಗ್ಲೀಷ್ ಪಂಡಿತರಾದ ನಿಮ್ಮಗಳಿಗೆ ಅವುಗಳನ್ನು ನೋಡಲು ಪುರಸೊತ್ತಾದರೂ ಎಲ್ಲಿದೆ?

ಯಾರಾದರೂ ಪರಂಗಿಯವನು (ಬಿಳಿಯವನು) ಹೇಳಿದರೆ ನಮ್ಮ ತಾಯಿಯನ್ನು 'ಪಾರಾಯಣ' ಮನೆಯಲ್ಲಿದೆಯೋ ಎಂದು ಕೇಳುತ್ತೀರಿ!

ಭಾರತಿ:– ಭಲೇ! ಅಯ್ಯರ್ ಹೇಳಿದ ಭಾಷಣವನ್ನು ಹಾಗೆಯೇ ನುಂಗಿ ಬಿಟ್ಟಿರುವೆಯಲ್ಲಾ! ಪರವಾಗಿಲ್ಲ. ಚಿಕ್ಕವರ (ಮಕ್ಕಳ) ಹತ್ತಿರ ಸೋಲುವುದು ಹೆಮ್ಮೆಯೇ. ಅದನ್ನು 'ಶಿಷ್ಯಾದಿಚ್ಛೇತ್ ಪರಾಜಯಂ' ಎಂದು ಕೆಲವರು ತಮ್ಮ ನಾಡಿನಲ್ಲಿ ತೋರಿಸಿಕೊಟ್ಟಿದ್ದಾರೆ.

ನಾನು:– ನಾವುಗಳು ಕುಮ್ಮಿ ಹೊಡೆಯಲು ಒಂದು ಹಾಡು ಹಾಡಿ ಕೊಡಿ.

(ಕುಮ್ಮಿ – ಅಂದರೆ ನಂದಾದೀಪ ಒಂದನ್ನು ಮಧ್ಯದಲ್ಲಿ ಹಚ್ಚಿಟ್ಟು ಹೆಂಗಳೆಯರು ಅದರ ಸುತ್ತಲೂ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕಿ, ಕೈ ತಟ್ಟಿ ಸುತ್ತುವುದು. ಮನೆಯಲ್ಲಿ ನಡೆಯುವ ಶುಭ ಸಂದರ್ಭಗಳಲ್ಲಿ ಈ ಸಂಪ್ರದಾಯ ತಮಿಳು ನಾಡಿನಲ್ಲಿ ಹೆಚ್ಚು ಪದ್ಧತಿಯಲ್ಲಿದೆ.)

ಭಾರತಿ:– ತಂಗಮ್ಮಾ, ಇಂದು ಕುಮ್ಮಿ ಹೊಡೆಯಲು ಒಂದು ಹಾಡು ಕೇಳಿದಳು. ನೀನೂ, ಅದನ್ನೇ ಕೇಳಿದೆ. ನಾಳೆ ಬರುವಾಗ ಹೇಳುತ್ತೇನೆ.

ಮರುದಿನ ಭಾರತಿಯಾರರು 'ಪೆಣ್‌ಹಳ್ ವಿಡುದಲೈ ಪೆತ್ತ ಮಹಿಳ್ಚಿಯಿಲೇ (ಮಹಿಳಾ ವಿಮೋಚನೆಯ ಸಂತೋಷದಲ್ಲಿ) ಎಂದು ಪ್ರಾರಂಭವಾಗುವ 'ಕುಮ್ಮಿ' ಹಾಡನ್ನು ಬರೆದು ತಂದರು. ನಂತರ ಅದನ್ನು ಹಾಡಿಯೂ ತೋರಿಸಿದರು.

8. 'ಕರುಂಬು ತೋಟ್ಟತ್ತಿಲೇ

(ಕಬ್ಬಿನ ತೋಟದಲ್ಲಿ)

ಫಿಜಿ ದ್ವೀಪದಲ್ಲಿ ಭಾರತೀಯರು ಪಡುವ ಕಷ್ಟದ ಬಗ್ಗೆ ಯಾರೋ ಒಬ್ಬರು ಇಂಗ್ಲೀಷಿನಲ್ಲಿ ಭಾಷಣ ಮಾಡಿದರಂತೆ. ಅದನ್ನು ತಮಿಳಿನಲ್ಲಿ ಕವಿತೆಯಾಗಿ ಬರೆಯುವಂತೆ ಪತ್ರಕರ್ತರು ಭಾರತಿಯಾರರನ್ನು ಕೇಳಿದರಂತೆ.

ಒಂದು ದಿನ ಸಂಜೆ ಅಯ್ಯರ್, ನನ್ನ ತಂದೆ (ಶ್ರೀ ಶ್ರೀ ಆಚಾರ್ಯ) ಮತ್ತು ನಾನು ಮೂವರೂ ಭಾರತಿಯವರ ಮನೆಗೆ ಹೋಗಿದ್ದೆವು.

ಭಾರತಿ:– ಬನ್ನಿರಿ, ಏನು ತ್ರಿಮೂರ್ತಿ ದರ್ಶನ?

ಅಯ್ಯರ್:– ನೀವೇನು ಎರಡು ದಿನದಿಂದ ಕಾಣಲೇ ಇಲ್ಲ?

ಭಾರತಿ: ನನಗೆ ನೆಗಡಿ. ತಣ್ಣೀರಿನಲ್ಲಿ ಸ್ನಾನ ಮಾಡಿದರೆ ನನಗೆ ತಕ್ಷಣವೇ ನೆಗಡಿ ಹಿಡಿಯುತ್ತದೆ. ನದಿ, ಕೊಳ, ಸಮುದ್ರ ಇವುಗಳಲ್ಲಿ ಸ್ನಾನ ಮಾಡಿದರೆ ಏನೂ ಆಗುವುದಿಲ್ಲ. ಮನೆಯಲ್ಲಿ ಮಾಡಿದರೆ ಈ ರೀತಿ ತೊಂದರೆ. ಶೆಲ್ಲಮ್ಮಾವಿಗೆ ಮೈ ಚೆನ್ನಾಗಿಲ್ಲ. ಕೆಲಸದವಳು ಏನೋ ನೆಪ ಹೇಳಿ ಬರಲಿಲ್ಲ. ಪೇಪರಿನವನ ಹಿಂಸೆ ಬೇರೆ.

ಅಯ್ಯರ್: ಬಾವಿ ನೀರಿನಲ್ಲಿ ಸ್ನಾನ ಮಾಡುವ ಮೊದಲು 200–300 ಅಡಿ ನಡೆದಾಡಿ ನಂತರ ಸ್ನಾನ ಮಾಡಿ. ಆಗ ನೆಗಡಿ ಹಿಡಿಯುವುದಿಲ್ಲ.

ಭಾರತಿ:– ಅದಕ್ಕೆ ಬದಲು ಮಡುವಿಗೆ ಹೋಗಿ ಸ್ನಾನ ಮಾಡಬಹುದು. ನಾಲ್ಕು ಕಡೆಗಳಲ್ಲಿಯೂ ಪ್ರಕೃತಿ ಸೌಂದರ್ಯವನ್ನು ನೋಡಬಹುದು, ಸ್ನಾನವೂ ಆಗುತ್ತದೆ. ಈ ಹಾಳು ಗೋಡೆಯನ್ನು ಮತ್ತೆಮತ್ತೆ ನೋಡಲು ಇಷ್ಟವಾಗುವುದಿಲ್ಲ ಅಯ್ಯರೇ!

ಅಯ್ಯರ್:– ಹೊರಗೆ ಹೋಗುವುದ ಒಳ್ಳೆಯದೇ – ಹಾಗೆ ಮಾಡಲು ಆಗದಿದ್ದರೆ, ನಾನು ಹೇಳಿದ ಹಾಗೆ ಮಾಡಬಹುದಲ್ಲಾ! .... ಊಂ .... ಏನು ಪೇಪರ್ ವಿಷಯ?

ಭಾರತಿ:– ನಮ್ಮ ಹಿಂದು ಜನಗಳು (ಭಾರತೀಯರು) ಫಿಜಿ ದ್ವೀಪದಲ್ಲಿ ಕಷ್ಟಪಡುವುದನ್ನು ಕುರಿತು ಯಾರೋ ಭಾಷಣ ಮಾಡಿದರಂತೆ. ಆ ಗುಲಾಮರ ಸ್ಥಿತಿಯನ್ನು ವಿವರಿಸಿ ಕವಿತೆ ಬರೆದು ಕಳುಹಿಸುವಂತೆ ಕೇಳಿದ್ದಾರೆ.

ಅಯ್ಯರ್:– ಕವಿತೆಗೆ (ಹಾಡಿಗೆ) ಏನು ಹೆಸರಿಟ್ಟಿರುವಿರಿ? ಫಿಜಿ ದ್ವೀಪ ನಿಮ್ಮ ಹಾಡಿನಿಂದ ಪ್ರಸಿದ್ಧವಾಗಿ ಬಿಡುತ್ತದೆ.

ಭಾರತಿ:– ಅದನ್ನು ನೆನೆದೇ **'ಕರುಂಬು ತೋಟ್ಟಂ'** (ಕಬ್ಬಿನ ತೋಟ) ಎಂದು ಆ ಕವಿತೆಗೆ ಹೆಸರಿಟ್ಟಿದ್ದೇನೆ.

ನನ್ನ ತಂದೆ:– ಒಳ್ಳೆಯ ಕೆಲಸ ಮಾಡಿದಿರಿ. ನಮ್ಮ ನಾಡಗೀತೆಯನ್ನು **'ಇಂಡಿಯಾ ನನ್ನ ತಾಯಿಯೇ'** ಎಂದು ರಚಿಸಿದ್ದಾರೆ. ಅದು ನನ್ನ ಮನಸ್ಸಿಗೆ ಒಪ್ಪಲಿಲ್ಲ. ತಮಿಳ್ ಪದಗಳೊಂದಿಗೆ **ಇಂಡಿಯಾ** ಎಂಬ ಪದ ಹೊಂದುವುದಿಲ್ಲ.

'ಹಾಡನ್ನು ಕೇಳಿ' ಎಂದು ಅವರು **'ಕರುಂಬು ತೋಟ್ಟತ್ತಿಲೇ'** ಎಂಬ ಹಾಡನ್ನು ಹಾಡಿದರು. ಆ ಹಾಡನ್ನು ಕೇಳಿ ನನ್ನ ಮನಸ್ಸಿಗಾದ ದುಃಖ ಅಷ್ಟಿಷ್ಟಲ್ಲ. ಭಾರತಿಯಾರರು ನನ್ನನ್ನು ನೋಡಿ 'ಅಯ್ಯೋ ಹುಚ್ಚಿ! ಸಾವಿರಾರು ಮೈಲುಗಳ ದೂರದಲ್ಲಿರುವವರಿಗೆ ನೀನೇಕೆ ಅಳುತ್ತೀಯ?' ಎಂದರು.

ಅಯ್ಯರ್:– ನಮ್ಮ ಕಣ್ಣಿನಲ್ಲಿಯೇ ನೀರುಕ್ಕಿ ಬರುವಾಗ, ಹೆಣ್ಣುಮಗು ಅವಳೇನು ಮಾಡುತ್ತಾಳೆ? ಅವಳು ಅಳುವುದರಲ್ಲಿ ಅತಿಶಯವೇನೂ ಇಲ್ಲ. .... ಸರ್ಕಾರದವರು ಆ ಜನರನ್ನು ಬಿಡಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿಬಿಟ್ಟರೇ?'

ಶ್ರೀಶ್ರೀ (ನನ್ನ ತಂದೆ):– ಅದಕ್ಕೋಸ್ಕರವೇ ಭಾರತಿಯವರು ದೇವರನ್ನು ಮೊರೆ ಹೋಗಿದ್ದಾರೆ.

ಅಯ್ಯರ್:– ನಮ್ಮ ನಾಡಿನ ಜನಗಳನ್ನು ನಯವಂಚನೆ ಮಾಡಿ, ಲಾಭದ ಆಸೆ ತೋರಿಸಿ – ಆ – ಮುಖ್ಯಸ್ಥ ಈ ಜನಗಳನ್ನು ಕರೆದುಕೊಂಡು ಹೋಗಿ

ನಿಷ್ಕರುಣೆಯಿಂದ ನಡೆಸಿಕೊಳ್ಳುವುದನ್ನು ನಿಂದಿಸತಕ್ಕುದು.

ಭಾರತಿ:– ನೀವು ಬಹಳ ಹಿಂದಿನ ಕಾಲದವರು. ಈ ಮುಂದಕ್ಕೆ ಸಾಗಿಸಲ್ಪಡುವ ಜನರನ್ನು ತಡೆಹಿಡಿಯಬಹುದೇ ಹೊರತು, ಆ ದ್ವೀಪದಲ್ಲಿ ಮೊದಲೇ ಸಿಕ್ಕಿ ಹಾಕಿಕೊಂಡವರನ್ನು ಏನೂ ಮಾಡಲು ಸಾಧ್ಯವಿಲ್ಲ. ಮತ್ತೊಂದು ವಿಷಯ. ಯಾವುದೋ ಪೇಪರಿನಲ್ಲಿ ನೋಡಿದೆ. ಒಬ್ಬ ಗೃಹಸ್ಥ ಊಟ ಮುಗಿಸಿ ಆಫೀಸಿಗೆ ಹೋಗಿದ್ದಾನೆ. ಅವನ ಹೆಂಡತಿ ಕೆಲಸ ಮುಗಿಸಿಕೊಂಡು ಮಕ್ಕಳೊಂದಿಗೆ ಕುಳಿತಿದ್ದಾಳೆ. ಅಕ್ಕಪಕ್ಕ ಯಾರೂ ಇಲ್ಲ. ಆಗ ಒಬ್ಬ ಮನುಷ್ಯ ಬಂದು ಒಂದು ಚೀಟಿ ಕೊಟ್ಟನಂತೆ. ಅದರಲ್ಲಿ ನಿನ್ನ ಗಂಡ ಸಾಯುವ ಸ್ಥಿತಿಯಲ್ಲಿದ್ದಾನೆ. ತಕ್ಷಣ ಬಾ' ಎಂದು ಬರೆದಿದ್ದಂತೆ. ಇವಳು ಮನೆಗೆ ಬೀಗ ಹಾಕಿಬಿಟ್ಟು ಹಿಂದೆ ಮುಂದೆ ಯೋಚಿಸದೆ ಘಾಬರಿಯಿಂದ ಅವನ ಹಿಂದೆ ಹೊರಟಳು.

ಆ ನೀಚ ಇವಳನ್ನು ಒಂದು ಗಂಟೆಗೆ ಹೊರಡುವ ಹಡಗಿನ ಬಂದರಿಗೆ ಕರೆದುಕೊಂಡು ಹೋದ. 'ನನ್ನ ಗಂಡ ಹಡಗಿಗೆ ಏಕೆ ಬಂದರು?' ಎಂದು ಅವಳು ಕೇಳಿದಳಂತೆ. 'ಆಫೀಸಿನ ಅಧಿಕಾರಿ ಹಡಗಿನ ಮುಖ್ಯಸ್ಥನಿಗೆ ಒಂದು ಕಾಗದ ಕಳುಹಿಸಿದರು. ಹಡಗಿಗೆ ಬಂದು ಕಬ್ಬಿಣದ ಮೆಟ್ಟಲುಗಳನ್ನು ಹತ್ತುವಾಗ ತಲೆ ಸುತ್ತಿಬಂದು ಬಿದ್ದು ಮಂಡೆ ಒಡೆಯಿತು' ಎಂದನಂತೆ ಅವನು. ಆ ಹೆಂಗಸು ಅದನ್ನೂ ನಂಬಿ ಹಡಗಿಗೆ ಹತ್ತಿದಳಂತೆ. ಮೇಲಿನ ಮಹಡಿಗೆ ಹೋಗುವುದರೊಳಗೆ ಹಡಗು ಹೊರಟುಬಿಟ್ಟಿತು. ಅಲ್ಲಿ ಇವಳಂತೆಯೇ ಅನೇಕ ಹೆಣ್ಣುಮಕ್ಕಳು ಇದ್ದರಂತೆ. ಹಡಗು ಚಲಿಸಿದ ನಂತರ ಎಲ್ಲರೂ ಹೋ! ಎಂದು ಅತ್ತರಂತೆ. 'ಏಕೆಂದು' ಇವಳು ಕೇಳಲು, ನಾವು ಗುಲಾಮರು. ಫಿಜಿ ದ್ವೀಪದಲ್ಲಿರುವ ಗಂಡಸರ ಸುಖಕ್ಕಾಗಿ ನಮ್ಮನ್ನು ಕರೆದುಕೊಂಡು ಹೋಗಿ ನಾಶ ಮಾಡುತ್ತಿದ್ದಾರೆ' ಎಂದು ಅಂಗಲಾಯ್ತುಕೊಂಡರಂತೆ.

ಹೀಗೆ ಎಷ್ಟು ಸಂಸಾರಗಳನ್ನು ನಾಶ ಮಾಡಿದರೋ?

ಅಯ್ಯರ್:– ಆ ಗೃಹಸ್ಥನ ವಿಷಯ ಏನಾಯಿತು ತಿಳಿಯಿತೇ?

ಭಾರತಿ:– ಮನೆಯ ಮುಂದಿನ ಕಿಟಕಿಯಲ್ಲಿ ಒಂದು ಚೀಟಿಯಲ್ಲಿ 'ನಾನು ನಿನ್ನ ಬಡತನದಲ್ಲಿ ಬಾಳಲಾರೆ. ನಾನು ಇದಕ್ಕಿಂತ ಹೆಚ್ಚು ಶ್ರೀಮಂತಿಕೆಯಲ್ಲಿ ಬಾಳಲು ಇಷ್ಟಬಡುತ್ತೇನೆ. ನನ್ನನ್ನು ಮರೆತುಬಿಡು' ಎಂದು ಆ ಚೀಟಿಯಲ್ಲಿ ಇತ್ತಂತೆ. ಅವನು ಪೋಲೀಸ್ ಕಂಪ್ಲೇಂಟ್ ಕೊಟ್ಟನಂತೆ. ಆ ಹೆಂಗಸು ಈ ದೇಶವನ್ನು ಬಿಟ್ಟು, ಸಮುದ್ರದಲ್ಲಿ ಪ್ರಯಾಣಿಸಿದ ನಂತರ ಅವಳನ್ನು ಎಲ್ಲಿ ಹುಡುಕುವುದು? ಮುಗಿಯಿತು ಕತೆ.

ಶ್ರೀಶ್ರೀ:– ನ್ಯಾಯವಾಗಿ ಮಾತನಾಡಿ, ನಿಜಾಂಶ ತಿಳಿಸಿ, ಹಣಕೊಟ್ಟು

ಕರೆದುಕೊಂಡು ಹೋಗಬಾರದೇ? ಇದು ಬಹಳ ತಪ್ಪು ಕ್ರಮ. ಯಾರೂ ಕೇಳುವವರೇ ಇಲ್ಲ!

ಅಯ್ಯರ್:– ಅದು ಸಾಧ್ಯವಿಲ್ಲ. ಎಷ್ಟೇ ಬಡತನ ಮತ್ತು ಕಷ್ಟಗಳಿದ್ದರೂ ಗಂಡಸರು ಹೊರಗೆ ಹೋಗುತ್ತಾರೆಯೇ ಹೊರತು ಹೆಂಗಸರನ್ನು ಹೊರಗೆ ಕಳುಹಿಸುವುದಿಲ್ಲ. ಅದುವೂ ಕಣ್‌ಕಾಣದ ಜಾಗಕ್ಕೆ. ಫಿಜಿ ದ್ವೀಪದಲ್ಲಿರುವ ಹಿಂದುಗಳಿಗೆ ಸಾಕಷ್ಟು ಹೆಂಗಸರಿಲ್ಲ. ಆದುದರಿಂದ ಆ ದ್ವೀಪದ ಅಧಿಕಾರಿಗಳು ಈ ತರಹ ಅನೀತಿ ಮಾಡುತ್ತಿದ್ದಾರೆ.

ಭಾರತಿ:– ಇಂತಹ ಒಂದು ತಪ್ಪಾದರೆ ಯೋಚಿಸಬಹುದು. ಇದು ಎಲ್ಲದಕ್ಕೂ ಮಿಂಚಿದ್ದು. ದುಃಖಪಟ್ಟು ಏನು ಪ್ರಯೋಜನ?

ನಾನು:– ಹಡಗಿನವನನ್ನು ಅಷ್ಟೂ ಹೆಂಗಸರು ಬೇಡಿಕೊಂಡರೆ – ಬಿಡುವುದಿಲ್ಲವೆ?

ಭಾರತಿ:– ಅವನು ಯಮಘಾತಕ! ಈ ದೇಶದ ಹೆಂಗಸರನ್ನೇ ಹಿಡಿದು, ವಂಚಿಸಿ ಹಣಕೊಟ್ಟು ಕರೆದುಕೊಂಡು ಹೋಗುತ್ತಾನೆ. ಹೆಚ್ಚಾಗಿ ಏನಾದರೂ ಹೇಳಿದರೆ ಚಾಟೀ ಏಟು! ಅಷ್ಟೆ.

ನಾನು:– ಎಲ್ಲರೂ ಸೇರಿ ಒಟ್ಟಿಗೆ ಸಮುದ್ರಕ್ಕೆ ನೆಗೆದುಬಿಟ್ಟರೆ? ಎಲ್ಲರನ್ನೂ ಹೀಗೆಯೇ ನಡೆಸಿಕೊಳ್ಳುತ್ತಾರೆಯೇ?

ಭಾರತಿ: ಇಲ್ಲ, ಇಲ್ಲ. ಕೆಲ ಅನಾಥೆಯರು ಹೊಟ್ಟೆಗಿಲ್ಲದೆ ಪರಿತಪಿಸುವ ಹೆಣ್ಣುಮಕ್ಕಳು, ಓದು ಬರಹವಿಲ್ಲದ ಮೂಢ ಹೆಂಗಸರು ಇವರುಗಳನ್ನು ಒಂದು ಜಾಗದಲ್ಲಿ ಸೇರಿಸಿ, 3–4 ತಿಂಗಳಿಗೊಂದು ಸಲ ಹೀಗೆ ಸಾಗಿಸುತ್ತಾರೆ. ಅವನ ನಯಸ್ವಾದ (ಮೃದು) ಮಾತುಗಳಲ್ಲಿ ಭೂಲೋಕ ನರಕವಾಗಿರುವ ಜಾಗ ಕೂಡ ಸ್ವರ್ಗದಂತೆ ತೋಚುತ್ತದೆ.

ಶ್ರೀಶ್ರೀ:– ಯದುಗಿರಿಗೆ ಏನು ಗೊತ್ತು? ನೀವು ಏನನ್ನಾದರೂ ಹೇಳಿದರೆ ಅವಳಿಗೆ ಅದೇ ಗಿಲಿ (ಗೀಳು) ಹಿಡಿಯುತ್ತದೆ.

ಅಯ್ಯರ್:– ಸ್ವಲ್ಪಮಟ್ಟಿಗೆ ಬದುಕಿನ ಕಷ್ಟಗಳನ್ನು ಮಕ್ಕಳಿಗೆ ತಿಳಿಹೇಳಬೇಕು. ಹೆಂಗರುಳು ಎಂದು ಮುಚ್ಚಿಟ್ಟರೆ ಆ ನಂತರ ಕಷ್ಟವಾಗುತ್ತದೆ.

ಭಾರತಿ:– ಮುಂಬರುವ ಕಷ್ಟಗಳ ಬಗ್ಗೆ ಮಕ್ಕಳಿಗೆ ತಿಳಿಸಬಾರದು. ಅದಕ್ಕೆ ಬದಲು ನಮ್ಮ ಶ್ರೇಷ್ಠತೆಯನ್ನು ತೋರಿಸಿದರೆ, ಕಷ್ಟ ಬಂದರೂ ಸಹಿಸುವ ಶಕ್ತಿಯನ್ನು ಮಕ್ಕಳಿಗೆ ಭಗವಂತನು ಕರುಣಿಸುತ್ತಾನೆ.

ಅಯ್ಯರ್:– ಸ್ವಲ್ಪ ಧೈರ್ಯವೂ ಇರಬೇಕು.

ಭಾರತಿ:– ಯದುಗಿರಿ,ನೀನು ಭಯಪಡಬೇಡ. ನನ್ನ ಹಾಡಿನ ಮೂಲಕ ಕಾಳಿಕಾದೇವಿಯು (ಪರಾಶಕ್ತಿಯು) ಆ ಹೆಣ್ಣುಮಕ್ಕಳು ಗುಲಾಮಗಿರಿಯಿಂದ ಬಿಡಿಸಿಕೊಳ್ಳುವಂತೆ ಹರಸುತ್ತಾಳೆ. ನೀನು ಹೋಗಿ ಶೆಲ್ಲಮ್ಮಾವನ್ನು ಕೇಳಿ ಒಂದು ಲೋಟ ನೀರು ತೆಗೆದುಕೊಂಡು ಬಾ. ನಮ್ಮ ಮನೆಗಳಲ್ಲಿ ಇಲ್ಲಿ ಎಲ್ಲರೂ ಚೆನ್ನಾಗಿದ್ದೇವೆ. ಎಲ್ಲೋ ಒಂದು ಮೂಲೆಯಲ್ಲಿ ನಡೆಯುವ ಅನ್ಯಾಯಕ್ಕೆ (ವಿಷಯಕ್ಕೆ)ನೀನು ತಲೆ ಕೆಡಿಸಿಕೊಳ್ಳಬೇಡ. ಎಲ್ಲಿ ನಗು ನೋಡೋಣ!

ಭಾರತಿಯಾರರು ನನ್ನನ್ನು ಕಳುಹಿಸಿಬಿಟ್ಟರು. ನಂತರ ಅವರುಗಳು ರಾತ್ರಿ ಒಂಬತ್ತರ ತನಕ ಮಾತಾಡುತ್ತಿದ್ದರು.

(೯) 'ಎಂಜ್ಞನುಂ ಶೆನ್ರಿರುಂದೀರ್'

(ಎಲ್ಲಿ ಹೋಗಿದ್ದಿರಿ) (ಯಾವ ಕಡೆ ಹೋಗಿದ್ದಿರಿ)

ದಿನ ಕಳೆದಂತೆ ಭಾರತಿಯಾರ್ ಮೊದಲಾದ ದೇಶಭಕ್ತರ ಮೇಲೆ ಪೋಲೀಸರ ಕಟ್ಟುಪಾಡುಗಳು ಸ್ವಲ್ಪಸ್ವಲ್ಪವಾಗಿ ಜಾಸ್ತಿಯಾಗುತ್ತಲೇ ಹೋಯಿತು. ಇವರಿಗೆ ಬರುವ ಮನಿಆರ್ಡರ್, ಕಾಗದ ಪತ್ರಗಳು ಎಲ್ಲವನ್ನೂ ತಡೆ ಹಿಡಿಯಲಾಯಿತು. ಪುದುಚೇರಿಯಿಂದ ನಾವುಗಳ ಬರೆದ ಕಾಗದಗಳು 'ವಿಳುಪ್ಪುರಂ'ನಲ್ಲಿ ಸುಡಲ್ಪಟ್ಟವು. ಸುಟ್ಟ ವಿಷಯ ಕೂಡ ನಮಗೆ ತಿಳಿಯುತ್ತಿರಲಿಲ್ಲ. ಟಪಾಲಾಫೀಸಿನಲ್ಲಿ ಇದ್ದ ಕೆಲವು ಪುಣ್ಯ ಪುರುಷರಿಂದ ಈ ವಿಷಯವು ಒಂದು ವಾರದ ನಂತರ ತಿಳಿಯಿತು.

ಇಕ್ಕಟ್ಟಾದ ಈ ಸಂದರ್ಭದಲ್ಲಿ ಭಾರತಿಯಾರರು ತಮ್ಮ 'ಪಾಂಚಾಲಿ ಶಪಥ' ಎಂಬ ಕಾವ್ಯದ ಮೊದಲನೆಯ ಭಾಗಕ್ಕೆ ಎರಡನೆಯ ಭಾಗವನ್ನು ಬರೆಯಬೇಕೆಂದು ಪ್ರಯತ್ನಿಸಿದರು. ಮೊದಲನೆಯ ಭಾಗದ ಒಂದು ಪ್ರತಿ ಕೂಡ ತನ್ನಲ್ಲಿ ಇಟ್ಟುಕೊಳ್ಳದೆ, ಬೆಲೆಗೆ, ದಾನವಾಗಿ ಎಲ್ಲವನ್ನೂ ಕೊಟ್ಟುಬಿಟ್ಟರು. ಅದರಲ್ಲಿ ದಾನವೇ ಹೆಚ್ಚು. ಪ್ರತಿಯೂ ಇಲ್ಲ, ಕೈ ಬರಹದ ಹಸ್ತಪ್ರತಿಯೂ ಸಿಗಲಿಲ್ಲ.

ಭಾರತಿಯಾರರು ನಮ್ಮ ಮನೆಗೆ ಬಂದರು; ಅಯ್ಯರ್, ಅಯ್ಯಾ (ನನ್ನ ತಂದೆ) ಇಬ್ಬರನ್ನೂ 'ಒಂದು ಪ್ರತಿಯಾದರೂ ಇದೆಯೇ?' ಎಂದು ಕೇಳಿದರು. ಅವರಲ್ಲೂ ಇರಲಿಲ್ಲ.

ಅಯ್ಯರ್:– ಇದೇನು ಭಾರತಿ, ಹೀಗೂ ಉಂಟೇ? ಕೈಯ್ಯಲ್ಲಿರಲಿ ಎಂದು

ಒಂದು ಪ್ರತಿಯನ್ನಾದರೂ ಇಟ್ಟುಕೊಳ್ಳಬಾರದೇ? ಎಂದು ಅಲವತ್ತುಕೊಂಡರು (ನೊಂದುಕೊಂಡರು).

ಭಾರತಿಯಾರ್ 'ಒಳಗಿರಬಹುದು ಎಂದುಕೊಂಡೆ ... ಮತ್ತೆ ಹಾಡಿಬಿಡಬಹುದು. ಆದರೆ ಅದೇ ರೀತಿ ಬರುವುದು ಕಷ್ಟ. ಹೋಗಲಿ ಇನ್ನೊಂದನ್ನೇ ಬರೆದು ಬಿಡುತ್ತೇನೆ' ಎಂದರು.

ನನ್ನ ತಂದೆಯವರು – 'ಏಕೆ ಅವಸರ? ಇರಿ ಸ್ವಲ್ಪ, ಪುಸ್ತಕಗಳ ಮೇಲೆ ರಟ್ಟು ಹಾಕಲು ಚೆನ್ನಾಗಿರುತ್ತದೆಂದು ಮಕ್ಕಳು ಎತ್ತಿಟ್ಟಿರಬಹುದು. ಯದುಗಿರಿಯನ್ನು ಕೇಳಿ ನೋಡಿ' ಎಂದರು.

ಭಾರತಿಯಾರರು ನನ್ನನ್ನು ಕರೆದರು. ಮಹಡಿಗೆ ಹೋದೆ. 'ಯದುಗಿರಿ, ನಿನ್ನ ಬಳಿ 'ಪಾಂಚಾಲಿ ಶಪಥಂ' ಇದೆಯೇ?' ಎಂದು ಕೇಳಿದರು.

'ಇದೆ, ಆದರೆ ಅದನ್ನು ನಾನು ಯಾರಿಗೂ ಕೊಡುವುದಿಲ್ಲ. ನನ್ನ 'ಆದಿಪರ್ವ' ಪುಸ್ತಕವನ್ನು ಯಾರ ಮನೆಯಲ್ಲಿಯೋ ಇಟ್ಟುಬಿಟ್ಟಿರಿ. ತಿರುಗಿ ಬರಲೇ ಇಲ್ಲ. ಇದನ್ನು ನಾನು ಕೊಡುವುದಿಲ್ಲ.'

' 'ಆದಿಪರ್ವ'ವನ್ನು ಹೊಸದೇ ತೆಗೆದುಕೊಡುತ್ತೇನೆ. ನೀನು ಸಮಯಸಂಜೀವಿ, ಅಮ್ಮಾ – ಇದಕ್ಕಿಂತ ಮೇಲ್ತರದ ಪುಸ್ತಕವನ್ನು ಕೊಡುತ್ತೇನೆ.'

'ಪಾಂಚಾಲಿ ಶಪಥ'ವನ್ನು ಕೊಡು ಎಂದು ನನ್ನನ್ನು ಭಾರತಿಯಾರರು ಮನ ಕರಗುವಂತೆ ಕೇಳಿದರು. ಅಲಮಾರಿನಿಂದ ಪುಸ್ತಕವನ್ನು ತಂದುಕೊಟ್ಟೆ. ಅದರ ಮೇಲ್ಪದರ ಕೊಳೆಯಾಗದಂತೆ ಮೇಲೊಂದು ಕಾಗದದಿಂದ ಮುಚ್ಚಿ ಭದ್ರವಾಗಿಟ್ಟಿದುದನ್ನು ಕಂಡು ಭಾರತಿಯವರು ಅಚ್ಚರಿಪಟ್ಟರು.

'ಇದು ಭಾರತಿಯಾರರಿಗೆ ಬೇಕಂತೆ, ಕೊಡು, ಮತ್ತೆ ಅಚ್ಚು ಹೊಡೆದು ಪುಸ್ತಕ ಬಂದಾಗ ಒಂದು ಹೊಸ ಪುಸ್ತಕವನ್ನು ನಿನಗೆ ಕೊಡುತ್ತಾರೆ' ಎಂದು ನನ್ನ ತಂದೆ ಹೇಳಿದರು.

ಆದರೆ, ಆ ಪುಸ್ತಕವನ್ನು ಕೊಡಲು ನನಗೆ ಮನಸ್ಸೇ ಬರಲಿಲ್ಲ. 'ನನಗೆ ಹೊಸ ಪುಸ್ತಕ ಬೇಡ, ಈ ಪುಸ್ತಕವೇ ಬೇಕು. ಕೆಲಸವಾದ ಮೇಲೆ ವಾಪಸ್ಸು ಕೊಟ್ಟುಬಿಡಿ' ಎಂದೆ. 'ಸರಿ' ಎಂದರು ಭಾರತಿ.

ಆದರೆ ಆ ಪುಸ್ತಕ ತಿರುಗಿ ಬರಲೇ ಇಲ್ಲ. ಅದರ ಮೊದಲನೆಯ ಪುಟದಲ್ಲಿ 'ಸೌಭಾಗ್ಯವತಿ ಯದುಗಿರಿಗೆ ಪ್ರೀತಿಯಿಂದ ಕೊಟ್ಟಿದ್ದೇನೆ – ಸಿ. ಸುಬ್ರಹ್ಮಣ್ಯ ಭಾರತಿ' ಎಂದು ಅವರು ಸಹಿ ಹಾಕಿ ಕೊಟ್ಟಿದ್ದರು.

ಯಾವ ಪುಸ್ತಕ ಅಚ್ಚಾದರೂ – ಅದು ಇಂಗ್ಲೀಷಾದರೂ ಸರಿ – ನನಗೆ ಒಂದು ಪ್ರತಿಯನ್ನು ಕೊಟ್ಟು ಬಿಡುವರು. ಅಯ್ಯರ್ ಅವರು ಕೂಡ

'ಮಂಗೆಯಕ್ಕರಶಿ' 'ಚಂದ್ರಗುಪ್ತ' ಮೊದಲಾದ ಪುಸ್ತಕಗಳನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲಿ ಅವರು ಏನೂ ಬರೆದು ಕೊಡುತ್ತಿರಲಿಲ್ಲ.

ಆ ಕಷ್ಟ ಕಾಲದಲ್ಲಿ ಭಾರತಿಯಾರರ ಮನೆಯಲ್ಲಿ ಸಂಸಾರವನ್ನು ಹೇಗೆ ಸಾಗಿಸುತ್ತಿದರೋ ಗೊತ್ತಿಲ್ಲ. ನನಗೆ ಆ ಯೋಚನೆಯೂ ಇಲ್ಲ! 'ಭಾರತಿಯಾರ್ ಈಗೀಗ ಏಕೆ ಹಾಡುಗಳನ್ನು ಹಾಡುತ್ತಿಲ್ಲ' ಎಂದು ನನ್ನ ತಂದೆಯವರನ್ನು ಆಗಾಗ ಕೇಳುತ್ತಿದ್ದೆ. 'ಏನೋ ಬೇರೆ ಕೆಲಸವಿರುವುದರಿಂದ ಹಾಡುತ್ತಿಲ್ಲ' ಎನ್ನುವರು ಅವರು.

ಒಂದು ದಿನ ಮಹಡಿಯಲ್ಲಿ ಭಾರತಿಯಾರರ ಧ್ವನಿ ಕೇಳಿಸಿತು. ಚಾತಕ ಪಕ್ಷಿಯಂತೆ ಕಾಯುತ್ತಿದ್ದ ನಾನು ಮಹಡಿಗೆ ಓಡಿದೆ. ನನ್ನನ್ನು ಕಂಡು ಆದರದೊಂದಿಗೆ ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡು 'ಮೊದಲೆಲ್ಲಾ ಹಾಡುವಾಗ ಇಷ್ಟು ಕುತೂಹಲ ಇರುತ್ತಿರಲಿಲ್ಲ! ಈಗ ನೋಡಿ ಯದುಗಿರಿಗೆ ಎಷ್ಟು ಆತುರ!'

ಶ್ರೀಶ್ರೀ:– ಕೆಲದಿನಗಳಿಂದ, ಭಾರತಿಯಾರರು ಹಾಡುಗಳನ್ನು ಏಕೆ ಹಾಡುತ್ತಿಲ್ಲ ಎಂದು ಅಡಿಗಡಿಗೆ ನನ್ನನ್ನು ಕೇಳುವಳು. ಬೇರೆ ಕೆಲಸವಿರುವುದರಿಂದ ಹಾಡು ಕಟ್ಟುತ್ತಿಲ್ಲ ಎನ್ನುವೆ.

ಭಾರತಿ:– ಕೆಲಸವೂ ಇಲ್ಲ, ಮಣ್ಣೂ ಇಲ್ಲ! ರಾಜಾರಾಂ ಎಂಬ ನನ್ನ ಸ್ನೇಹಿತ (ಪುದುಚೇರಿಯಲ್ಲಿದ್ದವ) ತನ್ನ ತಂದೆಯವರು ಬರೆದ 'ಉಪನಿಷತ್'ನ ತಮಿಳು ಅನುವಾದ ಸರಿಯಾಗಿದೆಯೇ, ಇಲ್ಲವೇ ಎಂದು ನೋಡಿಕೊಡಲು ಹೇಳಿದ. ಅದುವೇ ಸುಮಾರು ಮೂರು ತಿಂಗಳು ಹಿಡಿಯಿತು. ಮತ್ತೆ ಇಂದು ಮೊದಲನೆಯದಾಗಿ 'ಸರಸ್ವತಿ' ಸ್ತೋತ್ರವನ್ನು ರಚಿಸಿದ್ದೇನೆ. 'ನೊಂಡಿಶಿಂದು' (ಜಾನಪದ ಧಾಟಿ ಅಂದರೆ ಗೀಗೀ, ಡೊಳ್ಳು ಕುಣಿತ, ತಮಟೆ ಬಡಿದು ಹಾಡುವುದು ಈ ತರಹ) ಮೆಟ್ಟಿನಲ್ಲಿ 'ಎಂಗನಂ ಶೆನ್ರಿರುಂದೀರ್' ಎಂಬ ಹಾಡನ್ನು ಹಾಡಿ ಮುಗಿಸುವ ಸಮಯಕ್ಕೆ ಅಯ್ಯರ್ ಅವರೂ ಬಂದರು. ಅವರಿಗೂ ಹಾಡಿ ತೋರಿಸಿದರು.

ಅಯ್ಯರ್:– ತುಂಬಾ ಚೆನ್ನಾಗಿದೆ. 4–5 ತಿಂಗಳ ಸಾರವನ್ನು ಐದು ಸಾಲು (ಪಾದ)ಗಳಲ್ಲಿ ಅಡಗಿಸಿದ್ದೀರಿ!

ಶ್ರೀಶ್ರೀ:– ಒಂದು ಪದದಲ್ಲಿಯೇ ನೂರು ಪದದ ಸಾರವನ್ನು ಅಡಗಿಸುವ ಶಕ್ತಿ ಭಾರತಿಯಾರರಿಗೆ ಹೊರತು ಮತ್ತಾರಿಗೂ ಇಲ್ಲ.

ಭಾರತಿ:– ನಾವು ನಾಲ್ವರಲ್ಲಿಯೂ ನಮ್ಮ ಗುಣವಿಶೇಷಗಳು ಮೇಳೈಸಿವೆ. ನಾನು ಚೆನ್ನಾಗಿ ಹಾಡುತ್ತೇನೆ ಎನ್ನುತ್ತೀರಿ ನೀವು! ನಿಮ್ಮ ಹಾಗೆ ಬರೆಯುವವರಿಲ್ಲ ಎನ್ನುತ್ತೇನೆ ನಾನು. ಅಯ್ಯರ್‌ರವರಂತೆ ಭಾಷಾಂತರ ನಿಪುಣರು ಯಾರೂ

ಎಲ್ಲವೆಂದು ನಾವುಗಳು ಹೇಳುತ್ತೇವೆ. ಬಾಬು (ಅರವಿಂದರು) ಅವರಂತೆಹಳೆಯ ವೇದಗಳನ್ನು ಇಂಗ್ಲೀಷಿಗೆ ಅನುವಾದ ಮಾಡಿ ಜೋಡಿಸುವವರೇ ಇಲ್ಲ ಎಂದು ಹೇಳುತ್ತೇವೆ, ನಾಲ್ಕು ಜನ, ನಾಲ್ಕು ವಿಧ.

ಶ್ರೀಶ್ರೀ:– ಎಲ್ಲದಕ್ಕೂ ವೇಳೆ ಬರುತ್ತದೆ. ಅವಸರ ಬೇಡ. ಇದು ನಮಗೆ ಶೋಧನೆ ಕಾಲ!

ಅಯ್ಯರ್:– ಸಾಕ್ಷಾತ್ ದೇವತೆಗಳು ಕ್ಷೀರ ಸಮುದ್ರವನ್ನು ಕಡೆದಾಗ ಮೊದಲು ವಿಷ ಬಂದಿತು ... ಹೊಸ ದಾರಿಯಲ್ಲಿ ನಡೆಯುವವರಿಗೆ ಆರಂಭದಲ್ಲಿ ಕಷ್ಟ ಬರುತ್ತದೆ ಎಂದು ಉದಾಹರಿಸಲು ಇದಕ್ಕಿಂತ ಬೇರೆ ಏನೂ ಬೇಡ. ಮನಸ್ಸಿಗೆ ಹಚ್ಚಿಕೊಳ್ಳದೆ ಧೈರ್ಯವಾಗಿ ಒಂದು ಕೆಲಸ ಮಾಡುವವರಿಗೆ (ಮುನ್ನುಗ್ಗುವವರಿಗೆ) ಕಡೆಯಲ್ಲಿ ಖಂಡಿತ ಅದರ ಫಲ ಸಿಕ್ಕೇ ಸಿಗುತ್ತದೆ.

ಭಾರತಿ:– 'ತಮಗೆ ಕಾಗದಗಳು ಕೂಡ ಬರುತ್ತಿಲ್ಲ. ಊರಿಗೆ ಹೋಗುತ್ತೇನೆ' ಎನ್ನುತ್ತಾಳೆ ಶೆಲ್ಲಮ್ಮಾ.

ಶ್ರೀಶ್ರೀ: ಅವರು ಹೇಳುವುದು ನ್ಯಾಯವೇ. ಇಂದು 'ಸರಸ್ವತಿ' ಸ್ತೋತ್ರ ಮಾಡಿದ್ದೀರಿ. ನಾಳೆಯೇ 'ಸ್ವದೇಶಮಿತ್ರ' ಪತ್ರಿಕೆಯಿಂದ ಕಾಗದ ಬರುತ್ತದೆ. ನೋಡುತ್ತಿರಿ! ಭಯವಿಲ್ಲ.

ಮರುದಿನ ಶೆಲ್ಲಮ್ಮಾ ನಮ್ಮ ಮನೆಗೆ ಬಂದರು. ಉತ್ಸಾಹದಿಂದ ಮಾತಾಡುತ್ತಾ – "ಸ್ವದೇಶ ಮಿತ್ರ'ದಿಂದ ಕಾಗದ ಬಂದಿತು,ಮೂರು ತಿಂಗಳಿಂದ ತಡೆ ಹಿಡಿದಿದ್ದ ಹಣವೂ ಬಂದಿತು. ನೆನ್ನೆ ನೀವು ಹೇಳಿದ ಮಾತು ಫಲಿಸಿತು."

ನಾನು:– ನೀವು ಊರಿಗೆ ಹೋಗುವ ಯೋಚನೆಯಲ್ಲಿರುವುದಾಗಿ ಭಾರತಿಯವರು ಹೇಳಿದರು. ಒಂದು ವೇಳೆ ನೀವು ನೀರು ಹಾಕಿಕೊಳ್ಳಲಿಲ್ಲವೋ (ಬಸಿರು) (ಗರ್ಭಿಣಿಯೋ)' ಎಂದೆಣಿಸಿದೆ.

ಶೆಲ್ಲಮ್ಮಾ:– ದೇವರು ಎಲ್ಲಾ ತರಹ ಕಷ್ಟಗಳನ್ನೂ ಒಟ್ಟಿಗೆ ಕೊಡುವುದಿಲ್ಲ. ಈ ಎರಡು ಮಕ್ಕಳೇ ಸಾಕು. ಈ ಕಷ್ಟದೊಂದಿಗೆ ಅದುವೂ ಸೇರಲಾರದು.

ನಾನು:– ಗಂಡು ಮಗು ಬೇಡವೇ?

ಶೆಲ್ಲಮ್ಮಾ:– ಗಂಡುಮಕ್ಕಳು ಕೊಡೆ ಹಿಡಿಯುವುದು ಅಷ್ಟರಲ್ಲಿಯೇ ಇದೆ. ಹೆಣ್ಣುಮಕ್ಕಳೇ ವಾಸಿ; ಇವರನ್ನು ನೋಡು – ಜನಿವಾರವಿಲ್ಲ – ತರ್ಪಣವಿಲ್ಲ. ನನಗೆ ಗಂಡು ಹುಟ್ಟಿ ಉತ್ತರಕ್ರಿಯೆಯನ್ನು ಮಾಡಿದಾಗ ನೋಡೋಣ!

ನಾನು:– ಅಂದರೆ ಅವರು ಜನಿವಾರ ಹಾಕಿಕೊಳ್ಳುವುದಿಲ್ಲವೇ?

ಶೆಲ್ಲಮ್ಮಾ:– ಶಕುಂತಲಾ ಹುಟ್ಟಿದಾಗ ತೆಗೆದುಬಿಟ್ಟರು. ಯಾಗ, ಯಜ್ಞ ಮಾಡುವವರಿಗೆ ಜನಿವಾರ ಇರಬೇಕಂತೆ. ಪುರೋಹಿತರಿಗೇ ವಾಪಸ್ಸು ಕೊಟ್ಟುಬಿಟ್ಟರು.

ಅಷ್ಟರೊಳಗೆ ಭಾರತಿಯವರೂ ಬಂದರು.

ಶೆಲ್ಲಮ್ಮಾ ನನ್ನ ಮಾತುಗಳನ್ನು ಅವರಿಗೆ ಹೇಳಿದರು.

ಭಾರತಿ:– ಮಗ ಹುಟ್ಟಿ ಮಾಡುವುದನ್ನು ನೋಡಿಕೊಳ್ಳೋಣ. 'ಪುತ್ರಾತ್ ಶತಗುಣಂ ಪುತ್ರಿ' ಎಂಬ ಒಂದು ಮಾತಿದೆ. ಇಂಗ್ಲೀಷಿನಲ್ಲಿ ಒಂದು ಹಳೆಯ ಗಾದೆ ಇದೆ. 'ಮಗ– ಹೆಂಡತಿ ಬರುವವರೆಗೆ ಮಗ; ಮಗಳು ಕಡೆಯ ತನಕ ಮಗಳು! ನಾನು ನನ್ನ ತಂದೆಗೆ ಏನು ಮಾಡಿದೆ? ಅದಕ್ಕೆ ಮೇಲೆ ನನ್ನ ಮಗ!'

ಹಲವು ವಿಷಯಗಳನ್ನು ಒಬ್ಬರಿಗೊಬ್ಬರು ಮಾತನಾಡಿ, ರಾತ್ರಿ ಎಂಟು ಗಂಟೆಯ ಹೊತ್ತಿಗೆ ಮನೆಗೆ ಹಿಂತಿರುಗಿದೆವು. ಭಾರತಿಯಾರರ ಮಾತಿನಲ್ಲಿ ವಿರಕ್ತಿಯೂ ಉದಾಸೀನವೂ ತುಂಬಿದ್ದಿತು.

(10) 'ಪಾರುಕ್ಕುಳ್ಳೇ ನಲ್ಲನಾಡು'

ಒಂದು ದಿನ ಬಾಲು ಎಂಬ ಒಬ್ಬ ಸ್ನೇಇತ ಬಂದು 'ಶೆಲ್ಲಮ್ಮಾ ಬಹಳ ಅಳುತ್ತಿದ್ದಾರೆ. ಎಷ್ಟು ಹೇಳಿದರೂ ಕೇಳುತ್ತಿಲ್ಲ. ನಿನ್ನೆ ಪೂರ್ತಿ ಊಟವೇ ಮಾಡಿಲ್ಲ' ಎಂದ.

ನನ್ನ ತಂದೆಯವರು ನನ್ನನ್ನು ಕರೆದುಕೊಂಡು ಭಾರತಿಯವರ ಮನೆಗೆ ಹೋದರು. ಭಾರತಿಯಾರರಿಗೆ ಪುದುಚೇರಿ ಬೇಜಾರಾಗಿ ಬಿಟ್ಟಿತು. ಅವರಿಗೆ ಊರು ಸುತ್ತಬೇಕೆಂಬ ಇಚ್ಛೆ ಮೇರೆ ಮೀರಿತು. ಶೆಲ್ಲಮ್ಮಾವಿನ ಬಳಿ ಹೇಳಲಿಲ್ಲ. ಒಂದು ವೇಳೆ ನನ್ನ ತಂದೆಯವರಿಗೆ ಗೊತ್ತಿತ್ತೋ ಏನೋ!

ದಾಡಿ, ಮೀಸೆ ಎಲ್ಲವನ್ನೂ ತೆಗೆಸಿಬಿಟ್ಟು, ಭಾರತಿಯಾರರು ಮಾರುವೇಷದಲ್ಲಿ ಹೊರಟುಬಿಟ್ಟರು. ಶೆಲ್ಲಮ್ಮಾ ಒಂದು ದಿನವೆಲ್ಲಾ ಕಾದರು. ಮರುದಿನ ಬಾಲು ಅವರ ಮನೆಗೆ ಹೋದ.

ಶೆಲ್ಲಮ್ಮಾ ಮೊದಲನೆಯ ದಿನ ಊಟ ಮಾಡಿದುದು ಎಷ್ಟೋ ಅಷ್ಟೆ! ಅವರನ್ನು ನಮ್ಮ ಮನೆಗೆ ಬರುವಂತೆ ಕರೆದೆ. 'ನನಗೆ ಇಲ್ಲಿರಲು ಭಯವಿಲ್ಲ. ಅವರ ಬಗ್ಗೆಯೇ ಚಿಂತೆ (ಯೋಚನೆ)ಯಾಗಿದೆ. ಯಾವ ವಿಷಯಗಳಲ್ಲಿಯೂ ಮುನ್ನೆಚ್ಚರಿಕೆಯಿಲ್ಲ. ಅವರಿಗೆ ಧೈರ್ಯ ಜಾಸ್ತಿ. ಪೋಲೀಸಿನವರು ಅವರನ್ನು ಗುರುತು ಕಂಡು ಹಿಡಿದು ಬಿಟ್ಟರೆ ಏನು ಗತಿ? ಅವರಿಗಾದರೂ ಎಷ್ಟು ಧೈರ್ಯ? ಏನಪ್ಪಾ ನನ್ನನ್ನು ನಂಬಿ ಬಂದಳಲ್ಲಾ, ಅವಳ ಬಳಿ ಹೇಳಬೇಕೆಂದೆನಿಸಬೇಡವೆ? ಎಂದು ಶೆಲ್ಲಮ್ಮಾ ಹೇಳಿದರು.

ನನ್ನ ತಂದೆಯವರಿಗೆ ಪರ ಹೆಂಗಸರೊಂದಿಗೆ ಮಾತನಾಡಲು ಬಹಳ ಸಂಕೋಚ. ನನ್ನ ಹತ್ತಿರ 'ಏನೂ ಭಯವಿಲ್ಲ ಎಂದು ಹೇಳು ಯದುಗಿರಿ. ನೀವು ಹೆದರಿಕೊಳ್ಳುತ್ತೀರೆಂದು ನಿಮ್ಮ ಬಳಿ ಹೇಳಲಿಲ್ಲ, ಅವರು ಬಹಳ ಜಾಣರು. (ಚೂಟಿ) ಹಾಗೆಲ್ಲಾ ಸಿಕ್ಕಿ ಹಾಕಿಕೊಳ್ಳುವುದಿಲ್ಲ. ಆ ಅಮ್ಮಾವಿಗೆ (ಶೆಲ್ಲಮ್ಮಾವಿಗೆ) ಒಂಟಿಯಾಗಿರುವುದು ಕಷ್ಟವೆನಿಸಬಹುದು. ಮಗುವಿನೊಂದಿಗೆ ನಮ್ಮ ಮನೆಗೆ ಬರಹೇಳು, ಬೇಕಾದಷ್ಟು ಜಾಗವಿದೆ' ಎಂದರು.

'ನನಗೇನೂ ಕಷ್ಟವಿಲ್ಲ. ಅಕ್ಕಪಕ್ಕದಲ್ಲಿರುವವರೆಲ್ಲಾ ಬಹಳ ಒಳ್ಳೆಯವರು. ನನ್ನ ಜೊತೆ ಪಳಗಿ ಹೋಗಿದ್ದಾರೆ. ಅವರ ಬಗ್ಗೆ ತಾನೇ ಬಹಳ ಯೋಚನೆಯಾಗಿದೆ. ನನ್ನ ತಂದೆಗೂ, ಅಣ್ಣನಿಗೂ ಕಾಗದ ಬರೆಯುತ್ತೇನೆ. ನಾನು ಊರಿಗೆ ಹೋಗುತ್ತೇನೆ. ಅವರಿಲ್ಲದೆ ಇಲ್ಲೇನು ಕೆಲಸ ನನಗೆ?' ಎಂದರು ಶೆಲ್ಲಮ್ಮಾ.

ಹತ್ತು ರೂಪಾಯಿಯನ್ನು ನನ್ನ ಬಳಿ ಕೊಟ್ಟು ಶೆಲ್ಲಮ್ಮಾವಿಗೆ ಕೊಡಲು ಹೇಳಿದರು ನನ್ನ ತಂದೆ. ನನ್ನನ್ನು ಅಲ್ಲೇ ತಂಗುವಂತೆ (ಇರುವಂತೆ) ಹೇಳಿದರು. ನಾನು ಅಂದು ಭಾರತಿಯಾರರ ಮನೆಯಲ್ಲಿಯೇ ಇದ್ದೆ. ಶೆಲ್ಲಮ್ಮಾ ನನಗಾಗಿ ಅಡಿಗೆ ಮಾಡಲು ಎದ್ದರು. ಭಾರತಿಯವರ ಮಗಳು ಶಕುಂತಲಾ ಅಣ್ಣಿಯಮ್ಮನ ಮನೆಯಲ್ಲಿ ಉಂಡಿತು. ಮತ್ತೊಬ್ಬ ಮಗಳು ತಂಗಮ್ಮಾ ಕಾಶಿಯಲ್ಲಿ ಅವಳ ದೊಡ್ಡಮ್ಮನ ಹತ್ತಿರ ಇದ್ದಳು. ನಾನು ಶೆಲ್ಲಮ್ಮಾವನ್ನು ನಮ್ಮ ಮನೆಗೆ ಬರುವಂತೆ ಮತ್ತೊಮ್ಮೆ ಕರೆದೆ.

'ಇಲ್ಲ ಯದುಗಿರಿ, ಈ ಮನೆಯಲ್ಲಿ ಸಾಮಾನುಗಳನ್ನು ಹಾಕಿಬಿಟ್ಟು ಅಲ್ಲಿಗೆ ಬರಲು ಸಾಧ್ಯವಿಲ್ಲ. ಈಗ ಮಾತ್ರ ಹೀಗಿಲ್ಲ ... ನನ್ನ ಮದುವೆಯಾದಂದಿನಿಂದ, ಅವರನ್ನು ಈ ಸ್ವಾತಂತ್ರ್ಯ ಹೋರಾಟದಲ್ಲಿ ಸೇರಬೇಡಿರೆಂದು ಎಷ್ಟೆಷ್ಟೋ ಹೇಳಿದರು. ಇವರು ಹಟವಾಗಿ ಸೇರಿದರು. ಅದರಿಂದಾಗಿ ಊರುಕೇರಿ ಮನೆ ಬಾಗಿಲನ್ನೆಲ್ಲಾ ಬಿಟ್ಟು ಈ ಊರಿಗೆ ಬಂದು ಸೇರಿಯಾಯಿತು. ಗೂಢಚಾರರನ್ನು ಹಾಕಿ, ನಮ್ಮ ಕಾಗದಗಳನ್ನೆಲ್ಲಾ ತಡೆದು, ನಮಗೆ ಪಡಬಾರದ ಕಷ್ಟಗಳನ್ನೆಲ್ಲಾ ಕೊಟ್ಟು ಹಿಂಸೆ ಮಾಡುತ್ತಿರುವಾಗ, ಆ ಬಲೆಯಲ್ಲಿ ತಾನಾಗಿಯೇ ಹೋಗಿ ಯಾರಾದರೂ ಸಿಕ್ಕಿ ಹಾಕಿಕೊಳ್ಳುತ್ತಾರೆಯೆ? ಸಿಕ್ಕಿ ಹಾಕಿಕೊಂಡರೆ ದೂರದ ಅಂಡಮಾನ್ ದ್ವೀಪಕ್ಕೆ ಕಳುಹಿಸಿಬಿಟ್ಟರೆ ಏನು ಗತಿ? ಯಾರು ಏನೇ ಮಾಡಿದರೂ ಹಿಂದಿರುಗಲು ಸಾಧ್ಯವೆ? ನಮಗೆ ಇಲ್ಲಿ ಯಾರಿದ್ದಾರೆ?

ನಾನು:– ಏಕೆ ಶೆಲ್ಲಮ್ಮಾ, ಭಯ ಪಡುತ್ತೀರಿ? ಅವರು ಖಂಡಿತ ಬಂದು ಬಿಡುತ್ತಾರೆ.

ಶೆಲ್ಲಮ್ಮಾ:– ಅವರಿಗೆ ತಮ್ಮ ಇರುವಿಕೆ ತೋರ್ಪಡಿಸದೆ ತನ್ನನ್ನು ಕಟ್ಟು ಪಡಿಸಿಕೊಳ್ಳಲು ಬರುವುದಿಲ್ಲ. ನನ್ನ ತಂದೆಯವರು ಯಾವಾಗಲೂ ಹೇಳುವರು – ಬೆಟ್ಟದಂತೆ ಬಂದ ಕಷ್ಟ ಕುಮರಗುರು (ಸುಬ್ರಹ್ಮಣ್ಯ)ವಿನ ದಯೆಯಿಂದ ಮಂಜಿನಂತೆ ಕರಗಿ ಹೋಗುತ್ತದೆ – ಎಂದು. ನಮಗೆ ಅವನೇ ಗತಿ.

ನಾನು:– ಮನೆಗೆ ಹೋಗಲೇ ಶೆಲ್ಲಮ್ಮಾ?

ಶೆಲ್ಲಮ್ಮಾ:– ಬೇಡ. ನಾನೂ ನಿನ್ನ ಜೊತೆಯಲ್ಲಿ ಸಾಯಂಕಾಲ ನಿಮ್ಮ ಮನೆಗೆ ಬರುತ್ತೇನೆ. ಇಲ್ಲೇ ಇರು. ನಿನ್ನೊಂದಿಗೆ ಮಾತಾಡುತ್ತಾ ಸ್ವಲ್ಪ ಕಾಲ ಕಳೆಯುತ್ತೇನೆ.

ಊರ ಕತೆಗಳನ್ನು ಹರಟುತ್ತಾ ಊಟ ಮಾಡಿ ಎದ್ದೆವು.

ಆ ಸಮಯ ವ.ವೆ.ಸು. ಅಯ್ಯರ್ ಅವರ ಪತ್ನಿ ಭಾಗ್ಯಲಕ್ಷ್ಮಿ ಅಮ್ಮಾಳ್ ಊಟ ಮುಗಿಸಿಕೊಂಡು ಅಲ್ಲಿಗೆ ಬಂದರು. ನಾವು ಮೂವರೂ ಹಾಲಿನಲ್ಲಿ ಒಂದು ಚಾಪೆಯ ಮೇಲೆ ಕುಳಿತೆವು.

ಭಾಗ್ಯಲಕ್ಷ್ಮಿ:– ಶೆಲ್ಲಮ್ಮಾ, ನೀವು ನಮ್ಮ ಮನೆಗೆ ಬಂದುಬಿಡಿ. ನೀವೊಬ್ಬರೇ ಇರಬೇಡಿ. ನಮಗೂ ಹೊತ್ತು ಹೋಗುತ್ತದೆ.

ಶೆಲ್ಲಮ್ಮಾ:– ನನ್ನ ಬಗ್ಗೆ ನನಗೆ ಚಿಂತೆಯೇ ಇಲ್ಲ. ಅಣ್ಣಿಯಮ್ಮ ಇಲ್ಲಿಯೇ ಇದ್ದಾಳೆ. ಅವಳ ಮಕ್ಕಳು ಯಾವಾಗಲೂ ನನ್ನನ್ನು ಸುತ್ತಿಕೊಂಡಿರುತ್ತಾರೆ. ಶಕುಂತಲಾ ಅವರ ಮಗಳಾಗಿಯೇ ಬೆಳೆಯುತ್ತಿದ್ದಾಳೆ. ನನ್ನ ಯೋಚನೆಯೆಲ್ಲಾ ಅವರ (ಭಾರತಿ) ಹುಚ್ಚು ಧೈರ್ಯದ ಮೇಲೆಯೇ!

ಭಾಗ್ಯಲಕ್ಷ್ಮಿ:– ಇಷ್ಟಕ್ಕೇ ನೀವು ಇಷ್ಟು ಯೋಚಿಸುತ್ತೀರಲ್ಲಾ! ಇವರು (ಅಯ್ಯರ್) ಪರದೇಶದಲ್ಲಿದ್ದಾಗ ನನಗೆ ಹೇಗಿರಬೇಕು?

ಶೆಲ್ಲಮ್ಮಾ:– ಅಯ್ಯರ್ ಅವರಂತೆ, ಇವರು ತಮ್ಮ ಇರುವಿಕೆಯನ್ನು ತೋರ್ಪಡಿಸಿಕೊಳ್ಳದೆ ಅಡಕವಾಗಿದ್ದರೆ ನನಗೆ ಚಿಂತೆಯೇ ಇಲ್ಲ. ಯಾವುದನ್ನಾದರೂ ನೋಡಿ ಉದ್ವೇಗ ಪರವಶರಾಗಿ ಹಾಡಲಾರಂಭಿಸಿಬಿಟ್ಟರೆ ಏನು ಮಾಡುಬುದು?

ಭಾಗ್ಯಲಕ್ಷ್ಮಿ:– ನೀವು ಹೇಳುವುದೂ ಸರಿಯೇ. ಇವರು (ಅಯ್ಯರ್) ಹಾಗೆಲ್ಲಾ ಮಾಡುವುದಿಲ್ಲ. ತಾವಿದ್ದ ಊರುಗಳನ್ನು ಸುತ್ತಾಡಿ, ನೋಡಿಕೊಂಡು ಬಂದು ಬಿಡುತ್ತಾರೆ.

ಶೆಲ್ಲಮ್ಮಾ:– ನಾನು ಯೋಚನೆ ಮಾಡಿ ಏನು ಪ್ರಯೋಜನ? ಎಲ್ಲಾ ವಿಧಿ ಬರೆದಂತೆ ನಡೆಯುತ್ತದೆ. ಚೆನ್ನೈಯಲ್ಲಿದ್ದ ಡಾಕ್ಟರ್ ನಂಜುಂಡರಾವ್ ಇವರ ಪ್ರಾಣ ಸ್ನೇಹಿತರು. ಈ ಸ್ವಾತಂತ್ರ್ಯ ಹೋರಾಟದ ವಿಷಯದಲ್ಲಿ ಅವರ ಮಾತನ್ನೂ

ಕೇಶದೆ ತಟ್ಟಿಬಿಟ್ಟರು. ಇನ್ನೂ ಏನೇನು ಕಷ್ಟಗಳು ಕಾದಿವೆಯೋ ಯಾರಿಗೆ ಗೊತ್ತು?

ನಾನು:– ಯಾಕೆ, ನಾವು ಒಳ್ಳೆಯದ್ದನ್ನೇ ಯೋಚಿಸೋಣ. ಒಳ್ಳೆಯ ಕೆಲಸ ಮಾಡುವವರನ್ನು ಭಗವಂತ ಕೈಬಿಡುವುದಿಲ್ಲ. ಒಳ್ಳೆಯದೇ ಆಗುತ್ತದೆ.

ಶೆಲ್ಲಮ್ಮಾ ಸಂಜೆ ನಮ್ಮ ಮನೆಗೆ ಬಂದರು. ನಮ್ಮ ತಾಯಿಯೊಂದಿಗೆ ಮಾತನಾಡುತ್ತಿದ್ದರು. ಇದೆಲ್ಲಾ ನಡೆದು ಹತ್ತು ಹದಿನೈದು ದಿನಗಳು ಕಳೆದವು.

ಒಂದು ದಿನ ನಾನು ಮಹಡಿಗೆ ಹೋದೆ. ಯಾರೋ ಒಬ್ಬ ಹೊಸಬರು ನಮ್ಮ ತಂದೆಯೊಂದಿಗೆ ಮಾತನಾಡುತ್ತಾ ಕುಳಿತಿದ್ದರು. ನಾನು ನನ್ನ ಮೇಜಿನ ಮುಂದೆ ಕುಳಿತು ನನ್ನ ಪಾಠಗಳನ್ನು ಓದಿಕೊಳ್ಳುತ್ತಿದ್ದೆ.

ಹೊಸಬರು ನನ್ನನ್ನು ನೋಡಿ 'ಎಲ್ಲಿ ನನ್ನ ಕಾಣಿಕೆ?' ಎಂದರು. ನಾನು ಹೌಹಾರಿದೆ. 'ನಿನಗೆ ಕೂಡ ನನ್ನನ್ನು ಗುರುತು ಹಿಡಿಯಲಾಗಲಿಲ್ಲವೇ?' ಎಂದರು.

ನಾನು:– ಅಯ್ಯೋ! ನೀವು ಭಾರತಿಯಾರರೇ? ... ಶೆಲ್ಲಮ್ಮಾ ಹುಳುವಿನಂತೆ ಒದ್ದಾಡಿಬಿಟ್ಟರು. ನೀವು ಹೀಗೆ ಮಾಡಬಹುದೇ?

ಭಾರತಿ:– ನಾನು ಏನು ಮಾಡಿಬಿಟ್ಟೆ? ನನ್ನನ್ನು ಕಂಡೊಡನೆ ಕುಣಿದು ಕುಪ್ಪಳಿಸಿ ಓಡಿ ಬರುವ ನಿನಗೇ ನನ್ನನ್ನು ಕಂಡುಹಿಡಯಲಾಗಲಿಲ್ಲವಲ್ಲಾ! ಇನ್ನು ಆ ಸಿ.ಐ.ಡಿ.ಗಳಿಗೆ ಸಾಧ್ಯವೇ?

ಅವರ ಕಾಣಿಕೆಯನ್ನು ಕೊಟ್ಟುಬಿಟ್ಟು, 'ನೀವು ಎಲ್ಲೆಲ್ಲಿ ಹೋಗಿದ್ದಿರಿ? ಏನೇನು ನೋಡಿದಿರಿ?' ಎಂದೆ.

ಭಾರತಿ:– ಇದೇನು! ಒಂದೇ ಉಸಿರಿನಲ್ಲಿ ಕೇಳಿದರೆ ಹೇಗೆ ಹೇಳುವುದು? ನಿಧಾನವಾಗಿ ಹೇಳುತ್ತೇನೆ. ಈ ಸಮಯ ಶೆಲ್ಲಮ್ಮಾವಿಗೆ ನೀನೇ ಧೈರ್ಯ ಹೇಳಿದೆಯಂತೆ!

ನಾನು:– ಏನು ಧೈರ್ಯವೋ ಏನೋ! ಅವರು ಅದನ್ನು ಲಕ್ಷ್ಯ ಮಾಡಲೇ ಇಲ್ಲ. ಊಟ ಕೂಡ ಮಾಡಲಿಲ್ಲ. ಇಲ್ಲಿ ಬನ್ನಿ ಎಂದು ಕರೆದೆ. ಅವರು ಅದನ್ನೂ ಮಾಡಲಿಲ್ಲ.

ಭಾರತಿ:– ಅವಳು ಬರದಿದ್ದರೆ ನಾನೇನು ಮಾಡಲಿ? [illegible]ಗಳ ಧೈರ್ಯದ ಆಧಾರದ ಮೇಲೆಯೇ ನಾನು ಹೋದುದು. ಮೊ[illegible] ಹೇಳಿದ್ದರೆ, ಹೋಗಲೇಕೂಡದೆಂದು ಶೆಲ್ಲಮ್ಮಾ ತಡೆ ಹಾಕುತ್ತಿದ್ದಳು.

ನಾನು:– ಹೊಸಹಾಡು ಏನೂ ಇಲ್ಲವೇ?

ಭಾರತಿ:– ರೈಲುಗಾಡಿಯಲ್ಲಿ ಹೋಗುವಾಗಲೇ ರಚಿಸಿಯಾಯಿತು. ಎಲ್ಲಿ

ಗಟ್ಟಿಯಾಗಿ ಹಾಡಿಬಿಡುತ್ತೇನೆಯೋ ಎಂದು ನನ್ನನ್ನು ನಾನೇ ಕಟ್ಟು ಪಡಿಸಿಕೊಂಡೆ. ಆ ಹಾಡನ್ನು ನಾಳೆ ಹಾಡುತ್ತೇನೆ. ಇವತ್ತು ನೆಗಡಿ. ಗಂಟಲು ಕಟ್ಟಿದೆ.

ಮರುದಿನ ಭಾರತಿಯಾರರು ಒಂದು ತಾವು ಹೇಳಿದಂತೆ ಹೊಸ ಹಾಡನ್ನು ಹಾಡಿ ತೋರಿಸಿದರು. ಅದು 'ಪಾರುಕ್ಕುಳ್ಳೇ ನಲ್ಲನಾಡು ... ಎಂಗಳ್ ಭಾರತನಾಡು' (ಪ್ರಪಂಚದಲ್ಲಿ ಉತ್ತಮವಾದ ದೇಶ –ನಮ್ಮ ಭಾರತ ದೇಶ) ಎಂಬ ಹಾಡು. ಅವರು ಪ್ರಯಾಣ ಮಾಡುತ್ತಿರುವಾಗ ಒಬ್ಬ ಭಿಕ್ಷುಕಿ ಒಂದು ಹಿಂದೀ ಹಾಡನ್ನು ಹಾಡಿದಳಂತೆ. ಅದೇ ಜಾಡಿನಲ್ಲಿ ಇವರು ಕವಿತೆ ಕಟ್ಟಿದ್ದಾರೆ.

ಭಾರತಿಯಾರರ ಈ ಅಜ್ಞಾತವಾಸದ ನಂತರ, ಶೆಲ್ಲಮ್ಮಾ ಹೊತ್ತಿಗೆ ಸರಿಯಾಗಿ ಊಟ ಮಾಡದೆ, ಕ್ಷೀಣಿಸಿದರು. ಅವರ ತಂದೆ ಬಂದು 'ಶೆಲ್ಲಮ್ಮಾವಿಗೆ ಅನ್ನದ್ವೇಷ ಹಿಡಿದುಬಿಟ್ಟಿದೆ. ಇನ್ನು ಇಲ್ಲಿದ್ದರೆ ಬದುಕುವುದಿಲ್ಲ' ಎಂದು ಅವರನ್ನೂ ಮಗು ಶಕುಂತಲಾವನ್ನೂ ತಮ್ಮ ಜೊತೆಯಲ್ಲಿ 'ಕಡಯಂ'ಗೆ ಕರೆದುಕೊಂಡು ಹೋದರು.

ಭಾರತಿಯಾರರಿಗೇನು ಕಷ್ಟ! (ಚಿಂತೆ ಅಥವಾ ಯೋಚನೆ). ಯಾರು ಕರೆದರೂ ಮರುಮಾತಾಡದೆ ಅಲ್ಲಿ ಹೋಗಿ ಊಟ ಮಾಡಿಬಿಡುವರು. ಶೆಲ್ಲಮ್ಮಾ ಎರಡು ತಿಂಗಳು ಕಳೆದು ಬಂದರು. ಅವರೇ ಹೇಳುವರು 'ಅವರಿಗೇನಮ್ಮ ಚಿಂತೆ? ಊರೆಲ್ಲಾ ಬಂಧುಗಳು. ನನಗೇ ಮನಸ್ಸು ತಡೆಯಲಿಲ್ಲ. ಇಲ್ಲಿ ಇವರು ಒದ್ದಾಡುತ್ತಾರಲ್ಲಾ ಎಂದು ಬಂದರೆ 'ಏಕೆ ಇಷ್ಟು ಬೇಗ ಬಂದುಬಿಟ್ಟೆ? ನೀನು ಖುಷಿಯಾಗಿದ್ದರೆ ನಾನೇನು ಬೇಡವೆನ್ನುತ್ತೀನೆಯೆ?' ಎಂದು ಕೇಳುತ್ತಾರೆ. ಇವರು ಎಂತಹ (ಏನು) ಮನುಷ್ಯರೋ ಗೊತ್ತಿಲ್ಲ.'

ಬರುವಾಗ ಶೆಲ್ಲಮ್ಮಾ ತಮ್ಮ ಮೊದಲ ಮಗಳು ತಂಗಮ್ಮಾವನ್ನೂ ಕರೆದುಕೊಂಡು ಬಂದರು.

ತಂಗಮ್ಮಾ ಒಳ್ಳೆಯ ಆಚಾರ ವಿಚಾರ, ಸಂಪ್ರದಾಯಗಳಲ್ಲಿ ಬೆಳೆದವಳು. ಅವಳಿಗೂ ಇವರಿಗೂ ವಾಗ್ವಾದ ನಡೆಯುವುದುಂಟು. ಯಾವಾಗಲೂ ಇವರಿಗೇ ಜಯ. ಏನಿದ್ದರೂ ತಂದೆ ಎಂಬ ಮರ್ಯಾದೆಗೋಸ್ಕರ ತಂಗಮ್ಮಾ ತಣಿದು ಹೋಗುವಳು.

(11) 'ಉಪದೇಶ'

ಬೆಳದಿಂಗಳ ಕಾಲ. ಸಂಜೆ ಎಂದಿನಂತೆ ಕಡಲ ತೀರಕ್ಕೆ ಹೋದೆವು ಶಂಕರ ಶೆಟ್ಟಿಯಾರ್ (ಪೊನ್ ಮುರುಗೇಶರಂತೆಯೇ ಇವರೂ ಧನಿಕರು. ಭಾರತಿ, ಅರವಿಂದರು ಇವರುಗಳಿಗೆ ಆಪ್ತ ಸ್ನೇಹಿತರು. ಅವರ ಮಗಳು ಪದ್ಮಾವತಿ ನನಗೆ ಗೆಳತಿಯಾಗಿದ್ದಳು. ಅವಳು, ಮೀನಾ, ತಂಗಮ್ಮಾ, ಶೆಲ್ಲಮ್ಮಾ, ನಾನು,

ನನ್ನ ತಂಗಿ, ನನ್ನ ತಾಯಿ ಎಲ್ಲರೂ ಕಡಲದಂಡೆಗೆ ಹೋಗಿ ಏಳು–ಎಂಟು ಗಂಟೆಯ ವೇಳೆಗೆ ಹಿಂತಿರುಗುವುದು ನಮ್ಮೆಲ್ಲರ ದಿನಚರಿ. ಅಂದು ನಮ್ಮ ತಂದೆಯವರಿಗೆ ಎದೆನೋವು. ನಮ್ಮ ತಾಯಿ ನಮ್ಮ ಜೊತೆಯಲ್ಲಿ ಬರಲಿಲ್ಲ. ನಾವು ಸಮುದ್ರದ ದಂಡೆಯಲ್ಲಿ ಮಾತನಾಡುತ್ತಾ ಕುಳಿತಿರುವಾಗ, ಅರವಿಂದರ ಮನೆಯಿಂದ ಅಯ್ಯರೂ, [illegible]ವರೂ ಬಂದರು. ತಾವು ಬಂದರೆ ಹೆಂಗಸರ ಗುಂಪು ಚದರಿ ಬಿಡಬಹುದು ಎಂದು ಅಯ್ಯರ್‌ರವರು ದೂರದಲ್ಲಿ ಬೇರೆ ಯಾರ ಜೊತೆಯಲ್ಲಿಯೋ ಮಾತಾಡುತ್ತಿದ್ದರು. ಭಾರತಿಯವರು ಮಾತ್ರ ನಾವಿದ್ದ ಜಾಗಕ್ಕೆ ಬಂದರು.

ಭಾರತಿ:– ನಾನು ಬಂದಿದ್ದರಿಂದ ನಿಮಗ್ಯಾರಿಗಾದರೂ ತೊಂದರೆಯೇ?

ಶೆಲ್ಲಮ್ಮಾ: ಎಲ್ಲರೂ ನಮ್ಮ ಮಕ್ಕಳೇ. ಪದ್ಮಾವತಿಯೂ ನಮ್ಮ ಮಗುವಿನಂತೆಯೇ. ಬನ್ನಿ!

ಭಾರತಿಯಾರರು ಬಂದು ನಮ್ಮ ಹತ್ತಿರ ಕುಳಿತುಕೊಂಡರು.

ಭಾರತಿ:– ಏನು? ಯದುಗಿರಿಯನ್ನು ಈಗೆಲ್ಲಾ ಮುಂಚಿನಂತೆ ನೋಡಲಾಗುತ್ತಿಲ್ಲ! ಹೆಣ್ಣುಮಕ್ಕಳೊಂದಿಗೆ ಹೆಚ್ಚುನಿಕಟವಾಗಿರುವಂತೆ ತೋರುತ್ತದೆ!

ಶೆಲ್ಲಮ್ಮಾ:– ನಿಮಗೆ ಸಮಾಚಾರ ಗೊತ್ತಲ್ಲವೇ? ಅವಳಿಗೆ ಚೈತ್ರ ಮಾಸದಲ್ಲಿ ಮದುವೆ ಮಾಡುತ್ತಾರಂತೆ. ವರ ಹುಡುಕುತ್ತಿದ್ದಾರೆ. ಅತ್ತೆ ಮನೆಗೆ (ಸೇರಿದ ಮನೆಗೆ) ಹೋದರೆ ಈ ರೀತಿ ಗಂಡಸರೊಂದಿಗೆ ಪಳಗಲು ಸಾಧ್ಯವೇ? ಅದಕ್ಕಾಗಿ ಈಗಿನಿಂದಲೇ ಅಡಗಿ ಒಡುಗಿ ಇರುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಿದ್ದಾಳೆ.

ಭಾರತಿ:– ಯಾವಾಗ ಅಮ್ಮಾ ಮದುವೆ?

ನಾನು:– ನನಗೆ ಗೊತ್ತಿಲ್ಲ. ನನ್ನ ಅಜ್ಜಿಯವರು ತೀರ್ಮಾನಿಸಿದ್ದಾರೆ. 'ಅಯ್ಯರ್, ಭಾರತಿಯವರುಗಳ ಹೊರತು ಬೇರೆ ಗಂಡಸರ ಜೊತೆ ಮಾತನಾಡಬೇಡ' ಎಂದು ನಮ್ಮ ತಾಯಿ ಹೇಳಿದರು.

ಭಾರತಿ:– ಮಾತಾಡಿದರೆ ಏನು ತಪ್ಪು?

ನಾನು:– ನನಗೆಗೊತ್ತಿಲ್ಲ. ನನ್ನ ತಾಯಿ ಹೇಳಿದರು.

ಶೆಲ್ಲಮ್ಮಾ: ಅವರ ಮನೆಯಲ್ಲಿ ಅವಳನ್ನು ಗಂಡುಹುಡುಗನಂತೆ ಬೆಳೆಸಿದ್ದಾರೆ. ಅತ್ತೆ ಮನೆಗೆ ಹೋದರೆ ಮೊದಮೊದಲು ಸ್ವಲ್ಪ ಕಷ್ಟವಾಗುತ್ತದೆ. ಈಗಿನಿಂದಲೇ ಅಭ್ಯಾಸ ಮಾಡಿಕೊಂಡರೆ ಒಳ್ಳೆಯದಲ್ಲವೇ?

ಭಾರತಿ:– ಆದರೂ ಯದುಗಿರಿ ಬಹಳ ಚಿಕ್ಕವಳು. ಶ್ರೀನಿವಾಸಾಚಾರ್ಯರು (ನನ್ನ ತಂದೆ)ಹಳೆಯ ಕಾಲದ ಮನುಷ್ಯರು. ಪ್ರಪಂಚವೇ ಅರಿಯದ ಎಳೆಯ ಮಗುವಿಗೆ 'ಗೊಂಬೆ ಮದುವೆ' ಮಾಡುತ್ತಿದ್ದಾರೆ.

ಶೆಲ್ಲಮ್ಮಾ:– ತಂಗಮ್ಮಾವನ್ನು ಅಕ್ಕ ಬೆಳೆಸಿದ್ದಾಳೆ. ಅವಳೇ ಮದುವೆ ಮಾಡುತ್ತಾಳೆ.

ಭಾರತಿ:– ಯದುಗಿರಿ, ಇನ್ನು ನೀನು ಬೇರೆ ಪ್ರಪಂಚದಲ್ಲಿ ಕಣ್ಣುಬಿಡುತ್ತೀಯ!

ಶೆಲ್ಲಮ್ಮಾ:– ಇದೇನಿದು! ಮದುವೆ ಆದ ಮೇಲೆ ಇಲ್ಲಿಗೆ ಬರುವುದೇ ಇಲ್ಲವೇ?

ಭಾರತಿ:– ಶೆಲ್ಲಮ್ಮಾ, ಮದುವೆ ಆದ ಮೇಲೆ ಅವಳ ಹತ್ತಿರ ನಾನು ಮೊದಲಿನಂತೆ ಒಡನಾಟ ಇಟ್ಟುಕೊಳ್ಳಲು ಸಾಧ್ಯವೆ? ಅದಕ್ಕೆ ಅವಳ ಗಂಡನ ಅನುಮತಿ ಬೇಕು!

ಶೆಲ್ಲಮ್ಮಾ: ಈಗಲೇ ಅದರ ಬಗ್ಗೆ ಯೋಚನೆ ಏಕೆ? ಅವಳು ಅಲ್ಲಿಗೆ ಹೋದನಂತರ ನೋಡೋಣ.

ಭಾರತಿ:– ಯದುಗಿರಿ, ನಾನು ಎತ್ತಿ ಬೆಳೆಸಿದ ಮಗು ಎಂದುಕೊಂಡು ನಿನ್ನ ಅತ್ತೆ ಮನೆಗೆ ಬಂದರೆ, 'ಯಾರೋ ಯಃಕಶ್ಚಿತ್ ಮನುಷ್ಯ ಬಂದರೆ ಅವನ ಜೊತೆಯಲ್ಲೇನು ಮಾತು' ಎನ್ನುವರು. ಯದುಗಿರಿ,... ನಿನಗೆ ಗೊತ್ತಿಲ್ಲ. ಇದುವರೆಗೆ ನೀನು ಒಂದು ತರಹ ಪ್ರಪಂಚವನ್ನು ನೋಡಿರುವೆ. ಆದರೆ ನೀನು ಹೊಸದಾಗಿ ಕಾಲಿಡುವ ಪ್ರಪಂಚವೇ ಬೇರೆ. ಅಲ್ಲಿ ಶತಶತಮಾನಗಳಿಂದ ಬಂದ ಸಂಪ್ರದಾಯಗಳನ್ನು ಅನುಸರಿಸುವರು. ನಮ್ಮ ಮನೆಗಳಲ್ಲಿ ಬಹಳವಾಗಿ ಕಟ್ಟುಪಾಡುಗಳನ್ನು ಅನುಸರಿಸುವುದಿಲ್ಲ. ಆದ್ದರಿಂದಲೇ ನಾವುಗಳು ಮನೆಮಠಗಳನ್ನು ಬಿಟ್ಟು ಇಲ್ಲಿ ಬಂದು ಇದ್ದೇವೆ. ಈಸ್ಥಿತಿ ಒಬ್ಬೊಬ್ಬರ ಮನೆಯಲ್ಲೂ ಬರಲು ಸುಮಾರು ಇನ್ನೂ ಮೂವತ್ತು ವರುಷಗಳಾದರೂ ಬೇಕು. ಅದುವರೆಗೆ ನೀನು ಹಳೆಯ ವಿಧಾನದಲ್ಲೇ ನಡೆಯಬೇಕು.

ಶೆಲ್ಲಮ್ಮಾ:– ಇದೇನು? ಜೈಲಿಗೆ ಹೋಗುವ ಕೈದಿಗಳಿಗೆ ಹೇಳುವ ಮಾತಿನಂತಿದೆ ನಿಮ್ಮ ಮಾತು! ಅವಳು ಹೆದರಿ ಬಿಡುತ್ತಾಳೆ.

ಭಾರತಿ:– ಲೋಕದ ಕಷ್ಟ, ದಾಸ್ಯ, ಕೆಲ ಮೂಢ ನಂಬಿಕೆಗಳು (ಗೊಡ್ಡು ಸಂಪ್ರದಾಯಗಳು) ಅವಳಿಗೆ ಗೊತ್ತಿಲ್ಲ. ನಮ್ಮ ಜಾತಿಯಲ್ಲಿ ಮದುವೆ ಆದ ಮೇಲೆ ತನಿ (ಬೇರೆ) ಸಂಸಾರ ಇಟ್ಟು ಬಿಡುತ್ತಾರೆ. ಮಂಡ್ಯಂ ಅಯ್ಯಂಗಾರ್ಯರಲ್ಲಿ ಆ ಪದ್ಧತಿ ಇಲ್ಲ.

ಶೆಲ್ಲಮ್ಮಾ:– ಆಹಾ! ನಾನು ಬೇರೆ ಬಂದು ಐದು ವರ್ಷವಾಯಿತು.

ಭಾರತಿ:– ಅದು ಹಳೆಯ ಕಾಲ. ತಿರುನಲ್ವೇಲಿಯಲ್ಲಿ ನಿನ್ನೆ ನೋಡಿದೆನಲ್ಲಾ, ಎಲ್ಲವೂ ಬೇರೆ ಬೇರೆ ಸಂಸಾರಗಳೇ ಹೊರತು, ಒಂದಾದರೂ ಒಟ್ಟು ಸಂಸಾರವೇ ಇಲ್ಲ. ನಮ್ಮ ವಿಷಯ ಹಾಗಿರಲಿ. ನಿನಗೆ ಮದುವೆ ಇಷ್ಟವೇ ಯದುಗಿರಿ?

ನಾನು:– ನನಗೇನೂ ಗೊತ್ತಿಲ್ಲ. ತಂದೆ, ತಾಯಿ ಹೇಳಿದಂತೆ ಕೇಳುವವಳು

ನಾನು. ಅವರುಗಳೇ ಅಜ್ಜಿ ಹೇಳಿದ ತರಹ ನಡೆದುಕೊಳ್ಳುತ್ತಿರುವಾಗ, ನನ್ನ ಇಷ್ಟ ಇದರಲ್ಲೇನಿದೆ?

ಭಾರತಿ:– ವರ ನಿಶ್ಚಯವಾಗಿದೆಯೇ? ಅವನನ್ನು ನೀನು ನೋಡಿರುವೆಯಾ?

ನಾನು:– ನಾನು ಯಾರನ್ನೂ ನೋಡಿಲ್ಲ. ನಾಲ್ಕೈದು ಕಡೆಗಳಿಂದ ಕಾಗದ ಬಂದಿದೆ. ನನ್ನ ತಾಯಿ ಒಂದು ಹೇಳುತ್ತಾಳೆ, ಅಜ್ಜಿ ಮತ್ತೊಂದು ಹೇಳುತ್ತಾಳೆ. ಅಯ್ಯಾ (ತಂದೆ) 'ನಿಮ್ಮಲ್ಲಿ ನಿರ್ಧರಿಸಿ ಹೇಳಿ. ನಂತರ ನೋಡೋಣ' ಎನ್ನುತ್ತಾರೆ. ಇಷ್ಟೇ ನನಗೆ ಗೊತ್ತಿರುವ ಸಮಾಚಾರ.'

ಭಾರತಿ: ನಮ್ಮ ಮದುವೆಯೂ ಹೀಗೆಯೇ ನಡೆಯಿತು. ಆದರೆ ಈಗ ಹೊಸ ಆಧುನಿಕತೆ ಬಂದು, ಗಂಡು ಹುಡುಗರು ಓದಿದ ಹುಡುಗಿಯರು ಬೇಕೆಂದು ಆಸೆ ಪಡುತ್ತಿದ್ದಾರೆ. ನಿಮ್ಮ ಜಾತಿಯಲ್ಲಿ ಆ ಪದ್ಧತಿ ಇನ್ನೂ ಬರಲಿಲ್ಲವೆ?

ನಾನು:– ನಮ್ಮಲ್ಲಿ ಇನ್ನೂ ಹಳೆಯ ಆಚಾರ ವಿಚಾರಗಳನ್ನು ಬಿಟ್ಟಿಲ್ಲ. ಹೆಣ್ಣುಮಕ್ಕಳು ಮನೆಯಲ್ಲಿ ಓದು ಬರಹ ಕಲಿಯುತ್ತಾರೆಯೇ ಹೊರತು ಶಾಲೆಗೆ ಹೋಗುವುದಿಲ್ಲ. ದೊಡ್ಡ ದೊಡ್ಡ ಅಧಿಕಾರದಲ್ಲಿರುವವರ ಮನೆಯ ಹುಡುಗಿಯರು ಮಾತ್ರ ಕೆಲವರು ಶಾಲೆಗೆ ಹೋಗಿ ಕಲಿಯುತ್ತಾರೆ.

ಭಾರತಿ:– ಹಾಗಾದರೆ ಮದುವೆ ನಿಶ್ಚಯ ಎಂದು ಹೇಳು! ನನ್ನನ್ನು ಮರೆತು ಬಿಡಬೇಡ ಅಮ್ಮಾ! ಗಂಡ (ಪತಿ) ಪಕ್ಕದಲ್ಲಿರುವಾಗ ಈ ಲೋಕವೇ ಮರೆತು ಹೋಗುತ್ತದೆ. ಈ ಬಡತಂದೆಯನ್ನು ಮರೆತು ಬಿಡಬೇಡ ಅಮ್ಮಾ – ಜ್ಞಾಪಕವಿರಲಿ ಅಮ್ಮಾ.

ನಾನು:– ನಿಮ್ಮನ್ನು ಮರೆಯಲು ಸಾಧ್ಯವೇ? ನೀವು ಬಡವರಾದರೂ ನಿಮ್ಮ ಹಾಡುಗಳು (ಕವಿತೆಗಳು) ಎಲ್ಲ ಸಿರಿವಂತರನ್ನೂ ಮೀರಿಸಿವೆ. ಅಯ್ಯರ್ ನಿನ್ನೆ ಹೇಳಿದರು: 'ಭಾರತಿಯಾರರನ್ನು 'ಕವಿಅರಸ' ಎಂದು ಏಕೆ ಕರೆಯಬಾರದು' ಎಂದು. ಹಣ ಕರಗಿ ಹೋಗುತ್ತದೆ, ಹಾಡು ಅಳಿಯುವುದಿಲ್ಲ, ಎಂದೆಂದಿಗೂ ಶಾಶ್ವತ.

ಭಾರತಿ:– ನಿನ್ನ ಹಾಗೆ ಹಲವು ಶಿಷ್ಯರು ನನಗಿದ್ದುಬಿಟ್ಟರೆ ನಾನು ನನ್ನ ಹಾಡುಗಳನ್ನು ಅಚ್ಚಿಡಲೇ ಬೇಕಿಲ್ಲ. ನನ್ನ ಹಾಡುಗಳನ್ನು ಹಾಗೆಯೇ ಉರು ಹಾಕಿಟ್ಟಿದ್ದೀಯ ನೀನು! 'ಶೆಲ್ಲಮ್ಮಾ, ಯದುಗಿರಿಯ ಮದುವೆಯಲ್ಲಿ ಒಂದು ದಿನ ನಾನು ದೇಶೀ ಪದ್ಧತಿಯ ಸಂಗೀತ ಹಾಡುತ್ತೇನೆ. ಅದುವೇ ಅವಳಿಗೆ ನಾನು ಕೊಡುವ ಉಡುಗೊರೆ. ನಮಗೆ ಒಳ್ಳೆಯ ಕಾಲ ಬಂದರೆ .... ಅವಳಿಗೆ ನಾವು ಎಂದೆಂದೂ ಮರೆಯಲಾರದಂತಹ ಉಡುಗೊರೆ ಕೊಡೋಣ.

ಶೆಲ್ಲಮ್ಮಾ:– ನಿಮ್ಮ ಮನಸ್ಸು ಈ ಕಡಲಿಗಿಂತ ದೊಡ್ಡದು. ಅದೃಷ್ಟ ಬಂದರೆ ಆ ಉಡುಗೊರೆಯನ್ನೂ ಕೊಡೋಣ.

ನಾನು:– ನಿಮ್ಮ ಕಾರ್ಯಕ್ರಮಕ್ಕಿಂತ (ಕಛೇರಿಗಿಂತ) ಹೆಚ್ಚಿನ ಉಡುಗೊರೆ ಏನಿದೆ? ಅಯ್ಯಾವಿಗೆ (ತಂದೆಗೆ) ಆರೋಗ್ಯವೇ ಸರಯಿಲ್ಲ. ಅಯ್ಯರ್ ಮತ್ತು ನೀವೇ ಓಡಾಡಿ ಮದುವೆ ನಡೆಸಬೇಕು.

ಭಾರತಿ:– ಹೊರಗಿನ ಕೆಲಸವನ್ನೆಲ್ಲಾ ನಾವು ನೋಡಿಕೊಳ್ಳುತ್ತೇವೆ. ಅಡಿಗೆ ಮನೆಯ ಕಡೆ ನಮ್ಮನ್ನು ಸೇರಿಸುವುದಿಲ್ಲವಲ್ಲಾ!

ನಾನು:– ಅದಕ್ಕೆಲ್ಲಾ ನಮ್ಮ ಅಜ್ಜಿ ಏರ್ಪಾಡು ಮಾಡುತ್ತಾರೆ. ನಮ್ಮ ಅಜ್ಜಿಗೆ ಬಳಗ ಹೆಚ್ಚಾಗಿರಬೇಕು. ಸ್ವಲ್ಪ ಕಡಿಮೆಯಾದರೂ ಸಹಿಸುವುದಿಲ್ಲ. ಒಂದು ರಾಜ್ಯದ ಆಡಳಿತವನ್ನೇ ನಡೆಸುವ ಶಕ್ತಿ ನಮ್ಮ ಅಜ್ಜಿಗೆ ಉಂಟು.

ಭಾರತಿ ಆಗ ಒಂದು ದೊಡ್ಡ ಭಾಷಣವನ್ನೇ ಮಾಡಿಬಿಟ್ಟರು. ಅವರು ಹೇಳಿದರು: 'ಯದುಗಿರಿ, ನಾನು ಕೆಲವು ಬುದ್ಧಿಮಾತುಗಳನ್ನು ಹೇಳುತ್ತೇನೆ, ಮರೆಯಬೇಡ. ಹೆಣ್ಣು ಮಕ್ಕಳಿಗೆ ಬಹುಮುಖ್ಯವಾದುದು ಶೀಲ. ಅದನ್ನು ಪ್ರಾಣಕ್ಕಿಂತ ಹೆಚ್ಚಾಗಿ ಕಾಪಾಡಿಕೊಳ್ಳುವುದು ಅವರ ಮೊದಲ ಕರ್ತವ್ಯ. ಆದರೆ ಅದಕ್ಕೋಸ್ಕರ 'ಪಂಜರದ ಗಿಣಿ'ಯಂತೆ ಸಿಕ್ಕಿಕೊಂಡು ಇರಬೇಕಾಗಿಲ್ಲ. ಲೋಕದಲ್ಲಿ ಪತಿಯೊಬ್ಬನ ಹೊರತು ಮಿಕ್ಕೆಲ್ಲಾ ಪುರುಷರೂ ಅಣ್ಣತಮ್ಮಂದಿರಂತೆ. ಎಲ್ಲರಿಗೂ ಹೆದರಿ ಅಡಗಿಕೊಳ್ಳಬೇಕಾಗಿಲ್ಲ. ಮುಖ್ಯವಾಗಿ ನಾಚಿಕೆ, ಸಂಕೋಚ ಎರಡೂ ಅನವಶ್ಯಕ. ನೀನು ಭೇಷಾಗಿ ಎಲ್ಲರ ಜೊತೆಯಲ್ಲಿಯೂ ಮಾತನಾಡಬಹುದು. ಪತಿಯ (ಗಂಡನ) ಬಳಿ ಮೊದಮೊದಲು ನಾಚಿಕೆ. ಪಳಗಿದ ಮೇಲೆ ಅದುವೂ ಬೇಕಾಗಿಲ್ಲ. ಸಂಕೋಚ, ಮರ್ಯಾದೆ ಮತ್ತೊಂದು ಎಂದು ಪುಸ್ತಕದ ಮಾತುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ನಾಡಿನ ಹೆಂಗಸರು, ಗಂಡಸರು ಎಲ್ಲರೂ ದಾಸ್ಯದಲ್ಲಿ ಮುಳುಗಿದ್ದಾರೆ. ನೀವು ಹೆಣ್ಣುಮಕ್ಕಳು ಧೈರ್ಯವಾಗಿದ್ದರೇನೇ ನಿಮ್ಮ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳೂ ಧೈರ್ಯವಂತರಾಗಿರುತ್ತಾರೆ. ಹೇಡಿತನ ನಮ್ಮ ಭಾರತವನ್ನು ನಾಶ ಮಾಡಿ ಹೊಸಕಿ ಹಾಕಿತು. ಅದಕ್ಕೆ ತಕ್ಕಂತೆ ಕಾಲವೂ ಸಹಾಯ ಮಾಡಿತು.

'ನೀನು ಅತ್ತೆ ಮನೆಗೆ ಹೋದರೂ ಧೈರ್ಯವಾಗಿರು, ಭಯಪಡಬೇಡ. ಮತ್ತೊಬ್ಬರ ಮಾತನ್ನು ಕದ್ದು ಕೇಳಬೇಡ. ಬೇರೆಯವರ ಕಾಗದಗಳನ್ನು ಒಡೆದು ನೋಡಬೇಡ. ಮನಸ್ಸಿನಲ್ಲಿರುವುದನ್ನು ನೇರಾಗಿ ಹೇಳಿಬಿಡು; ಮನದಲ್ಲಿಟ್ಟುಕೊಂಡು ಕೊರಗುವುದಕ್ಕಿಂತ ಹೇಳಿ ಬಿಡುವುದು ಒಳ್ಳೆಯದು. ನಿನ್ನ ಕೈಯಲ್ಲಾದಷ್ಟೂ ಅವರುಗಳು ಹೇಳಿದಂತೆ ನಡೆದುಕೋ. ನಿಗೆ ಸಾಧ್ಯವಿಲ್ಲವಾದರೆ ಆ ವಿಚಾರವನ್ನು ಹೇಳಿ ಬಿಡು, ಮುಚ್ಚಿಡಬೇಡ! ಅದರಿಂದ ಒಳ್ಳೆಯದಾಗುತ್ತದೆ. ಅವರು ನಿನ್ನನ್ನು ಬೆಲೆಕೊಟ್ಟು ಕೊಂಡುಕೊಂಡಿಲ್ಲ. ಅವರುಗಳ ಮನೆಯನ್ನು ಬೆಳಗಿ

ಉಜ್ವಲಗೊಳಿಸುತ್ತೀಯಾ. ಅವರ ಮನೆಯಲ್ಲಿ ನಿನಗೆ ಸಂಪೂರ್ಣ ಅಧಿಕಾರ ಉಂಟು. ಹಣಕಾಸಿನ ವಿಷಯದಲ್ಲಿ ತಲೆಯಿಡಬೇಡ! ಅದನ್ನು ಹಿರಿಯರಿಗೆ ಬಿಟ್ಟುಬಿಡು. ಕೆಲಸ ಮಾಡಲು ಹಿಂದೆಗೆಯಬೇಡ. ನಿನ್ನ ಶಕ್ತಿ ಮೀರಿ ಮಾಡಬೇಡ! ಮಾಡುವುದನ್ನು ನಿನ್ನ ಮನಸ್ಸಿಗೆ ಒಪ್ಪುವಂತೆ ಮಾಡು. ಓದು, ಬರಹವನ್ನು ಬಿಡಬೆಡ. ನಿನ್ನ ತಂದೆ ತಾಯಿ ಎಷ್ಟೋ ಕಷ್ಟಪಟ್ಟು ಬದುಕಿನ ಮುಖ್ಯವಾದ, ಚಿರಂತನವಾದ ವಿಷಯಗಳನ್ನು ನಿನಗೆ ತಿಳಿಸಿದ್ದಾರೆ. ಆದರೆ ಅಭಿವೃದ್ಧಿ ಪಡಿಸು. ಆಗದಿದ್ದರೆ ಇರುವುದನ್ನು ಮರೆಯಬೇಡ.

'ನಾನು ಅಯ್ಯರ್ ಅವರಂತೆ ವಿರಕ್ತಿ (ವೈರಾಗ್ಯ)ಯನ್ನು ಬೋಧಿಸುವುದಿಲ್ಲ. ಲೋಕದಲ್ಲಿ ಹುಟ್ಟಿ ಎಲ್ಲ ರೀತಿಯ ಸುಖಗಳನ್ನೂ ಅನುಭವಿಸಿ, ಲೋಕಕ್ಕೆ ಉಪಕಾರಿಯಾಗಿ ಬಾಳಬೇಕು. ಕಲಹ, ದಂಗೆ ಮುಂತಾದವುಗಳಿಂದ ರಕ್ತ ಪ್ರವಾಹ ಹೆಚ್ಚಿಸಿ – ಅದರಿಂದ ಪ್ರಪಂಚಕ್ಕೆ ಸುಖ ತರಿಸಬಹುದು – ಎಂಬುದು ನನ್ನ ಧ್ಯೇಯಕ್ಕೆ ವಿರೋಧ.

'ನೀನು ಎರಡು ಮನೆಗೂ ದೀಪದಂತೆ ಪ್ರಕಾಶಿಸಬೆಕು. ಎರಡೂ ಮನೆಯ ರೀತಿನೀತಿಗಳಿಗೆ ಹೊಂದಿಕೊಳ್ಳಲು ಮೊದಮೊದಲು ಕಷ್ಟವಾಗುತ್ತದೆ. ಪಳಗಿದ ನಂತರ ಸರಿಹೋಗುತ್ತದೆ. ಕೇವಲ ಮನೆಯ ಆಳಿನಂತೆ ಇರಬೇಡ. ನಿನಗೆ ಆ ಮನೆಯಲ್ಲಿ ಏನು ಮಾಡಲೂ, ಹಕ್ಕುಂಟು, ಬುದ್ಧಿ ಉಂಟು, ಸ್ವಾತಂತ್ರ್ಯ ಉಂಟು, ತಲೆ ಎತ್ತಿ ನಡೆ. ನಿನ್ನ ಅಕ್ಕಪಕ್ಕ ಎರಡು ಕಡೆಯೂ ಇರುವ ಪ್ರಕೃತಿಯನ್ನು ಆಹ್ಲಾದಿಸು. ಎಲ್ಲರನ್ನೂ ನೆಟ್ಟಗೆ ನೋಡು. ಕಡೆಗಣ್ಣಿನಲ್ಲಿ ನೋಡತಕ್ಕವನು ಪತಿಯೊಬ್ಬನೇ. ತಂದೆ, ಸಹೋದರರು, ಮಕ್ಕಳು ಎಲ್ಲರನ್ನೂ ನೇರಾಗಿ ಧೈರ್ಯವಾಗಿ ನೋಡು. ಇವರುಗಳನ್ನು ಕಡೆಗಣ್ಣಿನಿಂದ ನೋಡಬೇಡ. ನೆಟ್ಟಗೆ ಕುಳಿತುಕೋ. ಹೇಳುವುದನ್ನು ಸ್ಪಷ್ಟವಾಗಿ ಹೇಳು. ಇದರಿಂದ ಶೀಲ ಕೆಡುವುದಿಲ್ಲ. ಹೊರಗಿನ ವೇಷ ನಟನೆ ಬೇಕಾಗಿಲ್ಲ.

ಭಾರತಿಯಾರರು ಹೀಗೆ ಅನೇಕ ಬುದ್ಧಿ ಮಾತುಗಳನ್ನು ಹೇಳಿದರು. ನಾನು, ಅವರು ಹೇಳಿದುದನ್ನು ವೇದವಾಕ್ಕಾಗಿ ಪಾಲಿಸಿ, ಅದರಂತೆ ನಡೆದೆ. ಕೆಲ ಸಮಯದಲ್ಲಿ ಕಷ್ಟವಾದರೂ ಸಹ, ನನಗೆ ಧೈರ್ಯ ತುಂಬಿದುದು ಅವರ ಮಾತುಗಳೇ! ಕೆಲವು ದಿನ ನಿದ್ರೆ ಬರದಿದ್ದಾಗ – ಈ ಮಾತುಗಳು ನನ್ನೊಂದಿಗೆ ಕೊನೆಯಾಗಿ ಬಿಡುತ್ತದೇನೋ ಎಂದುಕೊಂಡಿದ್ದೆ. ನನ್ನ ಮನಸ್ಸು ತೃಪ್ತಿಪಡಲೂ ಎಲ್ಲಿ ಸಹೋದರಿಯರಿಗೂ ಉಪಯೋಗವಾಗಲೆಂದೂ ಅವರಿಲ್ಲದಿದ್ದರೂ ಅವರ ಮಾತುಗಳು ಪ್ರಪಂಚದಲ್ಲಿ ಎಂದೆಂದೂ ಉಲಿಯುತ್ತಿರಲೆಂದೂ – ಇದನ್ನು ಬರೆದೆ.

(12) 'ಕಣ್ಣನ್ ತಿರುವಡಿ'

ಭಾರತಿಯಾರರ ಬದುಕು ಬಾಳ್ವೆ ನಮ್ಮ ಕುಟುಂಬದೊಂದಿಗೆ ಸೇರಿ ಹತ್ತು-ಹನ್ನೆರಡು ವರುಷ ಪಳಗಿಹೋಯಿತು. ಅವರ ಕತೆಯನ್ನು ಬರೆಯಲಾರಂಭಿಸಿದರೆ ಅದರಲ್ಲಿ ನಮ್ಮ ಕುಟುಂಬದ ಕತೆಯನ್ನೂ ಬರೆಯಬೇಕಾಗುತ್ತದೆ. ಹೂವಿನೊಡನೆ ನಾರೂ ಸೇರಿ ಸುಗಂಧ ಸೂಸುವಂತೆ.

27–4–1913ರಲ್ಲಿ 'ಕಲವೈ' ಎಂಬ ಬಂಗಳಾ (ಸೌಧ)ದಲ್ಲಿ ನನ್ನ ಮದುವೆ ನಡೆಯಿತು. ಮದುವೆಯ ಮುನ್ನಾದಿನ ರಾತ್ರಿ ಎರಡು ಗಂಟೆಯ ವೇಳೆಯಲ್ಲಿ ನಮ್ಮ ತಂದೆಗೆ ಎದೆನೋವು ಅಧಿಕವಾಗಿ ಬಿಟ್ಟಿತು. ರಾತ್ರಿಯೆಲ್ಲಾ ನಾನಾ ವಿಧದ ಔಷಧಿಗಳನ್ನು ಕೊಡಲಾಯಿತು, ಚಿಕಿತ್ಸೆ ನಡೆಯಿತು. ಬೆಳಿಗ್ಗೆ ಅಂಬು ಎಂಬ ಫ್ರೆಂಚ್ ವೈದ್ಯರನ್ನೂ, ಕಲವೈ ಶಂಕರಶೆಟ್ಟಿಯಾರರನ್ನೂ ಕರೆದುಕೊಂಡು ಭಾರತಿಯಾರರು ಬಂದರು. ವೈದ್ಯರು ಏನೋ ಒಂದು ಔಷಧಿಯನ್ನು ಬರೆದು ಕೊಟ್ಟರು. ಭಾರತಿಯವರೇ ಅಂಗಡಿಗೆ ಹೋಗಿ ಆ ಔಷಧಿಯನ್ನು ತಂದುಕೊಟ್ಟರು. ಮುಹೂರ್ತದ ವೇಳೆಗೆ ನಮ್ಮ ತಂದೆಯವರಿಗೆ ಸ್ವಲ್ಪ ಮಟ್ಟಿಗೆ ಗುಣ ಕಂಡಿತು.

ಮುಹೂರ್ತ ನಡೆಯಿತು. ಕಲ್ಯಾಣ ಮಂಟಪದಲ್ಲಿ ಭಾರತಿಯಾರ್, ಅಯ್ಯರ್, ಪೆರಿಯ ಸ್ವಾಮಿಗಳು – ನನ್ನ ದೊಡ್ಡಪ್ಪ, ಚಿಕ್ಕಪ್ಪ ಎಲ್ಲರೂ ತುಂಬಿದ್ದರು. ಮಾಂಗಲ್ಯ ಧಾರಣವಾದ ನಂತರ ಎಲ್ಲರಿಗೂ, ಎಲ್ಲರಿಗಿಂತ ಹಿರಿಯರಾದ ಕಾರೈಕ್ಕಲ್ ಸ್ವಾಮಿಯವರಿಗೆ ನಮಸ್ಕರಿಸಿದೆವು. ನಂತರ ಭಾರತಿಯಾರ್, ಅಯ್ಯರ್ – ಆ ಬಳಿಕ ಬಹಳಷ್ಟು ಬಂಧುಗಳಿಗೆ ನಮಸ್ಕರಿಸಿದೆವು.

ನಮ್ಮ ಸಮೂಹದಲ್ಲಿ, ಈಗಿನ ಕಾಲದಂತೆ ಆಗ ವರದಕ್ಷಿಣೆ ಭೂತ ಕಾಡುತ್ತಿರಲಿಲ್ಲ. ಮರ್ಯಾದೆಗಾಗಿ ಹೆಣ್ಣಿನವರು ಕೊಟ್ಟುದನ್ನು ಗಂಡಿನವರು ಸಂತೋಷವಾಗಿ ಸ್ವೀಕರಿಸಿದರು. ಐದು ದಿವಸದ ಮದುವೆ ಜಗಳ, ಗಲಾಟೆಗಳಿಲ್ಲದೆ ಶಾಂತಿಯಿಂದ ನಡೆಯಿತು. ಭಾರತಿಯಾರರೂ, ಶೆಲ್ಲಮ್ಮಾಳ್ ಅವರೂ ಐದು ದಿನಗಳು ವಂಚನೆಯಿಲ್ಲದೆ ಓಡಾಡಿ ಎಲ್ಲಾ ಕೆಲಸಗಳನ್ನೂ ನಿರ್ವಹಿಸಿ ನಡೆಸಿಕೊಟ್ಟರು.

ಈಗ ಸ್ವಲ್ಪ ಆಗಿನ ಕಾಲದ ಐದು ದಿನಗಳ ಮದುವೆಯ ಬಗ್ಗೆ ಸ್ವಲ್ಪ ವಿವರಗಳನ್ನು ತಿಳಿಯೋಣ.

ಮೊದಲನೆಯ ದಿನ ಮುಹೂರ್ತ, ಊಂಜಲ್ (ಉಯ್ಯಾಲೆ) ಉರುಚ್ಚಾಣಿ, ಔಪಾಸನ ಇವುಗಳು ನಡೆದವು. ಮಾರನೆಯ ದಿನ ಬೆಲೆ ಕಟ್ಟಲಾಗದ ಭಾರತಿಯಾರರ ದೇಶೀ ಸಂಗೀತ. ಮಾರನೆಯ ದಿನ ತಿರುವೇಂಗಡನಾಥನ್ ಎಂಬುವವರು 'ವಿಶಲ್' (ಬಾಯಿಯಲ್ಲಿಯೇ ಕೊಳಲಿನಂತೆ) ಕಛೇರಿ ನಡೆಸಿದರು.

ನಾಲ್ಕನೆಯ ದಿನ ಹಿರಿಯ ವಿದ್ವಾಂಸಿನಿಯಾದ ನನ್ನ ದೊಡ್ಡ ಹಿರಿಯ ಅತ್ತೆಯವರ ಸಂಗೀತ. ನಂತರ ಊಂಜಲ್, ಉರುಟಣೆ, ನಾಗವಲ್ಲಿ ಎಲ್ಲವೂ ನಡೆಯಿತು.

ಇದಾದ ನಂತರ, ಅಡಿಗಡಿಗೆ ನಮ್ಮ ಮನೆಯಲ್ಲಿ ಶುಭ ಕಾರ್ಯಗಳು ನಡೆದವು. ಚೆನ್ನೈಯಲ್ಲಿ ನನ್ನ ಅಣ್ಣ, ನನ್ನ ದೊಡ್ಡ ತಂಗಿ, ನನ್ನ ಸೋದರತ್ತೆಯ ಮಗಳು, ಇವರುಗಳ ಮದುವೆಯೂ ನಡೆದವು. ಅದೇ ಸಮಯದಲ್ಲಿ ಶೆಲ್ಲಮ್ಮಾವಿನ ತಂಗಿ ಸ್ವರ್ಣಾವಿಗೂ ಮದುವೆ ನಡೆಯಿತು. ಅದಕ್ಕಾಗಿ ಊರಿಗೆ ಹೋದ ಶೆಲ್ಲಮ್ಮಾ ಅಲ್ಲಿ ಎರಡು ತಿಂಗಳು ಇದ್ದು ನಂತರ ತಂಗಮ್ಮನನ್ನೂ ಕರೆದುಕೊಂಡು ಬಂದು ಪುದುಚೇರಿಗೆ ಸೇರಿದರು.

ಸುಮಾರು ಮೂರು ತಿಂಗಳ ಕಾಲ ಹೀಗೆ ನಮ್ಮ ಕುಟುಂಬಗಳಲ್ಲಿ ಮದುವೆ ವೈಭವಗಳು ನಡೆದವು.

ಕೆಲದಿನಗಳ ನಂತರ, ನನ್ನ ತಾತ, ಅಜ್ಜಿ, ನನ್ನ ದೊಡ್ಡ ಸೋದರಮಾವ ಪುದುಚೇರಿಗೆ ಬಂದರು.

ನನ್ನ ತಾತ ಅವರು ಮಹಾನ್ ಪಂಡಿತರು. ವಾಕ್ ಚತುರರು. (ವಾಕ್ಚಾತುರ್ಯ ಉಳ್ಳವರು). ಅವರು ವೈಷ್ಣವ ಗ್ರಂಥಗಳ ಉಪನ್ಯಾಸ ನೀಡಿದರೆ, ಕೇಳುವವರು ತಮ್ಮನ್ನೇ ಮರೆತು ಅದರಲ್ಲಿಯೇ ತನ್ಮಯ (ಲಯಿಸಿ)ರಾಗಿ ಬಿಡುತ್ತಿದ್ದರು. ಎಳೆಯ ಮಕ್ಕಳಿಗೆ ಕೂಡ ಅರ್ಥವಾಗುವಂತೆ ಹೇಳುವರು.

ಭಾರತಿಯಾರರಿಗೂ ಅವರಿಗೂ ಆಗಾಗ ಚರ್ಚೆ (ವಾಗ್ವಾದ) ನಡೆಯುವುದು. ಭಾರತಿಯಾರರ ಕವಿತಾ ಚಾತುರ್ಯವನ್ನೂ, ಬುದ್ಧಿಮತ್ತೆಯನ್ನೂ ನನ್ನ ತಾತ ಮೆಚ್ಚುವರು. ನನ್ನ ತಾತ ರತ್ನಪಡಿ ವ್ಯಾಪಾರವನ್ನೂ ನಡೆಸುತ್ತಿದ್ದರು. ಶ್ರೇಷ್ಠವಾದ ಮುತ್ತು, ಕೆಂಪು (ಮಾಣಿಕ್ಯ), ಪಚ್ಚೆ (ಮರಕತ), ವಜ್ರ ಇವುಗಳನ್ನು ತೋರಿಸಿ – ಅವುಗಳ ಗುಣದೋಷಗಳನ್ನು ಎತ್ತಿ ತೋರಿಸುವರು. ಭಾರತಿಯಾರರು ಅವರ ಚಾತುರ್ಯವನ್ನು ನೋಡಿ ಪರವಶರಾಗುವರು.

ನಮ್ಮ ತಾತ ಒಂದು ದಿನ 'ನಾಲಾಯಿರ ದಿವ್ಯ ಪ್ರಬಂಧ' (ತಮಿಳ್ ವೇದ)ದಲ್ಲಿರುವ 'ತಿರುವಾಯ್ಮೊಳಿ' ಎಂಬ ಉಲ್ಲೇಖದಿಂದ ಕೆಲವು ಪದ್ಯಗಳ ಸೂಕ್ಷ್ಮ ಅರ್ಥಗಳನ್ನು ಹೇಳಿದರು. ಅದರಲ್ಲಿರುವ ಶ್ರೇಷ್ಠವಾದ ಸತ್ವವನ್ನೂ ಎತ್ತಿ ತೋರಿಸಿದರು. ಭಾರತಿಯಾರರಿಗೆ ಆ ಪದ್ಯಗಳ ಕ್ರಮ (ಶೈಲಿ) ಚೆನ್ನಾಗಿ ಮನದಟ್ಟಾಗಿ ಬಿಟ್ಟಿತು. ಅದರಲ್ಲಿರುವ ಪ್ರಾಸ, ಯತಿ, ಛಂದಸ್ಸು ಇವುಗಳಂತೆ ಹಾಡಬೇಕೆನ್ನುವರು. ಆ ಪದ್ಯಗಳಿಗೆ ಮೆಟ್ಟು (ರಾಗ) ಹಾಕಿ ಹಾಡುವರು. ಅದರಲ್ಲಿ ಮುಖ್ಯವಾಗಿ 'ಭಗವಂತನು ನಮ್ಮ ದೇಹದಲ್ಲಿ ಹೊಕ್ಕು, ಅವನೇ ನಮ್ಮನ್ನು ನಡೆಸುತ್ತಾನೆ' ಎಂಬ ತಿರುಳಿನ ಅರ್ಥ ಬರುವ 'ಇವೆಯುಂ, ಅವೆಯುಂ,

ಉವೆಯುಂ' ಎಂಬ ತಿರುವಾಯ್ಮೊಳಿಯ ತೊಂಬತ್ತನೆಯ ಪಾಶುರ (ಪದ್ಯ)ವನ್ನು ಅನುಭವಿಸಿ ಹಾಡುವರು.

ನಮ್ಮ ತಾತಾವಿಗೆ ಸಂಗೀತದಲ್ಲಿ ಅಷ್ಟು ಆಸಕ್ತಿ ಇರಲಿಲ್ಲವಾದರೂ, ಭಾರತಿಯಾರರು ಆಳ್ವಾರರುಗಳಂತೆ ಅನುಭವಿಸಿ ಹಾಡುವುದನ್ನು ಕೇಳಿ, 'ಆಳ್ವಾರರುಗಳೂ ಹೀಗೆಯೇ ಹಾಡಿರಬೇಕು. ಈಗಿನ ಉರು ಹಾಕುವ (ಗಟ್ಟು ಮಾಡುವ) ಪದ್ಧತಿ (ಸಂಪ್ರದಾಯ)ಯಿಂದ ಆ ಭಾವವೇ ಹೊರಟು ಹೋಯಿತು. ಇವರಂತೆ ಭಾವಪೂರಿತವಾಗಿ ಹಾಡಲು ಎಲ್ಲರಿಂದಲೂ ಸಾಧ್ಯವಿಲ್ಲ' ಎನ್ನುವರು.

ಭಾರತಿಯಾರರು ಮೊದಲನೆಯ ದಿನ 'ತಿರುವಾಯ್ಮೊಳಿ'ಯ ಹತ್ತು ಪಾಶುರ(ಪದ್ಯ)ಗಳನ್ನು ಚರ್ಚಿಸಿ ಅರ್ಥೈಸಿಕೊಳ್ಳುವರು. ಮರುದಿನ ಅದನ್ನು ರಾಗ ಹಾಕಿ ಹಾಡುವರು. ನನಗೆ ಇದು ದಿನಚರಿ ಪಾಠ. ನಾನು ರಾಗವನ್ನು ಕೇಳಿಕೊಂಡು ಅಲ್ಲಿಂದ ಕಾಲ್ತೆಗೆಯುತ್ತಿದ್ದೆ. ಅವರುಗಳು ವೇದಾಂತ ವಿಚಾರ ಚರ್ಚಿಸಿದರೆ ನನಗೆ ತಿಳಿಯುತ್ತಿರಲಿಲ್ಲ. ಅದನ್ನು ತಿಳಿಯುವ ಆಸೆಯೂ ಇರಲಿಲ್ಲ.

ಸುಮಾರು ಎರಡು ತಿಂಗಳ ಕಾಲ 'ತಿರುವಾಯ್ಮೊಳಿ'ಯ ಮೇಲ್ಮೆಯನ್ನು ಅಯ್ಯರ್, ಭಾರತಿಯಾರ್, ಅಯ್ಯಾ (ನನ್ನ ತಂದೆ), ಚಿಕ್ಕಪ್ಪ (ಎಸ್.ಎನ್. ತಿರಮಲಾಚಾರ್ಯರು) ಇವರುಗಳು ಪ್ರತಿದಿನ ತಪ್ಪದೆ ಕೇಳಿ ಅನುಭವಿಸಿದರು.

ಸ್ವಲ್ಪ ದಿನಗಳಾದ ನಂತರ ನನ್ನ ಋತುಸ್ನಾನದ ವೈಭವ ನಡೆಯಿತು. ಅಂದು ಸಂಜೆ ಊರವರನ್ನು ಕರೆದು ಅರಿಶಿನ, ಕುಂಕುಮ, ಹೂವು ವೀಳ್ಯಗಳನ್ನು ಕೊಟ್ಟರು. (ಶೋಭನ ಕುಣಿದರು). ಆಗ ನಮ್ಮ ಅಜ್ಜಿಯವರು 'ಹಿರಿಯತ್ತೆ ಬಂದಿದ್ದರೆ 'ತಿರುವಾಯ್ಮೊಳಿ'ಯನ್ನು ಹಾಡಿ ಕುಮ್ಮಿ ಹೊಡೆಯುತ್ತಿದ್ದಳು. ಇಲ್ಲಿ ಯಾರಿಗಾದರೂ ಅದು ತಿಳಿದಿದ್ದರೆ ಹಾಡಿ ಕುಮ್ಮಿ ಹೊಡೆಯಿರಿ' ಎಂದರು.

ಒಬ್ಬ ಹಿರಿಯ ಸುಮಂಗಲಿ (ಮುತ್ತೈದೆ) ತಿರುವಾಯ್ಮೊಳಿಯ (ಹತ್ತನೆಯ ಶ್ಲೋಕದಲ್ಲಿ) 'ಕಣ್ಣನ್ ಕಳಿಲಿಣೈ' ಎಂದು ಆರಂಭವಾಗುವ ಐದು ಪದ್ಯಗಳನ್ನು ಹಾಡಿ ಕುಮ್ಮಿ ಹೊಡದರು. ಭಾರತಿಯಾರರು ಮಹಡಿಯ ಮೇಲಿನಿಂದ ಇದನ್ನು ಗಮನಿಸುತ್ತಿದ್ದರು. ಸಂಭ್ರಮವೆಲ್ಲಾ ಮುಗಿದ ನಂತರವೂ ನಮ್ಮ ತಾತನವರೊಂದಿಗೆ ಭಾರತಿಯಾರರು ಬಹಳ ಹೊತ್ತು ಹಲವು ವಿಷಯಗಳನ್ನು ಚರ್ಚಿಸುತ್ತಿದ್ದರು.

ಮರುದಿನ ಸಂಜೆ ಭಾರತಿಯಾರರು ಬಂದು ತಾನು ರಚಿಸಿದ ಹಾಡನ್ನು (ಕವಿತೆಯನ್ನು) ತಾತನವರಿಗೆ ಹಾಡಿ ತೋರಿಸುತ್ತಿದ್ದರು. ನಾನು ಮಹಡಿಗೆ ಹೋಗಲೆಂದು ಹೊರಟೆ. ನನ್ನ ಅಜ್ಜಿ 'ಇನ್ನು ನೀನು ಗಂಡಸರ ಜೊತೆ ಒಡನಾಟ ಇಟ್ಟುಕೊಳ್ಳಬಾರದು, ಹೋಗಬೇಡ' ಎಂದು ನನ್ನನ್ನು ತಡೆದರು.

ಎರಡು ಸಲ ಹಾಡಿದರೂ ನನ್ನನ್ನು ಕಾಣಲಿಲ್ಲವಾಗಿ ಭಾರತಿಯಾರರು

ಕೆಳಗಿಳಿದು ಬಂದರು.

ನಾನು ಮನೆಯ ಹಿಂಭಾಗದ ಹಜಾರದಲ್ಲಿ ಎಲ್ಲರ ಮಧ್ಯೆ ಕುಳಿತಿದ್ದೆ. ಭಾರತಿಯಾರರು ನನ್ನನ್ನು ನೋಡಿ 'ಏನಮ್ಮಾ ಯದುಗಿರಿ, ಮೈಯಲ್ಲಿ ಸೌಖ್ಯವಿಲ್ಲವೇ?' ಎಂದು ಕೇಳಿದರು.

ನಾನು 'ಅದೆಲ್ಲಾ ಏನೂ ಇಲ್ಲ' ಎಂದು ಪೆದ್ದುಪೆದ್ದಾಗಿ ನಕ್ಕೆ.

ಭಾರತಿ:– ಏಕಮ್ಮಾ ಮಹಡಿಗೆ ಬರಲಿಲ್ಲ.

ನಾನು:– ಅಜ್ಜಿ ಬೇಡವೆಂದರು.

ಭಾರತಿ:– ಅಜ್ಜಿಯವರೇ, ನಾನು ಹೊರಗಿನವನಲ್ಲ, ಯದುಗಿರಿ ನಮ್ಮ ಮಗು. ಅವಳನ್ನು ನನ್ನಿಂದ ಬೇರ್ಪಡಿಸಬೇಡಿ. ತಂದೆ, ಮಗಳ ಮಧ್ಯೆ ಸಂಕೋಚ ಸರಿಯೇ (ಉಂಟೇ) ... ತೆಗೆದುಕೊ ಯದುಗಿರಿ.

ತಾವು ಬರೆದು ತಂದ ಬರಹವನ್ನು ನನ್ನ ಬಳಿ ಕೊಟ್ಟುಬಿಟ್ಟು ಭಾರತಿಯಾರರು ಮಹಡಿಗೆ ಹೋದರು. ಆ ಬರಹದಲ್ಲಿ 'ಮನಮೇ' ಎಂಬ ಹೆಸರಿನಲ್ಲಿ 'ಕಣ್ಣನ್‌ತಿರುವಡಿ ಎಣ್ಣುಹಮನಮೇ' (ಕೃಷ್ಣನ ಪಾದಗಳನ್ನು ನೆನೆ ಮನವೇ) ಎಂದು ಆರಂಭವಾಗುವ ಹಾಡು ಇದ್ದಿತು.

(13) 'ಶಕ್ತಿ ವಿಳಕ್ಕಂ'

ಮುರುಗೇಶ ಪಿಳ್ಳೆಯವರ ಮನೆಯವರು ಹಳೆಯ ಸಂಪ್ರದಾಯವನ್ನು ಅನುಸರಿಸುವವರು. ಅಮಾವಾಸ್ಯೆ, ಪೌರ್ಣಮಿ, ಶುಕ್ರವಾರ, ಗ್ರಹಣದ ದಿನಗಳಲ್ಲಿ ಸನ್ಯಾಸಿಗಳು, ಜೋಗಿಗಳು ಮುಂತಾದವರಿಗೆ ಭಿಕ್ಷೆ ಕಾಣಿಕೆ ಕೊಡವರು (ಪಡಿ ಅಳೆಯುವರು). ಅಂದರೆ ಅಕ್ಕಿ, ತಎಂಗಿನಕಾಯಿ, ಬೆಲ್ಲ, ಬೇಳೆ ಇವುಗಳನ್ನು ಕೊಡುವರು. ಭಾರತಿಯಾರರಿಗೆ ಈ ವಿಷಯ ಇಷ್ಟವಾಗುತ್ತಿರಲಿಲ್ಲ. ಕುರುಡು ನಂಬಿಕೆ ಎನ್ನುವರು. 'ಸ್ವಾಮಿಯಂತೆ, ಭೂತವಂತೆ ಇದೇನಿದು?' ಎನ್ನುವರು. ಬೈರಾಗಿ, ಪಂಡಾರರು, ಜೋಗಿಗಳು ಇವರೆಲ್ಲರೂ ಸೋಮಾರಿಗಳು, ಮೋಸಗಾರರು ಎಂದು ಹೇಳುವರು. ಭಿಕ್ಷೆ ಕೊಡುವುದಾದರೆ ಕುಂಟ, ಕುರುಡ, ಹೆಳವ, ಮುದುಕ ಇವರುಗಳಿಗೆ ಭಿಕ್ಷೆ ಕೊಡಿ. ಸೋಮಾರಿಗಳಿಗೂ, ಮೋಸ ವೇಷಧಾರಿಗಳಿಗೂ ಹಾಕಬೇಡಿ' ಎನ್ನುವರು.

ಮೊದಮೊದಲು ಅವರನ್ನು ವಶಪಡಿಸಿಕೊಂಡವರು ಕುಳ್ಳ ಸಾಮಿಯಾರ್ ಎಂಬುವವರು. ಮುರುಗೇಶ ಪಿಳ್ಳೆಯವರ ಮನೆಗೆ ಬಂದಾಗ, ಸ್ವಲ್ಪಸ್ವಲ್ಪವಾಗಿ

ಇವರ ಜೊತೆಯಲ್ಲಿ ಪಳಗಿದರು. ಅದರಿಂದ ಒಳ್ಳೆಯದಾಯಿತೋ ಇಲ್ಲವೋ, ಹೇಗಾದರಾಗಲಿ ಸಾಮಿಗಳ (ಸನ್ಯಾಸಿಗಳ) ಗುಂಪಿನಲ್ಲಿ ಆವಾಗಿನಿಂದ ಸೇರಿದರು ಭಾರತಿಯಾರರು. ಯಾವುದರಲ್ಲಿಯೂ ಹೊಸತನ್ನು ಹುಡುಕುವ ಭಾರತಿಯಾರರಿಗೆ ಕುಳ್ಳಸಾಮಿ ದಾರಿ ತೋರಿದರು.

ನಮ್ಮ ದೇಶದಲ್ಲಿ ದೀಪಾವಳಿ ದಿನಗಳಿಂದ ಕಾರ್ತಿಕ ದೀಪ ಆರುವವರೆಗೆ ಸಂಜೆಯ ಹೊತ್ತು ತಲೆ ಬಾಗಿಲಲ್ಲಿ ಎರಡು ಮಣ್ಣಿನ ಹಣತೆಗಳ್ನು ಹಚ್ಚಿಡುವುದು ಪದ್ಧತಿ.

ಮುರುಗೇಶ ಪಿಳ್ಳೆಯವರ ಮನೆಯಲ್ಲಿ ಮೊದಲ ದಿನ ಎರಡು ಹಣತೆಗಳನ್ನು ಹಚ್ಚಿ, ನಂತರ ಪ್ರತಿ ದಿನಕ್ಕೆ ಎರಡರಂತೆ ಹೆಚ್ಚಿಸುವುದು ಪದ್ಧತಿ. 'ತಿರುವಣ್ಣಾಮಲೈ'ಯಲ್ಲಿ ದೀಪ ನಂದುವಾಗ ನಿಲ್ಲಿಸಿ ಬಿಡುವರು.

ಶುಕ್ರವಾರ ಸಂಜೆ ನಾನು, ಮೀನಾ, ಪದ್ಮಾವತಿ, ನನ್ನ ತಂಗಿಯರು ಎಲ್ಲರೂ ಭಾರತಿಯವರ ಮನೆಗೆ ಹೋದೆವು.

ಶೆಲ್ಲಮ್ಮಾ ಗಾಣಿಗರವಳನ್ನು ಬೈಯ್ಯುತ್ತಿದ್ದರು.

ವಾಣಿ (ಗಾಣಿಗಿತ್ತಿ):– ಈ ದಿನ ಎಣ್ಣೆ ಆಡಲು (ಮಾಡಲು) ಗಾಣದಲ್ಲಿ ಜಾಗ ಸಿಕ್ಕಲಿಲ್ಲ ಅಮ್ಮಾ. ನಾಳೆ ಖಂಡಿತ ತಂದುಕೊಡುತ್ತೇನೆ.

ಶೆಲ್ಲಮ್ಮಾ:– ಇವತ್ತು ಶುಕ್ರವಾರ. ಬಾಗಿಲಲ್ಲಿ ದೀಪವಿಡಲು ಎಣ್ಣೆ ಇಲ್ಲ. ನಾಲ್ಕು ದಿನಗಳಿಂದ ಹೇಳುತ್ತಿದ್ದೇನೆ. ನೀ ಬರುತ್ತೀಯ ಎಂದುಕೊಂಡು, ಅಣ್ಣಿಯಮ್ಮನ ಮನೆಯಲ್ಲಿಯೂ ಹೇಳಿಟ್ಟಿಲ್ಲ. ದೀಪ ಹಚ್ಚುವ ಸಮಯ. ಈಗ ಯಾರೂ ಕೊಡುವುದಿಲ್ಲ.

ವಾಣಿ:– ನಾನೇನು ಮಾಡಲಿ ಅಮ್ಮಾ! ಗಾಣದ ಬಳಿಯಲ್ಲಿ ಕಾದುಕಾದು ನಿಂತು ಸಾಕಾಗಿ ಹೋಯಿತು. ಇಷ್ಟು ಹೊತ್ತು ಕಾದಿದ್ದೂ ದಂಡ. ನಾನೇನು ಮಾಡಲಿ?

ಭಾರತಿಯಾರರು ಮುಂದಿನ ಕೋಣೆಯಲ್ಲಿ ಕುಳಿತು, ಈ ಸಂಭಾಷಣೆಯನ್ನು ಆಲಿಸುತ್ತಿದ್ದರು.

ಭಾರತಿ:– ಈಗ ಏನು ಮುಳುಗಿ ಹೋಯಿತು ಶೆಲ್ಲಮ್ಮಾ! ಎರಡು ಮೋಂಬತ್ತಿಗಳನ್ನು ಹಚ್ಚಿ ಬಿಡು, ಎಣ್ಣೆ ಅರೆಯಲು ಜಾಗವಿಲ್ಲದಿರುವಾಗ ಅವಳನ್ನು ಬೈದೇನು ಪ್ರಯೋಜನ?

ಶೆಲ್ಲಮ್ಮಾ:– ಎಲ್ಲರೂ ಎಣ್ಣೆ ಹಾಕಿ ಹಣತೆ ಹಚ್ಚಿದರೆ ನಾವು ಮೋಂಬತ್ತಿ ಹಚ್ಚುವುದು! ಎಲ್ಲದರಲ್ಲಿಯೂ ಒಂದು ವಿಚಿತ್ರ, ಮೋಂಬತ್ತಿ ಮೀನಿನ ಕೊಬ್ಬು – ಮೈಲಿಗೆ (ಅಸಹ್ಯ) ಅದನ್ನು ಹಚ್ಚಿದರೆ ಲಕ್ಷ್ಮಿ ಬರುತ್ತಾಳೆಯೇ? ... ಏ

ಹೆಣ್ಣೇ, ಅಂಗಡಿಗೆ ಹೋಗಿ ಹಿಪ್ಪೆ ಎಣ್ಣೆ ಅಥವಾ ಹೊಂಗೆ ಎಣ್ಣೆಯನ್ನು ತೆಗೆದುಕೊಂಡು ಬಾ.

ಭಾರತಿ:– ಈಗ ದೀಪ ಯಾತಕ್ಕೆ? ನಮ್ಮ ಮನೆ ಮುಂದೆ ವಿದ್ಯುತ್ ಕಂಬ ಇದೆ. ಆ ಬೆಳಕಿಗೇ ಲಕ್ಷ್ಮಿ ಬರುತ್ತಾಳೆ. ಅವಳನ್ನು ಹೊರಗೆ ಕಳುಹಿಸಬೇಡ. ಮಳೆ ಬಂದರೂ ಬರಬಹುದು.

ಶೆಲ್ಲಮ್ಮಾ:– ಈ ಚಿಂತೆ ನಿಮಗ್ಯಾಕೆ? ನನ್ನ ಹಣೆಬರಹ (ತಲೆವಿಧಿ). ಇಲ್ಲೇ ಹತ್ತಿರದ ಅಂಗಡಿಗೆ ಹೋದರೆ ಅವಳೇನೂ ನೆನೆಯುವುದಿಲ್ಲ.

ಭಾರತಿ:– ಈ ಕಂದೀಲನ್ನು ಹೊರಗಡೆ ಇಡು, ಅದೇ ಸಾಕು.'

ಶೆಲ್ಲಮ್ಮಾ:– ಸೀಮೆ ಎಣ್ಣೆ ಮಡಿಯಿಲ್ಲ. ನಮ್ಮ ಒಳ್ಳೆಣ್ಣೆ ಮಾತ್ರ ಮಡಿ. ಅದುವೇ ಕ್ರಮ. ಹೊಗೆ ಹಿಡಿಯುವುದಿಲ್ಲ. ಕಣ್ಣಿಗೆ ಒಳ್ಳೆಯದು. ನೋಡಲು ಅಂದವಾಗಿ ಉರಿಯುತ್ತದೆ. ನೀವು ನನ್ನ ಜೊತೆ ಜಗಳಕ್ಕೆ ನಿಂತರೆ ನಾನು ದೀಪವನ್ನೇ ಹಚ್ಚುವುದಿಲ್ಲ. ಹೋಗು ಹೆಣ್ಣೇ ಮನೆಗೆ. ನೀನು ಮಳೆಯಲ್ಲಿ ನೆನೆದರೆ ಇವರಿಗೆ ಛಳಿಯಾಗುತ್ತದಂತೆ, ಹೋಗು ಮನೆಗೆ!

ಭಾರತಿ:– ಮಕ್ಕಳೇ, ನೋಡಿ ಹೇಗಿದೆ? ನಾನು ಇದ್ದುದನ್ನು ಇದ್ದ ಹಾಗೆ ಹೇಳಿದರೆ ಶೆಲ್ಲಮ್ಮಾವಿಗೆ ಕೋಪ ಬರುತ್ತದೆ. ಮೋಂಬತ್ತಿ, ಸೀಮೆ ಎಣ್ಣೆ ಮಡಿಯಿಲ್ಲವಂತೆ. ಇದಕ್ಕೇನು ಮಾಡುವುದು?

ನಾನು:– ಹಳೆಯ ಪದ್ಧತಿಗಳು ಒಳ್ಳೆಯವು ಎಂದು ಹೆಂಗಸರಿಗೆ ನಂಬಿಕೆ. ನೀವು ಹೊಸದಾಗಿ ಮೋಂಬತ್ತಿ, ಲಾಂದ್ರ ಎಂದರೆ ಶೆಲ್ಲಮ್ಮಾವಿಗೆ ಕೋಪ ಬರುವುದಿಲ್ಲವೇ?

ಶೆಲ್ಲಮ್ಮಾ: ಯದುಗಿರಿ, ನೀನೇ ಹೇಳು. ನಾಲ್ಕು ಜನರ ಮಧ್ಯೆ ಇರುವಾಗ ನಾವೂ ಅವರಂತೆ ನಡೆದುಕೊಳ್ಳಬೇಡವೇ? ಅಣ್ಣಿಯಮ್ಮಾ ಮನೆಯಲ್ಲಿಯೇ ಇಪ್ಪತ್ತು ದೀಪಗಳನ್ನು ಹಚ್ಚಿಡುತ್ತಾರೆ. ನಾವು ಎರಡಾದರೂ ಹಚ್ಚಬೇಡವೇ?

ಭಾರತಿ:– ಹೊತ್ತು ಕಳೆಯಲು ಒಂದು ಚರ್ಚೆ (ವಾಗ್ವಾದ) ಬಂದಿತು. ಹೋಗಲಿ! ಏತಕ್ಕಾಗಿ ದೀಪ ಹಚ್ಚಿಡುವುದೆಂದು ನಿಮಗೆಲ್ಲರಿಗೂ ತಿಳಿದುದನ್ನು ಹೇಳಿ.

ಶೆಲ್ಲಮ್ಮಾ:– ಪರಾಶಕ್ತಿ, ಪಾರ್ವತಿ, ಲಕ್ಷ್ಮಿ, ಗಂಗೆ ಎಲ್ಲರೂ ಈ ತಿಂಗಳುಗಳಲ್ಲಿ ಊರು ಸುತ್ತಲು ಬರುತ್ತಾರೆ. ಸಂಜೆ ಸಮಯದಲ್ಲಿ ಯಾರ ಮನೆಯು ಕೊಳಕಿಲ್ಲದೆ, ಕಸವಿಲ್ಲದೆ ಶುದ್ಧವಾಗಿಯೂ, ಮಡಿಯಾಗಿಯೂ ಇರುತ್ತದೆಯೋ ಅಲ್ಲಿ ಅವರು ನೆಲೆಸುತ್ತಾರಂತೆ.

ಮೀನಾ:– 'ತಿರುವಣ್ಣಾಮಲೈ'ಯಲ್ಲಿ ಕಾರ್ತಿಕ ದೀಪ ನಂದುವವರೆಗೆ ಎಲ್ಲರ

ಮನೆ ಬಾಗಿಲಲ್ಲಿಯೂ ದೀಪ ಉರಿಯಬೇಕಂತೆ. ನಮ್ಮ ಬಡತನದಿಂದ – ವರ್ಷಪೂರ್ತಿ ದೀಪ ಹಚ್ಚಿಡಲು ಸಾಧ್ಯವಿಲ್ಲವೆಂದರೂ ದೀಪಾವಳಿಯಿಂದ ಕಾರ್ತಿಕದವರೆಗೆ ಮಡಿಯಾಗಿ ದೀಪ ಹಚ್ಚಿಟ್ಟರೆ, ಪಾರ್ವತಿ, ಲಕ್ಷ್ಮಿ, ಗಂಗೆ ಮೂವರೂ ನಮ್ಮ ಮನೆಯಲ್ಲಿ ನೆಲೆಸುತ್ತಾರೆ ಎಂದು ನಮ್ಮ ಅಜ್ಜಿ ಹೇಳುವರು.

ಭಾರತಿ:– ಇದಕ್ಕೆ ಕಾರಣವೇ ಬೇರೆ. ನಾವುಗಳು ಪದ್ಧತಿ, ಶಾಸ್ತ್ರ ಎಂದು ಹೇಳಿಕೊಂಡು ಮುಖ್ಯವಾದ ಕಾರಣವನ್ನೇ ಮರೆಯುತ್ತೇವೆ. ಮೊದಲೆಲ್ಲಾ ಸಾಲಾಗಿ ಬೀದಿ ದೀಪಗಳಿರುತ್ತಿರಲಿಲ್ಲ. ಈ ಛಳಿ, ಮಳೆಯಲ್ಲಿ ಕತ್ತಲು ಜಾಸ್ತಿ (ಮುನ್ನಿರುಳು) ಎಲ್ಲರ ಮನೆಯಲ್ಲಿಯೂ ದೀಪ ಹಚ್ಚಿಟ್ಟರೆ ಊರಿಗೆ ಊರೇ ಬೆಳಕಾಗುತ್ತದೆ. ಮೋಡ, ಕತ್ತಲೆ ಎರಡೂ ಸೇರಿರುವ ಕಗ್ಗತ್ತಲೆ (ಮುನ್ನಿರುಳು)ಯನ್ನು ಹೋಗಲಾಡಿಸುತ್ತದೆ. ಅದಕ್ಕಾಗಿ ಹಿಂದಿನವರು ಈ ಉಪಾಯ ಮಾಡಿದರು. ... ಈಗ ಒಂದೊಂದು ಅಡಿಗೂ ಒಂದು ವಿದ್ಯುತ್ದೀಪವಿರುವಾಗ ಈ ಮಿಣಮಿಣ ದೀಪ ಏತಕ್ಕೆ? ಹೇಳಿ ನೋಡೋಣ. ನಮ್ಮ ತಾತ ಕತ್ತಲೆಯಲ್ಲಿ ಬೆಳೆದರು, ನಾವೂ ಕತ್ತಲೆಯಲ್ಲಿಯೇ ಇರುತ್ತೇವೆ ಎಂಬುದು ಸರಿಯೇ? ಲಕ್ಷ್ಮಿಗೆ ಎಣ್ಣೆದೀಪ, ಕೊಳಕು, ಮಡಿ, ಮನಸ್ಸಿಲ್ಲದ ವಂಚನೆಯ ಭಕ್ತಿ (ಕಳ್ಳ ಯೋಚನೆಯ ಸುಳ್ಳು ಭಕ್ತಿ) ಸುಮ್ಮಸುಮ್ಮನೆ ತೋರಿಕೆಯ ವೇಷ, ಇವುಗಳೆಲ್ಲಾ ಬೇಡ. ಮೊದಲು ನಿನ್ನ ಪ್ರೀತಿ, ನಿಜವಾದ ಭಕ್ತಿ, ಧೃಡಚಿತ್ತದೊಂದಿಗೆ ಹಾಡಿದರೆ ಸಾಕು. ಅವಳು ಈ ಆಡಂಬರಗಳಿಂದ ಮನ ಕರಗುವುದಿಲ್ಲ. ಈ ದಿನ ಮಕ್ಕಳೆಲ್ಲಾ ಸೇರಿದ್ದಾರೆ. ಅವರುಗಳೆಲ್ಲರೂ ಲಕ್ಷ್ಮಿಯ ಹಾಡನ್ನು ಹಾಡಲಿ. ನಾನೂ ಸೇರಿಕೊಳ್ಳುತ್ತೇನೆ. ಶೆಲ್ಲಮ್ಮಾ, ಎರಡು ಮೋಂಬತ್ತಿಯನ್ನು ಹಚ್ಚಿಡು, ಖಂಡಿತ ಇಂದು ಲಕ್ಷ್ಮಿ ಬರುತ್ತಾಳೆ. ಲಕ್ಷ್ಮೀ ಪಟವನ್ನು ಒಂದು ಸ್ಟೂಲಿನ ಮೇಲೆ ಇಡು. ನೀನೂ ಬಾ, ಹಾಡೋಣ.

ಶೆಲ್ಲಮ್ಮಾ ಅರೆ ಮನಸ್ಸಿನಿಂದ ಅವರು ಹೇಳಿದಂತೆ ಮಾಡಿದರು. ನಾವೆಲ್ಲರೂ ನಮಗೆ ಗೊತ್ತಿದ್ದ ಹಾಡುಗಳನ್ನು ಹಾಡಿದೆವು. ಭಾರತಿಯಾರರು 'ವಂದೇ ಮಾತರಂ' ಅನ್ನು ಹಾಡಿದರು. ನಂತರ 'ನಾನು ಒಂದು ಹೊಸ ಹಾಡನ್ನು, ಒಂದೊಂದು ಸಾಲಾಗಿ ಹಾಡುತ್ತೇನೆ. ನೀವೆಲ್ಲರೂ ಸೇರಿ ಅದನ್ನು ಹಾಡಿ. ಅದಕ್ಕಿಂತ ಮೇಲಾದ ಭಜನೆ ಇಲ್ಲ' ಎಂದರು.

ಅವರು ಹೇಳಿದಂತೆ ನಾವೆಲ್ಲರೂ ಹಾಡಿದೆವು. 'ಶಕ್ತಿವಿಳಕ್ಕುಂ' ಎಂಬ ಹೆಸರಿನಲ್ಲಿ 'ಆದಿ ಪರಂಪೊರುಳ್ ಊಕ್ಕುಂ' ಎಂದು ಆರಂಭವಾಗುವ ಹಾಡು ಅದು.

ಒಂಭತ್ತು ಧ್ವನಿಗಳು ಒಂದೇ ತರಹ ಹಾಡಲು ಅಲ್ಲಿ ಆ ಬೀದಿಯವರೆಲ್ಲಾ ಸೇರಿಬಿಟ್ಟರು. ಅಣ್ಣಿಯಮ್ಮ – 'ನಾವೆಲ್ಲರೂ ಕುಮ್ಮಿ ಹೊಡೆಯುತ್ತೇವೆ' ಎಂದು

ಭಾರತಿಯಾರರ ಮನೆಗೆ ಬಂದರು. ಶೆಲ್ಲಮ್ಮಾ ಚಾಪೆ ಹಾಸಿ ಎಲ್ಲರನ್ನೂ ಕುಳ್ಳಿರಿಸಿದರು. ಸುಮಾರು ಎರಡು ಗಂಟೆ ಕಾಲ ಈ ರೀತಿ ಭಾರತಿಯಾರರ ಹಾಡುಗಳನ್ನು ಹಾಡಿ ಭಜನೆ ಮಾಡಿದೆವು.

ಭಾರತಿ:– ಈ ದಿನ ನಿಜವಾಗಿಯೂ, ನಮ್ಮ ಮನೆಗೆ ಲಕ್ಷ್ಮೀ ಬಂದಿದ್ದಾಳೆ. ಎಲ್ಲರಿಗೂ ಅರಿಶಿನ, ಕುಂಕುಮ ಕೊಡು ಶೆಲ್ಲಮ್ಮಾ.

ಶೆಲ್ಲಮ್ಮಾ:– ಈ ದಿನ ಮಳೆ ಬರಬಹುದು ಎಂದು ಹೇಳಿದಿರಿ. ನಿಮ್ಮ ಭಜನೆಗೆ ಹೆದರಿ, ಬರುವ ಮಳೆಯೂ ನಿಂತು ಹೋಯಿತು.

ಭಾರತಿ:– ರಾತ್ರಿ ಖಂಡಿತ ಮಳೆ ಬರುತ್ತದೆ. ಶೆಲ್ಲಮ್ಮಾ, ಮಕ್ಕಳನ್ನು ಬೇಗ ಮನೆಗೆ ಕಳುಹಿಸಿಬಿಡು !

ನಾವುಗಳು ಅರಿಶಿನ, ಕುಂಕುಮ ಹಚ್ಚಿಕೊಂಡು ಮನೆ ಸೇರಿದೆವು. ನಾವು ಮನೆ ಸೇರಿದ ತಕ್ಷಣವೇ ಜೋರಾಗಿ ಮಳೆ ಬಂದಿತು. ಭಾರತಿಯಾರರು ಹೇಳಿದಂತೆ ಆ ದಿನ ಅವರ ಮನೆಗೆ ಲಕ್ಷ್ಮಿ ಬಂದಳು. ಆದರೆ ಸ್ಥಿರವಾಗಿ ನಿಲ್ಲಲಿಲ್ಲ. ಆಗಾಗ ಬಂದು ಹೋಗುತ್ತಿದ್ದಳು. (ಅಂದರೆ ಇಲ್ಲಿ ಹಣಕಾಸಿನ ವಿಷಯ)

(14) ಭಾರತ ಸಮುದಾಯಂ ವಾಳ್ಗವೇ'

ಭಾರತ ಸಮುದಾಯ ಬಾಳಲಿ

"ಪೊಂಗಲ್" ಹಬ್ಬಕ್ಕೆ (ಸಂಕ್ರಾತಿ) ಸ್ವಲ್ಪ ಮೊದಲು ಪೊನ್ನು ಮುರುಗೇಶ ಪಿಳ್ಳೆಯವರ ಮನೆಯಲ್ಲಿ ಧಾನ್ಯಗಳನ್ನು ರಾಶಿರಾಶಿಯಾಗಿ ಸುರಿದಿದ್ದರು. ಅಯ್ಯರ್ ಮತ್ತು ಭಾರತಿಯಾರರು ತಮ್ಮಗಳಿಗೆ ವರ್ಷಕ್ಕಾಗುವಷ್ಟು ಧಾನ್ಯಗಳನ್ನು ಕೊಳ್ಳುವರು. ದೇಶಭಕ್ತರು ಎಂಬ ಭಾವನೆಯಿಂದ, ಬೇರೆಯವರಿಗೆ ಮಾರುವುದಕ್ಕಿಂತ ಕಡಿಮೆ ದರದಲ್ಲಿ ಇವರಿಗೆ ಕೊಡುವರು.

ನಾನು ಭಾರತಿಯಾರರ ಮನೆಗೆ ಹೋಗುತ್ತಿದ್ದೆ. ಭಾರತಿಯಾರರೂ, ಅಯ್ಯರ್ ಅವರೂ ಎದುರುಗಡೆ ಬಂದರು. ನನ್ನನ್ನೂ ಕರೆದುಕೊಂಡು ಮುರುಗೇಶ ಪಿಳ್ಳೆಯವರ ಮನೆಗೆ ಹೋದರು. ಪಿಳ್ಳೆಯವರು ಚಾಪೆಹಾಸಿ, ವೀಳ್ಯದ ತಟ್ಟೆಯನ್ನು ತಂದಿಟ್ಟರು. ಮೊದಮೊದಲು ಏನೇನೋ ಮಾತುಗಳಾದ ನಂತರ ಅಯ್ಯರ್ ಅವರು ಧಾನ್ಯಗಳ ಬೆಲೆವನ್ನು ವಿಚಾರಿಸಿದರು. ಮುರುಗೇಶ ಪಿಳ್ಳೆಯವರು 'ಮಾರುಕಟ್ಟೆಯಲ್ಲಿ ಏನು ಬೆಳೆ ಇದೆ ಎಂದು ಇನ್ನೂ ವಿಚಾರಿಸಿಲ್ಲ. ಅದು ಎಷ್ಟಾದರೂ ಹೆಚ್ಚು, ಕಡಿಮೆ ನಿಮಗೆ ಒಂದೇ ಬೆಲೆ. ಅದು ಗೊತ್ತಿರುವ

ವಿಷಯವೇ! ಸಂಕ್ರಾತಿ ಪೂಜೆ ಮುಗಿದ ಮೇಲೆ ವಾಡಿಕೆದಾರರಿಗೆ ಕೊಟ್ಟುಬಿಟ್ಟು ನಿಮಗೆ ಹೇಳಿ ಕಳುಹಿಸುತ್ತೇನೆ ಎಂದರು.

ಅಲ್ಲಿಂದ ನಾವು ಭಾರತಿಯಾರರ ಮನೆಗೆ ಬಂದೆವು. ನಾನು 'ವಾಡಿಕೆದಾರರು ಎಂದರೆ ಏನು ಅರ್ಥ' ಎಂದು ಕೇಳಿದೆ, ಭಾರತಿಯಾರರು ಹಳ್ಳಿಗಳ ರೀತಿ ರೀತಿರಿವಾಜನ್ನು ನನಗೆ ಅರ್ಥವಾಗುವಂತೆ ವಿವರಿಸಿದರು.

ಭಾರತಿ:– ನಮ್ಮ ದೇಶ ಪಯಿರು (ಬೆಳೆ) ಬೆಳೆಯುವ ದೇಶ, ಇದರ ಮುಖ್ಯ ಉದ್ದೇಶ... ಯಾರೊಬ್ಬರೂ ಹಸಿದಿರಬಾರದು ಎಂದು. ಹಣ ಕೈಯ್ಯಲ್ಲಿದ್ದರೆ ಹಲವು ವಿಧವಾಗಿ ಕಳೆದು (ಖರ್ಚಾಗಿ) ಹೋಗುತ್ತದೆ. ಉಪ್ಪು ಒಂದನ್ನು ಬಿಟ್ಟು ಎಲ್ಲಾ ಪಯಿರುಗಳು ಬೆಳೆದು ಬಂದುದನ್ನು ತಮತಮಗೆ ಬೇಕಾದಷ್ಟನ್ನು ಶೇಖರಿಸಿಕೊಂಡು ಕಾಲ ನೂಕುವರು. ದೊಡ್ಡ ದೊಡ್ಡ ಜಮೀನ್ದಾರರುಗಳು ತಮಗೆ ಬಂದ ಬೆಳೆಯಲ್ಲಿ ಮನೆ ಕೆಲಸಗಾರರು, ಕೃಷಿಕರು (ರೈತರು), ಅಗಸ, ತೋಟಿ, ತಳವಾರ ಕ್ಷೌರಿಕ, ಪೂಜೆ ಮಾಡುವ ಬ್ರಾಹ್ಮಣ (ಅರ್ಚಕ) ಇವರುಗಳಿಗೆಲ್ಲಾ ಇಷ್ಟು ಕೊಳಗ ಬತ್ತ ಎಂದು ನಿಯಮವಿಟ್ಟು ಕೊಂಡಿರುತ್ತಾರೆ. (ಶಾಲೆಯ ಉಪಾಧ್ಯಾಯ, ಗುಡಿಯ ಪೂಜಾರಿ) ವರ್ಷಪೂರ್ತಿ ದುಡಿಯುವವರಿಗೆ, ಬೆಳೆದು ಬಂದ ಧಾನ್ಯದಲ್ಲಿ ಸ್ವಲ್ಪಭಾಗ ಅಳೆದುಕೊಡುವುದು ಅವರಿಗೆ ಕಷ್ಟವಲ್ಲ; ತೆಗೆದುಕೊಳ್ಳುವವರಿಗೂ ವರ್ಷಾಂತರದ ಹೊಟ್ಟೆ ಪಾಡು ಸುಲಭವಾಗಿ ಕಳೆಯುತ್ತದೆ. ಪುರೋಹಿತ, ಅಗಸ, ತೋಟಿ, ಕ್ಷೌರಿಕ ಇವರೆಲ್ಲಾ ಇಲ್ಲದ ಮನೆಯೇ ಇಲ್ಲ. ಸಾಧಾರಣವಾಗಿ ಒಬ್ಬೊಬ್ಬ ಜಮೀನ್ದಾರರೂ ಐದು ಕೊಳಗ ಬಿತ್ತ ಕೊಟ್ಟರೂ ಈ ಜನರಿಗೆ ಸಾಕಾಗುವಷ್ಟು ಧಾನ್ಯ ಸೇರಿ ಬಿಡುತ್ತದೆ. ಎಳ್ಳು ತೊಗರಿ ಮೊದಲಾದ ಧಾನ್ಯಗಳನ್ನು ದಾನ ಮಾಡಿದರೆ ನಮ್ಮ ಕಷ್ಟ ನೀಗುತ್ತದೆ ಎಂದು ಶಾಸ್ತ್ರ ಹೇಳುತ್ತದೆ. ಎಳ್ಳು ಬಡವರಿಗೆ ಅತ್ಯವಶ್ಯಕವಾದ ಧಾನ್ಯ, ಆಹಾರ, ಸ್ನಾನಕ್ಕೆ ಮುಖ್ಯವಾದುದು.

ಹೊಸ ವರುಷ ಹುಟ್ಟಿ, ಎಲ್ಲರಿಗೂ ಒಳ್ಳೆಯದಾಗಲಿ ಎಂಬ ತತ್ವದಲ್ಲಿ, ಈ ಜಮೀನ್ದಾರರುಗಳು ತಮಗೆ ಬೇಕಾದಷ್ಟನ್ನು ಇಟ್ಟುಕೊಂಡು ಹೆಚ್ಚಿನದನ್ನು (ಹೆಚ್ಚಾಗಿ ಬೆಳೆದು ಬಂದದನ್ನು) ವರ್ಷ ಪೂರ್ತಿ ನಮಗಾಗಿ ದುಡಿಯುವ ಅವರಿಗೆ ಕೊಡುವುದು ಪದ್ಧತಿ, ಇಂತಹವರನ್ನು ವಾಡಿಕೆದಾರರು ಎನ್ನುತ್ತಾರೆ. ಮುರುಗೇಶ ಪಿಳ್ಳೆಯವರು ಇದನ್ನೇ ಹೇಳಿದರು. ಹಲವು ತಲೆಮಾರುಗಳಿಂದ ಇಲ್ಲೇ ವಾಸವಾಗಿರುವ (ನೆಲೆಸಿರುವ) ಅವರು ಆ ಹಳೆಯ ಪದ್ಧತಿಯನ್ನು ಅನುಚಾನವಾಗಿ ನಡೆಸುತ್ತಿದ್ದಾರೆ.

ನಾನು: 'ಹಣಕೊಟ್ಟರೆ ಅದು ದಾನವಾಗುವುದಿಲ್ಲವೇ'.

ಭಾರತಿ 'ಅದೂ ಆಗಬಹುದು. ಪೊಂಗಲ್ ಹಬ್ಬ ಬಂದರೆ ನಮ್ಮ ಕೈಯಲ್ಲಿ 10–15 ರೂಪಾಯಿಗಳಾದರೂ ಇರಬೇಕು. ಶಂಖ ಊದುವವನಿಂದ ಹಿಡಿದು, ಕೆಲಸದಾಳುಗಳು ತನಕ ಎಲ್ಲರೂ ಹೊಸಬಟ್ಟೆ ಬೇಕು ಎಂದು ಕೇಳುತ್ತಾರೆ. ಕ್ಷೌರಿಕ (ಅಮಟ) ಅಗಸ, ತೋಟಿ, ತಳವಾರ ಎಲ್ಲರಿಗೂ ಕೊಡಬೇಕು. ಹಣದ ಕಷ್ಟ ಇಲ್ಲದಿದ್ದರೆ (ಹಣಧಾರಾಳವಾಗಿ ಇದ್ದರೆ) ಆ ದಾನವೇ ಸುಖ, ಕೈಯಲ್ಲಿ ಹಣವಿಲ್ಲದಿದ್ದರೆ ಅವರುಗಳಿಗೆ ಜವಾಬು ಹೇಳಿ ಕಳುಹಿಸುವುದೇ ಕಷ್ಟ, ಆದರೆ ಹಣ ಅವರಿಗೆ ಅಷ್ಟು ಉಪಯೋಗವಾಗುವುದಿಲ್ಲ. ಅವರಿಗೆ ಎಲ್ಲಾ ಸೇರಿ ಹತ್ತು ರೂಪಾಯಿ ಬಂದರೂ ಅವರು ಅದಕ್ಕೆ ಬತ್ತಕೊಂಡು ತುಂಬಿಕೊಳ್ಳುವುದಿಲ್ಲ. ಮನಸ್ಸಿಗೆ ತೋಚಿದಂತೆ ಖರ್ಚು ಮಾಡಿಬಿಡುತ್ತಾರೆ. ಮನೆಯಲ್ಲಿ 'ಅದಿಲ್ಲ, ಇದಿಲ್ಲ' ಎಂಬ ಕೊರತೆಗೆ ಕೊನೆಯೇ ಇಲ್ಲ. ಆ ಸಮಯದಲ್ಲಿ ನಮ್ಮ ದಾನ ಸಹಾಯವಾಗುವುದಿಲ್ಲ. ಆದರೆ ಧಾನ್ಯಗಳಿದ್ದರೆ ಅದನ್ನು ಆ ತಕ್ಷಣ ವ್ಯಯಿಸಲಾಗುವುದಿಲ್ಲ. ಖಂಡಿತ ಮನೆಗೆ ತೆಗೆದುಕೊಂಡು ಹೋಗಿ ತುಂಬಿಟ್ಟು ಕೊಳ್ಳುತ್ತಾನೆ. ಅದು ಒಳ್ಳೆಯ ಕ್ರಮ ನಮ್ಮ ಹಾಗೆ ಭೂಮಿ, ಕಾಣಿ ಇಲ್ಲದವರಿಗೋಸ್ಕರ ನಮ್ಮ ಹಿಂದಿನವರು ಗ್ರಾಮಗಳಲ್ಲಿ ಈ ತರಹ ಒಂದು ಒಳ್ಳೆಯ ಏರ್ಪಾಡನ್ನು ಮಾಡಿರುತ್ತಾರೆ. ಒಬ್ಬ ಉತ್ತರೆ ಮಾತ್ರ ಮತ್ತೊಬ್ಬನ ಹೊಟ್ಟೆ ತುಂಬುತ್ತದೆ, ಮನೆಯಲ್ಲಿ ಧಾನ್ಯಗಳನ್ನು ತುಂಬಬಹುದು ಎಂದಿರುವುದರಿಂದ, ಉಳುವವನಿಗೆ ಬೇಕಾದ ಸಹಾಯವನ್ನು ಬೇರೆಯವರು ಮಾಡಿಕೊಡುತ್ತಾರೆ.

ನಾನು:– ನಮ್ಮ ಊರುಗಳಲ್ಲಿ 'ಪೊಂಗಲ್'ಗೆ ಮರುದಿನ ನಾಲ್ಕು ವಿಧದ ಅನ್ನ ಮಾಡಿ ಕೊಳದ (ಪುಷ್ಕರಣಿ) ಮೆಟ್ಟಿಲಿನಲ್ಲಿ ಇಡುವರು. ಅದು ಏತಕ್ಕಾಗಿ?

ಭಾರತಿ:– ಅದೋ ನೋಡು, ದಾಡಿಯೊಂದಿಗಿರುವ ಅಯ್ಯರನ್ನು ಕೇಳು. ಅವರು ಯಾವುದಾದರೂ ಶಾಸ್ತ್ರ ತಿಳಿದು ವಿಷಯ ಸಂಗ್ರಹಿಸಿರುತ್ತಾರೆ. ನನಗೆ ರೀತಿರಿವಾಜು, ಶಾಸ್ತ್ರ, ಪುರಾಣ ಯಾವುದೂ ಹಿಡಿಸುವುದಿಲ್ಲ. ನೀನು ವಾಡಿಕೆದಾರರು ಎಂದರೆ ಏನು ಎಂದು ಕೇಳಿದೆ; ನನಗೆ ಗೊತ್ತಿದ್ದನ್ನು ಹೇಳಿದೆ. ಎರಡನೆಯ ಪ್ರಶ್ನೆಗೆ ಅಯ್ಯರ್ ಅವರು ಉತ್ತರ ಹೇಳುತ್ತಾರೆ.

ಅಯ್ಯರ್:– 'ನಾನು ಹೇಳುತ್ತೇನೆ ಯದುಗಿರಿ, ಹೊಲಗಳಲ್ಲಿ ಕ್ರಿಮಿಕೀಟಗಳು ಬರದಂತೆ, ಪಕ್ಷಿಗಳೂ, ಮೀನುಗಳು ನಮಗೆ ಬಹಳ ಸಹಾಯಮಾಡುತ್ತವೆ. ಹೊಸಬೆಳೆಗಳು ಬಂದನಂತರ, ಅವುಗಳನ್ನು ಸಂತೋಷ ಪಡಿಸಲು, ಮೊದಲು ದೇವಸ್ಥಾನದಲ್ಲಿ ಸಂತೋಷಪಡಿಸಲು, ಮೊದಲು ದೇವಸ್ಥಾನದಲ್ಲಿ ತಯಾರಿಸಿ, ದೇಗುಲದ ದೇವಿಯೇ ನೇರಾಗಿ ಬಂದು ಪಕ್ಷಿಗಳಿಗೂ, ಮೀನುಗಳಿಗೂ ಎಡೆ (ಊಟ) ಇಡುವ ಭಾವನೆ, ಅದಲ್ಲದೆ ಹೆಣ್ಣು ಮಕ್ಕಳಿಗೆ ಅರಿಶಿನ, ಕುಂಕುಮಕ್ಕೆಂದು

'ಸ್ತ್ರೀಧನ' ಕೊಟ್ಟಿದ್ದರೆ, ಅವರುಗಳನ್ನು ಹಬ್ಬಕ್ಕೆ ಕರೆದು (ಕನೂಹಬ್ಬಕ್ಕೆ) ಅವರ ಕೈಯಿಂದಲೇ ಎಲ್ಲಾ ಜಂತುಗಳಿಗೂ – ಅಂದರೆ ಹಸು, ಹಕ್ಕಿ, ಮೀನು, ಕಪ್ಪೆ ಮುಂತಾದವಕ್ಕೆ ಎಡೆ ಇಡಿಸಿ, ಆ ಹೆಣ್ಣು ಮಕ್ಕಳಿಗೆ ತಮ್ಮಕೈಯ್ಯಲ್ಯಾದಷ್ಟು ಧನ, ಧಾನ್ಯ, ಬಟ್ಟೆ ಬರೆಗಳನ್ನು ಉಡುಗೊರೆ ಕೊಟ್ಟು, ಅತ್ತೆಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬರುವುದು. ನಮ್ಮ ದಕ್ಷಿಣದ ಕಡೆ ಬಹಳ ಕಾಲದಿಂದ ನಡೆದು ಬಂದ ಪದ್ಧತಿ, 'ಪೊಂಗಲ್' ಹಬ್ಬವೆಂದರೆ ನಮ್ಮ ರಾಜ್ಯದಲ್ಲಿ ಹೊಟ್ಟೆ ತುಂಬುವ ಹಬ್ಬ ಎಂದು ಹೆಸರು. ಆದರೆ ಈ ದಿನಗಳಲ್ಲಿ ಅದಕ್ಕೆ... ತಿಂಗಳು ತಿಂಗಳೂ ಹತ್ತು ರೂಪಾಯಿ ಬರುವವನಿಗೆ ಈ ಹಬ್ಬದ ಸುಖವೇನು ಗೊತ್ತು? ಅವನಿಗೆ ಎಲ್ಲಾ ದಿನಗಳೂ ಒಂದೇ. ಅವನು ತನ್ನ ಬಡತನದ ಸೂಕ್ಷ್ಮತೆಯನ್ನು ಅರಿತಿದ್ದರೆ. ಸ್ವಲ್ಪ ಹಣಸೇರ್ಸಿಸಿ ಧಾನ್ಯಗಳನ್ನು ಶೇಖರಿಸಿ ಇಡಬಹುದು. ಇಲ್ಲದಿದ್ದರೆ ಗೊತ್ತೇ ಇದೆ! ಅವನಾಯಿತು ಅವನ ಸಂಬಳ ದಿನಸಿ ಅಂಗಡಿಗಾಯಿತು.

ಭಾರತಿ:– 'ಏನು ಅಯ್ಯರೇ? ಅವನು ಸಾಮಾನುಗಳನ್ನು ಎಲ್ಲಿ ತುಂಬುವುದು ಇಲಿ, ಹೆಗ್ಗಣಗಳು ತಿನ್ನದಂತೆ ಹೇಗೆ ಕಾಪಾಡುವುದು.

ಅಯ್ಯರ್:– ನೀವು ಹೇಳುವುದೂ ಸರಿಯೇ ನಿಜವೇ ಆದರೆ ಒಬ್ಬ ಮನುಷ್ಯ ಕಷ್ಟಪಟ್ಟು ಕೆಲಸ ಮಾಡದೆ ಹೊಟ್ಟೆ ತುಂಬ ಉಣ್ಣಲು ಸಾಧ್ಯವಿಲ್ಲ. ಅದುವೂ ನಿಮ್ಮಂತಹ ಧಾರಾಳಿಗಳ ಪಾಡು ಬಹಳ ಕಷ್ಟ ಚಿಕ್ಕ ಜಾಗದಲ್ಲಿಯೂ ಕಣಜಕಟ್ಟಿ, ಮುಚ್ಚಿಟ್ಟು ಕಾಪಾಡಿ ತಿನ್ನುವವನಿಗೆ, ಅದನ್ನು ಕಡೆಹಿಡಿಯದವರ ಕಷ್ಟ ಚೆನ್ನಾಗಿಗೊತ್ತು. ಅವನಿಗೆ ಅನುಕೂಲ ಸ್ಥಿತಿ ಬಂದಾಗಲೂ ಚೆಲ್ಲಾಡದೆ ಕಾಪಾಡುತ್ತಾನೆ. ಇಲ್ಲಿ ಬಂದದನ್ನು ಅಲ್ಲಿ ಕೊಡುವವನಿಗೆ ಸಾಮಾನುಗಳ ಅಕ್ಕರೆ ತಿಳಿಯುವುದಿಲ್ಲ.

ಭಾರತಿ: ಶೆಲ್ಲಮ್ಮಾ ತೊಗರಿಕಾಳನ್ನು ತೆಗೆದು ಪಕ್ವ ಮಾಡಿ ಬೇಳೆ ಮಾಡಿದರೆ ಉತ್ತಮ ಎನ್ನುತ್ತಾಳೆ. ನನಗೆ ಇಷ್ಟವಿಲ್ಲ, ಮಣ್ಣು ಕಟ್ಟಿ, ಒಣಗಿಸಿ ಒಡೆದುಬೇಳೆ ಮಾಡುವ ಹೊತ್ತಿಗೆ ಮನೆಯೆಲ್ಲಾ ಮಣ್ಣು ಮಸಿ, ಧೂಳು! ಶೆಟ್ಟಿಯಮ್ಮನಿಗೆ ಹೇಳಿದರೆ ಅವಳು ಶುದ್ಧವಾದ ಒಳ್ಳೆಯ ಬೇಳೆಯನ್ನು ತಂದುಕೊಡುತ್ತಾಳೆ. ನಮಗೆ ಹಸನು ಮಾಡುವ ಕಷ್ಟ ಕೂಡ ಇಲ್ಲ.

ಅಯ್ಯರ್:– 'ಶೆಟ್ಟಿಯಮ್ಮ ಲಾಭವಿಲ್ಲದೆ ಕೊಡುತ್ತಾಳೆ? ನೀವು ಅವಳ ಬಳಿ ವರ್ಷಕ್ಕೆ ಹತ್ತು ರೂಪಾಯಿಗೆ ಬೇಳೆ ತೆಗೆಯುವ ಬದಲು, ಮನೆಯಲ್ಲಿ ಮಾಡಲು 5–6 ರೂಪಾಯಿಗೆ ತೊಗರಿಕಾಳನ್ನು ತೆಗೆದರೆ ಸಾಕು. ನಾಲ್ಕು ರೂಪಾಯಿ ಲಾಭವಲ್ಲವೇ? ಕೆಲಸಕ್ಕೆ ಕೂಲಿ ತೆಗೆದುಕೊಳ್ಳದೆ ಯಾರೂ ಮಾಡುವುದಿಲ್ಲ.'

ಭಾರತಿ:– 'ಕಷ್ಟ ಪಡುವವರು ಲಾಭಪಡೆದರೆ ಒಳ್ಳೆಯದೇ ಆಯಿತಲ್ಲವೇ?

ಅಯ್ಯರ್:– 'ನಮಗೆ' ಹಣ ಧಾರಾಳವಾಗಿ ಬಂದರೆ ನೀವು ಹೇಳುವುದು ಸರಿ. ಅದಿಲ್ಲದಿರುವಾಗ ನಮ್ಮ ಕೈಲಾದುದನ್ನು ನಾವೇ ಮಾಡಿಕೊಳ್ಳಬಹುದಲ್ಲಾ ಎಂಬುದು ನನ್ನ ಸಲಹೆ (ಉದ್ದೇಶ) ಹುಣಿಸೇಹಣ್ಣು, ತೊಗರಿಕಾಳು, ಭತ್ತ, ಮೆಣಸಿನಕಾಯಿ, ಉದ್ದು ಇವುಗಳನ್ನು ಒಟ್ಟಾಗಿ ತೆಗೆದುಕೊಳ್ಳುವುದು ಒಳ್ಳೆಯದು. ಮಿಕ್ಕ ಚಿಲ್ಲರೆ ಸಾವಮಾನುಗಳನ್ನು ಹೇಗೆ ಅನುಕೂಲವೋ ಹಾಗೆ ಮಾಡಿಕೊಳ್ಳಬಹುದು.

ಭಾರತಿ:– ಕುಟ್ಟಿದ ಅಕ್ಕಿಯನ್ನು ತೊಳೆದು ಒಲೆಯ ಮೇಲಿಡಲು ಇವರಿಗೆ ಶಕ್ತಿ ಇಲ್ಲ. ನೀವೇನೋ ಹೇಳುತ್ತೀರಿ!

ಅಯ್ಯರ್:– ಅಭ್ಯಾಸ ತಪ್ಪಿದುದರಿಂದ ಬಂದ ಕಷ್ಟ. ಹಾಗೆ ಕೈಯ್ಯಲ್ಲಾಗಲಿಲ್ಲವೆಂದರೆ ಕೆಲಸದವರನ್ನು ಕರೆದು ಮಾಡಿಸಿಕೊಳ್ಳಬಹುದಲ್ಲಾ!

ಭಾರತಿ:– ಅದು ಜವಾಬ್ದಾರಿ ಕೆಲಸ ಇವರುಗಳು ಧಾನ್ಯದ ಅಳತೆ ಸರಿಯಾಗಿ ಬರದಿದ್ದರೆ ಗೊಣಗುತ್ತಲೇ ಇರುವರು. ನೀವು ಹೇಳುವ ಕ್ರಮ ಮನೆ ಮಾರು, ಭೂಮಿ ಕಾಣಿ ಎಲ್ಲಾ ಒಂದೇ ಸ್ಥಳದಲ್ಲಿ ಇರುವವರಿಗೆ ಹೊಂದುತ್ತದೆ; ಬಹಳ ಸುಖವಾದ ಜೀವನ. ನಮ್ಮಂತವರಿಗೆ ಬಹಳ ಕಷ್ಟ ಅಯ್ಯರೇ!'

ಅಯ್ಯರ್:– ನಾವು ಯಾವಾಗಲೂ ಒಳ್ಳೆಯ ಪದ್ಧತಿಗೆ ಬೆಲೆ (ಗೌರವ) ಕೊಡಬೇಕಾದುದು ಮುಖ್ಯ ಕ್ರಮ ಆ ಪದ್ಧತಿಯನ್ನು ಕೈಬಿಟ್ಟರೂ – ಅದನ್ನು ಪೋಷಿಸುವುದು ಒಳ್ಳೆಯದೂ ಅದರಿಂದ ನಾವು ತಪ್ಪುದಾರಿಯನ್ನು ತುಳಿಯದೆ ಇರಬಹುದು.

ಭಾರತಿ: 'ನನ್ನ ಬದುಕಲ್ಲಿ ಅದು ನಡೆಯುವಂತೆ ತೋರುವುದಿಲ್ಲ. ನಾನು ಶೆಲ್ಲಮ್ಮಾವಿಗೆ ಕಲ್ಲುಮರಿಗೆ, ಕಬ್ಬಿಣದ ಬಾಣಲೆ ಮೊದಲಾದ ಹಳೆಯ ಸಾಮಾನುಗಳನ್ನು ಬೀಸಿ ಎಸೆದುಬಿಟ್ಟು ಪರಂಗಿಯವರಂತೆ ಗಾಜು, ಪಿಂಗಾಣಿ ಸಾಮಾನುಗಳನ್ನು ತೆಗೆದಿಡುವಂತೆ ಹೇಳುತ್ತೇನೆ. ಅವು ಮಡಿಯಿಲ್ಲವಂತೆ; ಒಡೆದುಹೋಗುವುದಂತೆ. ಅವುಗಳಲ್ಲಿ ಕೆಟ್ಟವಸ್ತು (ವಿಷ) ಇದೆಯಂತೆ. ಏನೋನೋ ಕತೆ ಹೇಳುತ್ತಾಳೆ.

ಅಯ್ಯರ್:– ಅದು ನ್ಯಾಯವೇ. ನಾನು ನಿಮ್ಮಂತೆಯೇ ಒಂದು ಕಾಲದಲ್ಲಿ ನೆನೆಸಿದ್ದೆ ನನಗೂ ನಿಮ್ಮಂತೆಯೇ ಆ ವಸ್ತುಗಳ ಮೋಹವಿತ್ತು. ರಂಗೂನಿನಲ್ಲಿ ನಾನು ಒಂಟಿಯಾಗಿದ್ದಾಗ ಒಮ್ಮೆ 'ಸ್ಪಿರಿಟ್' ಒಲೆಯಲ್ಲಿ ಹಿತ್ತಾಳೆ ಪಾತ್ರೆಗೆ ಬದಲು ಒಂದು ಒಳ್ಳೆಯ ಗಾಜಿನ ಲೋಟದಲ್ಲಿ ನೀರಿಟ್ಟು, ಚಹದ ಸೊಪ್ಪನ್ನು ತರಲು ಹೋದೆ, ಮತ್ತೆ ಹಿಂದಿರುಗಿ ಬಂದು ನೋಡಿದಾಗ ಗಾಜಿನ ಲೋಟ ಚುಕ್ಕು ಚೂರಾಗಿ ಒಡೆದು, ಒಲೆಯೂ ಕೆಟ್ಟುಹೋಗಿತ್ತು. ಹೊಸ ಒಲೆಯನ್ನೇ

ತೆಗೆಯಬೇಕಾಯಿತು. ಪಿಂಗಾಣಿಯ ಸಾಮಾನುಗಳಲ್ಲಿ ಕ್ಷಯರೋಗ ಉಂಟುಮಾಡುವ ವಿಷಾಣುಗಳಿವೆ ಎಂದು ಕಂಡು ಹಿಡಿದಿದ್ದಾರೆ. ನಮ್ಮ ಹಳೆಯ ಅಭ್ಯಾಸಗಳೇ ಒಳ್ಳೆಯದು. ತೋರಿಕೆಯ ಢಾಂಬಿಕತೆ ಬೇಕಾಗಿಲ್ಲ!

'ಸರಿ, ಶೆಲ್ಲಮ್ಮಾವಿಗೆ ಸರಿಯಾದ ದೊಡ್ಡ ವಕೀಲರು ನೀವು, ಅಭ್ಯಾಸ, ವಾಡಿಕೆ, ಪದ್ಧತಿ ಎಂದು ಹಾಡಿಕೊಂಡೇ ಇರಿ.

'ಹೊಸ ವರುಷ ಹುಟ್ಟಿತಲ್ಲಾ, ಹೊಸಹಾಡು ಕೇಳುವುದಿಲ್ಲವೆ?' ಎಂದು ಹೇಳಿಬಿಟ್ಟು, 'ಭಾರತ ಸಮುದಾಯಂವಾಳ್ಗವೇ' ಎಂಬ ಹೊಸ ಹಾಡನ್ನು ಹಾಡಿದರು ಭಾರತಿಯಾರರು.

ಸ್ವಲ್ಪ ಹೊತ್ತು ಬೇರೆ ಏನೋನು ವಿಷಯಗಳನ್ನು ಮಾತನಾಡಿ, ನಂತರ ನಾವುಗಳು ಮನೆಯ ಕಡೆ ಹೊರಟೆವು.

ಅಯ್ಯರ್ ಅವರು, 'ಈ ಹಾಡಿನಲ್ಲಿ ಭಾರತಿಯವರು 'ಒಬ್ಬ ಮನುಷ್ಯನಿಗೆ ಊಟ ಸಿಕ್ಕದಿದ್ದರೂ ಈ ಜಗತ್ತನ್ನೇ ನಾಶಪಡಿಸಿ ಬಿಡೋಣ' ಎಂದು ಹೇಳಿರುವುದು ಮೆಚ್ಚಬೇಕಾದ್ದೆ' ಎಂದು ಹೇಳಿ ಆ ಹಾಡಿನ ತಿರುಳನ್ನು (ತಾತ್ಪರ್ಯವನ್ನು) ನನಗೆ ಹೇಳುತ್ತಲೇ ದಾರಿ ಸವೆಸಿದರು.

(15) 'ಪೆಣ್‌ಕಲ್ವಿ' (ಮಹಿಳೆಯ ಶಿಕ್ಷಣ)

ಭಾರತದಲ್ಲಿ (ಇಂಡಿಯಾ) 1914 – ರ ಸುಮಾರಿನಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿತು. ಕೆಲವರು ಇದನ್ನು ವಿರೋಧಿಸಿದರು. ಅಲ್ಲಿಯವರೆಗೆ ಮಹಿಳೆಯರಿಗೆ ಇಂಗ್ಲೀಷ್ ಶಿಕ್ಷಣ ಕೂಡದು ಎಂಬ ಅಭಿಪ್ರಾಯ ಸಾಮಾನ್ಯವಾಗಿತ್ತು. ಅಂತಹ ಸಮಯದಲ್ಲಿಯೇ ಕೆಲವರು ಮಹಿಳಾ ಶಿಕ್ಷಣಕ್ಕೆ ಒತ್ತು ಕೊಡಲು ಮುಂದೆ ಬಂದರು. ವೈದಿಕ ಕಟ್ಟು ಪಾಡುಗಳನ್ನು ಲಕ್ಷಿಸದೆ, ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಇಂಗ್ಲೀಷ್ ಓದಲು ಶಾಲೆಗಳಿಗೆ ಕಳುಹಿಸಿದರು.

ಇನ್ನು ಕೆಲವರೋ – ಇದರಿಂದ ಪ್ರಳಯವೇ ಬಂದು ಬಿಡುತ್ತದೆಂದು ಕೂಗಾಡಿದರು. ಎಳೆಯ (ಚಿಕ್ಕವಯಸ್ಸಿನ) ವಿಧವೆಯರು ಶಾಲೆಗಳಿಗೆ ಸೇರಿಕೊಂಡರು. 'ವೈಕುಂಠ ಮೇಷ್ಟ್ರರ ಬೀದಿಯಲ್ಲಿ ನಾಲ್ಕಾಣೆಗೆ ನೂರು ಹಪ್ಪಳ ಸಿಗುತ್ತಿದ್ದುದು ಈಗ ಎಂಟಾಣಿ ಆಗಿಬಿಟ್ಟಿತು. ಎಂದು ಕೆಲವರು ಅಂಗಲಾಯ್ತು ಕೊಂಡರು. ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸಲು ಸಮಾಜದ ಕಟ್ಟುಪಾಡುಗಳಿಗೆ ಹೆದರಿ, ಕೆಲವರು ತಮ್ಮ ಮನೆಯ ಹೆಣ್ಣು ಮಕ್ಕಳಿಗೆ ಇಂಗ್ಲೀಷ್ ಟೀಚರನ್ನು

ತಮ್ಮ ತಮ್ಮ ಮನೆಯಲ್ಲಿಯೇ ನಿಯಮಿಸಿ, ಇಂಗ್ಲೀಷ್ ಬಾಲಪಾಠವನ್ನು ಓದಿಸಲಾರಂಭಿಸಿದರು (ಕಲಿಸಿದರು) ನಮ್ಮ ಸಮುದಾಯದಲ್ಲಿಯೂ ಕೆಲವು ಬದಲಾವಣೆಗಳಾದವು. ಆ ಕಾಲದಲ್ಲಿ ಎತ್ತರದ ಗೋಪುರದ ಮೇಲೆ ನಿಂತು, ಯಾರು ಯಾರು ಮಹಿಳಾ ಶಿಕ್ಷಣವನ್ನು ವಿರೋಧಿಸಿದರೋ (ಖಂಡಿಸಿದರೋ) ಅವರುಗಳೇ ಇಂದು ಅದಕ್ಕೆ ಒತ್ತುಕೊಟ್ಟು ಮುಂಚೂಣಿಯಲ್ಲಿ ನಿಂತಿದ್ದಾರೆ.

ಆನಂದ ವರುಷ (1914–1915) ಮೊದಲಗೊಂಡು ಆಗಿನಿಂದ ನಮ್ಮ ಬಂಧು ಬಳಗದವರೆಲ್ಲಾ ನನ್ನ ವಯಸ್ಸಿನ ಹೆಣ್ಣು ಮಕ್ಕಳನ್ನು ಇಂಗ್ಲೀಷ್ ಶಾಲೆಗೆ ಕಳುಹಿಸಲಾರಂಭಿಸಿದರು.

ನನ್ನ ತಂದೆಯವರು (ಅಲೆಕ್ಸಾಂಡರ್ ಡ್ಯೂಮ್ ಬರೆದ ಕೌಂಟ್ ಆಫ್ ಮಾಂಟ್ರಿಕ್ರಿಸ್ಟೊ), 'ಷೇಕ್ಸ್‌ಪಿಯರ್‌ನ ನಾಟಕಗಳು, ಮೋಲಿಯೋ ನಾಟಕಗಳು, ಜಿಲ್ ಪ್ಲಾಸ್ ಕಥೆಗಳು ಮೊದಲಾದುವನ್ನು ರಾತ್ರಿ ಊಟವಾದ ಮೇಲೆ, ನನಗೂ ನನ್ನ ಅಣ್ಣನಿಗೂ ಹೇಳುವರು.

'ಜಿಲ್‌ಪ್ಲಾಸ್' ಕಥೆಯ ಕೆಲವು ಭಾಗಗಳನ್ನು ಅವರು ತಮಿಳಿಗೆ ಅನುವಾದಿಸಿದ್ದಾರೆ. (ಬಹಳ ಕುತೂಹಲದಿಂದ ಅವರು ಹೇಳುವ ಕಥೆಗಳನ್ನು ನಾವುಗಳು ಆಸ್ವಾದಿಸುತ್ತಿದ್ದೆವು).

'ಮಹಿಳಾ ಶಿಕ್ಷಣದ' ಬಗ್ಗೆ ಬೇರೆಯವರ ಅಭಿಪ್ರಾಯ ಏನಾದರೂ ಇರಲಿ, ಅದು ಭಾರತಿಯಾರರಿಗೆ ಒಂದು ಹೊಸ ಸ್ಫೂರ್ತಿ ಕೊಟ್ಟಿತು. ಹೊಸ ಮಾತು, ಹೊಸ ವಿಷಯ ಹುಡುಕ್ಕುತ್ತಿದ್ದ ಅವರಿಗೆ ಇದರಿಂದ ನಾಲ್ಕು ತೋಳುಗಳ ಬಲ ಬಂದಂತಾಯಿತು.

'ಶಿಕ್ಷಣಕ್ಕಿಂತ ಮುಖ್ಯವಾಗಿ –ಋತುಮತಿಯಾದ ನಂತರ ವಿವಾಹ, ವಿಧವಾ ವಿವಾಹ ಇವುಗಳನ್ನು ಅಮುಲಿಗೆ ತರಬೇಕು. ಪುರುಷರಂತೆ ಮಹಿಳೆಯರಿಗೆ ಹೆಚ್ಚು ಓದಿನ ಅವಶ್ಯಕತೆ ಇಲ್ಲ. ಮನೋಧೈರ್ಯ, ನಾಗರಿಕತೆ ಸ್ವಚ್ಛತೆ ಇವುಗಳನ್ನು ತಿಳಿದುಕೊಂಡರೆ ಸಾಕು' ಎನ್ನುತ್ತಿದ್ದರು.

ಮಹಿಳೆಯರ ಹಿರಿಮೆಯನ್ನೂ, ಗೌರವವನ್ನೂ ಎಷ್ಟು ಮಟ್ಟಿಗೆ ಎತ್ತಿತೋರಿಸಬಹುದೋ, ಅಷ್ಟನ್ನೂ ತಮ್ಮ ಕವಿತೆಯಲ್ಲಿ ಅವರು ಹಾಡಿತೋರಿಸಿದ್ದಾರೆ.

ನಾನು ನನ್ನ ವಯಸ್ಸಿನ ಹೆಣ್ಣು ಮಕ್ಕಳೊಂದಿಗೆ (ಹುಡುಗಿಯರೊಂದಿಗೆ) ಶಾಲೆಗೆ ಹೋಗಬೇಕೆಂದು ಆಸೆಪಟ್ಟೆ, ಇದಕ್ಕಾಗಿ ನನ್ನ ತಾಯಿಯ ಬಳಿ ವಾದ ಮಾಡಿದೆ. ನನ್ನ ತಾಯಿ 'ನೀನು ಶಾಲೆಗೆ ಹೋಗಕೂಡದು. ಬೇಕಾದರೆ ಮನೆಯಲ್ಲಿಯೇ ನಿಮ್ಮ ತಂದೆಯವರ ಬಳಿ ಕಲಿತುಕೊ' ಎಂದು ಹೇಳಿಬಿಟ್ಟರು.

ಅದಕ್ಕೋಸ್ಕರ ನಾನು ಆ ದಿನವೆಲ್ಲಾ ಅತ್ತು ರಂಪ ಮಾಡಿದೆ.

ಅಂದು ಸಂಜೆ ಶೆಲ್ಲಮ್ಮಾ ಅವರೂ, ಭಾರತಿಯಾರರೂ ನಾಲ್ಕು ಗಂಟೆಗೆ ನಮ್ಮ ಮನೆಗೆ ಬಂದರು. ವಾಡಿಕೆಯಂತೆ ಕಡಲ ತೀರಕ್ಕೆ ಹೋದೆವು. ನಾನು ಎಂದಿನಂತೆ ಸಂತೋಷವಾಗಿಲ್ಲದೆ ಜೋಲು ಮುಖ ಹಾಕಿಕೊಂಡಿದ್ದೆ.

ಭಾರತಿ:– ಏನು ಯದುಗಿರಿ. ಏನು ಕೋಪ? ನೀನು ದಿನದಂತಿಲ್ಲವಲ್ಲ! ನಿಮ್ಮ ತಾಯಿ ಏನಾದರೂ ಬೈದರೇ?

ನಾನು ಬದಲು ಹೇಳಲಿಲ್ಲ. ಬಿಕ್ಕಿ ಬಿಕ್ಕಿ ಅತ್ತೆ. ಶೆಲ್ಲಮ್ಮಾ ನನ್ನನ್ನು ಮಡಿಯಲ್ಲಿ ಮಲಗಿಸಿಕೊಂಡು ಒಳ್ಳೆಯ ಮಾತುಗಳಿಂದ ಸಮಾಧಾನ ಮಾಡಿದರು. ಸ್ವಲ್ಪ ಸಮಾಧಾನವಾದ ಮೇಲೆ 'ನೋಡಿ ಶೆಲ್ಲಮ್ಮಾ, ನನ್ನ ಜೊತೆ ಹುಡುಗಿಯರೆಲ್ಲಾ ಇಂಗ್ಲೀಷ್ ಓದಲು ಶಾಲೆಗೆ ಸೇರಿದ್ದಾರೆ. ನಾನೂ ಹೋಗುತ್ತೇನೆ ಎಂದು ನನ್ನ ತಾಯಿಯನ್ನು ಕೇಳಿದೆ. ಅವರು ಹೋಗಕೂಡದು ಎಂದು ಹೇಳಿಬಿಟ್ಟರು.'

ಶೆಲ್ಲಮ್ಮಾ:– ಇದಕ್ಕೋಸ್ಕರ ಇಷ್ಟು ದುಃಖವೇ? ಅಯ್ಯೋ ಹುಚ್ಚಿ! ನಿನ್ನ ವಯಸ್ಸಿನವರಾದರೂ ಅವರುಗಳು ಋತುಮತಿಯಾಗಿರಲಾರರು. ವಯಸ್ಸಿಗೆ ಬಂದ ಹುಡುಗಿಯರನ್ನು ಶಾಲೆಗೆ ಕಳುಹಿಸುವುದು ಅಷ್ಟು ಒಳ್ಳೆಯದಲ್ಲ. ಹಾಗೂ, ನಿಮ್ಮ ಅತ್ತೆ ಮನೆಯವರು, ಇದಕ್ಕೆ ಒಪ್ಪುತ್ತಾರೆಯೋ ಇಲ್ಲವೋ! ಇದನ್ನೆಲ್ಲಾ ಯೋಚಿಸಬೇಡಬೇ ಯದುಗಿರಿ!'

ಭಾರತಿ:– ನಿನ್ನ ಜೊತೆಯುವರು ಶಾಲೆಗೆ ಹೋದರೆಂದು ನಿನಗೆ ಬೇಜಾರಾಯಿತೆ? ಯದುಗಿರಿ, ಆ ಪಾಠಗಳಲ್ಲಿ ವಿವರಿಸುವ ನದಿಗಳೂ, ನಗರಗಳೂ, ಗ್ರಾಮಗಳೂ ಎಲ್ಲಿದ್ದರೆ ನಮಗೇನು? ಅದನ್ನು ತಿಳಿದೇನಾಗಬೇಕು! ನೀನು ತಮಿಳನ್ನು ಓದಮ್ಮಾ! ಅಷ್ಟು ಸಾಕು. ಶಾಲೆಗೆ ಹೋದರೆ ಕೆಲವು ಕೆಟ್ಟ ಆಸೆಗಳು ಹುಟ್ಟಿಕೊಳ್ಳುತ್ತವೆ. (ವಿಧವಿಧವಾದ ಅಲಂಕಾರಿಕೆ) ಅದರಿಂದ ಹೆಣ್ಣುಮಕ್ಕಳಿಗೆ ಒಳ್ಳೆಯದೇನೂ ಆಗುವುದಿಲ್ಲ.

ನಾನು:– ಹೌದ್ಹೌದು, ನಲ್ಮೆಯಿಲ್ಲದೆ ತಾನೇ ಎಲ್ಲರೂ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದ್ದಾರೇನೋ! ನಾವು ಮಾತ್ರ ಬುದ್ಧಿವಂತರು, ಮಿಕ್ಕವರೆಲ್ಲಾ ಮುಟ್ಠಾಳರೇನೋ (ದಡ್ಡರೇನೋ)

ಶೆಲ್ಲಮ್ಮಾ:– 'ನೀನು ಓದಿ ಕೆಲಸಕ್ಕೆ ಹೋಗಬೇಕೇ ಯದುಗಿರಿ. ಪತ್ರ ಬರೆಯಲು, ಓದಲು ಮನೆಯ ಲೆಕ್ಕಪಕ್ಕಗಳನ್ನು ನೋಡಿ ಬರೆಯಲು ತಿಳಿದರೆ ಸಾಕು' ಎಂದು ನಮ್ಮ ತಂದೆ ಹೇಳುವರು. ಆದರೆ ಈಗ ಹೆಂಗಸರು, ಕಥೆ, ಕಾವ್ಯ, ಪಾಶುರ (ಪದ್ಯ) ಎಲ್ಲವನ್ನೂ ಓದುತ್ತಾರೆ. ನಮ್ಮ ದೇಶದ ಭಾಷೆ ನಮಗೆ ಮುಖ್ಯ. ಗಂಡಸರಿಗೆ ಬರುವ ಕಾಗದಗಳನ್ನು ಓದಲು ಇಂಗ್ಲೀಷ್ ಬೇಕು.

ಪತ್ರಿಕೆ, ತಿರುಳಿಲ್ಲದ ಕಾವ್ಯ ಕಾದಂಬರಿಗಳನ್ನು ಓದಬಹುದು. ಸಂಸ್ಕೃತ, ತೆಲುಗು, ಕನ್ನಡ, ಹಿಂದಿ ಇವುಗಳನ್ನು ಓದಿದರೂ ಓದಬಹುದು.

ನಾನು:– ಎಲ್ಲಾ ವಿಷಯಗಳೂ ಇಂಗ್ಲೀಷಿನಲ್ಲಿಯೇ ಇರುತ್ತದೆ. ನನ್ನ ಅಜ್ಜಿ ಹೇಳುವರು 'ತೆಲುಗು ಚೇಳು (ತೇಳು) ಕನ್ನಡ ಕಸ್ತೂರಿ, ಅರವ (ತಮಿಳು) ಅಧ್ವಾನ' ಎಂದು. ನಾನು ಅದಕ್ಕಾಗಿ ಅವರ ಹತ್ತಿರ ಜಗಳ ಕೂಡ ಆಡಿದ್ದೇನೆ. 'ಕಾವ್ಯಗಳು ಚೆನ್ನಾಗಿರುವುದು ತಮಿಳಿನಲ್ಲಿಯೇ' ಎಂದು.

ಭಾರತಿ:– ಇದರಲ್ಲಿ ನಿನ್ನ ಅಜ್ಜಿಯ ತಪ್ಪೇನೂ ಇಲ್ಲ ಯದುಗಿರಿ. ನಿನ್ನ ಕೊರತೆಯಂತೆ ತಮಿಳರು ಈಗ ಇಂಗ್ಲೀಷ್ ಭಾಷೆಯ ಹುಚ್ಚಿನಲ್ಲಿ ಅಲೆಯುತ್ತಿದ್ದಾರೆ. ಕನ್ನಡ, ತೆಲುಗು ಭಾಷೆಗಳಲ್ಲಿ ಕೆಲವು ಹೊಸ ಆಯಾಮಗಳನ್ನು (ಕಲೆ) ಭಾಷಾಂತರಿಸಿ, ಅಭಿವೃದ್ಧಿ ಪಡಿಸಿದ್ದಾರೆ. ಒಂದು ಕಾಲದಲ್ಲಿ ತಮಿಳು ಭಾಷೆ ಉನ್ನತ ಮಟ್ಟದಲ್ಲಿದ್ದಿತಾದರೂ, ಈಗ ಅದು ಕೆಳಮಟ್ಟದಲ್ಲಿದೆ. ಅದರಿಂದಲೇ ಅರವ ಅಧ್ವಾನ ಎಂದು ಗೇಲಿ ಮಾಡುತ್ತಾರೆ.

ನಾನು:– 'ಏಕೆ ಅಷ್ಟು ಕೆಳಮಟ್ಟದಲ್ಲಿದೆ?'

ತಮಿಳರಲ್ಲಿ ಧೃಡತೆ ಸಾಲದು. ಇಂಗ್ಲೀಷ್ ಓದಿದ ನಂತರ ಕಾವ್ಯಗಳ ಮೇಲೆ ಅಲಕ್ಷ್ಯ. ಕಾವ್ಯಗಳನ್ನು ಓದಿ ಅವುಗಳ ಸಾರವನ್ನು ತಿಳಿಯುವುದು ಕಷ್ಟ. ತಮಿಳಿಗೆ ಮರ್ಯಾದೆ ಕೊಟ್ಟು ಆದರಿಸಿ ಅದಕ್ಕೆ ಹಣ ಕೊಡುವವರು ಕಡಿಮೆ. ಈ ತೊಂದರೆಗಳಿಂದ ತಮಿಳು ಪ್ರಕಾಶಿಸುತ್ತಿಲ್ಲ. ಬಂಗಾಳಿಗಳು ತಮ್ಮ ಭಾಷೆಗಾಗಿ ಹಣವನ್ನು ಬೀಸಿ ಎರಚುತ್ತಾರೆ. ತಮಿಳರಲ್ಲಿ ಕೆಲವರಿಗೆ ದುಡ್ಡಿದ್ದರೂ ಭಾಷೆಗಾಗಿ ಕೊಡುವ ಮನಸ್ಸಿಲ್ಲ. ಹಣ ಕಾಯುವ ಹದ್ದಿನಂತೆ ಬದುಕಿನ ದಿನಗಳನ್ನು ಸವೆಸುತ್ತಾರೆ. ಇದಕ್ಕೇನು ಮಾಡಲು ಸಾಧ್ಯ? ಮಕ್ಕಳನ್ನು ಓದಿಸಿ, ತಮ್ಮಲ್ಲಿರುವ ಹಣವನ್ನೆಲ್ಲಾ ಖರ್ಚು ಮಾಡಿ, ಅವರುಗಳ ಸಂಪಾದನೆಯನ್ನು ನಿರೀಕ್ಷಿಸುತ್ತಾರೆ ಹೆತ್ತವರು. ಮಕ್ಕಳಿಗೋ ತಮ್ಮ ಸಂಪಾದನೆ ತಮಗೇ ಸಾಲದು. ಹೆತ್ತವರಿಗೇನು ಕೊಡುತ್ತಾನೆ? ಈ ಸ್ಥಿತಿಯಲ್ಲಿ ದೇಶಭಾಷೆ ಉಳಿದಿದೆಯೋ ಸತ್ತಿದೆಯೋ ಎಂದು ಯೋಚಿಸಲು ಕೂಡ ಪುರಸೊತ್ತಿಲ್ಲ. ಈ ಪ್ರಲೋಭನೆಯಲ್ಲಿ ಒಬ್ಬರಿಬ್ಬರು ತಲೆಯೆತ್ತಿ ನಿಂತರೆ ಅವರುಗಳು ಸಮಾಜಕ್ಕೂ, ಸರ್ಕಾರಕ್ಕೂ ವಿರೋಧಿಗಳಾಗುತ್ತಾರೆ.

ಶೆಲ್ಲಮ್ಮಾ:– ಈ ಕಾಲ ಕಲಿಗಾಲ, ಎಲ್ಲಿ ನೋಡಿದರೂ ತಲೆಕೆಳಗು ವ್ಯಾಪಾರ! ಎಲ್ಲಿ ನೋಡಿದರೂ ಹಾಹಾಕಾರ!

ಭಾರತಿ:– ಇದು ವೇದಗಳ ಕಾಲ ಶೆಲ್ಲಮ್ಮಾ. ಮೂರೂ ಮುಕ್ಕಾಲು ವೇದಗಳಲ್ಲಿ ಕೋರಿಕೆಗಳೇ ಜಾಸ್ತಿ. 'ರಾಕ್ಷಸರನ್ನು ಅಳಿಸಿಬಿಡಿ, ರೋಗಗಳಿಂದ ಬಿಡಿಸಿ ಕಾಪಾಡಿ, ನಮ್ಮ ಮಕ್ಕಳಿಗೆ ರೋಗ ಬರದಂತೆ ಕಾಪಾಡಿ, ನಮ್ಮ ಆಸೆಗಳನ್ನು ನೆರವೇರಿಸಿ,

ನಮ್ಮ ದೇಶವು ಚೆನ್ನಾಗಿ ಅಭಿವೃದ್ಧಿ ಹೊಂದುವಂತೆ ಮಾಡಿ, ವರುಣಾ, ಇಂದ್ರ – ಬೆಳೆಗಳನ್ನು ನಾಶ ಪಡಿಸುವ ರಾಕ್ಷಸರಿಂದ ಕಾಪಾಡಿ! ವಾಯುವೇ ನೀನೇ ನಮ್ಮ ಪರಮ ದೈವ! ಈ ಕೂಗುಗಳ ಸ್ಮರಣೆಯೇ ವೇದ. ಮಹಮ್ಮದೀಯರ ಖುರ್–ಆನಿನಲ್ಲಿಯೂ ಹೀಗೆಯೇ. 'ಮಕ್ಕಳನ್ನು ಉತ್ತಮವಾದ ದಾರಿಯಲ್ಲಿ ನಡೆಸು! ಅವರುಗಳನ್ನು ವೀರರನ್ನಾಗಿ ಮಾಡು. ಹೊಟ್ಟೆಬಟ್ಟೆಗೆ ಕಮ್ಮಿಯಿಲ್ಲದಂತೆ ಮಾಡು. ಎಲ್ಲರೊಂದಿಗೂ ತಲೆಯೆತ್ತಿ ನಿಲ್ಲುವಂತೆ ಮಾಡು; ಶುದ್ಧವಾದ ನೀರು, ಹವಾ ಅಮೃತವಾಗಿ ಸುರಿಯಲಿ' ಇದೇ ಖುರಾನಿನ ಅರ್ಥ. ಬೈಬಲ್‌ನಲ್ಲೂ ಇದುವೇ. ಭಾಷೆಗಳು ಮಾತ್ರ ಬೇರೆಬೇರೆ.

ಶೆಲ್ಲಮ್ಮಾ: 'ಅಂದರೆ, ಹಿರಿಯ ಪುರಾಣ ಶಂಕರಾಚಾರ್ಯರ ಕಥೆಗಳು ಇವುಗಳೆಲ್ಲಾ 'ಸುಳ್ಳೇ?'

ಭಾರತಿ:– ಸುಳ್ಳೆಂದು ಯಾರು ಹೇಳಿದರು? ಅದು ಉಪನಿಷತ್ತಿನ ಕಾಲ. ಒಂದೇ ತರಹದ ಪ್ರಕೃತಿ ವೈಭವವನ್ನು ನೋಡಿ ಸಾಕುಸಾಕಾಗಿ 'ಇದು ಸುಳ್ಳು, ದೇವರು ಒಬ್ಬನೇ ಸತ್ಯ' ಎಂದು ಎಲ್ಲಾ ವಿಚಾರಗಳಲ್ಲಿಯೂ ವಿರಕ್ತಿ ಹೊಂದಿದ ಕಾಲ ಅದು. ಅದರಲ್ಲಿಯೂ ಶಿವ–ವಿಷ್ಣು ಕಲಹ ಬಿಡಲಿಲ್ಲ – ಎಲ್ಲರೂ ತ್ಯಾಗಜೀವಿಗಳಾಗಬೇಕೆಂದು ಉಪದೇಶಿಸಿದರು. ಯುಗಗಳು ಪುನಃಪುನಃ ಬರುವುದು ಲೋಕರೀತಿ. ನಮ್ಮ ನಾಡಿನಲ್ಲಿ (ದೇಶದಲ್ಲಿ) ಪರದೇಶದ ನಾಗರೀಕತೆಯೂ ತಲೆದೋರಿದಾಗ ಆಸೆ ಜಾಸ್ತಿಯಾಯಿತು. ಆಧುನಿಕತೆ ಪುಟ್ಟ ಮಕ್ಕಳ ಮನದಲ್ಲಿ ಕೂಡ ಹಲವು ಆಸೆಗಳನ್ನು ಹುಟ್ಟಿಸುತ್ತದೆ. ಕೆಲದಿನ ಅದರಲ್ಲಿಯೇ ಮುಳುಗಿದರೆ ಅದೂ ಕೂಡ ಬೇಸರ ತರಿಸುತ್ತದೆ. ಹೊಸ ಕೆಲಸ, ಹೊಸ ಪದ್ಧತಿ, ಹೊಸ ನಾಗರಿಕತೆ ಎಂದರೆ ಎಲ್ಲರಿಗೂ ಆಸೆ ಜಾಸ್ತಿ. ಕೆಲ ದಿನಗಳಾದ ನಂತರ ಅದರಲ್ಲಿಯೂ ಏನೂ ಸುಖವಿಲ್ಲ – ಎಲ್ಲಾ ಒಣ ಆಡಂಬರ – ಎಂದು ತಿಳಿಯುತ್ತದೆ. ಅಲ್ಲಿಯವರೆಗೆ ಹೀಗೆಯೇ ನಡೆಯುತ್ತದೆ.

ಶೆಲ್ಲಮ್ಮಾ:– ಮುಸಲ್ಮಾನರ ಕಾಲದಲ್ಲಿಯೂ ಹೀಗೆಯೇ ಇದ್ದಿತೆ?

ಭಾರತಿ:– ಅಕ್ಬರ್ ಒಬ್ಬ – ಹಿಂದೂಗಳನ್ನು ಗೌರವದಿಂದ, ವಿನಯದಿಂದ ನಡೆಸಿಕೊಂಡ. ಬಾಬರನೂ ಹಾಗೆಯೇ. ಕಡೆಗಾಲದಲ್ಲಿ ಅಕ್ಬರನು ಹೇಳಿದ್ದಾನೆ; 'ನನ್ನ ನಂತರ – ನಮ್ಮ ಸಂತತಿಯವರು ಹಿಂದೂಗಳನ್ನು ಕ್ರೂರವಾಗಿ ನಡೆಸಿಕೊಂಡು ತಮ್ಮ ಮುಸಲ್ಮಾನ ಮತವನ್ನು ಸ್ಥಾಪಿಸಲು ಹವಣಿಸುವರು. ಆದರೆ ನಾನು ನಮ್ಮ ಮತಕ್ಕಾಗಿ ಮಾಡಿದಷ್ಟೂ ಮಾಡಲಾಗದೆ, ನಮ್ಮ ಮತಕ್ಕೆ ಕೊಡಲಿ, ಕೊಂಬುಗಳಂತಾಗುತ್ತಾರೆ' ಎಂದು. ಹಾಗೆಯೇ ಅವರು ಶೀಘ್ರದಲ್ಲಿಯೇ ಅಳಿದು ನಾಶವಾಗಿ ಹೋದರು.

ಕ್ರೈಸ್ತರೋ .... ಒಳ್ಳೆಯ ನಯವಾದ ಮಾತಿನ ಮೂಲಕವೇ ತಮ್ಮ ಮತಕ್ಕೆ ಸೇರುವಂತೆ ಮಾಡಿದರು. ಕಳೆದ ಧಾತು ಸಂವತ್ಸರದ ಬರಗಾಲದಲ್ಲಿ ಅವರುಗಳು – ಕ್ರೈಸ್ತರು – ದೊಡ್ಡದೊಡ್ಡ ಹಂಡೆಗಳಲ್ಲಿ ಗಂಜಿ ಕಾಯಿಸಿಟ್ಟುಕೊಂಡು, ಹೊಟ್ಟೆಗಿಲ್ಲದೆ ಬರದಿಂದ ಸಾಯುವ ಸ್ಥಿತಿಯಲ್ಲಿದ್ದವರನ್ನು ಒಂದು ಗುಟುಕು ಗಂಜಿಗಾಗಿ ಕ್ರಿಶ್ಚಿಯನ್ನರಾಗಿಸಿದರು. 'ಮಿಷನ್ ಪಾದ್ರಿಗಳ ಮುಖಾಂತರ ನಾವುಗಳು ನಮ್ಮ ಮತಕ್ಕೆ ಸೇರಿ ಕ್ರಿಶ್ಚಿಯನ್ನರಾದರೆ, ತುಂಬ ಹಣ ಕೊಡುತ್ತೇವೆ. ದೊಡ್ಡದೊಡ್ಡ ಕೆಲಸಗಳನ್ನು ಕೊಡುತ್ತೇವೆ' ಎಂದು ಹೇಳಿ ವಂಚಿಸಿ ನಡುಬೀದಿಯಲ್ಲಿ ಅಲೆದಾಡಿಸಿದರು.

ಶೆಲ್ಲಮ್ಮಾ:– 'ಎಲ್ಲಾ ಮತಗಳು ಒಂದೇ ಎಂದು ನೀವು ಹೇಳುತ್ತೀರಲ್ಲಾ?'

ಭಾರತಿ:– 'ಅದು ಸರಿ, ನಾವು ಅವರಂತೆ ಅರಿಶಿನ, ಕುಂಕುಮ ಏನೂ ಇಲ್ಲದೆ ಇರಬೇಕೇ? ಒಳ್ಳೆಯ ವಿಷಯ ಎಲ್ಲರಿಗೂ ಸೇರಿದ್ದು (ಸ್ವಂತ). ನಮ್ಮ ದೇಶಕ್ಕೆ ಯಾವುದು ಹೊಂದುತ್ತದೆಯೋ ಅದು ನಮಗೆ ಸರಿ. ಇದೋ, ಈಗ ಯದುಗಿರಿ ಇಂಗ್ಲೀಷ್ ಓದಬೇಕೆನ್ನುತ್ತಾಳೆ. ನೀವುಗಳು ಅವಳನ್ನು ತಡೆಯುತ್ತೀರಿ'.

ಶೆಲ್ಲಮ್ಮಾ:– 'ಅಂದರೆ ಅದು ನಿಮಗೆ ಇಷ್ಟವೇ?'

ಭಾರತಿ:– ನನಗೂ ಇಷ್ಟವಿಲ್ಲ. ... ನೀವೆಲ್ಲರೂ ಒಗ್ಗಟ್ಟಿನಿಂದ ಒಂದೇ ರೀತಿಯಾಗಿ ತಮಿಳಿಗಾಗಿ ಪಾಡುಪಟ್ಟರೆ ಈ ಲೋಕವೇ ಮೆಚ್ಚುವಂತೆ, 'ತಮಿಳ್' ಭಾಷೆ ಹರಡುವುದಿಲ್ಲವೇ? ಯಾರೋ ಅಧ್ವಾನ ಎಂದು ಹೇಳಿದರೆಂದು ಕೊರಗುವುದಕ್ಕಿಂತ, ನಾವೂ ನಮ್ಮ ಕೈಲಾದುದನ್ನು ಮಾಡೋಣ ಎಂಬ ಕೆಚ್ಚಿನಿಂದಲೂ, ಉತ್ಸಾಹದಿಂದಲೂ ಕಾರ್ಯಕ್ಕಿಳಿದರೆ ಎಷ್ಟು ಚೆನ್ನ! ಇಂಗ್ಲೀಷ್ ಓದಿ ಅಧಿಕಾರ ನಡೆಸುವುದಕ್ಕಿಂತ, ತಮಿಳನ್ನು ಪ್ರೋತ್ಸಾಹಿಸಿ ಅಭಿವೃದ್ಧಿಗೆ ತರುವುದು ಒಳ್ಳೆಯದು. ಹೊಸ ಹೊಸ ನಡೆ (ಶೈಲಿ)ಗಳಲ್ಲಿರುವ ಕಾವ್ಯಗಳ ವಿವರಣೆ, ಕ್ಲಿಷ್ಟವಾಗಿರುವ ಪಾಶುರ (ಪದ್ಯ)ಗಳನ್ನು ಪದ ವಿಭಾಗ ಮಾಡಿ, ಅಚ್ಚಿಡುವುದು, ಹೆಸರಾಂತ ಭಾಷೆಗಳಲ್ಲಿರುವ ಉತ್ತಮವಾದ ಕಥೆಗಳನ್ನು ತಮಿಳಿಗೆ ಭಾಷಾಂತರಿಸಿ ಪ್ರಕಟಿಸುವುದು, ಪ್ರಕೃತಿ ಶಾಸ್ತ್ರ, ಸಂಶೋಧಿತ ಶಾಸ್ತ್ರ, ಖಗೋಳ ಶಾಸ್ತ್ರ, ವನಜೀವನ ಶಾಸ್ತ್ರ ಇವುಗಳನ್ನು ಭಾಷಾಂತರಿಸಿ ತರುವುದು ... ಇವುಗಳಿಂದ ತಮಿಳಿಗೆ ಅನುಕೂಲವಾಗುತ್ತದೆ.

ನಾನು:– 'ಮಾಡರ್ನ್ ರೆವ್ಯೂ' ಪೇಪರಿನಲ್ಲಿ ಒಂದು ಕಥೆ ಬಂದಿತ್ತು. ಅದನ್ನು ಅಯ್ಯಾ (ನನ್ನ ತಂದೆ ಹೇಳಿದರು) 'ಕ್ಷುದಿತ ಪಾಷಾಣ' ಎಂದು ಅದರ ಶೀರ್ಷಿಕೆ (ಹೆಸರು). ಅದನ್ನು ತಮಿಳಿನಲ್ಲಿ ಹೇಗೆ ಹೇಳುವುದು? ಇಂಗ್ಲೀಷ್ ತಿಳಿದಿದ್ದರೆ ನಾವೇ ಓದಿಕೊಳ್ಳಬಹುದಲ್ಲವೇ?

ಭಾರತಿ:– 'ಕ್ಷುದಿತ ಪಾಷಾಣ' ಎಂದರೆ 'ಹಸಿವಿನ ಕಲ್ಲುಗಳು' ಅಥವಾ 'ಬಂಡೆಗಳು' ಎಂದು ಹೇಳಬಹುದು (ಈ ಕಥೆಯನ್ನು ಭಾರತಿಯಾರರು 'ಆಶಾಭಂಗ' ಎಂಬ ಹೆಸರಿನಲ್ಲಿ ಬರೆದು ಪ್ರಚುರಿಸಿದರು). ರಬೀಂದ್ರನಾಥ ಟಾಗೂರರ ಕಥೆ ಅದು. ಅಂತಹ ಕಥೆಗಳನ್ನು ಅನುವಾದಿಸುವುದು ಒಳ್ಳೆಯದೇ. ಭಾವನೆಯೊಂದಿಗೆ ಕೂಡಿದ ಸಣ್ಣ ಕತೆಗಳು.

ಶೆಲ್ಲಮ್ಮಾ:– ಅಂದು ಹೇಳಿದಿರಲ್ಲಾ 'ಮಾನಭಂಗಂ' ಅಥವಾ ಗಿರಿಬಾಲಾ ಕತೆ. (ಈ ಕತೆಯೂ ಭಾರತಿಯಾರರಿಂದ ತಮಿಳಿಗೆ ತರಲ್ಪಟ್ಟಿದೆ). ಅದರ ಆರಂಭ ಸರಿಯಿಲ್ಲ ... ಮುಕ್ತಾಯ ಸರಿ ಇಲ್ಲ. ಒಗಟಿನಂತೆ ಇದೆ. 'ಗೋಪೀನಾಥ ಕೈಕಾಲುಗಳನ್ನೆತ್ತಿ ಝಾಡಿಸುತ್ತಾ ಅವಳನ್ನು ಕೊಲ್ಲುತ್ತೇನೆ ಎಂದ, ತೆರೆಬಿತ್ತು' ಎಂದಿದೆ. ಇದು ನಮಗೆ ಸರಿಯಾಗಿ ಅರ್ಥವಾಗಲಿಲ್ಲ.

ಭಾರತಿ:– ಹಾಗಲ್ಲ ಶೆಲ್ಲಮ್ಮಾ, ನಮ್ಮ ಕತೆಗಳಲ್ಲಿ ಕ್ರಮವಾಗಿ, ಒಂದು ಊರಿನಲ್ಲಿ ಒಬ್ಬ ರಾಜಾ ಇದ್ದ ಎಂದು ಆರಂಭಿಸಿ, ಕಡೆಯಲ್ಲಿ ಅವನು ಸುಖವಾಗಿದ್ದ ಎಂದು ಮುಗಿಸುವುದು. ಆದರೆ ಈ ಹೊಸ ಪದ್ಧತಿಯಲ್ಲಿ ಬಿರುಗಾಳಿಯಂತೆ ಬಂದು ಒಂದು ದೃಶ್ಯವನ್ನು ತೋರಿಸಿ ಮರೆಯಾಗಿ ಬಿಡುತ್ತದೆ (ಕತೆಯ ವಿಷಯವನ್ನು) ನಾವೇ ನಮ್ಮೊಳಗೆ ಸ್ವಲ್ಪ ಹೊತ್ತು ಯೋಚಿಸಿದರೆ ವಿಷಯ ತಿಳಿಯುತ್ತದೆ. ಬುದ್ಧಿಯನ್ನು ಚುರುಕಾಗಿಸಲು ಇದು ಒಂದು ರೀತಿ. ನೀನೂ ಈ ತರಹದ ಕತೆಗಳನ್ನು ಓದಿದರೆ ನಿನಗೂ ಅಭ್ಯಾಸವಾಗಿ ಬಿಡುತ್ತದೆ.

ನಾನು:– ಬಂಗಾಳಿಯನ್ನೋ, ಇಂಗ್ಲೀಷನ್ನೋ ಕಲಿತರೆ ತಾನೇ ನಾವೇ ಓದುವುದು? ಇಲ್ಲದಿದ್ದರೆ ನೀವುಗಳು ಹೇಳಿದರೆ ತಾನೇ ತಿಳಿಯುತ್ತದೆ!

ಶೆಲ್ಲಮ್ಮಾ:– ಇವರುಗಳು ಹೇಳುವಾಗ ನೋಡೋಣ. ಇವರುಗಳು ಹೇಳುವ, ಆ ಕತೆಗಳಲ್ಲಿ ಕೆಲವು ನಮ್ಮ ಮನೆಗಳಲ್ಲಿ ನಡೆಯುವ ಕತೆಗಳಂತೆಯೇ ಇದೆ.

ಭಾರತಿ:– ಕಲ್ಪನೆಯ ಕಥೆಗಳಿಗಿಂತ, ದಿನನಿತ್ಯ ನಡೆಯುವ ಕತೆಗಳೇ ಚೆನ್ನ. ಶೆಲ್ಲಮ್ಮಾ – ನೆನ್ನೆ ಮಕ್ಕಳಿಗೆ ಹೇಳಿದೆಯಲ್ಲಾ ಹೊಳೆಯಲ್ಲಿ ನಡೆದುದನ್ನು, ಅದನ್ನು ನಾನು ಹಾಗೆಯೇ ಬರೆದಿಟ್ಟಿದ್ದೇನೆ. ಏನು ಸೊಗಸಾಗಿದೆ ಗೊತ್ತೇ? ಅದನ್ನು 'ಸ್ವದೇಶಮಿತ್ರ' ಪತ್ರಿಕೆಗೆ ಕಳುಹಿಸುತ್ತೇನೆ. ನೀನು ನಿನ್ನ ಚಿಕ್ಕಪ್ಪನನ್ನು ವರ್ಣಿಸಿದಾಗ ಮಕ್ಕಳು ಹೇಗೆ ನೆಗೆದು ಕುಣಿದಾಡಿದರು! ನಮ್ಮ ಸಾಧಾರಣವಾದ ಬದುಕಿನಲ್ಲೂ ಒಂದು ವಿಶೇಷ ಸ್ವಾರಸ್ಯ ಇದೆ. ದಿನಂಪ್ರತಿ ನಡೆಯುವ ವಿಷಯಗಳನ್ನು ಬರೆದಿಟ್ಟರೆ ಅದಕ್ಕಿಂತ ಸೊಗಸಾದ ಕತೆ ಬೇರೆ ಇಲ್ಲ. ಈ ತರಹ ಒಂದೊಂದು ಕತೆಯನ್ನು ಸೇರಿಸಿದರೂ ಸಾಕು, ತಮಿಳನ್ನು ಪ್ರಕಾಶಿಸುವಂತೆ ಮಾಡಲು; ಶ್ರೀ ಶ್ರೀನಿವಾಸಾಚಾರ್ಯರು (ನನ್ನ ತಂದೆ) ಕೂಡ, ಟಾಗೂರರಿಗೆ

ಕಾಗದ ಬರೆದು ಅವರ ಒಪ್ಪಿಗೆ ಪಡೆದು, ಅವರ ಕತೆಗಳನ್ನು ತಮಿಳಿಗೆ ತರಬೇಕು ಎಂದರು. ಅದನ್ನು ಅಚ್ಚಿಡುವುದೂ ಬಹಳ ಒಳ್ಳೆಯ ಕೆಲಸವೇ.

ಶೆಲ್ಲಮ್ಮಾ ಮಕ್ಕಳಿಗೆ ಹೇಳಿದ ಕತೆಯನ್ನು ಭಾರತಿಯಾರರು 'ಸ್ವದೇಶ ಮಿತ್ರ'ಗೆ ಕಳುಹಿಸಿದರು. 1917ನೆ ಇಸವಿ ಡಿಸೆಂಬರ್‌ನಲ್ಲಿ ಪ್ರಕಟವಾದ 'ಸ್ವದೇಶ ಮಿತ್ರನ್'ನ ವಾರ್ಷಿಕ ಸಂಚಿಕೆಯಲ್ಲಿ 'ಅರುವಿ ಅಥವಾ ವಳ್ಳಿ ವಾಣತೀರ್ಥಮಾಡಿಯ ಕತೆ' ಎಂಬ ಹೆಸರಿನಲ್ಲಿ ಹೊರಬಂದಿತು.

(16) 'ಎಂಗಳ್ ವೇಅಯಾಡಮೀದಿಲ್'

ಆನಂದ ಸಂವತ್ಸವರ ಹೆಸರಿಗೆ ಮಾತ್ರ ಆನಂದವಾಗಿತ್ತೇ ಹೊರತು ಪ್ರಪಂಚಕ್ಕೆ ಮಹಾ ಕಷ್ಟಕರವಾದ ಮೊದಲನೆಯ ಮಹಾಯುದ್ಧವನ್ನು ತಂದೊಡ್ಡಿತು. ನನ್ನ ಜೀವನದಲ್ಲೂ ಹಲವು ಮಾರ್ಪಾಡುಗಳಾದವು. ಹುಟ್ಟಿದಂದಿನಿಂದ ಹನ್ನೆರಡು ವರ್ಷದವರೆಗೆ ಯಾವ ರೀತಿಯ ಕಟ್ಟುಪಾಡುಗಳೂ ಇಲ್ಲದೆ, ಸ್ವತಂತ್ರವಾಗಿ ರಾಣಿಯಂತೆ ಬೆಳೆದೆ. ಎಲ್ಲರೂ ಪ್ರೀತಿಯಿಂದ, ನನ್ನ ಮನಸ್ಸು ನೋಯದಂತೆ ಬಹಳ ಅಕ್ಕರೆಯಿಂದ ಬೆಳೆಸಿದರು.

ನನ್ನ ಹೊಸ ಜೀವನ ಮದರಾಸಿನಲ್ಲಿ (ಚೆನ್ನೈ) ಪ್ರಾರಂಭವಾಯಿತು. ಸ್ವಲ್ಪ ಸಮಯದ ನಂತರ, ನನ್ನ ತಂದೆಯನ್ನು ನೋಡಲು, ನನ್ನ ತಾಯಿಯೊಂದಿಗೆ ನಾನು ಮಾತ್ರ ಪುದುಚೇರಿಗೆ ಹೋಗಿ, ಅಲ್ಲಿ ಒಂದು ವಾರವಿದ್ದು ಮದರಾಸಿಗೆ ಹಿಂದಿರುಗಿದೆ.

ಹದಿನಾಲ್ಕನೆಯ ವರುಷ, ಶಾಲೆಗೆ ರಜೆಗಳು ಬಂದ ಮೇಲೆ, ನಾನೂ, ನನ್ನ ಪತಿಯೂ ಪುದುಚೇರಿಗೆ ಹೋದೆವು. ಅವರು ಅಲ್ಲಿ ಒಂದು ವಾರವಿದ್ದು ನಂತರ ಮೈಸೂರಿಗೆ ಹೋದರು. ನಾನು ತವರು ಮನೆಯಲ್ಲಿದ್ದೆ.

ಆನಂದ ವರುಷ (ರಾಕ್ಷಸ ವರುಷ ಎಂದು ಹೇಳಬಹುದು) ಮೊದಲಾದ ಯುದ್ಧ ತೀವ್ರವಾಗಿ ನಡೆದೇ ಇತ್ತು. ಪ್ಯಾರೀಸಿನಿಂದ ಪಾಲ್ ರಿಷಾರ್ (ಪಾಲ್ ರಿಚರ್ಡ್) ಎನ್ನುವ ಫ್ರೆಂಚ್ ವಿದ್ವಾಂಸರು ಆ ಸಮಯ ಪುದುಚೇರಿಗೆ ಬಂದಿದ್ದರು. 'ವೇದ ಪರಿಶೋಧನೆ'ಗೆ ಅರವಿಂದ ಘೋಷರ ಜೊತೆಯಲ್ಲಿ ಅವರೂ ಬರುವರಂತೆ. ಭಾರತಿಯಾರ್, ನನ್ನ ತಂದೆ, ಅಯ್ಯರ್ ಇವರುಗಳೊಂದಿಗೆ ಆತ್ಮೀಯತೆಯಿಂದ ಪಳಗುವವರು.

ಫ್ರಾನ್ಸ್ ದೇಶದಲ್ಲಿ ಸೈನ್ಯ ಕಡಿಮೆ ಇದ್ದುದರಿಂದಲೋ ಏನೋ, ಅಥವಾ ಬೇರೆ ಕಾರಣದಿಂದಲೋ ಗೊತ್ತಿಲ್ಲ. ಏಳು ಮಕ್ಕಳು ಇರುವವರಲ್ಲಿ ಒಬ್ಬಿಬ್ಬರಾದರೂ

ಸೈನ್ಯಕ್ಕೆ ಸೇರಬೇಕು ಎಂದು ಆಜ್ಞೆ (ನಿಯಮ) ಇದ್ದಿತು. ಇದನ್ನು ನಮಗೆ ಹೇಳಿದವರು ಭಾರತಿಯಾರರು.

ಪ್ರೊಫೆಸರ್ ರೀಷಾರ್ ಅವರು ಪ್ಯಾರಿಸ್ಸಿಗೆ ಹಿಂತಿರುಗುವರಿದ್ದುದರಿಂದ ಅವರನ್ನು ಬೀಳ್ಕೊಡಲು ಒಂದು ಚಹಾ (ಟೀ) ಪಾರ್ಟಿ ಏರ್ಪಾಡಾಗಿತ್ತು. ನಾವೆಲ್ಲರೂ ಆ ಪಾರ್ಟಿಗೆ ಹೋಗಿದ್ದೆವು. ಮೇಡಂ ರೀಷಾರ್, ರೀಷಾರ್ ಅವರ ಇಬ್ಬರು ಹೆಣ್ಣುಮಕ್ಕಳು ಮತ್ತೂ ಹಲವರು ಅಲ್ಲಿದ್ದರು. ಮೇಜಿನ ಮೇಲೆ ಪಿಂಗಾಣಿ ತಟ್ಟೆಗಳೂ, ಬಟ್ಟಲುಗಳೂ ಜೋಡಿಸಿ ಅಣಿ ಮಾಡಲ್ಪಟ್ಟಿದ್ದವು. ನಾನು ಈವರೆಗೆ ಟೀಪಾರ್ಟಿಯನ್ನೇ ನೋಡಿರಲಿಲ್ಲ. ಇದೇ ಮೊದಲು. ನನ್ನ ತಾಯಿ ಮತ್ತು ಭಾಗ್ಯಲಕ್ಷ್ಮಿ ಅಮ್ಮ ಇವರಿಬ್ಬರ ಹೊರತು ಮತ್ತೆಲ್ಲರೂ ತಿಂಡಿ, ತಿನಿಸು ತಿಂದು ಚಹಾ ಕುಡಿದೆವು. ಅಡಿಕೆ, ವೀಳ್ಯದೆಲೆಯನ್ನು ಎಲ್ಲರೂ ಮೆದ್ದರು. ನಂತರ ನಾವುಗಳು ಕಡಲ ದಂಡೆಗೆ ಹೋದೆವು.

ಭಾರತಿಯಾರರು ಹೇಳಿದರು, 'ಯದುಗಿರಿ, ಒಂದು ತಮಾಷೆ ಗೊತ್ತೇ? ಮೇಡಂ ರೀಷಾರರಿಗೂ, ರೀಷಾರರಿಗೂ ಮಕ್ಕಳೇ ಇಲ್ಲ. ಆದರೂ ಏಳು ಮಕ್ಕಳ ತಂದೆ ಎಂಬ ಕಾರಣಕ್ಕಾಗಿ ಸೈನ್ಯಕ್ಕೆ ಸೇರಿ ಯುದ್ಧಕ್ಕೆ ತೆರಳಬೇಕಾಗಿದೆ. ಹೇಗೆ ಹೇಳು ನೋಡೋಣ?

ಶೆಲ್ಲಮ್ಮಾ:– ನೀವು ಹೇಳುವುದು ಅರ್ಥವೇ ಆಗುವುದಿಲ್ಲ. ಇವರಿಗೆ ಮಕ್ಕಳಿಲ್ಲದಿದ್ದರೆ, ಇವರ ಅಣ್ಣ ತಮ್ಮಂದಿರ ಮಕ್ಕಳಿರಬಹುದು. ಏನು ಕಟ್ಟಳೆಯೋ, ಏನು ಆಜ್ಞೆಯೋ ಯಾರಿಗೆ ಗೊತ್ತು?

ಭಾರತಿ:– ಇಲ್ಲ ಶೆಲ್ಲಮ್ಮಾ, ಇದರಲ್ಲಿ ಒಂದು ಮರ್ಮ ಇದೆ (ಒಗಟಿದೆ). ರೀಷಾರಿಗೆ ಮೊದಲನೆಯ ಹೆಂಡತಿಯ ಮೂರು ಮಕ್ಕಳಿದ್ದಾರೆ. ಮೇಡಂ ರೀಷಾರಿಗೆ ಮೊದಲನೆಯ ಗಂಡನ ನಾಲ್ಕು ಮಕ್ಕಳಿದ್ದಾರೆ. ಇವರಿಬ್ಬರೂ ಮದುವೆ ಮಾಡಿಕೊಂಡದ್ದರಿಂದ ಈಗ ಅವರುಗಳು ಏಳು ಮಕ್ಕಳ ತಂದೆತಾಯಂದಿರು, ಅಷ್ಟೇ.

ಶೆಲ್ಲಮ್ಮಾ:– ಶಿವ–ಶಿವ. ಇಂತಹ ಬದುಕೇ ಅವರದು! ನಾಲ್ಕು ಮಕ್ಕಳಿರುವವಳಿಗೆ ಎರಡನೆಯ ಮದುವೆಯೆ? ನಾಚಿಕೆಗೇಡು! ರಾಮರಾಮ

ಭಾರತಿ:– ಅದು ಅವರ ಪದ್ಧತಿ. ಈ ತಿಂಗಳ 'ಮಾಡರ್ನ್ ರಿವ್ಯೂ' ಪತ್ರಿಕೆಯಲ್ಲಿ 'ಗಿರಿಬಾಲಾ ಅಥವಾ ಮಾನಭಂಗ' ಎಂಬ ಕಥೆಯೊಂದನ್ನು ರವೀಂದ್ರನಾಥರು ಬರೆದಿದ್ದಾರೆಂದೂ, ಅದು ಬಹಳ ಚೆನ್ನಾಗಿದೆ ಎಂದೂ ಮುಂಚೆ ಒಂದು ಸಲ ನಿಮಗೆ ಹೇಳಿದ್ದೆನಲ್ಲಾ, ಅದರಲ್ಲಿ ಪ್ರತಿಮೆ (ಶಿಲ್ಪ)ಯಂತೆ ಇರುವ ಮನುಷ್ಯರ ಸೌಂದರ್ಯಕ್ಕಿಂತ, ಮನುಷ್ಯರು ನಡೆಯುವಾಗ ಕೈಗಳನ್ನು ಆಡಿಸುವ ರೀತಿಯೂ,

ನಗುವಾಗಲೂ ನಾಲ್ಕೂ ಕಡೆ ಕಣ್ಣೋಡಿಸುವಾಗಲೂ ಕಾಣುವ ಸೌಂದರ್ಯ ಹೆಚ್ಚಿನದು (ಅಧಿಕ) ಎನ್ನುತ್ತಾರೆ ರವೀಂದ್ರರು. ಪತಿಯು ಪತ್ನಿಯನ್ನು ಕಟ್ಟುಪಾಡುಗಳಿಂದ ತನ್ನ ಇಷ್ಟದಂತೆ ನಡೆಸುತ್ತಾನೆ. ಪತ್ನಿ ಈ ದಿವಸಗಳಲ್ಲಿ (ಈಗಿನ ಕಾಲದಲ್ಲಿ) ಅದಕ್ಕೆ ಸವಾಲಾಗಿ ನಿಲ್ಲುತ್ತಾಳೆ. ಇದು ಹೊಸ ರೀತಿ. ಇದಕ್ಕೇನು ಹೇಳುತ್ತೀಯಾ?

ಶೆಲ್ಲಮ್ಮಾ:– ಇದು ನನಗೆ ಒಪ್ಪಲಿಲ್ಲ. ಗಾಡಿ ಎಳೆಯುವ ಎತ್ತು ಮುದಿಯಾದರ ಬೇರೆ ಎತ್ತು ಕಟ್ಟುವುದು ಪಶು, ಪಕ್ಷಿ ಜಾತಿಗಳಿಗೆ ಸರಿ, ಮನುಷ್ಯರಿಗೆ ಸರಿ ಹೊಂದುವುದಿಲ್ಲ!

ಭಾರತಿ:– ಯದುಗಿರಿ, ಇದಕ್ಕೆ ನೀನೇನು ಹೇಳುತ್ತೀಯಾ?

ನಾನು:– ನಿಮಗೆ ಸರಿಸಮನಾಗಿ ವಾದ ಮಾಡಲು ನನ್ನಿಂದ ಸಾಧ್ಯವಿಲ್ಲ. ಒಬ್ಬ ಗಂಡಸಿನೊಂದಿಗೆ ಬಾಳುವುದೇ ಕಷ್ಟ. ಇಂತಹ ಮರು ವಿಷಯ ಒಪ್ಪಿಕೊಳ್ಳುವಂತೆಯೇ ಇಲ್ಲ. ಬೇರೆ ದೇಶದವರು ಈ ರೀತಿ ಮಾಡುವುದರಿಂದ ಅದು ನಾಗರಿಕತೆ ಎಂದು ಹೇಳುವುದು ಸರಿಯೇ?

ಭಾರತಿ:– ಶೆಲ್ಲಮ್ಮಾ ಹೇಳಿದುದನ್ನೇ ನೀನು ಬೇರೆ ವಿಧವಾಗಿ ಹೇಳುತ್ತೀಯ. ಹೋಗಲಿ, ಇಂದು ನಿನ್ನ ತಾಯಿ, ಅಯ್ಯರ್ ಅವರ ಪತ್ನಿ ಇಬ್ಬರೂ ಟೀ ಕುಡಿಯಲಿಲ್ಲ. ಬಟ್ಟಲುಗಳನ್ನು ಮೇಜಿನ ಕೆಳಗಿಟ್ಟುಬಿಟ್ಟರು. ಮೇಡಂ ರೀಷಾರ್ ಮತ್ತು ನಾನು ಗಮನಿಸಿದೆವು. ಏನು ಸಮಾಚಾರ?

ನಾನು:– ನನ್ನ ತಾಯಿ ಬೆಳ್ಳಿ ಲೋಟ ಬಿಟ್ಟು ಬೇರೆ ಯಾವುದರಲ್ಲಿಯೂ ಕುಡಿಯುವುದಿಲ್ಲ. ಮತ್ತು ಅವರಿಗೆ ಕಾಫಿ, ಟೀ ಯಾವುದೂ ಸೇರದು. ಆ ಎಂಜಲು ಬಟ್ಟಲುಗಳಲ್ಲಿ ಟೀ ಕುಡಿಯುತ್ತಾರೆಯೆ? ಭಾಗ್ಯಲಕ್ಷ್ಮಿ ಅಮ್ಮನೂ ಹಾಗೆಯೇ! ಒಂದು ವೇಳೆ ಅವರಿಗೆ ಟೀ ಸೇರುತ್ತದೇನೋ ಗೊತ್ತಿಲ್ಲ.

ಭಾರತಿ:– ಬೇರೆ ಬೇರೆ ಬಟ್ಟಲುಗಳಲ್ಲಿಟ್ಟರೂ ಎಂಜಲೇ?

ನಾನು:– ಮೇಜಿನ ಮೇಲೆ ಒಂದೇ ಬಟ್ಟೆ ಹಾಸಿದ್ದಿತು. ಅದು ಅವರುಗಳಿಗೆ ಇಷ್ಟವಿಲ್ಲ. ಶೆಲ್ಲಮ್ಮಾ ನಮ್ಮ ಬಲವಂತದಿಂದಾಗಿ ಒಪ್ಪಿದರು. ಭಾಗ್ಯಲಕ್ಷ್ಮಿ ಅಮ್ಮನನ್ನು ಯಾರೂ ನಿರ್ಬಂಧಿಸುವುದಿಲ್ಲ; ನಿರ್ಬಂಧ ಪಡಿಸಿದರೂ ಅವರು ಕೇಳುವುದಿಲ್ಲ.

ಭಾರತಿ:– ಹೊಸ ಪದ್ಧತಿಯನ್ನು ಸ್ವದೇಶಿಗಳೆಲ್ಲರೂ ಒಪ್ಪಿಕೊಳ್ಳುವರೆಂದು ಕೊಂಡರೆ, ಅದು ಸಾಧ್ಯವಿಲ್ಲದಂತೆ ತೋರುತ್ತಿದೆ. ಇನ್ನೂ ಸ್ವಲ್ಪ ಕಾಲದ ನಂತರ ಸರಿಯಾಗಬಹುದು.

ನಾನು:– ನನ್ನ ತಾಯಿ 'ಶೀತಬೇಧಿ'ಯಿಂದ ನರಳುತ್ತಿದ್ದಾಗ (ಬಳಲುತ್ತಿದ್ದಾಗ) ಕಾಫಿ ಕೊಟ್ಟರೆ ಒಳ್ಳೆಯದು ಎಂದು ಡಾಕ್ಟರು ಹೇಳಿದರು. ಔಷಧಿಯ ಹಾಗೆ

ಕುಡಿಯುವಂತೆ ಎಷ್ಟೋ ಹೇಳಿ ನೋಡಿದೆವು, ಅವರು ಕೇಳಲೇ ಇಲ್ಲ.

ಶೆಲ್ಲಮ್ಮಾ:– ನಮ್ಮ ಪದ್ಧತಿಯ ತರಹ ಒಳ್ಳೆಯ ಪದ್ಧತಿ ಬೇರೆಲ್ಲಿಯೂ ಇಲ್ಲ. ನೀವುಗಳು, ಸುಮ್ಮಸುಮ್ಮನೆ ಹೊಸ ಪದ್ಧತಿ ಎಂದು ಕುಣಿಯುತ್ತೀರಿ?

ಭಾರತಿ: ಗಂಟೆ ಎಂಟಾಯಿತು, ಇನ್ನು ಹೊರಡಿ.

ಎಲ್ಲರೂ ಮನೆಕಡೆ ಹೊರಟೆವು.

ಹೀಗೆ ಪುದುಚೇರಿಯಲ್ಲಿ ಒಂದು ತಿಂಗಳು ಇದ್ದೆ. ಬೆಂಗಳೂರಿನಲ್ಲಿ ನಮ್ಮ ಅತ್ತೆ ಮನೆಯವರ ಕಡೆ ಒಂದು ಮದುವೆ ನಿಶ್ಚಯವಾದುದರಿಂದ ನಾನು ಅಲ್ಲಿಗೆ ಹೋಗಬೇಕಾಯಿತು. ಊರಿಗೆ ಹೊರಡುವ ದಿನ ಅಯ್ಯರ್ ಅವರ ಮನೆಗೂ, ಭಾರತಿಯಾರರ ಮನೆಗೂ ಹೇಳಿ ಬರಲು ಹೋದೆ. ನಾನು ಹೋದಾಗ ಭಾರತಿಯಾರರು 'ಅಗ್ನಿದೋಮಂ' ಎಂಬ ಹಾಡನ್ನು ಬರೆದು ಮುಗಿಸಿದ್ದರು. ಭಾರತಿ – 'ಎಂಗಳ್ ವೇಳ್ವಿಕೂಡ ಮೀದಿಲ್' ಎಂದು ಪ್ರಾರಂಭವಾಗುವ ಆ ಹಾಡನ್ನು ಹಾಡಿ ತೋರಿಸಿದರು. ಹಾಡಿನ ಒಂದು ಪಾದವನ್ನು (ಸಾಲನ್ನು) ರೋಷದಿಂದಲೂ, ಮತ್ತೊಂದು ಪಾದ (ಸಾಲು) ಶೋಕಮಯವಾಗಿಯೂ ಹಾಡಿದರು. ಆ ಹಾಡಿನಲ್ಲಿರುವ ಅಸುರರ ಕಣ್ಣೀರು ಮನ ಕರಗಿಸಿಬಿಟ್ಟಿತು. ಶೆಲ್ಲಮ್ಮಾವಿನ ಕಣ್ಣಿನಲ್ಲಿ ನೀರು ತೊಟ್ಟಿಕ್ಕಿತು.

ಭಾರತಿ:– ಭೇಷ್! ತೊಂದರೆ ಎಂಬ ರೋಗವು ನೀಗಿಬಿಟ್ಟಿತೇ ಎಂದು ಅಳುತ್ತೀರಾ? ಬಹಳ ಚೆನ್ನಾಗಿದೆ!

ಶೆಲ್ಲಮ್ಮಾ:– ಅಬ್ಬಬ್ಬಾ, ನೀವು ಹಾಡಿದರೆ ಅಳು (ದುಃಖ) ತಡೆಯಲಾಗುವುದೇ ಇಲ್ಲ.

ನಾನು:– ನನಗೆ ನೀವು ಹಾಡು ಬರೆದಿರುವ ಆ ಕಾಗದವನ್ನೂ ಕೊಡಿ. ಹೋದ ವರುಷ ನೀವು ಕೊಟ್ಟ ಹಾಡಿನ ಚೀಟಿಯನ್ನು ಶೋಧನೆ ಮಾಡುವವರು ತೆಗೆದುಕೊಂಡು ಬಿಟ್ಟರು. ಇತ್ತೀಚೆಗೆ ಅವರುಗಳ ಹಿಂಸೆ ಜಾಸ್ತಿಯಾಗಿದೆ. ಏನು ಮಾಡೋಣ?

ಭಾರತಿ:– ಈ ಕಾಗದದ ಮೇಲೆ 'ಅಗ್ನಿದೋಮಂ' ಎಂದ ದಪ್ಪ ದಪ್ಪ ಅಕ್ಷರಗಳಲ್ಲಿ ಬರೆದು ಬಿಡು. ಬೇರೆ ಮಾತಿಲ್ಲದೆ ಬಿಟ್ಟುಬಿಡುವರು.

ಶೆಲ್ಲಮ್ಮಾ:– ಅದರಲ್ಲಿ ನಮ್ಮ ಹೆಸರನ್ನು ನೋಡಿದರೆ ಸುಮ್ಮನಿರುವರೇ? ಯದುಗಿರಿ, ಆ ಹಾಡನ್ನು ನಿನ್ನ ಹಾಡಿನ ಪುಸ್ತಕದಲ್ಲಿ ಬರೆದು ಬಿಡು. ಈ ಚೀಟಿಯನ್ನು ತೆಗೆದುಕೊಂಡು ಹೋಗಬೇಡ.

ನಾನು:– ಇದನ್ನು ಬರೆಯಲು ಈಗ ಸಮಯವಿಲ್ಲ. ಅವರು ಕೊಟ್ಟ 'ಪುದುಮೈ ಪೆಣ್'ನ್ನು ಬರೆದು ಬಿಟ್ಟೆ, ಇದನ್ನು ಅದರಲ್ಲಿಯೇ (ಆ ಪುಸ್ತಕದಲ್ಲಿಯೇ)

ಇಡುತ್ತೇನೆ. ಅವರು ಹೇಳಿದಂತೆ ದೊಡ್ಡ ಅಕ್ಷರದಲ್ಲಿ 'ಅಗ್ನಿದೋಮಂ' ಎಂದು ಬರೆದು ಬಿಡುತ್ತೇನೆ. ಗುಪ್ತದಳದವರು ಏನು ತಾನೇ ಮಾಡಿಬಿಡುತ್ತಾರೆ ನೋಡೋಣ!

ಭಾರತಿ:– ಹಾಗೆಯೇ ಮಾಡು. ಅವರುಗಳು ಇದನ್ನು ತೆಗೆದುಕೊಂಡರೆ, ನಾನು ಬೇರೆ ಬರೆದು ಕಳುಹಿಸುತ್ತೇನೆ ಯೋಚಿಸಬೇಡ. ಹೋಗಿ ಬಾಮ್ಮ...

ಅಯ್ಯರ್ ಅವರು ಆ ಸಮಯ 'ಮಂಗೆಯರ್ಕಶಿಯಿನ್ ಕಾದಲ್' 'ಕುಳತ್ತಂತರೈ ಅರಶಮರಂ' ಎಂಬ ಎರಡು ಕತೆಗಳನ್ನು ಬರೆದು ಮುಗಿಸಿದ್ರು. ಎರಡೂ ದುಃಖಕರವಾದ ಕತೆಗಳು. ನಾನು ಆ ಎರಡನೆಯ ಕತೆಯಲ್ಲಿ ಬರುವ ನಾಗರಾಜನನ್ನು ಚೆನ್ನಾಗಿ ಬೈದೆ. ಅಯ್ಯರ್ ಅವರು ನಾವೆಲ್ಲರೂ ಸುಖವಾಗಿಯೂ, ಸಂತೋಷವಾಗಿಯೂ ಇರುವುದರಿಂದ ಇಂತಹ ದುಃಖಮಯವಾದ ಕತೆಗಳಲ್ಲಿಯೂ ಒಂದು ಹೊಸರುಚಿ ತೋಚುತ್ತದೆ ಅಮ್ಮಾ ಎಂದರು.

ಆ ರಾತ್ರಿಯೇ ನಾನು ಹೊರಟೆ. ಗುಪ್ತಚಾರರು ಭಾರತಿಯಾರರು ಹೇಳಿದಂತೆಯೇ ಏನೂ ತಕರಾರಿಲ್ಲದೆ ಬಿಟ್ಟುಬಿಟ್ಟರು.

(17) 'ದೇವರ್ ವರುಹವೆನ್ರು'

ಪುದುಚೇರಿಯಿಂದ ಬೆಂಗಳೂರಿಗೆ ಹೋಗಿ ಅಲ್ಲಿ ಮದುವೆ ಮುಗಿದ ಮೇಲೆ ನಾಲ್ಕು ತಿಂಗಳು ಮೈಸೂರಿನಲ್ಲಿದ್ದು, ನಂತರ ನಮ್ಮ ಅಜ್ಜಿಯೊಡನೆ ಮದರಾಸಿಗೆ ಬಂದು ತಲುಪಿದೆ. ನನ್ನ ತಾಯಿ ಮದರಾಸಿನಲ್ಲಿದ್ದರು. ನಾನು ಬಂದ ಕೆಲದಿನಗಳ ನಂತರ ಪುದುಚೇರಿಗೆ ಹೋದರು. ಮೈಸೂರಿನಿಂದ ತಂದ ಎರಡು ಕೃಷ್ಣ ವಿಗ್ರಹಗಳನ್ನು ತೆಗೆದುಕೊಂಡು ಹೋಗಿ ಭಾರತಿಯವರ ಮಗಳು ಶಕುಂತಲಾವಿಗೆ ಒಂದನ್ನೂ, ಅಯ್ಯರ್ ಮಗಳು ಸುಭದ್ರಾವಿಗೆ ಒಂದನ್ನೂ ಕೊಟ್ಟರು. ಶಕುಂತಲಾ ಆ ವಿಗ್ರಹಕ್ಕೆ ಸ್ನಾನ ಮಾಡಿಸುವುದು, ಅದನ್ನು ಮಲಗಿಸುವುದು ಹೀಗೆ ಸದಾ ಕಾಲವೂ ಅದರ ಜೊತೆಯಲ್ಲಿಯೇ ಆಟವಾಡುವಳಂತೆ. ಭಾಗ್ಯಲಕ್ಷ್ಮಿಯಮ್ಮ (ಸುಭದ್ರಾವಿನ ತಾಯಿ) ಒಂದು ಚಿಕ್ಕ ಡಬ್ಬಿಯಲ್ಲಿ ಕೆಂಪು ರೇಷ್ಮೆ ತುಂಡನ್ನು ಹಾಸಿ, ಅದರಲ್ಲಿ ಕೃಷ್ಣನನ್ನಿಟ್ಟು ಪೂಜಾ ಮಂಟಪದಲ್ಲಿ ಇಟ್ಟಿದ್ದರಂತೆ.

ಸ್ವಾಮಿನಾಥ ದೀಕ್ಷಿತರ ಮಗಳಿಗೂ ನನಗೂ ಆಗಾಗ ಪತ್ರ ವ್ಯವಹಾರ ಉಂಟು. ಒಂದು ಕಾಗದದಲ್ಲಿ 'ನೀನು ಶಕುಂತಲಾವಿಗೆ ಕೊಟ್ಟ ಕೃಷ್ಣ ವಿಗ್ರಹ ಕಳೆದು ಹೋಯಿತಂತೆ. ಅಂದೇ ಶಕುಂತಲಾವಿಗೆ ಜ್ವರ ಬಂದುಬಿಟ್ಟಿತಂತೆ. ಈಗ ಜ್ವರ ಸ್ವಲ್ಪ ಹೆಚ್ಚಾಗಿಯೇ ಇದೆ. ನೀನು ಬರುವಾಗ ಮತ್ತೊಂದು ವಿಗ್ರಹ ತಂದುಕೊಡುವಂತೆ ಭಾರತಿಯವರು ತಿಳಿಸಿದರು' ಎಂದು ಬರೆದಿದ್ದಳು. ನಮ್ಮ

ತಾಯಿ ಮತ್ತೊಮ್ಮೆ ಬಂದಾಗ ಒಂದು ಕೃಷ್ಣ ವಿಗ್ರಹವನ್ನು ತೆಗೆದುಕೊಂಡು ಹೋಗಿ ಶೆಲ್ಲಮ್ಮಾವಿಗೆ ಕೊಟ್ಟರು.

ನಾನು ನಳ ಸಂವತ್ಸರದ ಆಶ್ವಯುಜ ಮಾಸದಲ್ಲಿ ಕೈಯ್ಯಲ್ಲಿ ಮಗುವಿನೊಂದಿಗೆ ಪುದುಚೇರಿಗೆ ಬಂದೆ. ಶಕುಂತಲಾವಿನ ಆರೋಗ್ಯ ಚೆನ್ನಾಗಿ ಅಭಿವೃದ್ಧಿಯಾಗಿತ್ತು. ಅಯ್ಯರೂ, ಭಾರತಿಯಾರರೂ ಬಂದು ನನ್ನ ಕ್ಷೇಮಲಾಭವನ್ನು ವಿಚಾರಿಸಿಬಿಟ್ಟು ಹೋದರು.

ಭಾರತಿಯಾರರು ಈಗ ಮೊದಲಿನಂತೆ ಎಲ್ಲರೊಡನೆ ಉತ್ಸಾಹದಿಂದ ಪಳಗುವುದನ್ನು ಬಿಟ್ಟುಬಿಟ್ಟರು ಎಂದು ತಿಳಿಯಿತು. ಮೊದಲೆಲ್ಲಾ ನನ್ನ ತಾಯಿ ಹೇಳುವರು "ಭಾರತಿಯಾರರು ಬಂದರೆ ಅವರ ಹಿಂದೆ ನಾಲ್ಕು ಜನ; ಮುಂದೆ ನಾಲ್ಕು ಜನ. ಯಾರಾದರೂ ಯಾವಾಗಲೂ ಅವರ ಸುತ್ತಲೂ ಇರುವರು. ಎಲ್ಲಾ ಅವರ ಕವಿತೆಯ ಮಹಿಮೆ!' ಎಂದು. ಈಗ ಆ ತರಹ ಇಲ್ಲ. ಮೊದಮೊದಲು ಈ ಒಂಟಿತನ ಅವರಿಗೆ ಬೇಸರವಾಗಿರಬಹುದೆಂದು ತೋರುತ್ತದೆ.

ಆಗಿನ ದಿನಗಳಲ್ಲಿ ನನ್ನ ಆರೋಗ್ಯ ಬಹಳಷ್ಟು ಸರಿಯಿರಲಿಲ್ಲ. ಮೊದಲಿನಂತೆ ತೋಚಿದಾಗಲೆಲ್ಲಾ ಹೊರಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಆದರೂ, ಪುದುಚೇರಿಗೆ ಹೋದ ಕೆಲವು ದಿನಗಳ ಬಳಿಕ, ಮಗುವಿನೊಂದಿಗೆ ಭಾರತಿಯಾರರ ಮನೆಗೆ ಹೋದೆ. ಅಂದು ಅವರ ಮೌನವ್ರತ ಮುಗಿದಿದ್ದಿತು. ಮಗುವನ್ನು ಚಾಪೆಯ ಮೇಲೆ ಮಲಗಿಸಿದ್ದೆವು. ಅದು ಕೈಕಾಲು ಆಡಿಸಿ ಆಟವಾಡುವುದನ್ನೂ, ಅದರ ಬಾಯಿಂದ ಬರುವ ಶಬ್ಧವನ್ನೂ ಆಲಿಸಿ ಭಾರತಿಯಾರರು ತಮ್ಮನ್ನು ಮರೆತು ಪರವಶವಾದರು. ಮೇರೆ ಮೀರಿದ ಸಂತೋಷದಿಂದ 'ಶಿನ್ನಂಶಿರುಕಿಳಿಯೇ' ಎಂಬ ಹಾಡನ್ನು ಹಾಡಿ ಸಂತೋಷಪಟ್ಟರು.

'ಶೆಲ್ಲಮ್ಮಾ, ಇದೋ ನೋಡು! ಹೇಗೆ ಕೊಂಜುತ್ತದೆ' ಎಂದರು.

ಶೆಲ್ಲಮ್ಮಾ:– ಯದುಗಿರಿ, ಎಳೆಯ ಮಗುವಿನ ಆಟ–ಪಾಟಗಳನ್ನು ಕಂಡು ಬಹಳ ದಿನವಾಗಿ ಬಿಟ್ಟಿತು. ಆದ್ದರಿಂದ ಈ ಮಗು ಮಾಡುವುದೆಲ್ಲಾ ಹೊಸದಾಗಿ ತೋರುತ್ತದೆ ಅವರಿಗೆ.

ಭಾರತಿ:– ಅದು ಆಟವಾಡಿದರೆ ನಮಗೆ ಸಂತೋಷವಾಗುತ್ತದೆ. ಮೈ ಸರಿಯಿಲ್ಲದೆ ಬಳಲಿದರೆ ನಮಗೆ ಸಹಿಸಲಾಗುವುದಿಲ್ಲ.

ಶೆಲ್ಲಮ್ಮಾ:– (ಶಕುಂತಲಾಗೆ ಜ್ವರ ಬಂದ ಸಂದರ್ಭ) ಹೋದ ವರುಷ ಪಟ್ಟ ಪಾಡನ್ನು ನೆನೆದರೆ ಭಯವಾಗುತ್ತದೆ. ಯದುಗಿರಿ, ಇಷ್ಟು ಧೈರ್ಯವಾಗಿರುವ

ಇವರು ಕೂಡ ಹುಳುವಿನಂತೆ ಒದ್ದಾಡಿಬಿಟ್ಟರು. ಅಂಬಾಳೇ (ಪರಾಶಕ್ತಿಯೇ) ಕಾಪಾಡಿದಳು. ಯಾವ್ಯಾವ ರೀತಿ ಬೇಡಿಕೊಂಡರೂ ಮನಸ್ಸಿನ ತುಡಿತ ನಿಲ್ಲಲಿಲ್ಲ.

ಭಾರತಿ:– ಈ ಶೆಲ್ಲಮ್ಮಾ ಈಗ ಹೀಗೆ ಹೇಳುತ್ತಾಳೆ, ಯದುಗಿರಿ. ಆಗ ಒಂದು ಕಡೆ ನಿಂತಲ್ಲಿ ನಿಲ್ಲುತ್ತಿರಲಿಲ್ಲ. ಸದಾ ಕಾಲವೂ ಜೋಲು ಮುಖ ಹಾಕಿಕೊಂಡು ಓಡಾಡುತ್ತಿದ್ದಳು. 'ಈ ಮಗುವಿನ ಜ್ವರ ನನಗೆ ಬರಲಿ ದೇವರೇ' ಎಂದು ಹಲುಬುವಳು. ಮಗುವಿನೊಂದಿಗೆ ಇವಳನ್ನು ನೋಡಿಕೊಳ್ಳುವ ಹೊಣೆಯೂ ನನಗೇ ಬಿತ್ತು!

ಶೆಲ್ಲಮ್ಮಾ:– ಇವರು ನೋಡಿಕೊಂಡಿದ್ದು ಅಷ್ಟರಲ್ಲಿಯೇ ಇದೆ. ಮಗುವನ್ನು ಮುಟ್ಟಿದ ಮೇಲೆ ಕೈ ತೊಳೆದುಕೊಳ್ಳದಿದ್ದರೆ, ಒಳಗೆ ಹೋಗಲು ಬಿಡುತ್ತಿರಲಿಲ್ಲ. ಯಾವುದೋ ಒಂದು ದ್ರವವನ್ನು (ಡೆಟ್ಟಾಲ್ ಅಥವಾ ಫಿನಾಯಿಲ್ ಇರಬಹುದು) ಒಂದು ಪಾತ್ರೆಯ ನೀರಿನಲ್ಲಿ ಬೆರೆಸಿ, ಅದರಲ್ಲಿ ಕೈ ತೊಳಿ ಎನ್ನುವರು. ಯಾವುದನ್ನು ಮುಟ್ಟಿದರೂ ಔಷಧಿಯ ನಾತ! ನಾನು ಆಗುವುದಿಲ್ಲ ಎಂದರೆ ಜಗಳಕ್ಕೆ ನಿಲ್ಲುವರು. ಮಗುವೋ 'ಶೆಲ್ಲಮ್ಮಾ, ಶೆಲ್ಲಮ್ಮಾ' ಎಂದು ನಿಮಿಷಕ್ಕೊಂದು ಸಲ ಕರೆಯುವುದು. ನನ್ನ ಪಾಡು ಸಾಕುಸಾಕಾಗಿ ಬಿಡುವುದು. ಈಗ ಎಲ್ಲಾ ಒಂದು ಕನಸಿನಂತೆ ತೋರುತ್ತಿದೆ.

ಭಾರತಿ:– ಸರಿ, ಅದರಲ್ಲಿ ಕೈ ತೊಳೆಯದೆ ಹೋದರೆ ಕ್ರಿಮಿಗಳು ಹೇಗೆ ಸಾಯುತ್ತವೆ! ಡಾಕ್ಟರು ನೂರಾರು ಸಲ ಹೇಳಿರುವಾಗಲೂ, ಶೆಲ್ಲಮ್ಮಾ ಮಗುವನ್ನು ಮುಟ್ಟಿಬಿಟ್ಟು ಕೈ ತೊಳೆಯುವುದಿಲ್ಲ ಎನ್ನುವಳು. ಆ ಜ್ವರ ವಿಷಜ್ವರ! (ಟೈಫಾಯಿಡ್)

ಶೆಲ್ಲಮ್ಮಾ:– ಎರಡನೆಯ ವಾರ, ಮುಟ್ಟಿದರೆ ಕೈ ಸುಡುವಂತೆ ಜ್ವರ ಕಾಯುತ್ತಿದೆ. ರಾತ್ರಿ ಎರಡು ಗಂಟೆ ಇರಬಹುದು. ಇವರು ಥರ್ಮಾಮೀಟರನ್ನು ತೆಗೆದುಕೊಂಡರು. ಐದು ನಿಮಿಷದ ನಂತರ ನೋಡಿದರೆ ಜ್ವರ ಬಹಳ ಬಹಳ ಜಾಸ್ತಿಯಾಗಿತ್ತು. ಇವರು ಅದನ್ನು ಒದರಿ, ಮತ್ತೆ ಪರೀಕ್ಷಿಸೋಣ ಎಂದರೆ, ಅದು ಕೈಜಾರಿ ಕೆಳಗೆ ಬಿದ್ದು ಚೂರುಚೂರಾಗಿ ಬಿಟ್ಟಿತು. ಕೈ ನಡುಕ! ಮನಸ್ಸಿನಲ್ಲಿ ಭಯ! ಏನು ಮಾಡುವುದು? ಕೆಲಸದವಳನ್ನು ಡಾಕ್ಟರ್ ಮನೆಗೆ ಕಳುಹಿಸಿದೆವು. ಅವರು ಬಂದು ನೋಡಿ 'ಈ ರಾತ್ರಿ ಕಳೆಯಬೇಕು, ಭಯ ಪಡಬೇಡಿ' ಎಂದರು. 'ನಿಮ್ಮ ಬಳಿ ಥರ್ಮಾಮೀಟರ್ ಕೊಟ್ಟದ್ದು ತಪ್ಪು' ಎಂದು ಹೇಳಿ ಒಂದು ಇಂಜಕ್ಷನ್ ಕೊಟ್ಟುಬಿಟ್ಟು ಹೋದರು. ಮೈಮೇಲೆ ಪ್ರಜ್ಞೆ ಇಲ್ಲದಷ್ಟು ಜ್ವರ. ಮಗು ಮಾತನಾಡಲಾರದೆ ಪರಿತಪಿಸುತ್ತಿದೆ. ನಾನು ಕಲ್ಲುಗೊಂಬೆಯಂತೆ ಅದರ ಮುಂದೆ ಕುಳಿತಿದ್ದೆ. ಇವರು ದುಃಖ ತಡೆಯಲಾರದೆ ಬಾಯಿಬಿಟ್ಟು ಹಲುಬಲಾರಂಭಿಸಿದರು. 'ಪಾಪಾ, ನೀನು ದೊಡ್ಡ ದೊಡ್ಡ ಸಭೆಗಳಲ್ಲಿ ಭಾಷಣ ಕೊಡುವೆ, ದೊಡ್ಡ ಪಂಡಿತೆಯಾಗುತ್ತೀಯೆಂದುಕೊಂಡಿದ್ದೆನಲ್ಲಾ! ನಿನ್ನ ನಾಲಿಗೆ

ಹೊರಳುತ್ತಿಲ್ಲವೇ?' ಎಂದು ಗೋಡೆಗೆ ತಲೆ ಗಟ್ಟಿಸಿಕೊಂಡರು. ನಾನು ಎದ್ದು ಹೋಗಿ ಸಮಾಧಾನ ಮಾಡಿದೆ. ರಾತ್ರಿಯೆಲ್ಲಾ ನಿದ್ದೆ ಮಾಡದೆ, 'ಶಕ್ತಿ, ಶಕ್ತಿ' ಎಂದು ಮೊರೆಯಿಟ್ಟರು. ಬೆಳಿಗ್ಗೆ ವೇಳೆಗೆ ಜ್ವರ ಸ್ವಲ್ಪ ಕಡಿಮೆಯಾಯಿತು. ಹಣವಿಲ್ಲ, ರೋಗದ ಕಾಟ ಬೇರೆ. ಹೇಗೆ ಸಹಿಸುವುದು?'

ಭಾರತಿ:– ನಿಜವಾಗಿ ಆ ಎರಡುತಿಂಗಳು ಪಡಲಾರದ ಪಾಡು ಪಟ್ಟೆವು ಯದುಗಿರಿ. ತಂಗಮ್ಮಾವಿಗೆ ನಿಮೋನಿಯಾ ಬಂದಾಗ ಇಷ್ಟು ಕಷ್ಟವೆನಿಸಲಿಲ್ಲ. ನಂಜುಂಡರಾವ್ ತಮ್ಮ ಮಗುವಿನಂತೆ ನೋಡಿಕೊಂಡರು. ಸ್ವರ್ಣ ಇದ್ದಳು. ನನಗೆ ಅಷ್ಟು ಕಷ್ಟ ಎನಿಸಲಿಲ್ಲ.

ಶೆಲ್ಲಮ್ಮಾ:– ಆಗ ಅಪ್ಪಾದೊರೆಯೂ (ಶೆಲ್ಲಮ್ಮಾವಿನ ಅಣ್ಣ) ಇದ್ದ. ನಿಮ್ಮ ಮೇಲೆ ಅಷ್ಟು ಹೊರೆ (ಹೊಣೆ) ಇರಲಿಲ್ಲ. ನೀವು ಖುಷಿಯಾಗಿ ಆಫೀಸ್ ಸ್ನೇಹಿತರೊಂದಿಗೆ ಓಡಾಡಿ ಕೊಂಡಿದ್ದಿರಿ. ಈಗ ಯಾರನ್ನು ತರುವುದು?

ನಾನು:– ಮೀನಾ ಕಾಗದ ಬರೆದಿದ್ದಳು. ನನಗೆ ಚಿಂತೆಯಾಗಿತ್ತು. ಅಯ್ಯಾ (ನನ್ನ ತಂದೆ) ಬರೆದ ಕಾಗದದಲ್ಲಿ, ಶಕುಂತಲಾವಿಗೆ ಸುಮಾರಾಗಿದೆ ಎಂದು ಬರೆದಿದ್ದರು. ಅದಾದ ನಂತರ ಭಾರತಿಯಾರರು ಎಷ್ಟು ಹೊಸ ಹಾಡುಗಳನ್ನು ಬರೆದಿದ್ದಾರೆ ಎಂದು ಕೇಳಿದೆ.

ಶೆಲ್ಲಮ್ಮಾ:– ಹೊಸ ಹಾಡುಗಳಿಗಿಂತ ವ್ರತವೇ ಅಧಿಕವಾಗಿ ಬಿಟ್ಟಿತು. ನನಗೇ ಸಹಿಸಲಾಗಲಿಲ್ಲ. ಬಾಯೇ ಮುಚ್ಚದೆ ಸದಾಕಾಲವೂ ಹಾಡು, ಮಾತು ಎಂದು ಇದ್ದವರು ಮೂಗರಂತೆ ಸಂಜ್ಞೆ ಮಾಡುವುದು, ಬರೆದು ತೋರಿಸುವುದು; ಇದು ಏನು ಹೊಸ ರೀತಿಯೋ ಎಂದರು.

ಭಾರತಿ:– ನೀನೂ ಮೌನವಾಗಿದ್ದು ನೋಡು. ಅದರಲ್ಲಿ ಒಂದು ತರಹ ಬೇರೆಯೇ ಸುಖವಿದೆ.

ಶೆಲ್ಲಮ್ಮಾ:– ಸಾಕಲ್ಲಾ ಸುಖ ನನಗೆ! ಹಾಲಿನವಳು, ಮೊಸರಿನವಳು, ಎಣ್ಣೆಯವಳು ಎಲ್ಲರಿಗೂ ಯಾರು ಜವಾಬು ಹೇಳುವುದು? ಈ (ವ್ರತದ) ತರಹ ನಡೆಯನ್ನು ಯಾವ ಮೂರ್ಖ ದಾರಿ ತೋರಿಸಿದನೋ?

ಭಾರತಿ:– ಯಾರೂ ತೋರಿಸಲಿಲ್ಲ. ಶೆಲ್ಲಮ್ಮಾ ಒಂದು ದಿನ ಮಾಡಿದೆ. ನನಗೇ 'ಮಜಾ' ಹುಟ್ಟಿತು. ಆ ಕ್ರಮ ಹಿಡಿದೆ. ವಾರದಲ್ಲಿ – ಮೂರು ದಿನ ಮೌನವ್ರತ ಹಿಡಿದರೆ ಬರೆಯುವ ಕೆಲಸ ತಡೆಯಿಲ್ಲದೆ ನಡೆಯುತ್ತದೆ. 'ಸ್ವದೇಶ ಮಿತ್ರ'ದಿಂದ ತಕರಾರಿಲ್ಲದೆ ಹಣ ಬರುತ್ತದೆ. ನಿನಗೆ ಒಳ್ಳೆಯದು ತಾನೇ?

ಶೆಲ್ಲಮ್ಮಾ:– ಈಗ ಮಳೆಗಾಲ. ಈ ಮನೆಯ ಹೆಂಚುಗಳೆಲ್ಲಾ ಒಡೆದು ಹೋಗಿವೆ. ಮನೆಯವರು 'ನೀವೇ ರಿಪೇರಿ ಮಾಡಿಸಿಕೊಳ್ಳಿ' ಎಂದು ಹೇಳಿಬಿಟ್ಟರು.

ಅಣ್ಣಿಯಮ್ಮ, 'ಇದೇ ಬೀದಿಯಲ್ಲಿ ಮಹಡಿ ಮನೆ ಖಾಲಿಯಾಗಿದೆ. ಬಾಡಿಗೆಯೂ ಕಮ್ಮಿ, ನೀವು ನೋಡಿ' ಎಂದರು. ಆ ಮನೆಯವನು ನಿನ್ನೆ ಬಂದಿದ್ದ. ಇವರಿಗೋ ಮೌನ ವ್ರತ. 'ನಾಳೆ ಅವರೇ ಬರುತ್ತಾರೆ' ಎಂದು ಹೇಳಿ ಕಳುಹಿಸಿದೆ. ಯೋಗಿಗಳು, ಪಂಡಾರರು (ಮನೆ ಮಠ ಇಲ್ಲದೆ ಅಲೆಯುವವರು) ಇವರುಗಳಿಗೆ ಮೌನವ್ರತ ಸರಿ. ಸಂಸಾರಿಗಳಿಗೆ ಸರಿಯಾಗುತ್ತದೆಯೇ? ಮಾತನಾಡಿದರೆ ಬರೆಯಲಾಗದೆಂದು (ಬರೆಯಕೂಡದೆಂದು) ಯಾವ ಶಾಸ್ತ್ರ ಹೇಳುತ್ತದೆ? ಒಂದು ದಿನಕ್ಕೆ ನಾಲ್ಕು ಗಂಟೆಯ ಕಾಲ ಮಾತನಾಡಬಾರದೆಂದು, ಇವರು ಒಂದು ಕ್ರಮ ಇಟ್ಟುಕೊಂಡು ಅನುಸರಿಸಲಿ. ಇವರ ವ್ರತದಿಂದ ಮನೆಯಲ್ಲಿ ಯಾವ ಕೆಲಸವೂ ನಡೆಯುವುದಿಲ್ಲ. ಎಲ್ಲಾ ಆಟಗಳ ತರಹ ಇದೂ ಒಂದು ಆಟ! ಇನ್ನೂ ಎಷ್ಟು ದಿವಸ ಈ ಬೇಗುದಿಯನ್ನು ಅನುಭವಿಸಬೇಕೋ ಯಾರಿಗೆ ಗೊತ್ತು?

ಭಾರತಿ:– ಶೆಲ್ಲಮ್ಮಾ, ನೀನು ಇಷ್ಟರಮಟ್ಟಿಗೆ ಅಂಗಲಾಯ್ತುಕೊಳ್ಳಬೇಕಿಲ್ಲ. ಇಂದು ಆ ಮನೆಯನ್ನು ನಿಶ್ಚಯಿಸಿ ಮಾತನಾಡಿ ಆಯಿತು. ಒಳ್ಳೆಯ ದಿನ ನೋಡಿ ನಾವು ಅಲ್ಲಿಗೆ ಹೋಗುವುದೊಂದೇ ಬಾಕಿ. ಇನ್ನು ತಿಂಗಳಿಗೆ ಇಷ್ಟು ದಿನ ಮಾತ್ರ ಮೌನವ್ರತ ಎಂಬ ಕ್ರಮವನ್ನು ಅನುಸರಿಸುತ್ತೇನೆ. ಹೊಸ ಶಬ್ದ – ಅಂದರೆ 'ಓಂ' ಎಂಬಂತೆ ಒಂದು ಶಬ್ದ ತಮಿಳಿನಲ್ಲಿ ಕಂಡುಹಿಡಿಯಬೇಕು. ಅದಕ್ಕಾಗಿ ಮೌನವ್ರತ ಹಿಡಿದಿದ್ದೇನೆ.

ನಂತರ ಭಾರತಿಯಾರರು 'ದೇವರ ವರುಹ ವೆನ್ರು' ಎಂಬ ಹಾಡನ್ನು ಹಾಡಿದರು. ಆಮೇಲೆ ನನಗೆ ಕೊಡಬೇಕೆಂದು ಇಟ್ಟಿದ್ದ ಚೀಟಿ (ಬರಹ)ವನ್ನು ತಂದುಕೊಟ್ಟರು.

'ಶಕ್ತಿಗೆ ಆತ್ಮ ಸಮರ್ಪಣ' 'ಜಯ ಮುಂಡು ಭಯಮಿಲ್ಲೈ ಮನಮೇ' 'ಇಯರ್ರೈ ಎನ್ರುನ್ನೈ ಉರ್ರೈವರ್' 'ಉಲಹತ್ತು ನಾಯಕಿಯೇ ಎಂಗಳ್ ಮುತ್ತುಮಾರಿ' 'ಕಾಲಮಾಂ ವನತ್ತಿಲ್' 'ಪೊಳಿಂದು ಪುಲರ್ನ್ದದು ಮಲರಿನ್ ಮೇವು ತಿರುವೇ' 'ಕುಯಿಲ್' ಹಾಡಿನ ಒಂದು ಭಾಗ ಇವುಗಳೆಲ್ಲಾ ಆ ಬರಹಗಳಲ್ಲಿ ಇದ್ದವು. ನಾನು ಅವುಗಳನ್ನು ತೆಗೆದುಕೊಂಡು ಮನೆಗೆ ಬಂದು ಸೇರಿದೆ.

(18) 'ಕಾಣಿ ನಲಂವೇಂಡಂ

ನಳ ಸಂವತ್ಸರ ಕಾರ್ತಿಕ ಮಾಸದ 8ನೇ ದಿನ (16–11–16) ಒಳ್ಳೆಯ ಶುಭದಿನ ಬುಧವಾರದಂದು ಭಾರತಿಯಾರರು ಮೊದಲು ತಿಳಿಸಿದ ಮನೆಗೆ ಪ್ರವೇಶಿಸಿದರು. ಆ ವರ್ಷ ಅಶ್ವಯುಜ ಮಾಸದ ಮಳೆ ಬೀಳದೆ ಜನಗಳೆಲ್ಲಾ

ಹಾಹಾಕಾರದಿಂದ ಪರದಾಡಿದರು. ಆದರೆ ಕಾರ್ತಿಕ ಮಾಸದಲ್ಲಿ ಗುಡುಗು, ಮಿಂಚು, ಚಳಿ, ಮಳೆ (ಅತಿವೃಷ್ಟಿ) ಹೊಡೆಯಿತು.

ಭಾರತಿಯಾರರು ಹೊಸಮನೆಗೆ ಹೋದ ಆ ದಿನ ಸಂಜೆ ಸುಮಾರು ನಾಲ್ಕು ಗಂಟೆಯಿಂದ ಮೋಡಗಳ ಆರ್ಭಟ ಜೋರಾಗಿತ್ತು. ನಮ್ಮ ಮನೆ ಬೇಸಿಗೆ ಕಾಲಕ್ಕೆ ಸೌಕರ್ಯವಾಗಿತ್ತೇ ಹೊರತು, ಮಳೆಗಾಲಕ್ಕೆ ಸರಿಯಿರಲಿಲ್ಲ. ಎಲ್ಲ ಕಡೆಯಿಂದಲೂ ಮಳೆ ನೀರು ಎರಚುತ್ತಿತ್ತು.

ಎರಡು ಮಹಡಿಗೆ ಮಧ್ಯೆ (ಇರುವ) ತಗ್ಗಿನಲ್ಲಿರುವ ಕೊಠಡಿ, ಬೀದಿ ಬಾಗಿಲ ಬಳಿ ಇರುವ ಕೊಠಡಿ, ಮಕ್ಕಳ ತೊಟ್ಟಿಲು ಇರುವ ಕೊಠಡಿ, ಇವು ಮೂರೆ ಮಳೆಯಿಂದ ನೆನೆಯದ ಜಾಗಗಳು; ಮಿಕ್ಕ ಜಾಗಗಳೆಲ್ಲಾ ನೆನೆದು ತೆಪ್ಪವಾಗಿ ಬಿಡುತ್ತಿತ್ತು.

ಮಳೆ ಬಂದ ಅಂದು ಸಂಜೆ ಏಳು ಗಂಟೆಗೆ ಊಟ ಮುಗಿಸಿಕೊಂಡು ಮಹಡಿಗೆ ಹೋದೆವು. ನನ್ನ ತಾಯಿ ಕೆಳಗೇ ಇದ್ದರು.

ಎರಡು ಬೆಂಚುಗಳು; ಅವುಗಳಲ್ಲಿ ಒಂದರಲ್ಲಿ ನಾನು, ನನ್ನ ಮಡಿಯಲ್ಲಿ ಮಗು, ಪಕ್ಕದಲ್ಲಿ ನನ್ನ ತಂಗಿಯರಿಬ್ಬರು, ನನ್ನ ತಂದೆ ಎಲ್ಲರೂ ಕುಳಿತಿದ್ದೆವು.

ಎಂಟು ಗಂಟೆ ಸುಮಾರಿಗೆ ಮಳೆ ಆರಂಭಿಸಿತು. ಬಹಳ ಜೋರು ಮಳೆ; ಭಾಗವತದಲ್ಲಿ ಇಂದ್ರದೇವ ವರ್ಷಧಾರೆ (ಧಾರಾಕಾರ) (ಕುಂಭದ್ರೋಣ) ಹರಿಸುವುದನ್ನು ಓದಿದ್ದೆವು; ಈಗ ಅದನ್ನು ನೇರಾಗಿಯೇ ಅನುಭವಿಸಿದೆವು. ಸಿಡಿಲಿನ ಶಬ್ದ ಮನೆಯನ್ನೇ ನಡುಗಿಸಿತು. ಮಿಂಚಿನ ಬೆಳಕು ಕಣ್ಣು ಕೋರೈಸಿತು. ಬಿರುಗಾಳಿಯೂ ಬೀಸತೊಡಗಿತು. ಮನೆಯ ಒಂದು ಗೋಡೆ ಮತ್ತೊಂದು ಗೋಡೆಯ ಮೇಲೆ ನೇರಾಗಿ ಕಟ್ಟಲ್ಪಟ್ಟಿತ್ತು. ಒಂದರ ಮೇಲೆ ಮತ್ತೊಂದು ಗೋಡೆ ಕಟ್ಟಬಾರದೆಂದು ಒಂದು ನಿಯಮ ಉಂಟಂತೆ. ಆ ನಿಯಮಕ್ಕೆ ವಿರೋಧವಾಗಿ ಒಂದರ ಮೇಲೊಂದು ಗೋಡೆ ಎಬ್ಬಿಸಿ ಆ ಮನೆಯನ್ನು ಕಟ್ಟಿದ್ದರು. ಯಜಮಾನನಿಲ್ಲ, ಯಜಮಾನಿ ಇದ್ದಳು. ಅವಳು ಬಾಡಿಗೆ ಹಣಕ್ಕೆ ಮಾತ್ರ ಯಜಮಾನಿಯೇ ಹೊರತು, ಮನೆಯನ್ನು ರಿಪೇರಿ ಮಾಡಿಸುವುದರಲ್ಲಿ ಅವಳಿಗೆ ಅಕ್ಕರೆ ಇಲ್ಲ. ಸಿಡಿಲು ಹೊಡೆದಾಗಲೆಲ್ಲಾ ಪೂರ್ವದ ಕಡೆಯ ಗೋಡೆ ಗಡಗಡ ನಡುಗುತ್ತಿತ್ತು. ಆ ಗೋಡೆಗೆ ದೊಡ್ಡ ಗಾಜಿನ ಕಿಟಕಿಯಿತ್ತು. ಆ ಗೋಡೆ ಸುಮಾರು ಹನ್ನೆರಡು ಗಂಟೆಯ ಸಮಯದಲ್ಲಿ ಸರಸರವೆಂದು ಬಿದ್ದುಬಿಟ್ಟಿತು.

ಪಶ್ಚಿಮ ದಿಕ್ಕಿನ ಗೋಡೆಯ ಹತ್ತಿರ ನಾವುಗಳು ಒಟ್ಟಾಗಿದ್ದೆವು. ಆ ಗೋಡೆಯೂ ತಲೆ ಮೇಲೆ ಬಿದ್ದು ಬಿಡುವುದೋ ಎಂದು ಹೆದರಿ ನಡುಗಿದೆವು. ನಮ್ಮ ತಂದೆ

ಹೇಳಿದರು: 'ಆ ದೊಡ್ಡ ಗೋಡೆ ಏನಾದರೂ ಬಿದ್ದಿತೋ, ನಾವೆಲ್ಲರೂ ಗುರುತೇ ಸಿಕ್ಕದಂತೆ ಒಂದು ಮುದ್ದೆಯಾಗಿ ಬಿಡುತ್ತೇವೆ. ಆದರೆ ಭಗವಂತನ ಕೃಪೆಯಿಂದ ಅದು ಬೀಳುವುದಿಲ್ಲ.'

ಕೆಳಗಡೆ ಇದ್ದ ನನ್ನ ತಾಯಿ ಏನಾದರೋ ಗೊತ್ತಿಲ್ಲ ಎಂಬ ದಿಗಿಲು ನಮ್ಮನ್ನು ಕಾಡಿತು. ಒಬ್ಬರಿಗೊಬ್ಬರು ಹತ್ತಿರದಿಂದ ಏನಾದರೂ ಮಾತನಾಡಿದರೂ ಕೇಳಿಸದಷ್ಟು ಭಯಂಕರ ಗಾಳಿ ಶಬ್ದ; ಹಿತ್ತಲಿನ ಗೋಡೆಯೂ ಬಿದ್ದುಬಿಟ್ಟಿತೆಂದು ತಿಳಿಯಿತು. ರಾತ್ರಿಯೆಲ್ಲಾ ಒಂದೇ ಭಯಂಕರವಾದ ಸ್ಥಿತಿ.

ಬೆಳಗಿನ ಜಾವ ಐದು ಗಂಟೆಯ ಮೇಲೆ ಎಲ್ಲಾ ಅಬ್ಬರವೂ ಮುಗಿದು, ಸ್ವಲ್ಪಸ್ವಲ್ಪವಾಗಿ ಮಳೆ ಕಡಿಮೆಯಾಯಿತು. ಪೂರ್ತಿ ಅಬ್ಬರ ನಿಂತ ಮೇಲೆ, ಮನೆಯನ್ನೆಲ್ಲಾ ಸುತ್ತಿ ನೋಡಿದಾಗ ಗಡಿಯಾರ, ಪಟಗಳು ಮುಂತಾದವೆಲ್ಲಾ ಚುಕ್ಕುಚೂರಾಗಿ ಬಿದ್ದಿದ್ದನ್ನು ನೋಡಿದೆವು.

ಬೆಳಿಗ್ಗೆ ಆರು ಗಂಟೆಯಾದ ಮೇಲೆ ಬಂದು ನೋಡಿದರೆ ಬೀದಿಯಲ್ಲಿ ನೀರು ನದಿಯಂತೆ ಓಡುತ್ತಿದೆ! ನಾವಿದ್ದ ಮನೆಯ ಒಂದು ಫರ್ಲಾಂಗು ದೂರದಲ್ಲಿ ಒಂದು ದೊಡ್ಡ ಮೋರಿ. ಅದು ತುಂಬಿ ಪ್ರವಾಹದಂತೆ ರಸ್ತೆಯಲ್ಲಿ ಹರಿಯುತ್ತಿದೆ. ಎಲ್ಲಿ ನೋಡಿದರೂ ಬಿದ್ದುಹೋದ ಮರಗಳ ಗುಂಪು. ತೆಂಗು, ಆಲ, ಅರಳಿ ಮುಂತಾದ ದೊಡ್ಡ ದೊಡ್ಡ ಮರಗಳೆಲ್ಲಾ ಬುಡಮೇಲಾಗಿ ಬಿಟ್ಟಿದ್ದವು. ವಿದ್ಯುತ್ ಕಂಬಿಗಳು, ತಂತಿಗಳು ಎಲ್ಲವೂ ತಾರುಮಾರಾಗಿ ಬಿದ್ದಿದ್ದವು.

ಬೆಳಿಗ್ಗೆ ನಾವೆಲ್ಲರೂ ಮಹಡಿಯಿಂದ ಕೆಳಗಿಳಿದು ಬಂದ ತಕ್ಷಣ ನಮ್ಮ ತಾಯಿ ಎಲ್ಲರೂ ಬದುಕಿದ್ದೀರಲ್ಲವಾ? ಎಂದು ಮೊದಲ ಪ್ರಶ್ನೆ ಕೇಳಿದರು.

6 1/2 ಗಂಟೆ ಸುಮಾರಿಗೆ ಅಯ್ಯರ್ ಅವರೂ ಭಾರತಿಯಾರರೂ ಬಂದರು. 'ಎಲ್ಲರೂ ಕ್ಷೇಮವಾಗಿದ್ದೀರಾ? ಮನೆ ಮಠ ಸಾಮಾನುಗಳು ಹೋದರೂ ಪರವಾಗಿಲ್ಲ. ಜೀವ ಉಳಿದರೆ ಸಾಕು' ಎಂದರು. ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಹೊರಟರು.

ಆಗ ಅಯ್ಯರ್ ನನ್ನನ್ನು ಕರೆದು, 'ಯದುಗಿರಿ, ನಿಮ್ಮ ಕೈಯಲ್ಲಾದಷ್ಟು ಸರಿ ಪಡಿಸಿಕೊಂಡು ಅಡಿಗೆ ಕೆಲಸ ನೋಡಿಕೊಳ್ಳಿ. ಹೊರಗಡೆ ಬಡವರ ಸ್ಥಿತಿ ಬಹಳ ಕಷ್ಟಕರವಾಗಿರುತ್ತದೆ. ನಮ್ಮಿಂದಾದ ಸಹಾಯ ಮಾಡಿಬಿಟ್ಟು ಬರುತ್ತೇವೆ. ಅಮ್ಮಾವನ್ನು (ನನ್ನ ತಾಯಿ) ಎಲ್ಲಿಗೂ ಸ್ನಾನಕ್ಕೆ ಹೋಗಬೇಡವೆಂದು ಹೇಳು. ಹೊರಗಡೆ ಹೆಣಗಳು ತೇಲಿ ಬರುತ್ತಿವೆ. ಈ ಅವಾಂತರವೆಲ್ಲಾ (ಮುಗಿದ) ತೀರಿದ ನಂತರ ಕೊಳದಲ್ಲಿ ಸ್ನಾನ ಮಾಡಬಹುದು. ನೀವುಗಳೂ ಹೊರಗೆ ಬರಬೇಡಿ. ಮನೆಯಲ್ಲಿಯೇ ಇರಿ' ಎಂದು ಹೇಳಿ ಹೊರಟರು.

ನಾವುಗಳು ಅವರು ಹೇಳಿದಂತೆ ಮನೆಯಲ್ಲಿಯೇ ಇದ್ದೆವು. ಆದರೆ ನಮ್ಮ ತಾಯಿ ಕೇಳಲಿಲ್ಲ. ಸಮುದ್ರದಲ್ಲೋ, ಕೊಳದಲ್ಲೋ ಸ್ನಾನ ಮಾಡಲು ಹೊರಟರು. ಹೊರಗೆ ಅವರನ್ನು ನೋಡಿದವರೆಲ್ಲಾ 'ಅಮ್ಮಾ, ಇದೇ ಕೊಳ ಎಂದುಕೊಂಡು ಮುಳುಗಿ ಎದ್ದು ಮನೆಗೆ ಹೋಗಿ, ಬೀದಿಯಲ್ಲಿ ಮರಗಳು ಬಿದ್ದು ನಡೆಯಲು ಸಾಧ್ಯವಿಲ್ಲದಂತಾಗಿದೆ. ಕೊಳವನ್ನು ಹುಡುಕುವುದೇ ಕಷ್ಟ' ಎಂದರು. ಯಾರು ಏನು ಹೇಳಿದರೂ ಕೇಳದೆ ನನ್ನ ತಾಯಿ ಕೊಳ (ಪುಷ್ಕರಣಿ)ದಲ್ಲಿ ಸ್ನಾನ ಮಾಡಿಬಿಟ್ಟು, ಹನ್ನೆರಡು ಗಂಟೆಯ ವೇಳೆಗೆ ಮನೆಗೆ ಬಂದು ಸೇರಿದರು.

ದೇಶಭಕ್ತರು ಮೊದಮೊದಲು ತಮ್ಮ ಕೈಯ್ಯಲ್ಲಿದ್ದ ಹಣವನ್ನು ಕೊಟ್ಟು, ನಾಗಸಾಮಿ ಮುಂತಾದ ನಾಲ್ಕೈದು ಜನರನ್ನು ಸೈನ್ಯಕ್ಕೆ ಸೇರಿಸಿದರು. ಗುಡಿಸಲಿನಲ್ಲಿ ಸಿಕ್ಕಿ ಸತ್ತವರನ್ನು ಮಣ್ಣು ಮಾಡಿದರು. ಗಾಯಗೊಂಡವರನ್ನು, ಮನೆ ಮಠ ಕಳೆದುಕೊಂಡವರನ್ನು ಎಲ್ಲರನ್ನೂ ಒಂದು ಕಡೆ ಒಟ್ಟಿಗೆ ಸೇರಿಸಿದರು. ಗಾಯಗೊಂಡವರಿಗೆ ಚಿಕಿತ್ಸೆ ಮಾಡಿದರು. ಸತ್ತವರಿಗೆ ಮಾಡಬೇಕಾದ ಕಾರ್ಯಗಳನ್ನು ಮಾಡಲು ಏರ್ಪಾಡು ಮಾಡಿದರು. ಸೈನ್ಯದಲ್ಲಿ ಕೆಲಸ ಮಾಡಿ ಅನುಭವವಿದ್ದ ಒಬ್ಬ ಕಾರ್ಯಕರ್ತರನ್ನು 'ಈಶ್ವರ ಧರ್ಮರಾಜಾ' ಗುಡಿಯಲ್ಲಿ ಗಂಜಿ ಕಾಯಿಸಲು ಏರ್ಪಾಡು ಮಾಡಿದರು. ಇವರುಗಳ ಜೊತೆಯಲ್ಲಿ ಪುದುಚೇರಿಯಲ್ಲಿದ್ದ ಸಮಾಜ ಕಾರ್ಯಕರ್ತರೂ (ಪರೋಪಕಾರಿಗಳೂ) ಸೇರಿಕೊಂಡರು. ಬಿದ್ದ ತೆಂಗಿನ ಮರದ ಮಟ್ಟೆ, ಗರಿಗಳನ್ನು ಜೋಡಿಸಿ, ಗುಡಿಸಲಿಗೆ ಮಾಡು ಹೊದಿಸುವಂತೆ ಮಾಡಿದರು. ಕೆಲವರನ್ನು ಸೇರಿಸಿ, ಮಣ್ಣು ಕಲಸಿ ಗೋಡೆ ಎಬ್ಬಿಸಿ ಗುಡಿಸಲು ಕಟ್ಟುವಂತೆ ಏರ್ಪಾಡು ಮಾಡಿದರು. ಗುಡಿಸಲುಗಳು ಕಟ್ಟಿ ಮುಗಿಯುವ ತನಕ, ಯಾರೊಬ್ಬರೂ ಸೋಮಾರಿಯಾಗಿ ಕಾಲ ಕಳೆಯದಂತೆ, ಕೆಲಸಗಳನ್ನು ಆಳಿಗೆ ಇಷ್ಟು ಎಂದು ಹಂಚಿ, ತಾವೂ ಅವರ ಜೊತೆಯಲ್ಲಿ ಕೆಲಸ ಮಾಡಿದರು. ಇಷ್ಟು ಸಂಕಟಗಳ ನಡುವೆಯೂ ಭಾರತಿಯಾರರ ಪ್ರಕೃತಿ ಸೌಂದರ್ಯದ ಆಸ್ವಾದನೆ ಕಡಿಮೆಯಾಗಲಿಲ್ಲ. ಮರುದಿನ ಮನೆಗೆ ಬಂದಾಗ ಈ ಸುದ್ದಿಯನ್ನು ಹೇಳಿದರು.

ಭಾರತಿ:– ಇದೋ ನೋಡು ಯದುಗಿರಿ, ನಾನು ತೆಂಗಿನ ಗರಿ ನೇಯುವುದನ್ನು ಕಲಿತು ಕೊಳ್ಳುತ್ತಿದ್ದ ಸಮಯ. ಒಬ್ಬ ತಲೆನೆರೆತ ಮುದುಕಿ ನನ್ನ ಬಳಿ ಬಂದಳು. 'ಅಪ್ಪಾ, ನನ್ನ ಮನೆ ಬಿದ್ದು ಹೋಯಿತು. ಕರಗಿ ಹರಿದು ಹೋಯಿತು. ದಿಕ್ಕಿಲ್ಲ. ಕಣ್ಣು ಕಾಣಿಸುವುದಿಲ್ಲ. ನನ್ನ ಭಾಗವನ್ನು ನೀನೇ ಕಟ್ಟಿಕೊಡಪ್ಪಾ, ನಿನಗೆ ಪುಣ್ಯ ಬರುತ್ತದೆ' ಎಂದಳು. ನಾನು 'ಅಮ್ಮಾ, ನಿನ್ನ ಮನೆ ಯಾವುದಮ್ಮಾ?' ಎಂದು ಕೇಳಿದೆ. ಅವಳು, – ಗೋಡೆ, ಮಾಡು, ಬಾಗಿಲು ಯಾವುದೂ ಇಲ್ಲದ, ಬಾಗಿಲಿನ ಒಂದು ಚೌಕಟ್ಟನ್ನು ತೋರಿಸಿದಳು. ಅದನ್ನು ನೋಡಿ ನಾನು ಗಟ್ಟಿಯಾಗಿ ನಕ್ಕೆ. ಅದಕ್ಕೆ ಅವಳು – 'ಗಾಳಿ, ಮಳೆ ಹೊಡೆಯುವ ಮೊದಲು

ನೀನು ನನ್ನ ಮನೆಯನ್ನು ನೋಡಿದ್ದರೆ, ಹೀಗೆ ನಗುತ್ತಿರಲಿಲ್ಲ. ಅದರ ಅಂದವನ್ನು ನೋಡಿ ಸಂತೋಷ ಪಡುತ್ತಿದ್ದೆ. ಇಂದು ಬಿದ್ದು ಕೊಚ್ಚಿಹೋಯಿತು, ನಗುತ್ತೀಯ! ಈ ದೇಹವೂ ಒಂದು ದಿನ ಅದೇ ತರಹ ಬಿದ್ದು ಹೋಗುತ್ತದೆ. ಎಲ್ಲಾ ಕಾಲನ ಪ್ರಭಾವ!' ಎಂದಳು. ನನಗೆ ಅವಳು ಹೇಳಿದುದನ್ನು ಕೇಳಿ, ಕರುಣೆ ಉಂಟಾಯಿತು. ಅವಳು ಹೇಳುವುದು ಸತ್ಯ. ಜೀವ ಹೋದಮೇಲೆ ಈ ದೇಹ ಬರಿಯ ಅಸ್ಥಿಪಂಜರ ತಾನೆ – ಎಂದು ತಟ್ಟನೆ ಹೊಳೆದು, ನನ್ನ ಮನಸ್ಸನ್ನು ಚುಚ್ಚಿತು. 'ಆಗಲಿ ಅಜ್ಜಿ ಕಟ್ಟಿ ಕೊಡುತ್ತೇನೆ' ಎಂದೆ. ಎಲ್ಲರೂ ಸೇರಿ ಕಟ್ಟಿಕೊಟ್ಟೆವು.

ಭಾರತಿಯಾರರು ಮೇಲೆ ಹೇಳಿದ ಈ ಘಟನೆ ಮರುದಿನ 'ಸ್ವದೇಶ ಮಿತ್ರ'ದ ಭಾರತಿಯಾರರ ಅಂಕಣ ವಿಭಾಗದಲ್ಲಿ ಪ್ರಚುರವಾಯಿತು.

ಶಂಕರಾಚಾರ್ಯರ (ಆದಿ ಶಂಕರರ) 'ಮಾಯೆ ತೊಲಗಿದರೆ ಎಲ್ಲಾ ಬರೀ ನಿರ್ವಾಣ (ಬೆತ್ತಲೆ)' ಎಂಬುವುದಕ್ಕೆ ಅಂದು ನಾನು ಅರ್ಥ ಕಂಡುಕೊಂಡೆ. 'ಗಾಳಿ (ಪ್ರಾಣವಾಯು)' ಇಲ್ಲದಿದ್ದರೆ ಬರೀ ಚಟ್ಟ (ಶೂನ್ಯ), ಗಾಳಿ ಹೆಚ್ಚಾದರೂ ಬರೀ ಚಟ್ಟವೇ' ಎನ್ನುವರು ಭಾರತಿಯಾರರು.

ಅಂದು ಹಗಲು ... 'ನಲ್ಲಿ, ವಿದ್ಯುತ್ ದೀಪ ಎಲ್ಲಾ ಮೊದಲಿನಂತಾಗಲು ಸುಮಾರು ಒಂದು ತಿಂಗಳು ಹಿಡಿಯಬಹುದು. ಜನಗಳು ಅದರಲ್ಲಿ ಮುಖ್ಯವಾಗಿ ಮಕ್ಕಳು, ಹೆಂಗಸರು ಒಂದು ವಾರದವರೆಗೆ ರಸ್ತೆಯಲ್ಲಿ ಓಡಾಡಬಾರದು; ಎಲ್ಲರೂ, ಪರ್ಯಾಯ (ಬದಲು) ದೀಪಗಳನ್ನು ತಯಾರು ಮಾಡಿಕೊಳ್ಳಿ' ಎಂದು ಡಂಗುರ ಸಾರಿದರು.

ತೆಂಗಿನ ತೋಪಿನಂತೆಯೂ, ಮತ್ತೆ ಕೆಲವು ಮರಗಳ ತೋಪಿನಂತೆಯೂ ಕಂಗೊಳಿಸುತ್ತಿದ್ದ ಊರು ಒಂದೇ ಮರುಭೂಮಿಯಂತಾಗಿ ಹೋಯಿತು. ಮುನ್ಸಿಪಾಲಿಟಿಯವರಿಗೆ ಮರಗಳನ್ನು ಸರಿಸಿ, ತೆಗೆದು ರಸ್ತೆಯನ್ನು ಮೊದಲಿನಂತೆ ಸರಿ ಮಾಡಲು ಒಂದು ತಿಂಗಳ ಕಾಲ ಹಿಡಿಯಿತು.

'ಆಲ, ಅರಳಿ ಮರದ ಕೊಂಬೆಗಳನ್ನು ಕತ್ತರಿಸಿ ನೆಟ್ಟರೆ, 4–5 ವರ್ಷಗಳಲ್ಲಿ ಅವುಗಳು ಬೆಳೆದು, ರಸ್ತೆ ಮೊದಲಿನಂತೆಯೇ ಆಗುತ್ತದೆ. ಅದನ್ನು ಹೇಳಿದರೆ ಮುನ್ಸಿಪಾಲಿಟಿಯವರು ಕಿವಿಗೇ ಹಾಕಿಕೊಳ್ಳುವುದಿಲ್ಲ. ಹೊಸದಾಗಿ ಮತ್ತೆ ನೆಡುತ್ತಾರಂತೆ! ಏನು ಮೂರ್ಖತನವೋ' ಎಂದು ಕಲವ್ವೆ ಶಂಕರ ಶೆಟ್ಟಿಯಾರರು ಪೇಚಾಡಿಕೊಂಡರು.

ಗುಡಿಸಲುಗಳ ಕೆಲಸ ಮುಗಿದ ನಂತರ, ಬಡವರು ಹೊರಗಿನ ಕೆಲಸಕ್ಕೆ ಹೋಗುವ ಹಾಗೆ, ಸಮಾಜದ ಕಾರ್ಯಕರ್ತರು ಏರ್ಪಾಡು ಮಾಡಿದರು. ಗಾಳಿ ಮಳೆಗೆ ಸಾರಾಯಿ, ಶೇಂದಿ ಅಂಗಡಿ ಎಲ್ಲವೂ ಬಿದ್ದು ಹೋಗಿ ನೆಲಮಟ್ಟವಾಗಿತ್ತು. ಕುಡಿಯುವವರಿಗೆ ಬೇರೆ ದಾರಿಯಿಲ್ಲದೆ, ಅವರುಗಳೂ ಎಲ್ಲರಂತೆಯೇ ಇದ್ದರು.

'ಧರ್ಮರಾಜಾ' ಗುಡಿಯಲ್ಲಿ ಸುಮಾರು ಒಂದು ತಿಂಗಳ ಕಾಲ, ಬಡವರಿಗೆ ಎರಡು ಹೊತ್ತೂ ಹೊಟ್ಟೆ ತುಂಬ ಗಂಜಿ ಕೊಡಲು ಏರ್ಪಾಡಾಗಿತ್ತು. ದೇಶಭಕ್ತರು ಒಂದು ತಿಂಗಳು ಕೂಲಿಗಳ ಜೊತೆ ಕೂಲಿಯಾಗಿ ದುಡಿದರು.

ಇದಾದ ನಂತರವೇ ನಮ್ಮ ಮನೆ ಸರಿ ಮಾಡಲು ಏರ್ಪಾಡಾಯಿತು. ಮನೆ ಗೋಡೆ ಕಟ್ಟುವ ಕೆಲಸದವರಿಗೆ ಬಹಳ ಗಿರಾಕಿ. ಬಿದ್ದ ಗೋಡೆಗಳನ್ನು ಎಬ್ಬಿಸಲು 2–3 ತಿಂಗಳು ಹಿಡಿಯಿತು. ನಮ್ಮ ಮನೆ ಮಾತ್ರವಲ್ಲ; ಪುದುಚೇರಿ ಪೂರ್ತಿ ಹಾಗೆಯೇ ಇತ್ತು. ವನವಾಸ ಎಂದರೆ ಹೇಗಿರುತ್ತದೆ ಎಂಬುದನ್ನು ನಮಗೆ ತೋರಿಸುವಂತೆ ಇತ್ತು ಊರಿನ ದೃಶ್ಯ. ಆದರೂ ಭಾರತಿಯಾರರ ನಗುವೂ, ತಮಾಷೆಯೂ ಕಮ್ಮಿಯಾಗಲಿಲ್ಲ. 'ದಿಕ್ಕುಹಳ್ ಎಟ್ಟುಂ ಶಿದರಿ' (ದಿಕ್ಕುಗಳು ಎಂಟೂ ಚದರಿ) ಎಂದು ಮಳೆಯ ಹೊಯ್ಯುವ ಹಾಗೆ, ಅಭಿನಯದೊಂದಿಗೆ ಹಾಡಿ ತೋರಿಸುವರು.

ತುರ್ತಾದ ಕೆಲಸಗಳು ಮುಗಿದ ನಂತರ, ಮೊದಲು ನಾವುಗಳು ಹೋಗುತ್ತಿದ್ದ ಮಡು, ತೋಪು ಎಲ್ಲ ಕಡೆಗೂ ಹೋಗಿ ನೋಡಿದರು ಭಾರತಿಯಾರರು. ಒಂದು ಚಿಕ್ಕ ತೋಪು, ನೂರು ಮರಗಳಿರಬಹುದು. ಅಲ್ಲಿ ಕೆಲವು ಮರಗಳು ಮಾತ್ರ ಬಿದ್ದು, ಮಿಕ್ಕೆಲ್ಲವೂ ಸರಿಯಾಗಿಯೇ ಇದ್ದವು. ಅದನ್ನು ನೋಡಿದಾಗ, ಒಬ್ಬ ಬಡವನ ತೋಪನ್ನು ಕಾಪಾಡಿದ ಪರಾಶಕ್ತಿಯನ್ನು ಕುರಿತು ಹಾಡಬೇಕೆಂದು ಅವರಿಗೆ ತೋಚಿತಂತೆ. 'ಪಿಳ್ಳೈತ್ತ ತೆನ್ನಂತೋಪು' (ಉಳಿದ ತೆಂಗಿನ ತೋಪು) ಎನ್ನುವ ಶೀರ್ಷಿಕೆಯಲ್ಲು ಒಂದು ಕವಿತೆ ರಚಿಸಿದರು. 'ಬಡವ ಎಂದರೆ ಗಾಳಿ, ಮಳೆಗೆ ಕೂಡ ಕರುಣೆ ಉಂಟು ಎನ್ನುವುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ?' ಎಂದರು.

ನಾವೆಲ್ಲರೂ ಮರುದಿನ ಅಲ್ಲಿಗೆ ಹೋಗಿ ನೋಡಿದೆವು. ಭಾರತಿಯಾರರು ಹಾಡಿದ ಆ ತೆಂಗಿನತೋಪು ಒಂದು ಪ್ರದರ್ಶನಕ್ಕಿಟ್ಟಂತೆ ಆಯಿತು. ಊರಿನವರೆಲ್ಲರೂ ಆ ತೋಪನ್ನು ಹೋಗಿ ನೋಡಿ ಆನಂದಿಸಿದರು.

ಆ ದಿನಗಳಲ್ಲಿಯೇ ಜಪಾನಿನಲ್ಲಿ ಒಂದು ಹೊಸ ನಿಯಮ ಜಾರಿಗೆ ಬಂದಿತು. ಏನೆಂದರೆ, ಆ ರಾಜ್ಯದ ಭೂ ಭಾಗವನ್ನು ಒಬ್ಬೊಬ್ಬರಿಗೂ ತಲಾ ಇಷ್ಟು ಎಂದು ಭಾಗ ಮಾಡಿ ಕೊಟ್ಟುಬಿಡುವುದು; ನಂತರ ತಮ್ಮ ದೇಶದಲ್ಲಿ ತಿರಿದುಂಬುವವರೂ, ಸೋಮಾರಿಗಳೂ ಇರಬಾರದೆಂದು ನಿಯಮ ಮಾಡಿದರು. (ಅಂದರೆ ಅವರವರ ಭೂಮಿಯಲ್ಲಿ ಅವರವರು ಬೆಳೆ ಬೆಳೆದು ಉಪಯೋಗಿಸುವುದು)

ಇದನ್ನು ತಿಳಿದ ಪುದುಚೇರಿಯ ಹೋರಾಟಗಾರರು ನಮ್ಮ ದೇಶದಲ್ಲಿ ಒಂದು ಚಿಕ್ಕ ಸಂಸಾರ ಸಾಗಿಸಲು ಎಷ್ಟು ಬೇಕಾಗಬಹುದು ಎಂದು ವಿಶ್ಲೇಷಿಸಿದರು.

ಈ ವಿಚಾರವನ್ನು ಭಾರತಿಯಾರರು ತಮ್ಮ 'ಕಾಣಿ ನಿಲಂ ವೇಂಡುಂ' ಎಂಬ ಹಾಡಿನಲ್ಲಿ ಹಾಡಿ ತೋರಿಸಿದ್ದಾರೆ.

'ಇಪ್ಪತ್ತು ವಯಸ್ಸು ದಾಟಿದ ಮೇಲೆ (ತನಿ) ಸಂಸಾರ ನಡೆಸಬೇಕು. ಅಲ್ಲಿಯ ತನಕ ಮಕ್ಕಳನ್ನು ನೋಡಿಕೊಳ್ಳುವುದು ಹೆತ್ತವರ ಹೊಣೆ. ತದನಂತರ ಅವರವರ ಹೊಟ್ಟೆಪಾಡನ್ನು ಅವರವರೇ ನೋಡಿಕೊಳ್ಳಬೇಕು; ತಾಯಿ ತಂದೆಯರಿಗೆ ಭಾರವಾಗಿ ಇರಕೂಡದು' ಎನ್ನುವರು ಭಾರತಿಯಾರರು.

(19) ವೇಂಡುಮಡಿ ವಿಡುದಲೈ

ಬಿರುಗಾಳಿ ಮಳೆಯಿಂದ ಕಾಪಾಡಿದ ಪರಾಶಕ್ತಿಯನ್ನು ಶೆಲ್ಲಮ್ಮಾ, ಭಾರತಿಯಾರರು ಇಬ್ಬರೂ ವಿಶೇಷವಾಗಿ ಪೂಜಿಸಿದರು. ನಮ್ಮನ್ನೆಲ್ಲಾ ಪೂಜೆಗೆ ಕರೆದಿದ್ದರು. ನಾನು, ಮೀನಾ, ಅವರ ಅತ್ತಿಗೆ, ಮೀನಾವಿನ ತಾಯಿ, ಶಂಕರಶೆಟ್ಟಿಯಾರರ ಮಗಳು ಪದ್ಮಾವತಿ, ಅವಳ ಮಗು ರಾಜಿ, ಪುರೋಹಿತರ ಪತ್ನಿ, ಭಾಗ್ಯಲಕ್ಷ್ಮಿ ಅಮ್ಮ ಎಲ್ಲರೂ ಭಾರತಿಯಾರರ ಮನೆಯಲ್ಲಿ ಸೇರಿದ್ದೆವು. ಪೂಜೆಯೆಲ್ಲಾ ಮುಗಿದ ಮೇಲೆ ಭಾರತಿಯಾರರು 'ವಂದೇ ಮಾತರಂ' ಹಾಡಿ ಬಿಟ್ಟು, ತಾವು ಹೊಸದಾಗಿ ರಚಿಸಿದ 'ಪೆಣ್ಕೈ ವಾಳ್‌ವೆನ್ರು' ಎಂಬ ಹಾಡನ್ನು ಇಂಗ್ಲೀಷ್ ನೋಟಿನ ಮೆಟ್ಟಿನಲ್ಲಿ ಹಾಡಿದರು. ನಂತರ ನಮ್ಮಗಳನ್ನೆಲ್ಲಾ ಕರೆದು ಒಬ್ಬೊಬ್ಬರು ಒಂದೊಂದು ಹಾಡನ್ನು ಹಾಡುವಂತೆ ಆದೇಶಿಸಿದರು. ಮೀನಾವಿನ ತಾಯಿ ಒಪ್ಪಲಿಲ್ಲ.

ಭಾರತಿ:– ನೀವು ಹಿರಿಯರು. ಚಿಕ್ಕವರು ಹಾಡಲಿ ಅಮ್ಮ; ಇಲ್ಲಿ ಪರಪುರಷರು ಯಾರೂ ಇಲ್ಲ. ಇಲ್ಲಿ ಇರುವವರೆಲ್ಲಾ ನಿಮ್ಮ ಅಣ್ಣತಮ್ಮಂದಿರೇ.

ಮೀನಾವಿನ ತಾಯಿ ತಮ್ಮ ಮಗಳು, ಸೊಸೆ ಎಲ್ಲರನ್ನೂ ಹಾಡುವಂತೆ ಹೇಳಿದರು. ನಂತರ ಅರಿಶಿನ, ಕುಂಕುಮ, ತಾಂಬೂಲ ತೆಗೆದುಕೊಂಡು ಮನೆಗೆ ಹೊರಟೆವು.

ಮೀನಾವಿನ ತಾಯಿ:– ನೀವು ಇಷ್ಟು ಸಲೀಸಾಗಿರುವಿರಿ ಎಂದು ನನಗೆ ತಿಳಿಯದು. ನಾನು ಹಳೆಯ ಕಾಲದವಳು. ಆ ಕಾಲದ ಗಂಡಸರು ಎದುರಿನಲ್ಲಿ ಕೇಳಿ, ಹಿಂದುಗಡೆ ಗೇಲಿ ಮಾಡುವುದು, ಸುದ್ದಿ ಮಾಡಿ ವದಂತಿ ಹಬ್ಬಿಸುವುದು ವಾಡಿಕೆ. ಆದ್ದರಿಂದ ಹೇಳಿದೆ. ತಪ್ಪಾಗಿ ತಿಳಿಯಬೇಡಿ.

ಭಾರತಿ:– ನಾವು ಆ ತರಹ ಕುಟಿಲ ಮಾಡುವುದಿಲ್ಲ. (ನಯವಂಚಕರಲ್ಲ) ದಾಸ್ಯವನ್ನು ಆಮೂಲಾಗ್ರವಾಗಿ ವಿರೋಧಿಸುವವರು.

ಮೀನಾವಿನ ತಾಯಿ:– ಅದು ಸರಿ ... ತಂಗವಮ್ಮಾವಿಗೆ ಮದುವೆ ಮಾಡುವುದಿಲ್ಲವೇ?

ಭಾರತಿ:– ಈಗ ಸದ್ಯಕ್ಕೆ ಇನ್ನೂ ಯೋಚನೆ ಮಾಡಿಲ್ಲ. ಆಮೇಲೆ ನೋಡೋಣ.

ಮೀನಾವಿನ ತಾಯಿ:– ನಮ್ಮ ಕಾಲದಲ್ಲೆಲ್ಲಾ ಎಂಟನೆಯ ವಯಸ್ಸಿಗೇ ಆತುರ ಪಡುವರು. ಈಗ ಹದಿನಾರಾದರೂ ಯಾರೂ ಕೇಳುವವರಿಲ್ಲ. ಆದಷ್ಟು ಬೇಗ ಒಬ್ಬ ಒಳ್ಳೆಯ ವರನನ್ನು ನೋಡಿ ಕೊಟ್ಟುಬಿಡು ಶೆಲ್ಲಮ್ಮಾ.

ಶೆಲ್ಲಮ್ಮಾ:– ಹಣಬೇಡವೇ ಅಮ್ಮಾ ಯಾವುದಕ್ಕೂ! ನಮ್ಮ ಊರುಗಳಲ್ಲಿ ವರದಕ್ಷಿಣೆ ಭೂತ ತಲೆದೋರಿದೆ. ಒಳ್ಳೆಯ ವರ ಎಲ್ಲಿಂದ ತರುವುದು?

ಮೀನಾವಿನ ತಾಯಿ:– ಬಹಳ ಮುಖ್ಯವಾದದ್ದು ವರ. ಅದು ಸಿಕ್ಕಿದರೆ ಹಣವನ್ನು ಹೇಗೋ ಸರಿ ಹೊಂದಿಸಿಕೊಳ್ಳಬಹುದು. ತಪ್ಪಾಗಿ ತಿಳಿಯಬೇಡ ಶೆಲ್ಲಮ್ಮಾ. ಏನೋ ನನಗೆ ತೋಚಿದ್ದನ್ನು ಹೇಳಿದೆ.

ಶೆಲ್ಲಮ್ಮಾ:– ತಪ್ಪೇನೂ ಇಲ್ಲ ಅಮ್ಮಾ ನೀವು ಹೇಳಿದ್ದು; ಈ ವರುಷ ಕಾಶಿಯಿಂದ ನನ್ನ ಅಕ್ಕ ಬರುತ್ತಾಳೆ. ಅವಳು ಸಾಕಿದ ಮಗು ನನ್ನ ತಂಗಮ್ಮಾ, ಹೇಗಾದರೂ ಮದುವೆ ನಡೆಸಿಕೊಟ್ಟೇ ಕಾಶಿಗೆ ಹಿಂದಿರುಗುವಳು.

ಶೆಲ್ಲಮ್ಮಾ ಯಾವುದೋ ವಿಷಯವನ್ನು ಹೇಳಲಾಗದೆ, ಮನಸ್ಸಿನಲ್ಲಿಟ್ಟುಕೊಂಡು ಒದ್ದಾಡುತ್ತಿರುವಂತೆ (ಕಷ್ಟ ಪಡುತ್ತಿರುವಂತೆ) ನನಗೆ ತೋರಿತು. ಶೆಲ್ಲಮ್ಮಾ ಮತ್ತು ಭಾರತಿಯಾರರ ನಡೆನುಡಿಯಲ್ಲಿ ಬದಲಾವಣೆ ಏಕೆಂದು ನನಗೆ ತಿಳಿಯಲಿಲ್ಲ.

ಆ ಸಮಯ ನನ್ನ ತಾಯಿ ಬೇರೆ ಊರಿಗೆ ಹೋಗಿದ್ದರು. ಮಗುವಿಗೆ ಎಣ್ಣೆ ಹಚ್ಚಿ ಸ್ನಾನ ಆಡಿಸಲು ನನಗೆ ಬರುತ್ತಿರಲಿಲ್ಲ. ಸಂಜೆ ನಾಲ್ಕಕ್ಕೆ ಶೆಲ್ಲಮ್ಮಾ ಬರುವರು. ಬಿಸಿ ನೀರು, ಎಣ್ಣೆ ಮುಂತಾಗಿ ಸ್ನಾನಕ್ಕೆ ಬೇಕಾದ ಸಾಮಾನುಗಳನ್ನು ತಯಾರಾಗಿಟ್ಟಿರುತ್ತಿದ್ದೆ. ಅವರು ಮಗುವಿಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸುವರು. ನಂತರ ನಾವುಗಳು ತಲೆ ಬಾಚಿಕೊಂಡು, ಕಡಲದಂಡೆಗೆ ಹೋಗುವೆವು. ಭಾರತಿಯಾರರೂ ಬರುವರು. ಆದರೆ ಅವರು ಮೊದಲಿನಂತೆ ಇರುತ್ತಿರಲಿಲ್ಲ. ಮನಸ್ಸಿದ್ದರೆ ನಮ್ಮೊಂದಿಗೆ ಕುಳಿತು ಮಾತನಾಡುವರು. ಧಿಢೀರೆಂದು (ಇದ್ದಕ್ಕಿದ್ದಂತೆ) ಅವರಿಗೂ ಶೆಲ್ಲಮ್ಮಾವಿಗೂ ಮನಸ್ತಾಪ ಬಂದು ಬಿಡುವುದು. ಎದ್ದು ಹೋಗಿ ದೂರದಲ್ಲಿ, ಮರಳಿನ ಹರವಿನಲ್ಲಿ ಒಬ್ಬರೇ ಕುಳಿತಿರುತ್ತಿದ್ದರು. ಮನೆಗೆ ಹಿಂತಿರುಗುವಾಗ ಮತ್ತೆ ನಮ್ಮೊಂದಿಗೆ ಸೇರಿಕೊಳ್ಳುತ್ತಿದ್ದರು.

ಶಿವನ ಗುಡಿಗೆ ಸೇರಿದ ಶಿವಭಕ್ತರು, ಶಿವರಾತ್ರಿ ಭಜನೆಗೆ ಒಂದು ಹಾಡು ಹಾಡಿಕೊಡುವಂತೆ ಭಾರತಿಯಾರರನ್ನು ಕೇಳಿದರು. ಅದಕ್ಕಾಗಿ ಅವರು 'ಮುರುಗಾ,

ಮುರುಗಾ, ಮುರುಗಾ' ಎಂಬ ಹಾಡನ್ನು ರಚಿಸಿದರು. 'ಇಪ್ಪತ್ತು ಮಂದಿ ಒಟ್ಟಾಗಿ ಸೇರಿ ಇದನ್ನು ಹಾಡಿದರೆ, ನಿಜವಾಗಿಯೇ ಮೈಮೇಲೆ ಆವೇಶ ಬಂದು ಬಿಡುತ್ತದೆ' ಎನ್ನುವರು.

ಈ ಸಮಯದಲ್ಲಿ ಅವರು 'ತಿರುವಾಯ್ಮೊಳಿ'ಯಲ್ಲಿ ನಮ್ಮಾಳ್ವಾರ್ ಹಾಡಿರುವ 'ಇವೆಯುಂ ಅವೆಯುಂ ಉವೆಯುಂ, ಇವರುಂ, ಅವರುಂ, ಉವರುಂ, ಎವೆಯುಂ ಯಾವೆಯುಂ ತನ್ನುಳ್ಳೇ, ಆಜಯುಂ ಅಕ್ಕಿಯುಂ, ಕಾಕ್ಕುಂ, ಅವೆಯುಂ ತನಮುದಲ್ ಎಮ್ಮಾನ್, ಕಣ್ಣಪಿರಾನ್ ಎನ್ನಮುದನ್, ಶುವೆಯನ್ ತಿರುವಿನ್ ಮಣಾಳನ್, ಎನ್ನುಡೈ ಶುದ್ರಿಲುಳ್ಳಾನೇ' ಎಂದು ಆರಂಭವಾಗುವ ಹತ್ತು ಹಾಡುಗಳನ್ನೂ ತಮ್ಮ ತಲೆ, ಹೃದಯ, ಹಣೆ (ಉಚ್ಚಿ) ನಾಲಗೆ, ತೋಳು ಇವುಗಳಲ್ಲಿ ಭಗವಂತನು ಹರಡಿರುವ ಭಾವವನ್ನು ಅಭಿನಯಿಸಿ ತೋರುವರು. ಇದರ ತಾತ್ಪರ್ಯವನ್ನು ನಾನು ಆಗ ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ. ಇವರು (ಭಾರತಿ) ತಾನೇ ದೈವವೆಂದು ತನ್ನನ್ನೇ ಹೇಳಿಕೊಳ್ಳುತ್ತಾರಲ್ಲಾ, ಅವರವರ ಕಷ್ಟಗಳನ್ನು ಕೊನೆಗಾಣಿಸದ ದೈವ, ಏನು ಶಕ್ತಿಯಿಲ್ಲದ ದೈವವೋ ಎಂದು ನಾನು ಭಾವಿಸುತ್ತಿದ್ದೆ. ಹೀಗಿದ್ದರೂ ಅವರ (ಭಾರತಿಯಾರರ) ಮೇಲಿನ ಭಕ್ತಿ, ಪ್ರೀತಿ, ಮಮತೆ ಯಾವುದೂ ಕಡಿಮೆಯಾಗಲಿಲ್ಲ.

ಭಾರತಿಯಾರರು ಈಗ ಮೊದಲಿನಂತೆ ಇಲ್ಲ. ಅವರ ನಡೆನುಡಿ (ನಡವಳಿಕೆ) ಬಹಳ ವೇಗವಾಗಿ ಬದಲಾಗುತ್ತಾ ಹೋಯಿತು. ಅವರನ್ನು ಯಾರೋ ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎನಿಸಿತು. ಆದರೆ ಯಾರಿಂದಲೂ ಅವರು ನಡೆಯುತ್ತಿದ್ದ ದಾರಿಯನ್ನು (ನಡವಳಿಕೆಯನ್ನು) ಬದಲಾಯಿಸಲು ಸಾಧ್ಯವಾಗಲಿಲ್ಲ. ಶೆಲ್ಲಮ್ಮಾವಿನ ಬೇಡಿಕೆಯನ್ನೂ ತಿರಸ್ಕರಿಸಿ, ಅವರು ಆ ದಾರಿಯಲ್ಲಿ ಮುನ್ನಡೆಯುತ್ತಿದ್ದಾರೆದು ತಿಳಿಯಿತು.

ಮೊದಲಿನಂತೆ ಅವರ ಬಳಿ ಸಲುಗೆಯಿಂದ ಮನಬಿಚ್ಚಿ ಕೇಳಲು ಈಗ ನಾನು ಮಗುವಲ್ಲ; ಒಂದು ಮಗುವಿನ ತಾಯಿ. ಆದ್ದರಿಂದ ಶೆಲ್ಲಮ್ಮಾವಿನ ಬಳಿ ಧಾರಾಳವಾಗಿ ಮಾತನಾಡುವ ಹಾಗೆ, ಅವರ ಬಳಿ ಮಾತನಾಡಲು ಸಾಧ್ಯವಿಲ್ಲ.

ಭಾರತಿಯಾರರು ಯಾವಾಗಲೂ ಎಲ್ಲಾ ವಸ್ತುಗಳನ್ನೂ ನೆಟ್ಟ ದೃಷ್ಟಿಯಿಂದ ಕಣ್ಣಿಟ್ಟು ನೋಡುವರು. ಆದರೆ ಈಗೆಲ್ಲಾ ಅವರ ಕಣ್ಣಿನಲ್ಲಿ ಮೊದಲಿದ್ದ ಅಂದ (ಸೌಂದರ್ಯ) ಇಲ್ಲ. 'ಸೂರ್ಯನನ್ನು ನೋಡಿ ನೋಡಿ ದೃಷ್ಟಿ ವಿಕಾರವಾಗಿ ಬಿಟ್ಟಿತು' ಎನ್ನುವರು ಶೆಲ್ಲಮ್ಮಾ.

ಒಂದು ದಿನ ಅವರು ನಮ್ಮ ಮನೆಗೆ ಬಂದರು. ಆಗ 'ವೇಂಡುಮಡಿ

ವಿಡುದಲೈ' (ಬಿಡುಗಡೆ ಬೇಕಾಗಿದೆ) ಎಂಬ ಹಾಡನ್ನು ಕೀರ್ತನೆಯ ಮೆಟ್ಟಿನಲ್ಲಿ ಹಾಡಿದರು.

ನಾನು:– ಇದೇನು! ಕೀರ್ತನೆಯಾಗಿ ರಚಿಸಿದ್ದೀರಿ?

ಭಾರತಿ:– ತಂಗಮ್ಮಾ 'ನಿನ್ನ ಹಳೆಯ ಮಟ್ಟುಗಳೆಲ್ಲಾ ಚೆನ್ನಾಗಿಲ್ಲ. ಕೀರ್ತನೆಯಾಗಿ ಮಾಡಿಕೊಡು' ಎಂದು ಕೇಳಿದಳು. ಚೆನ್ನಾಗಿದೆಯೇ?

ನಾನು:– ಚೆನ್ನಾಗಿದೆ.

ಭಾರತಿ:– ಯದುಗಿರಿ, ನಾನು ಒಂದು ಹೊಸ ಮಾರ್ಗ ಹುಡುಕುತ್ತಿದ್ದೇನೆ.

ನಾನು:– ಅದೇನು ಮಾರ್ಗ?

ಭಾರತಿ:– ಜೀವಿಗಳು ಅಥವಾ ಮನುಷ್ಯರು ಸಾಯದೆ ಇರಬೇಕು. (ಯಾರೂ ಸಾಯಬಾರದು) ಅದನ್ನು ಕಂಡು ಹಿಡಿಯುತ್ತೇನೆ.

ನಾನು:– ಎಲ್ಲಾ ಅತಿಶಯ (ಪವಾಡ)ಗಳನ್ನೂ ಮಾಡಬಹುದು. ಆದರೆ ಸಾಯದೆ ಇರಲು ಸಾಧ್ಯವಿಲ್ಲ ಎಂದು ಎಲ್ಲರೂ ಹೇಳುತ್ತಾರೆ. ನೀವು ಅದನ್ನು ಕಂಡು ಹಿಡಿದರೆ, ಅದು ನಂಬಲಾಗದ ಅತಿಶಯವೇ! (ಮಹತ್ತಾದ ಪವಾಡವೇ)

ಭಾರತಿ:– ನಾನು ಅದಕ್ಕಾಗಿ ಪ್ರಯತ್ನ ಪಡುತ್ತಿದ್ದೇನೆ. ಅದು ಖಂಡಿತ (ಆ ಮಾರ್ಗ) ಸಿಕ್ಕೇ ಸಿಗುತ್ತದೆ ಎನಿಸುತ್ತಿದೆ.

ಆಗ ನನ್ನ ತಂದೆ ಅಲ್ಲಿಗೆ ಬಂದರು. ಅವರು – 'ಗುಬ್ಬಿಯ ತಲೆ ಮೇಲ ಬ್ರಹ್ಮಾಸ್ತ್ರ ಎಂಬಂತೆ, ಅವಳಿಗೇಕೆ ಈ ವೇದಾಂತದ ವಿಚಾರಗಳೆಲ್ಲಾ ಭಾರತಿ? ವಯಸ್ಸಾದ ಹಾಗೆಲ್ಲಾ ತಾನೇ ತಿಳಿದುಕೊಳ್ಳುತ್ತಾಳೆ. ಈಗ ಅಂತಹ ಬೇಡದ ವಿಚಾರಗಳೆಲ್ಲಾ ಬೇಕಾಗಿಲ್ಲ' ಎಂದರು.

ಭಾರತಿಯಾರರು ಮರು ಮಾತಾಡಲಿಲ್ಲ. ಮಾತಾಡದೆ ಅಲ್ಲಿಂದ ಎದ್ದು ಹೋಗಿಬಿಟ್ಟರು. ಅವರು ನನಗೆ ಕೊಟ್ಟು ಹೋದ ಹಾಡಿನ ಬರಹವನ್ನು ಇಟ್ಟುಕೊಂಡು, ಆ ಹಾಡನ್ನು ನಾನು ಮತ್ತೆಮತ್ತೆ ಹಾಡಿಕೊಳ್ಳುತ್ತಿದ್ದೆ.

(20) 'ನೀರೋಟ್ಟಂ' (ಜಲಧಾರೆ)

ಬೆಳಗಿನ ಜಾವ ಕಡಲ ತೀರಕ್ಕೆ ಹೋಗಿ ಪ್ರತಿ ದಿನ ಒಂದು ಗಂಟೆ ಸುತ್ತಾಡಿದರೆ ನನ್ನ ದೇಹ ಆರೋಗ್ಯ ಹೊಂದುತ್ತದೆ ಎಂದು ಡಾಕ್ಟರ್ ಅಂಬು ಎಂಬುವರು ಹೇಳಿದರು. ಅದರಂತೆ ಅನುಸರಿಸಿದೆ. ಮಗುವನ್ನು ನನ್ನ ತಾಯಿಯ ಬಳಿ ಬಿಟ್ಟು, ಸಮುದ್ರ ತೀರಕ್ಕೆ ಹೋಗುವೆ. ನನಗೆ ಜೊತೆಯಾಗಿ ನನ್ನ ತಂದೆಯೂ, ತಂಗಿಯೂ ಬರುವರು. ಸುಮಾರು ಒಂದು ತಿಂಗಳ ತನಕ ಈ ಕ್ರಮ

ಮುಂದುವರಿಯಿತು.

ಒಂದು ದಿನ ನಾವುಗಳು ಕಡಲ ದಂಡೆಯಲ್ಲಿ ಸುತ್ತಾಡುತ್ತಿರುವಾಗ ಎಲ್ಲಿಂದಲೋ ಹಾಡಿನ ಶಬ್ದ ಕೇಳಿಸಿತು. ಉದಯ ರಾಗದಲ್ಲಿ, ಮನಸ್ಸು ಕರಗುವಂತೆ ಆ ಹಾಡು ಅಷ್ಟು ಮಧುರವಾಗಿದ್ದಿತು. ಸ್ವಲ್ಪ ಗಮನಿಸಿ ಕೇಳಿದಾಗ ಅದು 'ನಮ್ಮಾಳ್ವಾರರ ತಿರುವಾಯ್ಮೊಳಿ'ಯ ಪಾಶುರ (ಪದ್ಯ) ಎಂದು ತಿಳಿಯಿತು. ಮತ್ತೂ ಕಿವಿಗೊಟ್ಟು ಕೇಳಿದಾಗ ಆ ಧ್ವನಿ (ಕಂಠ) ಥಾಳಾಗಿ ಕಿವಿಗೆ ಬಿತ್ತು. ಆಗಾಗ ಕೇಳಿ ಪಳಗಿದ ಭಾರತಿಯಾರರ ಕಂಠ (ಧ್ವನಿ)ದಂತಿತ್ತು (ಕೊರಲಿನಂತಿತ್ತು). ಸಂದೇಹವನ್ನು ತೀರಿಸಿಕೊಳ್ಳಲು ನನ್ನ ತಂದೆಯವರನ್ನು ಕೇಳಿದೆ.

ನಾನು:– ಅಯ್ಯಾ, ಈ ಕಂಠ ಭಾರತಿಯಾರರದೆಂದು ತೋರುತ್ತಿದೆಯಲ್ಲಾ?

ಶ್ರೀಶ್ರೀ:– ಬಾಮ್ಮಾ, ಹೋಗಿ ನೋಡೋಣ.

ಮೂವರೂ ಹಾಡಿನ ಧ್ವನಿ ಬಂದ ಕಡೆಗೆ ಹೋಗಿ ನೋಡಿದೆವು.

ಅಲ್ಲಿ ಒಂದು ಮೋಟು ಮರದ ಮೇಲೆ ಕುಳಿತಿದ್ದರು ಭಾರತಿಯಾರರು. ಕರಿಯ ಅಂಗಿ, ಕಚ್ಚೆ ಪಂಚೆ, ಕೈಮುಗಿದ ಕರಗಳು, ಕಡಲಿನಲ್ಲಿ ಉದಯಿಸುತ್ತಿದ್ದ ಸೂರ್ಯನನ್ನು ನೆಟ್ಟನೋಟದಿಂದ ನೋಡುತ್ತಾ ಅವರು ಹಾಡುತ್ತಿದ್ದರು. ಇನ್ನೂ ಚೆನ್ನಾಗಿ ಬೆಳಕಾಗಿರಲಿಲ್ಲ. ಮಸಕು ಮಸಕಾಗಿದ್ದಿತು. ಗಂಭೀರವಾದ ಹಾಡು, ಚಿತ್ತಾಕರ್ಷಕವಾದ ರಾಗ, ಹಾಡಿನ ಉತ್ತಮವಾದ ತಾತ್ಪರ್ಯ ಎಲ್ಲವೂ ಸೇರಿ, ನಾವುಗಳು ನಿಜವಾಗಿಯೂ ಭಗವಂತನನ್ನೇ ಕಾಣುತ್ತಿರುವೆವೇನೋ ಎಂದು ರೋಮಾಂಚನ ಗೊಂಡೆವು. ಮನಸ್ಸು ತಂಪಾಯಿತು.

ಶ್ರೀಶ್ರೀ:– ಭಾರತಿ, ಇಲ್ಲೇನು ಮಾಡುತ್ತಿದ್ದೀರಿ?

ಭಾರತಿ:– ಯಾರು? ಅಣ್ಣನೇ! ಇಷ್ಟು ಮುಂಜಾನೆ ಮಕ್ಕಳೊಡನೆ ಎಲ್ಲಿಗೆ ಬಂದಿರಿ?

ಶ್ರೀಶ್ರೀ:– 'ಕಡಲ ತೀರದಲ್ಲಿ ಬೆಳಗಿನ ಜಾವ ಒಂದು ಗಂಟೆ ನಡೆದಾಡಿದರೆ ಒಳ್ಳೆಯದು ಎಂದು ವೈದ್ಯರು ಯದುಗಿರಿಗೆ ಹೇಳಿದರು. ಕೆಲ ದಿನಗಳಿಂದ 5ರಿಂದ 6 ಗಂಟೆಯವರೆಗೆ ಇಲ್ಲಿ ನಡೆದಾಡುತ್ತೇವೆ.'

ಹಾಡನ್ನು ಕೇಳಿ, ಭಾರತಿಯಾರರು ಹಾಡುತ್ತಿರುವ ಹಾಗಿದೆ ಎಂದು ಯದುಗಿರಿ ಹೇಳಿದಳು. ಇಲ್ಲಿ ಬಂದು ನೋಡಿದರೆ ಸಾಕ್ಷಾತ್ ನೀವೇ ಕುಳಿತುಕೊಂಡು ಹಾಡುತ್ತಿರುವಿರಿ.

ಭಾರತಿ:– 'ರಾತ್ರಿಯೇ ಇಲ್ಲಿಗೆ ಬಂದೆ. ಕಲ್ಪನಾಲೋಕದಲ್ಲಿ ವಿಹರಿಸುತ್ತಿದ್ದೆ. ಎದ್ದು ನೋಡಿದರೆ ಕಡಲ ತೀರ, ತಂಪಾದ ವೇಳೆ 'ತಿರುವಾಯ್ಮೊಳಿ'ಯ ಹಾಡಿನಲ್ಲಿ ಮೈ ಮರೆತಿದ್ದೆ. ನೀವು ಬಂದು ಕರೆದಿರಿ.'

ಶ್ರೀಶ್ರೀ:– (ಬೇಸರದಿಂದ) 'ಮನೆಯಲ್ಲಿ ಎಲ್ಲರೂ ಎಷ್ಟು ಯೋಚನೆ ಮಾಡುತ್ತಾರೆ? ಒಳ್ಳೆ ಕಲ್ಪನಾ ಲೋಕ! ನೀವು ಈ ರೀತಿ ಮಾಡುವುದು ಸರಿಯೇ?'

ಭಾರತಿ:– (ತಲೆ ತಗ್ಗಿಸಿ) 'ಬಿಸಿಲಿನ ಬೇಗೆ ಸಹಿಸಲಾಗಲಿಲ್ಲ. ಈ ಕಡಲ ತೀರದ ಕಲ್ಪನಾ ಲೋಕ ಎಲ್ಲಾ ವಿಷಯಕ್ಕೂ ಅನುಕೂಲವಾಗಿದೆ ... ಶೆಲ್ಲಮ್ಮಾ ನಿಮ್ಮ ಮನೆಗೆ ಬಂದು ವಿಚಾರಿಸಿದಳೇ? ನಾನೇನು ಸಣ್ಣ ಮಗುವೇ?'

ನಮ್ಮ ತಂದೆ ... ಒಡಹುಟ್ಟಿದ ಸಹೋದರನನ್ನು ಮಮತೆಯಿಂದ ತಬ್ಬುವಂತೆ, ಅವರ ಎರಡು ಕೈಗಳನ್ನೂ ಹಿಡಿದು ಅವರನ್ನು ಆ ಮೋಟು ಮರದಿಂದ ಕೆಳಗಿಳಿಸಿದರು. ನಮ್ಮನ್ನು ನೋಡಿ 'ನೀವುಗಳು ನಿಧಾನವಾಗಿ ಹೋಗುತ್ತಿರಿ, ನಾವು ನಿಮ್ಮ ಹಿಂದೆಯೇ ಬರುತ್ತೇವೆ' ಎಂದರು. ಭಾರತಿಯಾರರೊಂದಿಗೆ ಇಂಗ್ಲೀಷಿನಲ್ಲಿ ಮಾತಾಡಿದರು. ಅವರು ಬದಿಲೇ ಹೇಳಲಿಲ್ಲ. ಆದರೆ ಅವರ ಕಣ್ಣಿನಲ್ಲಿ ಧಾರೆಧಾರೆಯಾಗಿ ನೀರಿಳಿಯಿತು. ಆ ದೃಶ್ಯ ಇಂದಿಗೂ ನನ್ನ ಕಣ್ಣ ಬಿಟ್ಟು ಅಗಲುತ್ತಿಲ್ಲ.

ಎಲ್ಲರೂ ಭಾರತಿಯಾರರ ಮನೆಗೆ ಹೋದೆವು. ಶೆಲ್ಲಮ್ಮಾ ಬಾಗಿಲಿನಲ್ಲಿ ನಿಂತಿದ್ದರು. ತಂಗಮ್ಮಾ, ಶಕುಂತಲಾ ಇಬ್ಬರೂ ನಿದ್ದೆ ಮಾಡುತ್ತಿದ್ದರು. ಶೆಲ್ಲಮ್ಮಾ, ಭಾರತಿಯಾರರನ್ನು 'ಎಲ್ಲಿ ಹೋಗಿದ್ದಿರಿ' ಎಂದು ಕೇಳಲಿಲ್ಲ. ನನ್ನ ತಂದೆಯನ್ನು ನೋಡಿದ ಕೂಡಲೆ ಒಳಗೆ ಹೋದರು. ನಾವು ತಂಗಮ್ಮಾ, ಶಕುಂತಲಾ ಇಬ್ಬರನ್ನೂ ಎಬ್ಬಿಸಿಬಿಟ್ಟು ಮನೆಗೆ ಹೋಗಿ ಸೇರಿದೆವು.

ನನ್ನ ತಂಗಿ ನಮ್ಮ ತಂದೆಯವರನ್ನು ಪ್ರಶ್ನಿಸಿದಳು.

ರಂಗನಾಯಕಿ:– 'ಅಯ್ಯಾ, ಭಾರತಿಯಾರರ ಕಣ್ಣಿನಲ್ಲಿ ಏಕೆ ಅಷ್ಟು ನೀರು? ಅತ್ತರೇ? ಏತಕ್ಕಾಗಿ?'

ಶ್ರೀಶ್ರೀ:– 'ಕಣ್ಣಿನಲ್ಲಿ ಕಡಲ ಮರಳಿನ ಕಣಗಳು ಬಿದ್ದಿರಬಹುದು.'

ನಾನು:– 'ಅಯ್ಯಾ, ಭಾರತಿಯಾರರು ರಾತ್ರಿಯೆಲ್ಲಾ ಮನೆಗೆ ಬರದಿದ್ದರೂ ಕೂಡ, ಶೆಲ್ಲಮ್ಮಾ ಅವರನ್ನು ಏನೂ ಕೇಳಲೇ ಇಲ್ಲ!'

ಶ್ರೀಶ್ರೀ:– 'ಇದು ಮೊದಲನೆಯ ಸಲವಾಗಿರಲಾರದು. ಹೀಗೆ ಎಷ್ಟು ದಿನಗಳಿಂದ ರಾತ್ರಿ ವೇಳೆ ಸಮುದ್ರ, ಮಡು, ತೋಪು ಎಂದು ಸುತ್ತುತ್ತಿದ್ದಾರೋ! ಯಾರಿಗೆ ಗೊತ್ತು?"

ನಾನು:– ಅಯ್ಯಾ, ಅವರು ಈಗೆಲ್ಲಾ ಮೊದಲಿನಂತೆ ಯಾಕೆ ಇಲ್ಲ? ನಾನು ಊರಿಗೆ ಬಂದ ದಿವಸದಿಂದ ಗಮನಿಸುತ್ತಿದ್ದೇನೆ. ಏಕೆ ಅವರ ಮನೆಯಲ್ಲಿ ಒಂದು ತರಹ ಸಂಧಿಗ್ನ ವಾತಾವರಣ?'

ಶ್ರೀಶ್ರೀ:– 'ಶೆಲ್ಲಮ್ಮಾವನ್ನೋ, ಭಾರತಿಯಾರರನ್ನೋ ಈ ವಿಷಯ ಏನೂ ಕೇಳಬೇಡ. ಮನಃ ಕಷ್ಟ ಪಡುತ್ತಾರೆ.'

ಅಂದು ಸಂಜೆ ಅಯ್ಯರ್ ಅವರು ಬಂದರು. ಪ್ರತಿದಿನದಂತೆ ಕಡಲತೀರಕ್ಕೆ ಹೋದೆವು. ಬೆಳಿಗ್ಗೆ ನಡೆದುದನ್ನು ನಾನು ಅವರಿಗೆ ಹೇಳಿದೆ.

ಅಯ್ಯರ್:– 'ಅಯ್ಯಾ, (ನನ್ನ ತಂದೆ) ಕರೆದ ತಕ್ಷಣ ಅವರಿಗೆ ಗೊತ್ತಾಯಿತೆ?'

ನಾನು:– ಹಾಂ, ತಿಳಿದುಕೊಂಡರು. ಆಶ್ಚರ್ಯಪಟ್ಟರು. ನಾವು ದಿನವೂ ಸಮುದ್ರ ತೀರದಲ್ಲಿ ನಡೆದಾಡುವುದನ್ನು ಹೇಳಿದ ಮೇಲೆ, ಒಂದು ನೆಲೆಗೆ ಬಂದರು. ಅವರು ಏಕೆ ಆ ಸ್ಥಿತಿಯಲ್ಲಿ ಇದ್ದಾರೆಂದು ನನಗೆ ತಿಳಿಯಲಿಲ್ಲ. ನಮ್ಮ ತಂದೆಯೂ ಸರಿಯಾಗಿ ತಿಳಿಸಲಿಲ್ಲ. ಶೆಲ್ಲಮ್ಮಾ ಕೂಡ ದುಃಖ ಮಡುಗಟ್ಟಿ ಮಾತೇ ಬರದಂತಹ ಸ್ಥಿತಿಯಲ್ಲಿದ್ದಾರೆ. ಎಲ್ಲಾ ಒಗಟಿನಂತೆ ತೋರುತ್ತಿದೆ. ನೀವಾದರೂ ಹೇಳಿ ಅಯ್ಯರೇ, ಯಾಕೆ ಹೀಗೆಂದು?'

ಅಯ್ಯರ್:– ಅವರಿಗೆ (ಭಾರತಿಯಾರರಿಗೆ) ಯಾವುದಾದರೂ ಒಂದು ಹೊಸದಾಗಿ ತೋಚಿದರೆ, ಅದನ್ನು ಮಾಡುವುದೋ ಬೇಡವೋ ಎಂದು ಕೂಡ ಯೋಚಿಸುವುದಿಲ್ಲ. ನಾನೂ ಅವರಿಗೆ ಬಹಳ ಮಟ್ಟಿಗೆ ಹೇಳಿ ನೋಡಿದೆ. ಆದರೂ ಅವರು ಅವರ ಪಾಡಿಗೆ ಕಣ್ಣು ಮುಚ್ಚಿಕೊಂಡು ಆ ದಾರಿಯಲ್ಲಿ ಮುಂದುವರಿಯುತ್ತಿದ್ದಾರೆ. ಇದು ಇನ್ನೂ ಎಷ್ಟರಮಟ್ಟಿಗೆ ಅಪಾಯ ತಂದೊಡ್ಡುವುದೋ ಗೊತ್ತಿಲ್ಲ. ಈ ಸಮಯಕ್ಕೆ ಅವರ ಮನೆಯ ಕಷ್ಟ ತೀರುವಂತೆ ತೋರುವುದಿಲ್ಲ. ಮನೆ ಯಜಮಾನಿ ಮಕ್ಕಳನ್ನೂ, ಬಂಧು ಬಳಗವನ್ನೂ ಹೇಗೋ ಸಮಾಳಿಸಿಕೊಂಡು ಹೋಗಬಹುದು. ಆದರೆ ನಮ್ಮ ದೇಶದಲ್ಲಿ, ಗಂಡನನ್ನು ಅಡಗಿಸಿ ಆಳುವುದು ಕಷ್ಟ. ಮನೆಯ ಯಜಮಾನ. ಧರ್ಮ, ನ್ಯಾಯಪರತೆಯಿಂದ ನಡೆದುಕೊಂಡರೆ ಕಷ್ಟವಿಲ್ಲ. ಅವನು ಮಾಡುವ ತಪ್ಪಿನಿಂದ ನಗುನಗುತ್ತಾ ಸಂತೋಷದಿಂದಿದ್ದ ಮನೆ ಅಳುವೋ, ಗೋಣಗಾಟಗಳಿಂದಲೂ ಕೂಡಿ ಒಂದು ಸೆರೆಮನೆಯಂತಾಗುತ್ತದೆ. ಮಕ್ಕಳನ್ನು ಬಿಡಲೂ ಆಗುವುದಿಲ್ಲ. ಗಂಡನನ್ನು ತಳ್ಳಲೂ ಸಾಧ್ಯವಿಲ್ಲ. ಈ ಧರ್ಮಸಂಕಟ ಹೆಚ್ಚುತ್ತಾ ಹೋದಂತೆ, ಇದರಿಂದ ಪಾರಾಗಲು ಯಜಮಾನನಾದವನು ಇದನ್ನು ಮರೆಯಲು ಒಂದು ಬೇರೆ ದಾರಿಯನ್ನು ಹುಡುಕುತ್ತಾನೆ.

ತನ್ನ ಸ್ಥಿತಿ ಏನು, ತನ್ನ ಹೊಣೆ ಏನು ಎಂದು ಯಾವುದನ್ನೂ ಯೋಚಿಸದೆ, ಆ ನಿಮಿಷದ ಕಲ್ಪನಾ ಲೋಕದಲ್ಲಿ ತಾನು ಸಂತೋಷವಾಗಿರಲು, ಒತ್ತಡವಿಲ್ಲದಂತೆ ಇರಲು ಕೆಲವು ಚಟಗಳನ್ನು ಬೆಳೆಸಿಕೊಳ್ಳುತ್ತಾನೆ. ಚಟಗಳನ್ನು ಬೆಳೆಸಿಕೊಂಡರೆ ಕಷ್ಟಗಳನ್ನು ಮರೆತು ಆಕಾಶ ಕೋಟೆ ಕಟ್ಟಬಹುದು ಆ ಸಮಯಕ್ಕೆ. ಚಟಗಳ ವೇಗ ಕಡಿಮೆಯಾದಂತೆ ದೇಹದ ಬಲ ಕಡಿಮೆಯಾಗಿ ಹಿಂಡಿ ಹಿಪ್ಪೆಯಾದ

ಹಣ್ಣಿನ ಸಿಪ್ಪೆಯಂತಾಗಿ ಬಿಡುತ್ತಾನೆ. ಓದು ಬರಹವಿಲ್ಲದ ಮುಟ್ಠಾಳನನ್ನು, ಸಾರಾಯಿ ಅಂಗಡಿಗೆ ಹೋಗಬಾರದೆಂದು ತಡೆದರೆ, 'ನನ್ನ ಹಣದಲ್ಲಿ ನಾನು ಕುಡಿದರೆ ನೀನು ಯಾರೋ ಕೇಳುವುದಕ್ಕೆ?' ಎನ್ನುತ್ತಾನೆ. ಆದರೂ ಆ ಮುಟ್ಠಾಳನನ್ನು ಬಲವಂತವಾಗಿ ನಮ್ಮ ಒರಟು ಶಕ್ತಿಯಿಂದ ಕೆಲಕಾಲದವರೆಗಾದರೂ ಮಣಿಸಬಹುದು. ಆದರೆ ಮೈ ಬಲವಿಲ್ಲದ ಮತ್ತು ಓದು ಬರಹವಿರುವವರನ್ನು ಒಂದು ನಿಮಿಷ ಕೂಡ ಮಣಿಸಲಾಗುವುದಿಲ್ಲ. ಯಾರು ತಡೆಯುವರೋ ಅವರೇ ಪೆದ್ದರಾಗುತ್ತಾರೆ. ಸುಮ್ಮನೆ ನೋಡಿ ಮರುಗುವುದಕ್ಕಿಂತ ಬೇರೇನೂ ಮಾಡಲು ಸಾಧ್ಯವಿಲ್ಲ. ನಮ್ಮ ಉಪದೇಶವೆಲ್ಲಾ ಕಿವುಡನ ಕಿವಿಯಲ್ಲಿ ಶಂಖ ಊದಿದಂತಾಗುತ್ತದೆ.'

ನಾನು:– 'ಅವರು ಹಾಡಿದ ಉದಯರಾಗ ಬಹಳ ಚೆನ್ನಾಗಿತ್ತು.'

ಅಯ್ಯರ್:– 'ಅವರ ಕಂಠ ಕಂಚು ಕಂಠ. ಬೆಳಗಿನ ಹೊತ್ತು ಪಕ್ಷಿಗಳ ಕಲರವ, ಕಡಲಿನ ಅಲೆಗಳ ನಿನಾದ. ಅವರೂ ತನ್ಮಯತೆಯಿಂದ ಕಂಠ ತುಂಬಿ ಹಾಡಿರುತ್ತಾರೆ. ಆ ವೇಳೆ ಹೇಗಿರಬಹುದೆಂದು ನೀನು ಹೇಳುವಾಗಲೇ ಊಹಿಸಬಹುದು. ಎಲ್ಲಾ ಸರಿ, ಆದರೆ ಜೋಗಿಗಳು, ಬೈರಾಗಿಗಳು ಮುಂತಾದ ಕೆಲವರ ಒಡನಾಟ ಅವರನ್ನು ಬೇರೆ ದಾರಿಗೆ ಎಳೆದುಕೊಂಡು ಹೋಗುತ್ತಿದೆ. ಮನಸ್ಸನ್ನು ಕಟ್ಟುಪಡಿಸುವವನೇ ಧೃಡವಾದ ಮನುಷ್ಯ. ಮನವೆಂಬ ಮರ್ಕಟ ಯಾವ ನಿಮಿಷ ಏನು ಕಟ್ಟಳೆಯಿಡುತ್ತದೆಯೋ ಆ ದಾರಿಯಲ್ಲಿ ಅವರುಗಳು ನಡೆಯುವುದರಿಂದ ಅವರಿಗೂ ಸುಖವಿಲ್ಲ; ಅವರ ಮನೆಯವರಿಗೂ ಸುಖವಿಲ್ಲ. ಕೆಲವರ ಬದುಕು ಹೀಗಾಗಿ ಬಿಡುತ್ತದೆ.'

ಹೀಗೆ ಹೇಳಿಬಿಟ್ಟು, ಅಯ್ಯರ್ ಅವರು ನಿಟ್ಟುಸಿರುಬಿಟ್ಟರು. ನನಗೇನೂ ಅರ್ಥವಾಗಲಿಲ್ಲ. ಎಲ್ಲಾ ಒಂದೇ ಗೊಂದಲಮಯವಾಗಿದ್ದಿತು.

(21) 'ಶಾಹಾವರಂ' (ಸಾಯದಿರುವವರ)

(1917) ಪಿಂಗಳ ಸಂವತ್ಸರದಲ್ಲಿ ಅನೇಕ ಸಂಭವಗಳು ಒಂದರ ಮೇಲೊಂದು ನಡೆದವು. ಎಲ್ಲವೂ ಮನಸ್ಸಿಗೆ ಕಷ್ಟವಾಗುವಂತಹದೇ.

ಪುದುಚೇರಿಯಲ್ಲಿ ನನಗೆ ತಮ್ಮ ಹುಟ್ಟಿರುವುದಾಗಿ ಕಾಗದ ಬಂದಿತು. ಸಹಾಯಕ್ಕೆ ಯಾರೂ ಇಲ್ಲವೆಂದು ನನ್ನನ್ನು ಬರುವಂತೆ ಬರೆದಿದ್ದರು ನನ್ನ ತಂದೆ. ಹೊರಟೆ. ದಾರಿಯಲ್ಲಿ, ಬೆಂಗಳೂರಿನಲ್ಲಿ ನಮ್ಮ ಸೋದರ ಮಾವನ ಮನೆಯಲ್ಲಿ ತಂಗಿದೆ. ನನ್ನ ಮಗು ಮೈ ಸರಿಯಿಲ್ಲದೆ ಇದ್ದಕ್ಕಿದ್ದಂತೆ ತೀರಿಕೊಂಡಿತು.

ಮನಸ್ಸಿನಲ್ಲಿ ದುಃಖವನ್ನು ತುಂಬಿಕೊಂಡು ಪುದುಚೇರಿಗೆ ಹೋದರೆ ಅಲ್ಲಿ ಒಂದು ದುಃಖದ ಸಮಾಚಾರ ಕಾದಿತ್ತು. ಮೀನಾಳಿಗೆ ಮಗು ಹುಟ್ಟಿ ತೀರಿಕೊಂಡಿತು. ಅವಳೂ ಅನಾರೋಗ್ಯದಿಂದ ಬಳಲುತ್ತಿದ್ದಳು. ಅವಳು ನನ್ನನ್ನು ನೋಡಬೇಕೆಂದಳಂತೆ. ಶೆಲ್ಲಮ್ಮಾ ಬಂದು ನನ್ನನ್ನು ಮೀನಾವಿನ ಮನೆಗೆ ಕರೆದುಕೊಂಡು ಹೋದರು. ಮೀನಾವಿನ ಸ್ಥಿತಿ ಬಹಳ ಪರಿತಾಪಕರವಾಗಿತ್ತು. ನನ್ನನ್ನು ನೋಡಿದ ತಕ್ಷಣವೇ ಹುಚ್ಚಳ ಹಾಗೆ 'ಯದುಗಿರಿ, ನನ್ನ ಮಗುವನ್ನು ತೆಗೆದುಕೊಂಡು ಬಾರೇ' ಎಂದು ಅರಚಿದಳು. ಸ್ವಲ್ಪ ಸಮಾಧಾನವಾದ ಮೇಲೆ, ಅವಳ ನೋವಿನ ಕಥೆ, ಅವಳು ಊರಿನಿಂದ ಬರುವಾಗ ನಡೆದ ವಿಷಯಗಳು, ಮಗುವನ್ನು ಕಳೆದುಕೊಂಡುದು ಎಲ್ಲವನ್ನೂ ದೊಡ್ಡ ಕತೆಯ ತರಹ ಹೇಳಿ ಮುಲುಗಿದಳು. ನಾನು ನನ್ನ ದುಃಖವನ್ನು ಅಡಗಿಸಿಕೊಂಡು ಅವಳಿಗೆ ಸಮಾಧಾನ ಹೇಳಿದೆ. 'ಮೀನಾ, ಭಯವೇ ವಿಷ, ಧೈರ್ಯವೇ ಅಮೃತ' ಎಂದು ಭಾರತಿಯಾರರು ಹೇಳುವುದಿಲ್ಲವೇ? ಮನಃ ಕಲಹದಿಂದ ನೋಯಬಹುದೇ ಎಂದೆಲ್ಲಾ ಹೇಳಿಹೇಳಿ ಅವಳನ್ನು ಸಂತೈಸಲು ಪ್ರಯತ್ನಿಸಿದೆ. ಅವಳು ಅದಕ್ಕೆಲ್ಲಾ ಈಡು ಕೊಡಲೇ ಇಲ್ಲ. ಕ್ಷಣಕ್ಷಣಕ್ಕೆ ಮಾತಿಗೊಮ್ಮೆ 'ಮಗು, ಮಗು' ಎಂದು ಕಿರಿಚುತ್ತಿದ್ದಳು. ಆಗಾಗ ಮೂರ್ಛೆ ಹೋಗುತ್ತಿದ್ದಳು; ಬಾಣಂತಿ ಸನ್ನಿಯೋ ಎಂದು ಎಲ್ಲರೂ ಹೆದರಿದೆವು.

ಮೀನಾವನ್ನು ಬಿಟ್ಟು ಅಗಲಿ ಹೊರಗೆ ಬರುವುದು ಬಹಳ ಕಷ್ಟವಾಗಿತ್ತು. ಮನವನ್ನು ಕಲ್ಲಾಗಿಸಿಕೊಂಡು ನಾನೂ ಶೆಲ್ಲಮ್ಮಾವೂ ಹೊರಗೆ ಬಂದೆವು. ನೇರಾಗಿ ಶೆಲ್ಲಮ್ಮಾವಿನ ಮನೆಗೆ ಹೋದೆವು. ಮೀನಾವಿನ ಎದಿರು ಅಡಗಿದ್ದ ದುಃಖವೆಲ್ಲಾ, ಭಾರತಿಯಾರರ ಮನೆ ಸೇರಿದ ಮೇಲೆ ನನ್ನ ದುಃಖ ಮಡುಗಟ್ಟಿ ಮೇಲೆದ್ದಿತು. ಸಾವಿನ ನೆರಳಿನಲ್ಲಿ ಅವಳನ್ನು ಬಿಟ್ಟು ಬಂದುದು ನಮ್ಮ ಮನಸ್ಸನ್ನು ಕೊರೆಯಿತು. ಇಬ್ಬರೂ ಅತ್ತು ಅತ್ತು ಹಲುಬಿದೆವು. ಭಾರತಿಯಾರರ ಕಣ್ಣಲ್ಲಿಯೂ ನೀರು ತುಂಬಿತು.

ಆ ದಿನ ಅವರು 15 ದಿನದ ಮೌನವ್ರತವನ್ನು ಪ್ರಾರಂಭಿಸಿದ್ದರು. ಸ್ವಲ್ಪ ಹೊತ್ತಿನ ನಂತರ, ಅವರು ನಮ್ಮನ್ನು ಮಹಡಿ ಮೇಲೆ ಕರೆದರು. ನಾವು ಹೋದೆವು. 'ಮಗುವನ್ನು ಕಳೆದುಕೊಂಡ ನಿನ್ನನ್ನು ನೋಡುವುದು ನಮ್ಮ ದೌರ್ಭಾಗ್ಯ' ಎಂದು ಒಂದು ಚೀಟಿಯಲ್ಲಿ ಬರೆದು ತೋರಿಸಿದರು.

ನಾನು ಅವರನ್ನು ಕಣ್ಣಿಟ್ಟು ನೆಟ್ಟ ದೃಷ್ಟಿಯಿಂದ ನೋಡಿದೆ. ಬರೀ ಎಲುಬು ಗೂಡು! ಕೆಂಪಾದ ಕಣ್ಣುಗಳು, ದುರ್ಬಲವಾದ ಶರೀರ! ನೋಡಿ ಸಹಿಸಲಾಗಲಿಲ್ಲ.

ನನ್ನ ಮನಸ್ಸಿನಲ್ಲಿದ್ದುದನ್ನು ಅರಿತವರಂತೆ, 'ನಾನು ಹೊಸ ಮಾರ್ಗದಲ್ಲಿ

ಯೋಗ ಸಾಧನೆ ಮಾಡುತ್ತಿದ್ದೇನೆ. ಅದರಿಂದ ಮೈ ಕ್ಷೀಣಿಸಿದೆ' ಎಂದು ತಿಳಿಯಪಡಿಸಿದರು.

'ಪಾಂಚಾಲಿಶಪಥ'ದ (ತುಹಿಲುರಿಯುಂ) ಎಂಬ ಸರ್ಗವನ್ನು ಅಂದು ಅವರು ಬರೆದು ಮುಗಿಸಿದ್ದರು. ಅದನ್ನು ಹಾಡಿ ತೋರಿಸಿದರು. ಮೌನವ್ರತದ ದಿನಗಳಲ್ಲಿ ಅವರು ಮಾತನಾಡುತ್ತಿರಲಿಲ್ಲವೇ ಹೊರತು, ಕವಿತೆಗಳನ್ನು ಹಾಡುವುದಕ್ಕೆ ತಡೆಯಿರಲಿಲ್ಲ.

ಶೆಲ್ಲಮ್ಮಾ ಆಗ ಬೇಸರದಿಂದ ಹೇಳಿದರು. 'ಯದುಗಿರಿ, ಇದುವರೆಗೆ ವಿಧಿಯಾಟವನ್ನು ನೋಡಿಯಾಯಿತು. ಇನ್ನು ಇವರ ಕೆಲಸದ ಪರಿಯನ್ನು ಕೇಳು, ದೈವ ಅರ್ಧ ಕೆಡಿಸಿದರೆ, ಮನುಷ್ಯ ಪೂರ್ತಿ ಕೆಡಿಸಿಕೊಳ್ಳಬಹುದೇ? ಒಂದು ಎಳ್ಳಿನ ಕಣದಷ್ಟೂ ನನ್ನ ನಾಲಿಗೆ ಉಪಯೋಗವಿಲ್ಲದಿರಬಾರದು' ಎಂದು ಹಾಡಿಬಿಟ್ಟು, ಈಗ ಇವರು ಮೂಕನಂತೆ ಅಭಿನಯಿಸುವುದನ್ನು ಕಂಡು ನನ್ನ ಹೃದಯ ಒಡೆದು ಹೋಗುವಂತಿದೆ! ಈ ಕಷ್ಟ ನನ್ನ ಶತ್ರುವಿಗೂ ಬೇಡ. ಏನು ಹೊಸ ದಾರಿಯೋ! ಏನು ವಿಧಿಯೋ! ಈ ವೇಷ ಸಹಿಸಲಾಗುತ್ತಿಲ್ಲವಮ್ಮಾ'

ಭಾರತಿಯಾರರು 'ನಾನು ಒಂದು ಮಂತ್ರ ಶಬ್ದವನ್ನು ಕಂಡು ಹಿಡಿಯುವುದಕ್ಕೋಸ್ಕರ ಮಾತನಾಡದೆ ಇದ್ದರೆ, ಶೆಲ್ಲಮ್ಮಾ ಗಲಾಟೆ ಮಾಡುತ್ತಾಳೆ' ಎಂದು ಬರೆದು ತೋರಿಸಿದರು.

ನಾನು ಸ್ವಲ್ಪ ಹೊತ್ತು ಮಾತಾಡದೆ ಕುಳಿತಿದ್ದೆ. ಶೆಲ್ಲಮ್ಮಾ ನನ್ನನ್ನು ಊಟ ಮಾಡುವಂತೆ ಹೇಳಿ, ತಾವೂ ಊಟ ಮಾಡಿದರು. ಮತ್ತೆ ಮಹಡಿಗೆ ಹೋಗಿ ಸ್ವಲ್ಪ ಹೊತ್ತು ಮಾತಾಡುತ್ತಿದ್ದೆವು.

ನಾನು:– 'ಮೀನಾ ಬದುಕುತ್ತಾಳೆಯೆ?'

ಶೆಲ್ಲಮ್ಮಾ:– 'ಇನ್ನೆರಡು ದಿವಸ ಇದ್ದರೆ ಹೆಚ್ಚು

ನಾನು:– 'ಹೂಂ! ಭಾರತಿಯಾರರು ಮರಣವಿಲ್ಲದಂತೆ ಇರುವ ಒಂದು ದಾರಿಯನ್ನು ಕಂಡು ಹಿಡಿಯುವುದಾಗಿ ಹಿಂದೆ ಒಂದು ದಿನ ಹೇಳಿದ್ದರು. ಅಂದು ಅಯ್ಯಾ (ನನ್ನ ತಂದೆ) ಮಧ್ಯೆ ಬಂದು ಆ ಮಾತನ್ನು ತಡೆದುಬಿಟ್ಟರು. ಬೆಂಗಳೂರಿನಲ್ಲಿ ನನ್ನ ಮಗು ತೀರಿಕೊಂಡಾಗ ಕೂಡ, ಭಾರತಿಯಾರರು ಹೇಳಿದುದನ್ನೇ ಜ್ಞಾಪಿಸಿಕೊಂಡೆ. ಸಾವು ಭಯಂಕರ. ಮೀನಾವನ್ನು ಇವರು ಸಾಯದಂತೆ ಕಾಪಾಡುವರೇ?

ಭಾರತಿಯಾರರು ಏನೋ ಬರೆಯಲು ಪ್ರಯತ್ನಿಸಿದರು. ಅದನ್ನು ಕಂಡ ಶೆಲ್ಲಮ್ಮಾ ತಟ್ಟನೆ ಎದ್ದರು, ನನ್ನ ಕೈಹಿಡಿದು ಕರೆದುಕೊಂಡು ಕೆಳಗೆ ಬಂದರು. 'ಯದುಗಿರಿ, ಆ ಮಾತನ್ನು ಅವರ ಬಳಿ ಆಡಬೇಡ. ಹೊತ್ತಾಯಿತು. ಮನೆಗೆ

ಹೋಗಿ ಬಾ' ಎಂದು ಬೀಳ್ಕೊಟ್ಟರು.

ಭಾರತಿಯಾರರು ಮಾತಲ್ಲಿ 'ಮಹಿಳಾ ಸ್ವಾತಂತ್ರ್ಯ'ದ ಬಗ್ಗೆ ಹಾಡಿದರೇ ಹೊರತು, ಶೆಲ್ಲಮ್ಮಾಳನ್ನು ತನ್ನ ಇಚ್ಛೆಯಂತೆಯೇ ನಡೆಯುವಂತೆ ನೋಡಿಕೊಂಡರು. ಶೆಲ್ಲಮ್ಮಾ ತಮ್ಮ ಇಷ್ಟದಂತೆ ನಡೆಯುವುದು ಬಹಳ ಅಪರೂಪವೇ.

ಶೆಲ್ಲಮ್ಮಾ ಎಷ್ಟು ಮೊರೆಯಿಟ್ಟರೂ ಕೇಳದೆ, ಅವರು ತಿಂಗಳುಗಟ್ಟಲೆ ತಮ್ಮ ಮೌನವ್ರತವನ್ನು ಆಚರಿಸಿದರು. ಒಮ್ಮೆ ನಲವತ್ತು ದಿನ ಸತತವಾಗಿ ಮೌನವ್ರತ ಆಚರಿಸಿ, ಕವಿತೆಗಳನ್ನು ರಚಿಸಿದರು. ಅದುವೇ 'ಭಾರತಿ ಅರವತ್ತಾರು' ಎಂಬ ಹೆಸರಿನಲ್ಲಿ ಈಗ ಉಳಿಯುತ್ತಿದೆ. ಈಗ ಅದನ್ನು ಓದಿದರೆ, ಅದನ್ನು ರಚಿಸಲು ಅವರು ಎಷ್ಟು ತಪಸ್ಸು ಮಾಡಿರಬೇಕೆಂದು ತಿಳಿಯುತ್ತದೆ.

ಸ್ವಲ್ಪ ಕಾಲದ ನಂತರ, ಶಿವಕಾಮಿಯಮ್ಮ, ಸುಬ್ರಹ್ಮಣ್ಯ ಶಿವ ಇವರುಗಳು ಭಾರತದೇವಿಯ ಧ್ವಜವನ್ನು ಹಿಡಿದುಕೊಂಡು ಪುದುಚೇರಿಗೆ ಬಂದು ಸೇರಿದರು. ಅವರುಗಳು ನೇರಾಗಿ ಭಾರತಿಯಾರರ ಮನೆಗೇ ಬಂದು ಇಳಿದುದರಿಂದ, ಭಾರತಿಯಾರರು ಅವರ ಮೌನವ್ರತವನ್ನು ಕೈಬಿಟ್ಟು ಮಾತನಾಡಬೇಕಾಯಿತು.

ನಂತರ ಅವರುಗಳು ಋಷಿ ಅರವಿಂದರ ಮನೆ, ಅಯ್ಯರ್ ಮನೆ ಎಲ್ಲ ಕಡೆಗೆ ಹೋಗಿ, ನಮ್ಮ ಮನೆಗೂ ಬಂದರಂತೆ. ಆಗ ರಾತ್ರಿ ಹನ್ನೆರಡು ಗಂಟೆಯಾಗಿದ್ದುದರಿಂದ, ಹೊರಗೇ ನಿಂತು ಮಾತನಾಡಿ ಹೊರಟು ಹೋದರೆಂದು ನನ್ನ ತಂದೆ ಹೇಳಿದರು.

(22) 'ಇಂದದ್ಯೆವಂ' (ಈ ದೈವ)

ಒಂದು ದಿನ ಭಾರತಿಯಾರರ ಮನೆಗೆ ಹೋದಾಗ ಶೆಲ್ಲಮ್ಮಾ ಭಾರತಿಯಾರರೊಡನೆ ಏನೋ ವಾದ ಮಾಡುತ್ತಿದ್ದರು. ನನ್ನನ್ನು ನೋಡಿ 'ನೋಡು ಯದುಗಿರಿ! ಇವರು ಬ್ರಾಹ್ಮಣರಂತೆ; ಮದುವೆ ಮಾಡದೆ ಮಗಳನ್ನು ಕೂರಿಸಿದ್ದಾರೆ (ದೊಡ್ಡವಳಾಗುವುದು ಅಥವಾ ಋತುಮತಿಯಾಗುವುದು). ಈ ಒಂದು ಅವಮಾನವೇ ಸಾಲದೆ? ತನ್ನ ಪಾಡಿಗೆ ತಾನಿಲ್ಲದೆ ಊರಿನಲ್ಲೆಲ್ಲಾ ಹೋಗಿ ಸಾರಿಬಿಟ್ಟು ಬರುತ್ತಾರೆ. ನಮಗಾಗಿಯಲ್ಲದಿದ್ದರೂ ಊರವರಿಗಾದರೂ ಭಯ ಪಡಬೇಡವೆ? ನಾನು ಹೇಗೆ ಜನಗಳಿಗೆ ಮುಖ ತೋರಿಸಲಿ? ಇನ್ನು ಮುಂದೆ ನನ್ನ ಅಪ್ಪ ಅಮ್ಮ ಏನು ಹೇಳುವರೋ' ಎಂದು ಅಲವತ್ತುಕೊಂಡರು.

ಭಾರತಿ:– ಒಳ್ಳೆ ಸ್ವಾರಸ್ಯವಾದ ಸಮಯದಲ್ಲಿ ಬಂದೆ. 'ಬಾಮ್ಮಾ, ಕುಳಿತುಕೋ. ಶೆಲ್ಲಮ್ಮಾ ಹೀಗೆ ರೇಗುತ್ತಾಳಲ್ಲಾ. ಇದರಿಂದ ಯಾವ ಲೋಕ ಮುಳುಗಿ

ಹೋಯಿತು? ನಾನು ಬ್ರಾಹ್ಮಣನೇ ಅಲ್ಲ. ಜನಿವಾರವಿಲ್ಲ; ಸಂಧ್ಯಾವಂದನೆಯಿಲ್ಲ. ಶ್ರಾದ್ಧ ಮಾಡುವುದಿಲ್ಲ. ನಾನು ಶೂದ್ರ, ಮನೆ ಯಜಮಾನ ಶೂದ್ರ; ಯಜಮಾನಿ ಬ್ರಾಹ್ಮಣಿತ್ತಿ; ಎಲ್ಲಾದರೂ ಉಂಟೇ? ನನ್ನಂತೆ ನೀನು; ಇದರಿಂದೇನಾಯಿತು?'

ಶೆಲ್ಲಮ್ಮಾ:– 'ನೀವು ಮಡಿ, ಆಚಾರ ವಿಚಾರಗಳನ್ನು ಪಾಲಿಸದಿದ್ದರೆ, ನಾವು ಹಾಗೆ ಇರಕೂಡದೇ?'

ಭಾರತಿ:– 'ಏನು ಶೆಲ್ಲಮ್ಮಾ, ನೀನು ದಿನವೂ ಔಪಾಸನೆ ಮಾಡುತ್ತೀಯಾ? ಅಗ್ನಿಹೋತ್ರ ಮಾಡುತ್ತೀಯಾ? ಎಷ್ಟು ಅನಾಥರಿಗೆ ಊಟ ಹಾಕುತ್ತೀಯ? ಜಪ, ತಪ ಎಲ್ಲವನ್ನೂ ಕ್ರಮವಾಗಿ ನಡೆಸುತ್ತೀಯಾ? ದೇವತೆಗಳು ನೇರಾಗಿ ಬಂದು ಹವಿಸ್ಸನ್ನು ಪಡೆದು ಸ್ವೀಕರಿಸುತ್ತಾರೆಯೆ? ಆಚಾರ ಹೆಸರಿಗೆ, ಆಚಾರ ಹೋಗಿ ನೂರು ವರುಷವಾಗಿಬಿಟ್ಟಿತು. ಪದ್ಧತಿ ಮಾತ್ರ ಇದೆ. ಇನ್ನು ಇಪ್ಪತ್ತು ವರುಷಗಳಿಗೆ ಅದುವೂ ಹೋಗಿ ನಾಶವಾಗಿ ಬಿಡುತ್ತದೆ.'

ಶೆಲ್ಲಮ್ಮಾ:– 'ನೀವು ಮಾಡಬೇಕಾದುದನ್ನು ನನಗೆ ಹೇಳಿ ಗೇಲಿ ಮಾಡುತ್ತೀರಿ. ನಾನೇನು ನಿಮ್ಮನ್ನು ಮಾಡಬೇಡವೆಂದು ತಡೆದಿದ್ದೇನೆಯೇ?

'ಬಂದೆಯಾ ದಾರಿಗೆ? ಮಧ್ಯೆ ಮಾತಾಡದೆ ನಿಧಾನವಾಗಿ ಕೇಳು. ವಿಷಯ ಗೊತ್ತಾದರೆ ತಾನೇ ಕೋಪ ಕಡಿಮೆಯಾಗುತ್ತದೆ' ಎಂದು ಭಾರತಿಯಾರರು ಹೇಳಲಾರಂಭಿಸಿದರು.

'ಹಿಂದೆ ವೇದಗಳ ಕಾಲದಲ್ಲಿ ಗೆಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದರು. ಹೆಂಗಸರಿಗೆ ಕೆಲಸ ಜಾಸ್ತಿ ಇಲ್ಲ. ಗುಡಿಸಿ, ಸಾರಿಸಿ, ನೀರು ತರುವುದು ಇಷ್ಟೇ ಕೆಲಸ. ದೇವತೆಗಳು ಮೇಲಿಂದ ಕೆಳಗಿಳಿದು ಬಂದು ಹವಿಸ್ಸನ್ನು ಸ್ವೀಕರಿಸುವುದರಿಂದ, ಮುಟ್ಟಾದವರಿಂದ ಮೈಲಿಗೆಯಾಗುತ್ತದೆ ಎಂದು ಅವರುಗಳನ್ನು ಆ ದಿವಸಗಳಲ್ಲಿ ಪರ್ಣಶಾಲೆಯಲ್ಲಿರುವಂತೆ ಏರ್ಪಾಡು ಮಾಡಿದ್ದರು. ಮೈಲಿಗೆಯಾದ ಸಮಯದಲ್ಲಿ ಅವರುಗಳು ನಿಮ್ಮ ಹಾಗೆ ಬೇಯುತ್ತಿರಲಿಲ್ಲ. ಗಂಡಸರು, ಆ ಕಡೆ ಬರದ ವೇಳೆಯಲ್ಲಿ ಕೊಳದಲ್ಲಿ ಮಿಂದು, ತಮ್ಮ ಬಟ್ಟೆಗಳನ್ನು ಒಗೆದು ಒಣಗಿಸಿ ತೆಗೆದುಕೊಂಡು ಬಂದು ತಮ್ಮ ಪರ್ಣ ಕುಟೀರವನ್ನು ಸೇರುತ್ತಿದ್ದರು. ಹಸುಗೂಸುಗಳು ಅವರ ಬಳಿ ಇರುತ್ತಿದ್ದವು. ಮುಖ್ಯವಾಗಿ ಆ ದಿನಗಳಲ್ಲಿ ವಿಶ್ರಾಂತಿ ಬೇಕು. ಬೇರೆ ದಿವಸಗಳಂತೆ ಎಲ್ಲಾ ಕೆಲಸಗಳಿಗೆ ಅರ್ಹತೆಯಿಲ್ಲದೆ, ಮುಖ್ಯವಾಗಿ ಪತಿಯ ಬಳಿ ಇದ್ದರೆ ಒಳ್ಳೆಯದಲ್ಲ ಎಂದು ಅವರನ್ನು ಬೇರೆ ಇರುವಂತೆ ಏರ್ಪಾಟು ಮಾಡಿದ್ದರು. ಆ ದಿವಸಗಳಲ್ಲಿ ಕೂಡ, ಮುಖ್ಯವಾದ ವಿಚಾರಗಳು ಚರ್ಚೆಯಾಗಬೇಕೆಂದಿದ್ದರೆ – ಮಧ್ಯದಲ್ಲಿ ಒಂದು ತೆರೆ ಹಾಕಿ ಚರ್ಚಿಸುತ್ತಿದ್ದರಂತೆ.

ನಂತರ ಆಧುನಿಕತೆ ಬಂದ ಮೇಲೆ ಬ್ರಾಹ್ಮಣ ಹೆಂಗಸರು ಭತ್ತ ಕುಟ್ಟುವುದರಿಂದ ಡಿದು, ಅನ್ನ ಬಸಿದು ಬಡಿಸುವವರೆಗೆ, ಎಲ್ಲವನ್ನೂ ತಾವೇ ಮಾಡಿಕೊಳ್ಳಬೇಕಾಗಿ ಂದಿತು. ಬೇರೆ ಜಾತಿ ಜನರು ಮಾಡಿದರೆ ಮಡಿ ಇಲ್ಲ ಎಂದು ಇಟ್ಟಿದ್ದರು. ಟ್ಟುವುದು, ರುಬ್ಬುವುದು, ಧಾನ್ಯ ಹಸನು ಮಾಡುವುದು ಇಂತಹ ಕಷ್ಟದ ಲಸಗಳನ್ನು ಮುಟ್ಟಾದ ದಿನಗಳಲ್ಲಿ ಮಾಡಿದರೆ ತೊಂದರೆ ಎಂದು, ಬ್ರಾಹ್ಮಣ ಂಗಸರಾದರೂ ಅವರನ್ನು ಹೊರಗಡೆ ಇಡುತ್ತಿದ್ದರು.

ಆದರೆ ಅದಕ್ಕೆ ಹಿಂದೆಯೇ ನಗರಗಳಲ್ಲಿ ಸ್ನಾನ ಮಾಡಲು ಸೌಕರ್ಯವಿಲ್ಲದೆ, ಮೂರು ದಿನವೂ ಅವರುಗಳನ್ನು ಒಂದು ಚಿಕ್ಕ ಕೋಣೆಯಲ್ಲಿಟ್ಟು ಗಾಳಿ ಬೆಳಕಿಲ್ಲದೆ ೇಯುವಂತೆ ಮಾಡುತ್ತಿದ್ದರು. ಆಗೆಲ್ಲಾ ಅನೇಕವಾಗಿ ಜನರ ಸಹಾಯವಿರುತ್ತಿತ್ತು. ಹಾಗೆ ದಿಕ್ಕಿಲ್ಲದಿದ್ದರೆ ಗಂಡಸರೇ ಅಡಿಗೆ ಮಾಡಿ ಬಡಿಸುತ್ತಿದ್ದರು. ಈಗಿನಂತೆ ಹೋಟೆಲ್ಲುಗಳಲ್ಲಿ ಊಟ ಮಾಡುತ್ತಿರಲಿಲ್ಲ. ಈಗಲೋ ಅದೆಲ್ಲಾ ಹೋಗಿಬಿಟ್ಟಿತು. ಶೂದ್ರ ಮಾಡುತ್ತಾನೆ; ಬ್ರಾಹ್ಮಣ ತೆಗೆದು ತಿನ್ನುತ್ತಾನೆ. ಕ್ರಯ ಶುದ್ಧಿ ಎಂದು ಹೊಸ ಶಾಸ್ತ್ರ ಮಾಡುತ್ತಾರೆ. ಹೆಣ್ಣುಮಕ್ಕಳು ಯಾವ ಕಷ್ಟದ ಕೆಲಸವನ್ನೂ ಮಾಡುವುದಿಲ್ಲ. ಅಂಗಡಿಯಿಂದ ತಂದು ಹಾಗೆಯೇ ಒಲೆಯ ಮೇಲಿಡುತ್ತಾರೆ.

ಹೋಟೆಲಿನಲ್ಲಿ ಮಾಡುವ ಕೆಲಸದವಳ ಅನ್ನ ಮಡಿ! ಆದರೆ ಅದೇ ಕೆಲಸದವಳು ಮನೆಯಲ್ಲಿ ಅಡಿಗೆ ಮನೆಗೆ ಬರಕೂಡದು! ಹೋಟೆಲ್ ಆಹಾರಗಳಲ್ಲಿ ಮತ್ತೂ ಕೆಲವು ಅಸಹ್ಯಗಳ ಸೇರುತ್ತವೆ. ಅಲ್ಲಿ ಕಣ್ಣಿಗೆ ಬೀಳದಂತಹ ಕಲ್ಮಷಗಳಿಗೆ ವಿಭೂತಿ ಹಾಕಿದ ನಂತರ ಮನೆಗೆ ತಂದರೆ ಇವರಿಗೆ ಸಮಾಧಾನ.

ಬ್ರಾಹ್ಮಣ ಹೆಣ್ಣುಮಕ್ಕಳು ಬೇರೆ ಜಾತಿ ಹೆಣ್ಣುಗಳಿಗೀತ ಬೇಗ ಮುದಿಯಾಗಿ ಬಿಡುತ್ತಾರೆ. ಹಿಂದೆ ಏಳು ಅಥವಾ ಎಂಟು ವಯಸ್ಸಿನಲ್ಲಿ ಮದುವೆ ಮಾಡಿದರೂ ಹದಿನಾರು, ಹದಿನೆಂಟು ವರ್ಷದವರೆಗೆ ಋತುಮತಿಯಾಗುತ್ತಿರಲಿಲ್ಲ. ಗಂಡಿಗೂ, ಹೆಣ್ಣಿಗೂ ಹೆಚ್ಚು ವಯಸ್ಸು ವ್ಯತ್ಯಾಸವಿರುತ್ತಿರಲಿಲ್ಲ. ಈಗ ಹಾಗಿಲ್ಲ. ಗಂಡಿಗೆ ಎಷ್ಟು ವಯಸ್ಸಾದರೂ ಕೇಳುವವರಿಲ್ಲ, ಹೆಣ್ಣಿಗೆ ಮಾತ್ರ ಕಟ್ಟುನಿಟ್ಟು! ಕಟ್ಟುನಿಟ್ಟು ಎಂದರೆ ಇಬ್ಬರಿಗೂ ಇರಬೇಕು. ಗಂಡುಮಕ್ಕಳು ಓದಿ ಒಂದು ನೆಲೆಗೆ (ಸ್ಥಿತಿ) ಬರಲು ಸುಮಾರು 20–25 ವಯಸ್ಸಾಗಬೇಕು. ಅವರಿಗೆ ಸರಿಯಾದ ಜೋಡಿ ಎಂದರೆ 18–20 ವಯಸ್ಸಿನ ಹೆಣ್ಣುಮಕ್ಕಳೇ!

'ನಾವು ಬಾಳುತ್ತಿರುವುದೇ ಇಂಗ್ಲೀಷ್ (ಬ್ರಿಟಿಷರ) ರಾಜ್ಯದಲ್ಲಿ. ಇಲ್ಲಿ ಮಾಡುವುದೋ ಗುಲಾಮಗಿರಿ, ಹೊರಗೆ ದುಡಿದುಬಿಟ್ಟು ಮನೆಗೆ ಬಂದರೆ ಊಟದ ಮೇಲೆ ಗಮನವಿರುತ್ತದೆಯೇ ಹೊರತು, ಜಪ, ತಪ, ಹೋಮಗಳಲ್ಲಿ ಮನಸ್ಸು ಇರುವುದಿಲ್ಲ. ಎಲ್ಲಾ ಬರೀ ವೇಷವೇ. ನನಗೆ ಈ ಹೊರಗಿನ ವೇಷ (ಕಂದಾಚಾರ) ಹಿಡಿಸುವುದಿಲ್ಲ.

ನನ್ನ ತಂಗಮ್ಮಾ ಋತುಮತಿಯಾದಳೆಂದು ಸಾರಿದೆ. ನಿಮ್ಮ ಹಾಗೆ ಅವಳನ್ನು ಒಂದು ಚಿಕ್ಕ ಕೋಣೆಯಲ್ಲಿ ಸೆರೆ ಹಾಕಿಲ್ಲ. ಅವಳಿಗೆ ತಕ್ಕ ವರನನ್ನು ಹುಡುಕಿ ಮದುವೆ ಮಾಡುತ್ತೇನೆ. ರಾಜಕುಮಾರಿಯ ಹಾಗೆ ಆರಾಮವಾಗಿರಲಿ. ನಿನಗಿಷ್ಟವಿಲ್ಲದಿದ್ದರೆ, ಅಡಿಗೆ ಮನೆಗೂ, ದೇವರ ಮನೆಗೂ ಬರಲು ಬಿಡಬೇಡ.

'ಯಾವಾಗಲೂ ಹರಿಯುವ ನೀರಿನಲ್ಲಿ ಸ್ನಾನ ಮಾಡುವುದು ಒಳ್ಳೆಯದು. ಇಲ್ಲಿಯೋ ನಲ್ಲಿ ನೀರೇ ಒಂದು ನದಿ. ದಿನವೂ ಸ್ನಾನ ಮಾಡುವಂತೆ – ಆ ಮೂರು ದಿನವೂ ಸ್ನಾನ ಮಾಡಲಿ. ಒಂದು ಚಿಕ್ಕ ಕೊಠಡಿಯಲ್ಲಿ ಮೂರು ದಿನ ಕೂಡಿಟ್ಟು ಬೇಯುವಂತೆ ಮಾಡುವುದು ಮುಟ್ಠಾಳತನ. ಬಿಸಿ ನೀರನ್ನು ಬೇರೆ ಬಕೆಟ್ಟಿನಲ್ಲಿ ಸುರಿದುಕೊಂಡು ಶುದ್ಧವಾಗಿ ಸ್ನಾನ ಮಾಡಿಬಿಟ್ಟು ಒಗೆದ ಬಟ್ಟೆ ಧರಿಸಿ, ಸುಖವಾಗಿ ಇರುವುದೇ ಸರಿ. ಮುಖ್ಯವಾಗಿ ಗಮನಿಸಬೇಕಾದುದು ... ಈ ಸಮಯದಲ್ಲಿ ಬಹಳ ದೂರ ನಡೆಯಬಾರದು. ಭಾರ ಎತ್ತಕೂಡದು. ಅದರಿಂದ ಅಪಾಯವಾಗಬಹುದು (ಆರೋಗ್ಯ ಕೆಡಬಹುದು). ಇದೇ ಮುಖ್ಯ. ಆದರೆ ನೀವುಗಳು ಮಾಡುವುದೆಲ್ಲಾ – ಹಾವಿನ ಪೊರೆ ನೋಡಿ 'ಹಾವು, ಹಾವು' ಎಂದು ಭಯಪಡುವಂತೆ ಇದೆ. ವಾಡಿಕೆ ಹೆಚ್ಚಾಯಿತೇ ಹೊರತು, ಅದರ ತಿರುಳಿಲ್ಲ.'

ಶೆಲ್ಲಮ್ಮಾ:– 'ನೆನ್ನೆ ಕ್ಷೌರ ಮಾಡಿಕೊಂಡು, ಮನೆಯೆಲ್ಲಾ ಒಂದು ಮಾಡಿದಿರಿ! ಒಂದೇ, ಎರಡೇ, ಅನಾಚಾರ (ಮೈಲಿಗೆ).'

ಭಾರತಿ:– 'ಅಯ್ಯೋ ಹುಚ್ಚೀ! ಮೊದಲೆಲ್ಲಾ ಅಂದರೆ ಹಿಂದಿನ ಕಾಲದಲ್ಲಿ ಅಮಟ (ಕ್ಷೌರಿಕ ಅಥವಾ ನಾಪಿತ) ಹೆಣ ಕುಯ್ಯುತ್ತಿದ್ದ. ವೈದ್ಯ ಕಲಿಯಬೇಕಾದರೆ ಅದು ಮೊದಲನೆಯ ಪಾಠ. ಈಗೆಲ್ಲಾ ಅವನು ಹೆಣವನ್ನು ಮುಟ್ಟುವುದೇ ಇಲ್ಲ.

ಶೆಲ್ಲಮ್ಮಾ, ಒಳ್ಳೆಯ ಉತ್ತಮ ಕುಲದ ಬ್ರಾಹ್ಮಣ ಹುಡುಗ ಹೆಣ ಕುಯ್ಯುತ್ತಾನೆ. ಡಾಕ್ಟರ್ ವಿದ್ಯಾಭ್ಯಾಸದಲ್ಲಿ ಅದೇ ಮೊದಲನೆಯ ಪಾಠ. ಮೈಲಿಗೆ–ಕೆಲಸ ಮಾಡುವವನನ್ನು ತಡೆಯುವುದಿಲ್ಲ. ಆ ಕೆಲಸ ಮಾಡದವರು ದೂರ ಸರಿಯಬೇಕಾಗುತ್ತದೆ. ಇದು ಬುದ್ಧಿವಂತಿಕೆಯಲ್ಲ.

ಕೋಮಟಿ, ಮೊದಲಿಯಾರರು, ನಾಯಿಡು ಇವರುಗಳ ಮದುವೆ ಸಂಪ್ರದಾಯ ಕಾಲಕ್ಕೆ ಸರಿಯಾಗಿ ಬದಲಾಗಿಬಿಟ್ಟಿತು. ಈ ಬ್ರಾಹ್ಮಣರ ಸಂಪ್ರದಾಯ ಮಾತ್ರ ಇನ್ನೂ ಕತ್ತಲೆಯಲ್ಲಿಯೇ ಮುಳುಗಿದೆ. ಈ ಮೂಢ ನಂಬಿಕೆಯನ್ನು ತೊಡೆದು ಹಾಕಿದಾಗ ಮಾತ್ರ ಅಂದು ನಮ್ಮ ದೇಶಕ್ಕೆ ನಾಗರೀಕತೆ (ಆಧುನಿಕತೆ) ಮುಕ್ಕಾಲು ಮಟ್ಟಿಗೆ ಬಂದಿದೆ ಎನ್ನಬಹುದು.

ಶೆಲ್ಲಮ್ಮಾ:– 'ಆದರೆ ಕೊಳದಲ್ಲಿ ಸ್ನಾನ ಮಾಡುವುದು ತಪ್ಪೇ? ಅದೂ ಮೂಢ ಪದ್ಧತಿಯೇ?'

ಭಾರತಿ:– 'ಇಲ್ಲ. ಶುದ್ಧವಾದ ಕೊಳದಲ್ಲಿ (ಪುಷ್ಕರಣಿ)ಯಲ್ಲಿ ಮುಳುಗಿ ಸ್ನಾನ ಮಾಡುವುದು ಒಳ್ಳೆಯದು. ಮುಟ್ಟಾದ ಮೂರು ದಿನಗಳ ನಂತರ, ನಾಲ್ಕನೆಯ ದಿನ ಒಂದೆರಡು ಗಂಟೆಗಳವರೆಗೆ ತಣ್ಣೀರಿನಲ್ಲಿರುವುದರಿಂದ ಶರೀರದ ಉಷ್ಣತೆ ಕಡಿಮೆಯಾಗುತ್ತದೆ. ಸ್ನಾನ ಮಾಡುವಾಗ ಇಷ್ಟು ಸಲ ಮುಳುಗು ಹಾಕಬೇಕೆಂದು ನಮ್ಮ ಹಿರಿಯರು ಹೇಳಿರುವುದು ಅವರ ಬುದ್ಧಿವಂತಿಕೆ! ಆದರೆ ಈಗ ಪಟ್ಟಣಗಳಲ್ಲಿ ಶುದ್ಧವಾದ ತೊರೆ, ಕೊಳ ಯಾವುದೂ ಇರುವುದಿಲ್ಲ. ಕೊಳಕು ನೀರಿನಲ್ಲಿ ಸ್ನಾನ ಮಾಡಿ ರೋಗ ಬರಿಸಿಕೊಳ್ಳುವುದಕ್ಕಿಂತ, ನಲ್ಲಿ ನೀರಿನ ಕೆಳಗೆ ಸ್ನಾನ ಮಾಡುವುದು ಒಳ್ಳೆಯದು. ವಿದೇಶೀಯರು ಒಂದು ಅಗಲವಾದ ತೊಟ್ಟಿಯಲ್ಲಿ (ಬಾತ್ ಟಬ್) ನೀರು ತುಂಬಿ ಅದರಲ್ಲಿ ಕುಳಿತುಕೊಳ್ಳುತ್ತಾರೆ. ನಾವೂ ಹಾಗೆಯೇ ಮಾಡಬಹುದು. ಈ ಊರಿನಲ್ಲಿ ಒಳ್ಳೆಯ ಶುದ್ಧವಾದ ಕೊಳಗಳು ಬೇಕಾದಷ್ಟಿವೆ. ನೀವುಗಳು ಖುಷಿಯಾಗಿ ಸ್ನಾನ ಮಾಡಬಹುದು. .... ಯದುಗಿರಿ, ನಿನ್ನ ಬಲಶಾಲಿ ತಮ್ಮ ಹೇಗಿದ್ದಾನೆ?'

ನಾನು:– 'ನನ್ನ ತಮ್ಮ ಸೌಖ್ಯವಾಗಿಯೇ ಇದ್ದಾನೆ. ಆದರೆ ನೀವು ಹೇಳುವುದು ಅರ್ಥವಾಗಲಿಲ್ಲ.'

ಭಾರತಿ:– ಶೆಲ್ಲಮ್ಮಾ ಹೇಳಿದಳು. ಬಿರುಗಾಳಿ ಹೊಡೆದ ವೇಳೆಯಲ್ಲಿ ನಿನ್ನ ತಮ್ಮ ಹುಟ್ಟಿದನಂತೆ. ಆದ್ದರಿಂದ ನಾನು ಅವನನ್ನು ಬಲಶಾಲಿ, ವಾಯುಪುತ್ರ ಎಂದು ಹೇಳುತ್ತೇನೆ.

ನಾನು:– 'ನಿಮ್ಮ ವಾಕ್ಕಿನಂತೆ (ಆಶೀರ್ವಾದದ ಮಾತಿನಂತೆ) ಅವನು ವಾಯುಪುತ್ರನಾಗಿಯೇ ನೂರು ವರುಷ ಇರಲಿ. ಕ್ಷೇಮವಾಗಿರಲಿ.'

ಭಾರತಿ:– 'ನಿನ್ನ ಮಗುವನ್ನು ನೆನೆಸಿಕೊಂಡು ಸದಾ ಅಳಬೇಡ ಯದುಗಿರಿ. ಶಕ್ತಿಯನ್ನು ಮೊರೆ ಹೋಗು. ಬೆಳಗಿನ ಜಾವ ಸ್ನಾನ ಮಾಡಿ ಶಕ್ತಿ ಜಪ ಮಾಡು. ನಿನಗೆ ಒಳ್ಳೆಯದಾಗುತ್ತದೆ. ಚಿಕ್ಕ ವಯಸ್ಸಿನಲ್ಲಿಯೇ ಮುದುಕಿಯಂತೆ ಮುಲುಗಬೇಡ. ಗೀತೆ ಓದಿದ ಫಲವೇನು? ಕೈ ತಪ್ಪಿದುದನ್ನು ಹೇಗಾದರೂ ಪಡೆಯುವುದೇ ಧೀರತನ. ಮುಲುಗುವುದು ಕೈಯ್ಯಲ್ಲಾಗದವರ ಕೆಲಸ. 'ನಿಮಗೆ ಈ ಕಷ್ಟ ಬಂದರೆ ಗೊತ್ತಾಗುತ್ತದೆ' ಎಂದು ನೀನು ಹೇಳಬಹುದು. ಆದರೆ ಮರುಗಿ ಮರುಗಿ ಕ್ಷೀಣಿಸುವುದು ಒಳ್ಳೆಯದಲ್ಲ. ಮನಸ್ಸನ್ನು ಧೃಡಪಡಿಸಿ ಕೊಳ್ಳಬೇಕು.'

ಶೆಲ್ಲಮ್ಮಾ:– 'ನೀವು ಗಂಡಸರು ಹೆತ್ತ ಕರುಳು ತುಡಿಯುವಾಗ ಗೀತೆಯೂ, ವೇದಾಂತವೂ ಏನು ಮಾಡುತ್ತದೆ? ಅವಳು ಶಕ್ತಿಯನ್ನು ಎಷ್ಟೇ ಗೆಂಜಿ ಮನಸ್ಸಿಟ್ಟು

ಜಪ ಮಾಡಿದರೂ, ಸತ್ತ ಮಗು ಅವಳ ಕೈಗೆ ಸಿಗುತ್ತದೆಯೇ? ಸಂಕಟ ತೀರುವುದೇ?'

ಭಾರತಿ:– 'ನಮ್ಮ ಕರ್ತವ್ಯವನ್ನು ನಾವು ಮಾಡಿದ ಮೇಲೆ, ದೈವ ಏನು ದಾರಿ ತೋರುತ್ತದೋ ಅದೇ ನಮಗೆ ದಾರಿ ಎಂದು ನಾವು ಮನಸ್ಸನ್ನು ಧೃಡ ಪಡಿಸಿಕೊಳ್ಳಬೇಕು. ನಾವು ಶಕ್ತಿಮೀರಿ ನಮಗೆ ಸಾಧ್ಯವಾಗುವವರೆಗೆ ಮಾಡಬಹುದು. ಅದಕ್ಕೂ ಮೀರಿದರೆ ಅದರೊಂದಿಗೆ ನಾವು ಮಡಿಯುವುದು ಮೂರ್ಖತನ! ದುಃಖ ಬಂದಾಗ ಅತ್ತು ಅತ್ತೇ ಅದನ್ನು ಕಡಿಮೆ ಮಾಡಿಕೊಳ್ಳಬೇಕು. ಆದರೆ ಸದಾಕಾಲ ಅತ್ತು ಅತ್ತು ಮುಖದ ಅಂದವನ್ನು ಕೆಡಿಸಿಕೊಳ್ಳುವುದು ತಪ್ಪು. ದುಃಖದಲ್ಲಿ ನಮಗಿಂತ ಮಿಗಿಲಾದವರನ್ನು ನೋಡಿ ಸಮಾಧಾನ ಮಾಡಿಕೊ; ಸಿರಿಯಲ್ಲಿ (ಐಶ್ವರ್ಯ) ನಮಗಿಂತ ಕೀಳಾದವರನ್ನು ನೋಡಿ ಸಮಾಧಾನ ಪಡು ಎಂಬ ಮಾತು ಬಂಗಾರದ ಅಕ್ಷರದಲ್ಲಿ ಕೊರೆಯುವಂಥ ನೀತಿ ಮಾತು.

ಕೆಲವರು ಚಿಕ್ಕ ವಯಸ್ಸಿನಲ್ಲಿಯೇ ಹಲವು ಕಷ್ಟಗಳನ್ನು ಅನುಭವಿಸುತ್ತಾರೆ. ಕೆಲವರು ವಯಸ್ಸಾದ ಮೇಲೆ ಹಲವು ಕಷ್ಟಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಇನ್ನು ಮುಂದೆ ಯದುಗಿರಿಗೆ ಎಲ್ಲದರಲ್ಲೂ ಗೆಲುವು ಎಂದು ಇಟ್ಟುಕೊ. ಈ ದುಃಖವನ್ನೇ ನೆನೆಸಿ ನೆನೆಸಿ ಕೊರಗಬೇಡ. ಮುಂದೆ ಬರುವ ನಲ್ಮೆಯನ್ನು ಎದಿರು ನೋಡಿ ಶಕ್ತಿ ಜಪ ಮಾಡು.'

ಹೀಗೆ ಹೇಳಿಬಿಟ್ಟು 'ಪಾಪಾ ತಂಗಮ್ಮಾ ದೊಡ್ಡವಳಾದ ದಿನ ಹಾಡಿದ (ರಚಿಸಿದ) ಹಾಡನ್ನು ಹಾಡಿ ತೋರಿಸುತ್ತೇನೆ' ಎಂದು ಆ ಹಾಡಿನ ಬರಹವನ್ನು ನನ್ನ ಬಳಿ ಕೊಟ್ಟು ಈ ಕೆಳಗೆ ಬರೆದಿರುವ ಹಾಡನ್ನು ಹಾಡಿದರು.

ಈ ಹಾಡು ಭಾರತಿಯಾರರ ಕವಿತೆಗಳು, ವಚನ, ಪ್ರಬಂಧ (ಲೇಖನ) ಮುಂತಾದ ಅವರ ಯಾವ ಭಾಗದ ಪ್ರಕಟಣೆಯಲ್ಲೂ ಅಚ್ಚಾಗಿಲ್ಲ.

ಈ ದೈವ ನಮಗನುಕೂಲ, ಇನ್ನು ಚಿಂತೆಗೆ ಅವಕಾಶವಿಲ್ಲ

(1) ಮಂತ್ರಗಳನ್ನು ಶೋಧಿಸಿದರೆ, ಪ್ರಪಂಚವನ್ನು ಆಳುವುದು ದೈವ
ಆ ದೈವವೇ ಗತಿಯೆಂದು ನಂಬಿರಿ, ಎಲ್ಲವೂ ಇದೆಯೆಂದೆನಿಸುತ್ತದೆ
(ಈ ದೈವ)

(2) ಮರದ ಬೇರಿನಲ್ಲಿ ಅದಕ್ಕೆ ಆಹಾರವುಂಟು
ಬಸಿರಲ್ಲಿ ಗರ್ಭಕ್ಕೆ ಉಣವುಂಟು
ಎಲ್ಲಕ್ಕೂ ಮೇಲಾದ ಧರ್ಮಗಳುಂಟು
ಶಕ್ತಿಯೆಂದರೇ ಮುಕ್ತಿಯುಂಟು
(ಈ ದೈವ)

(3) ಪ್ರಪಂಚವೇ ಒಡಲಾಗಿ, ಅದರಲ್ಲಿ
ಉಸಿರಾಗಿ ಬೆಳಗುವ ದೈವ
ಎಲ್ಲೆಲ್ಲಿಯೂ ಗಗನದ ಬೆಳಕಿನಂತೆ
ಪ್ರಕಾಶಿಸಿ ಎಲ್ಲ ಕಡೆಯೂ ಹರಡಿರುವ ದೈವ

(ಈ ದೈವ)

(4) ಆಗುಹೋಗುಗಳೆಲ್ಲಾ ದೈವದ ಮಹಿಮೆ
ಚಿಂತೆಯೆಲ್ಲವೂ ದೈವದ ಚಿಂತೆ
ಅದರಲ್ಲಿ ಒಂದಾಗಿ ನಾಮ ಜಪವನ್ನು
ತಿಳಿದವರು ದೈವ ಪಥವನ್ನು ಪಡೆಯುವರು

(ಈ ದೈವ)

(5) ನೋವಿಲ್ಲ ... ಬಡತನವಿಲ್ಲ
ವ್ರತದಲ್ಲಿ ದುಃಖವಿಲ್ಲ (ಕಷ್ಟವಿಲ್ಲ)
ತಾಯಿ ತಂದೆ ಗೆಳೆಯನಾಗಿ
ಅರ್ಹತೆ ಫಲ ಕೊಡುವ ದೈವ

(ಈ ದೈವ)

(6) ಅರ್ಥವಿಲ್ಲ ಮರುಳುತನವಿಲ್ಲ
ಪ್ರೀತಿ ಸಂತೋಷ ಮೇಲ್ಮೆಯುಂಟು, ಮಿಕ್ಕಿರುವುದೆಲ್ಲ
ಗೆಲುವ ಸಾಧನೆ ವೇಗವಾಗಿರುವುದು
ಈ ದೈವ ನಮಗನುಕೂಲ
ಇನ್ನು ಚಿಂತೆಗೆ ಅವಕಾಶವಿಲ್ಲ

23. ಉಪನ್ಯಾಸ

(1918)ಕಾಳಯುಕ್ತಿ ವರುಷ ಚೈತ್ರಮಾಸದ ಒಂದು ಶುಕ್ರವಾರ ತಮ್ಮ ಮನೆಯಲ್ಲಿ ಒಂದು ಸಣ್ಣ ಸಭೆಯನ್ನು (ಕೂಟ) ಏರ್ಪಡಿಸಿದ್ದರು. ಪರಿಚಯವಿರುವ ಹೆಣ್ಣು ಮಕ್ಕಳನ್ನೆಲ್ಲಾ ಅಲ್ಲಿಗೆ ಬರುವಂತೆ ಆಳಿನ ಕೈಯ್ಯಲ್ಲಿ ಹೇಳಿ ಕಳುಹಿಸಿದ್ದರು.

ಭಾರತಿಯಾರರು ಮೊದಲು (ಆರಂಭದಲ್ಲಿ) ವಂದೇಮಾತರಂ ಹಾಡಿದರು. ನಂತರ 'ಪೆಣಹಳ್ ವಿಡುದಲೈ' ಕುಮ್ಮಿ. ನಂತರ 'ನಿಮಗೆ ಗೊತ್ತಿರುವುದನ್ನು ಹೇಳಿ' ಎಂದು ನಮಗೆ ಹೇಳಿದರು. ನಾನು 'ಮುಯರ್ಚಿಯಿನ್ ಪಯನ್ (ಪ್ರಯತ್ನದ ಫಲ)' ಎಂಬ ವಿಷಯವಾಗಿ ಉಪನ್ಯಾಸ (ಭಾಷಣ) ನೀಡಿದೆ. ಭಾರತಿಯಾರರು ಈ ಉಪನ್ಯಾಸವನ್ನು 'ಸ್ವದೇಶ ಮಿತ್ರ'ದ ತಮ್ಮ ಅಂಕಣದಲ್ಲಿ ಹೊರಗೆ ತಂದರು.

(ಭಾರತಿ ಕಾವ್ಯದಲ್ಲಿ ಲೇಖನ ಎಂಬ ಭಾಗದಲ್ಲಿ ಮಹಿಳಾ ವಿಭಾಗದಲ್ಲಿ 'ಹೆಣ್ಣುಮಕ್ಕಳ ಸಂಭಾಷಣೆಯ ಸಭೆ' ಎಂಬ ಲೇಖನ ನೋಡಬೇಕು)

ಆ ದಿನಗಳಲ್ಲಿ ನಮ್ಮ ಮನೆಗಳಲ್ಲಿ ಇಂಗ್ಲೀಷ್ ಪೇಪರ್ ಬರುತ್ತಿತ್ತೇ ಹೊರತು, ತಮಿಳು ಪತ್ರಿಕೆಗಳನ್ನು ತರಿಸುತ್ತಿರಲಿಲ್ಲ.

ಜಡ್ಜ್ ಕೆಲಸದಲ್ಲಿದ್ದ ನಮ್ಮ ಬಂಧು ಎಂ.ಓ. ಪಾರ್ಥಸಾರಥಿ ಅಯ್ಯಂಗಾರ್ ಅವರ ಮನೆಗೆ 'ಸ್ವದೇಶ ಮಿತ್ರ' ಬರುತ್ತಿತ್ತು. ಅವರ ಮನೆಯ ಹೆಣ್ಣುಮಕ್ಕಳು ನನ್ನ ಉಪನ್ಯಾಸವನ್ನು ಓದಿಬಿಟ್ಟು, ನನ್ನ ಅಜ್ಜಿಯ ಹತ್ತಿರ ಬಂದು 'ಪ್ರಪಂಚ ಮುಳುಗಿಹೋಯಿತು' ಎಂದು ಕೂಗಾಡಿದರಂತೆ. ತಿರುವಲ್ಲಿಕೇಣಿಯಲ್ಲಿ ಜನರು ಎಲ್ಲಿ ಸೇರಿದ್ದರೂ ಇದೇ ಮಾತಂತೆ.

ಇದಾದ ನಂತರ ಅಯ್ಯರ್ ಅವರ ಮನೆಯಲ್ಲಿ ತಿರುವಳ್ಳುವರ್ ದಿನವನ್ನು ನಡೆಸಿದರು. ಬಡವರಿಗೆ ಅನ್ನ ಹಾಕಿದರು. ಶೆಲ್ಲಮ್ಮಾ, ಭಾಗ್ಯಲಕ್ಷ್ಮಿ ಅಮ್ಮ ಇಬ್ಬರೂ ಸೇರಿ ಅಡಿಗೆ ಕೆಲಸ ಮಾಡಿದರು. ಅಯ್ಯರ್ ಅವರು 'ತಿರುವಳ್ಳುವರ್' ಅವರ ಜೀವನದ ಕತೆಯ ಕೆಲವು ಭಾಗಗಳನ್ನು ಹೇಳಿದರು. ಭಾರತಿಯಾರರು ಮಾಮೂಲಿನಂತೆ ಕೆಲವು ಹಾಡುಗಳನ್ನು ಹಾಡಿದರು. ನಾನು 'ಮಹಿಳೆಯರ ಮುನ್ನಡೆ' ಎಂಬ ವಿಷಯದ ಬಗ್ಗೆ ಭಾಷಣ ನೀಡಿದೆ. ಅದರಲ್ಲಿ ಮಹಾತ್ಮಾ ಗಾಂಧಿಯವರ ಕೆಲ ಮಾತುಗಳನ್ನು ಉದಾಹರಿಸಿ, ಸತ್ಯಾಗ್ರಹದ ಬಗ್ಗೆಯೂ ಎತ್ತಿ ಹೇಳಿ ಮಹಿಳೆಯರ ಮುನ್ನಡೆಗೆ (ಅಭಿವೃದ್ಧಿಗೆ) ಮಹಿಳೆಯರೇ ತಡೆ (ಕಂಟಕ) ಎಂದು ಹೇಳಿದೆ. ಇದರಿಂದ ವಯಸ್ಸಾದ ಅಜ್ಜಿಯರಿಗೆ ಬಹಳ ಕೋಪ ಬಂದಿತಂತೆ.

ಭಾರತಿಯಾರರ ಅಂಕಣ ಭಾಗದಲ್ಲಿ ನನ್ನ ಈ ಭಾಷಣವೂ ಪ್ರಚುರಿಸಲ್ಪಟ್ಟಿತೆಂದು ನನ್ನ ತಂದೆ ಹೇಳಿದರು.

ಎರಡು ಸಲ ನನ್ನ ಭಾಷಣ ಪತ್ರಿಕೆಯಲ್ಲಿ ಬಂದ ನಂತರ, ನನ್ನ ಅಜ್ಜಿ, ನನ್ನ ಹಿರಿಯ ಸೋದರತ್ತೆ, ಎರಡನೆಯ ಸೋದರತ್ತೆಯ ಮಗಳು ಎಲ್ಲರೂ ಬಂದರು. ನನ್ನ ದೊಡ್ಡ ಸೋದರತ್ತೆ ಈ ತರಹ ಅಭಿವೃದ್ಧಿಪೂರಕ ಭಾಷಣವನ್ನು ನಿಲ್ಲಿಸಬೇಕೆಂದೂ, ಇದರಿಂದಾಗಿ ಅವರುಗಳು ತಿರುವಲ್ಲಿಕ್ಕೇಣಿಯಲ್ಲಿ ಯಾರಿಗೂ ಮುಖ ತೋರಿಸಲಾಗುತ್ತಿಲ್ಲವೆಂದೂ, ಈ ತರಹ ಉಪನ್ಯಾಸ ಕೊಡುವುದು ಬಹಳ ತಪ್ಪು ಎಂದು ನಮ್ಮ ತಂದೆಯವರ ಬಳಿ ವಾದಿಸಿ, ಕಡೆಯಲ್ಲಿ ಅದನ್ನು ನಿಲ್ಲಿಸಿಯೂ ಬಿಟ್ಟರು.

ಬರುವ ವಾರ ಭಾರತಿಯವರು ಕರೆದಾಗ, ನನ್ನ ಅಜ್ಜಿ, ಸೋದರತ್ತೆ ಎಲ್ಲರೂ ಬಂದಿದ್ದರು. ನನಗೆ ಬದಲು ಅತ್ತೆಯವರೇ ಭಾಷಣ ಮಾಡಿದರು. ಅದರಲ್ಲಿ

ಹೆಣ್ಣುಮಕ್ಕಳಿಗೆ ಇಂಗ್ಲೀಷ್ ವಿದ್ಯಾಭ್ಯಾಸ ಕೂಡದು ಎಂದೂ, ಮನೆಯಲ್ಲಿಯೇ ಇದ್ದು ಕೆಲಸ ಮಾಡಿಕೊಂಡಿರುವುದೇ ಅವರುಗಳಿಗೆ ತಕ್ಕದ್ದು ಎಂದೂ ಹೇಳಿದರು. ಅದಕ್ಕೆ ಉತ್ತರವಾಗಿ ಭಾರತಿಯಾರರು ಕೆಲವು ನೀತಿ ಮಾತುಗಳನ್ನು ಹೇಳಿ, ಇದರಲ್ಲಿ ಯಾವ ತಪ್ಪೂ ಇಲ್ಲ ಎಂದು ಸ್ವಲ್ಪ ಸಮಾಧಾನ ಪಡಿಸಿದರು. ಆದರೆ ಅವರುಗಳು ಒಪ್ಪಲಿಲ್ಲ. ಅದರೊಂದಿಗೆ ನಮ್ಮ ಸೋದರತ್ತೆ ನೀಡಿದ ಭಾಷಣವನ್ನು ಪತ್ರಿಕೆಯಲ್ಲಿ ಪ್ರಕಟಿಸಬಾರದು ಎಂದೂ ಹೇಳಿದರು.

ಹಾಗಿದ್ದರೂ ಕೂಡ, ಭಾರತಿಯಾರರು ತಮ್ಮ ಲೇಖನದಲ್ಲಿ ಅತ್ತೆಯವರ ಮಾತುಗಳನ್ನು ಅವರ ಹೆಸರನ್ನು ಹೇಳದೆ ಕೆಲವು ವಾಕ್ಯಗಳನ್ನು ತಮಾಷೆಯಾಗಿ ಸೇರಿಸಿ ಪ್ರಕಟಿಸಿದ್ದಾರೆ.

(24) 'ವನ್ ತಾಅಣ್ಯೈ ವಣಂಗಿ'

ಮುರುಗೇಶ ಪಿಳ್ಳೆಯವರ ಮಗ ರಾಜಬಹದ್ದೂರ್ ಪ್ಯಾರಿಸ್ಸಿನಲ್ಲಿ ಇಂಜಿನಿಯರಿಂಗ್ ಓದಿ ಮುಗಿಸಿ ವಾಪಸ್ಸು ಬರುತ್ತಿದ್ದಾನೆಂದು ಶೆಲ್ಲಮ್ಮಾ ತಿಳಿಸಿದರು. ಆ ಸಮಯ ಯುದ್ಧ ಬಹಳ ಜೋರಾಗಿ ನಡೆಯುತ್ತಿದ್ದಿತು.

ಓದು ಮುಗಿಸಿ ಜಯಭೇರಿ ಹೊಡೆದು ಬರುತ್ತಿರುವ ಮಗನನ್ನು ಎದಿರುಗೊಳ್ಳಲು (ಸ್ವಾಗತಿಸಲು) ಹೆತ್ತವರು ಹಲವು ವಿಧದ ವಿಶೇಷತೆಯನ್ನು ಏರ್ಪಾಟು ಮಾಡಿದ್ದರು. ಮನೆಯನ್ನು ಮದುವೆ ಮನೆಯಂತೆ ತಳಿರು, ತೋರಣಗಳಿಂದ ಅಲಂಕರಿಸಿದ್ದರು. ಬಂಧು, ಮಿತ್ರರಿಗೆಲ್ಲಾ ಆಹ್ವಾನ ಕಳುಹಿಸಿದ್ದರು. ಅವನು ಬರುವ ವೇಳೆಯಲ್ಲಿ, ಭಾರತಿಯಾರರ ಮನೆಯಲ್ಲಿರುವವರೆಲ್ಲರೂ ಬಂದು ಅಲ್ಲಿರಬೇಕೆಂದು ಆಹ್ವಾನಿಸಿದ್ದರು. ಎಲ್ಲಾ ಏರ್ಪಾಡುಗಳನ್ನೂ ಭರ್ಜರಿಯಾಗಿ ಮಾಡಿದ್ದರು.

ಯಾವ ವಿಷಯದಲ್ಲಿಯೂ ಅನೇಕವಾಗಿ, 'ತಾನೊಂದು ನೆನೆದರೆ ದೈವವೊಂದು ನೆನೆಯಿತು' ಎಂಬ ಹೇಳಿಕೆ ಇದೆ. ಮುರುಗೇಶ ಪಿಳ್ಳೆಯವರ ವಿಷಯದಲ್ಲಿಯೂ ಹೀಗೆಯೇ ನಡೆಯಿತು. ಯಾವ ದಿನವನ್ನು ಅವರು ತಮ್ಮ ಬಾಳ್ವೆಯ ಅತ್ಯಂತ ಸಂತೋಷದ ದಿನವೆಂದುಕೊಂಡರೋ, ಆ ದಿನವೇ ಅವರ ಬಾಳ್ವೆಯ ಬಹು ದುಃಖಕರವಾದ ದಿನವಾಗಿ ಬಿಟ್ಟಿತು.

ರಾಜಬಹದ್ದೂರನನ್ನು ಬರಮಾಡಿಕೊಳ್ಳಲು ಎಲ್ಲರೂ ಬಹಳ ಕುತೂಹಲದಿಂದ ಕಾಯುತ್ತಿರುವಾಗಲೇ ಅವನಿಗೆ ಬದಲು ಒಂದು ತಂತಿ (ಟೆಲಿಗ್ರಾಮ್) ಬಂದಿತು.

ರಾಜಬಹದ್ದೂರ್ ಪಯಣಿಸುತ್ತಿದ್ದ ಹಡಗು ಜರ್ಮನರ ಗುಂಡುಗಳಿಂದ ಹೊಡೆಯಲ್ಪಟ್ಟು ಚೂರು ಚೂರಾಯಿತೆಂದು ಆ ತಂತಿಯಲ್ಲಿತ್ತು.

ತಂತಿಯ ವಿಷಯ ಓದಿ ಮುರುಗೇಶ ಪಿಳ್ಳೆ ಮೂರ್ಛೆ ಬಿದ್ದುಬಿಟ್ಟರು. ಬಹಳ ಹೊತ್ತಿನ ಮೇಲೆ ಪ್ರಜ್ಞೆ ಬಂದಿತು. ಆದರೆ ನೆಲದಲ್ಲಿ ಬಿದ್ದವರು ಮೇಲೆ ಏಳಲೇ ಇಲ್ಲ. ಒಡೆದ ಮನಸ್ಸಿನ ಕ್ಷೋಭೆ ದೇಹವನ್ನೂ ಜರ್ಝರಿಸಿಬಿಟ್ಟಿತ್ತು. ಅತ್ತರು, ಅಲವತ್ತುಕೊಂಡರು. ಯಾರು ಎಷ್ಟು ಹೇಳಿದರೂ ಅವರು ಸಮಾಧಾನ ಹೊಂದಲೇ ಇಲ್ಲ.

ಭಾರತಿಯಾರರು ಅವರ ಪಕ್ಕದಲ್ಲಿಯೇ ಇದ್ದರು. ಮುರುಗೇಶ ಪಿಳ್ಳೆಯವರ ಸ್ಥಿತಿಯೂ ಅವರು ಪಡುತ್ತಿರುವ ದುಃಖವೂ 'ಶ್ರೀರಾಮ ವನವಾಸಕ್ಕೆ ತೆರಳಿದ ಸಂದರ್ಭ ದಶರಥನ ಮನಃಸ್ಥಿತಿಯನ್ನು ಹೋಲುತ್ತದೆ' ಎಂದರು. ರಾಜ್‌ಬಹದ್ದೂರ್ ಮಗುವಿನಲ್ಲಿ ಮಂಡಿಯಿಟ್ಟು, ಆಟವಾಡಿ, ಮುದ್ದು ಮಾತುಗಳನ್ನು ಆಡುತ್ತಿದ್ದುದನ್ನೂ ಅವನ ಬುದ್ಧಿ ಸೂಕ್ಷ್ಮತೆಯನ್ನೂ ಹೇಳಿ ಹೇಳಿ ಅಂಗಲಾಯ್ತುಕೊಂಡರು. 'ಗರ್ಭಿಣಿ ಸ್ತ್ರೀಯರ ಮೇಲೆ ಸೂರ್ಯಕಿರಣ ಬಿದ್ದರೆ, ಶಿಶುವು ದೇಹದಾರ್ಢ್ಯ ಹೊಂದುತ್ತದೆ' ಎಂದು ಯಾರೋ ಹೇಳಿದರಂತೆ. ಅದನ್ನು ಕೇಳಿದ ಮುರುಗೇಶಪಿಳ್ಳೆ ಯಾರು ತಡೆದರೂ ಕೇಳದೆ, ಅಣ್ಣಿಯಮ್ಮಾವನ್ನು ಕರೆದುಕೊಂಡು ಹೋಗಿ ಒಂದು ತಿಟ್ಟಿನ ಮೇಲೆ (ಗುಡ್ಡ ಅಥವಾ ಸ್ವಲ್ಪ ಎತ್ತರದ ಜಾಗ) ಕೆಲವು ಗಂಟೆಗಳ ಕಾಲ ಅವರನ್ನು ಕುಳ್ಳಿರಿಸುತ್ತಿದ್ದರಂತೆ. ಅಣ್ಣಿಯಮ್ಮಾ ಅದನ್ನೇ ಮತ್ತೆಮತ್ತೆ ಹೇಳಿ ಹಲುಬುತ್ತಿದ್ದರು.

ಭಾರತಿಯಾರರು ಆ ದಂಪತಿಗಳನ್ನು ಸಮಾಧಾನ ಪಡಿಸಲು ಬಹಳ ಶ್ರಮಪಟ್ಟರು. ಇಂದ್ರಜಿತ್ ಮರಣಿಸಿದಾಗ ಮಂಡೋದರಿ ದುಃಖಿಸಿದ ಕಂಬರಾಮಾಯಣದ ಪದ್ಯಗಳನ್ನೂ, ಕುಲಶೇಖರಾಳ್ವಾರ್ ಹಾಡಿರುವ 'ವನ್ತಾಳಿಣೈ ವಣಂಗಿ' ಎಂಬ ದಶರಥನ ದುಃಖದ ಸಂದರ್ಭವನ್ನೂ, ದೇವಕಿ ಹಲುಬಿದ 'ಆಲದಣ್ ಕರಂಬನ್ನವನ್ ತಾಲೋ' ಎಂಬ ಪದ್ಯಗಳನ್ನೂ ಮನಕರಗುವಂತೆ ಹಾಡಿದರು.

ಇವುಗಳನ್ನು ಕೇಳಿ ಆ ದಂಪತಿ ಸ್ವಲ್ಪ ಹೊತ್ತು ಮಾತಾಡದೆ ಇದ್ದು, ಮತ್ತೆ ದುಃಖ ಪಡಲಾರಂಭಿಸಿದರು. ಮುರುಗೇಶ ಪಿಳ್ಳೆಯವರಿಗೆ ಇದಕ್ಕೆ ಮೊದಲೇ ಸ್ವಲ್ಪ ಏನೋ ಒಂದು ತರಹ ನೋವು ಇದ್ದಿತಂತೆ. ಅದರ ಜೊತೆಗೆ ಇದೂ ಸೇರಿದ ಮೇಲೆ ಔಷಧಿ ಚಿಕಿತ್ಸೆ ಯಾವುದೂ ಫಲಿಸಲಿಲ್ಲ. ಬದುಕುವುದು ಕಷ್ಟ ಎಂದು ಡಾಕ್ಟರ್ ಹೇಳಿಬಿಟ್ಟರು. ಅಡಿಗಡಿಗೆ 'ರಾಜಬಹದ್ದೂರ್ ಬಂದನೇ? ಬಂದುಬಿಟ್ಟನೇ?' ಎಂದು ಕೇಳುತ್ತಲೇ ಇದ್ದರು.

ಆಗ ಪಕ್ಕದಲ್ಲಿದ್ದವರೆಲ್ಲರೂ ಯೋಚನೆ ಮಾಡಿ, ಸಾಯುವ ವೇಳೆಯಲ್ಲಾದರೂ ನೆಮ್ಮದಿಯಿಂದ ಸಾಯಲಿ ಎಂದು, ರಾಜಬಹದ್ದೂರ್ ವಿಪತ್ತಿನಿಂದ ತಪ್ಪಿ ಬದುಕಿ ಬಿಟ್ಟನೆಂದೂ, ಮುಂದಿನ ವಾರ ಬಂದು ಸೇರುವುದಾಗಿಯೂ ಸುಳ್ಳು ತಂತಿ ಒಂದನ್ನು ತಯಾರಿಸಿ, ಅದನ್ನು ಅರವಿಂದರ ಬಳಿ ಕೊಟ್ಟು, ಅದನ್ನು ತೆಗೆದುಕೊಂಡು ಹೋಗಿ ಮುರುಗೇಶ ಪಿಳ್ಳೆಯವರಿಗೆ ತೋರಿಸಿ, ಅವರನ್ನು ಸಮಾಧಾನ ಪಡಿಸುವಂತೆ ಏರ್ಪಾಡು ಮಾಡಿದರು.

ಅರವಿಂದರು ತಮ್ಮ ಮನೆಯನ್ನು ಬಿಟ್ಟು ಹೊರಗೆ ಬರುತ್ತಿರಲಿಲ್ಲ. ಮುರುಗೇಶ ಪಿಳ್ಳೆಯವರ ಪರಿತಾಪಕರವಾದ ಸ್ಥಿತಿಯನ್ನು ಉದ್ದೇಶಿಸಿ, ತಮ್ಮಿಂದ ಆದಷ್ಟು ಸಹಾಯ ಮಾಡಲು ಮುಂದೆ ಬಂದರು. ಆದರೆ ಮುರುಗೇಶ ಪಿಳ್ಳೆಯವರು ಈ ಸುಳ್ಳಾಟವನ್ನು ನಂಬಲಿಲ್ಲ. ಅರವಿಂದರು ಹೇಳಿದುದನ್ನೆಲ್ಲಾ ಸಮಾಧಾನ ಚಿತ್ತದಿಂದ ಕೇಳಿಸಿಕೊಂಡರು. ನಂತರ ನಿಧಾನವಾಗಿ 'ನೀವು ತೋರಿಸಿದ ತಂತಿಯಲ್ಲಿರುವ ಸುದ್ದಿ (ಸಮಾಚಾರ) ನಿಜವಾಗಿಯೇ ಇರಬಹುದು. ಆದರೆ ನನ್ನೊಳಗಿರುವ ಆತ್ಮ ಇದನ್ನು ನಂಬುವುದಿಲ್ಲ ಎನ್ನುತ್ತಿದೆ! ಕೈಗೆ ಬಂದ ತುತ್ತು ಬಾಯಿಗೆ ಬರದೆ ಎಲ್ಲೋ ಹೋಗಿಬಿಟ್ಟಿತು ಎಂಬಂತೆ ನನ್ನ ಮನ ತುಡಿಯುತ್ತಿದೆ. ನನಗಾಗಿ ಇಷ್ಟೊಂದು ಶ್ರಮ ತೆಗೆದುಕೊಂಡ ನಿಮ್ಮಗಳಿಗೆ ನಾನೇನು ಪ್ರತ್ಯುಪಕಾರ ಮಾಡುತ್ತೇನೆ?' ಎಂದರು. ಈ ಪ್ರಯತ್ನ ಫಲಿಸಲಿಲ್ಲ ಎಂದಾದ ಮೇಲೆ ಬೇರೆ ಪ್ರಯತ್ನ ಮಾಡಿದರು. ರಾಜಬಹದ್ದೂರ್‌ನ ತರಹವೇ ಕಾಣುವ ಒಬ್ಬನಿಗೆ ಇಂಗ್ಲೀಷ್ ತೊಡುಗೆಗಳನ್ನು ತೊಡಿಸಿ, 'ಇದೋ ರಾಜಬಹದ್ದೂರ್ ಹಡಗಿನಿಂದ ನಟ್ಟಿಗೆ ಇಳಿದು ಬರುತ್ತಿದ್ದಾನೆ' ಎಂದು ಹೇಳಿ ಒಂದು ಸುಳ್ಳು ನಾಟಕವಾಡಿದರು. ಇಷ್ಟರೊಳಗೆ ಮುರುಗೇಶ ಪಿಳ್ಳೆಯವರ ಮಾತಾಡುವ ಶಕ್ತಿ ಹೋಗಿಬಿಟ್ಟಿತು. ಕಣ್ಣುಗಳನ್ನು ದೊಡ್ಡದಾಗಿ ತೆರೆದು, ರಾಜಬಹದ್ದೂರ್ ಎಂದು ತೋರಿಸಿದವನನ್ನು ತೀಕ್ಷ್ಣವಾಗಿ ದಿಟ್ಟಿಸಿದರು. ಮುಖದಲ್ಲಿ ಅಪನಂಬಿಕೆಯನ್ನೂ, ಅತೃಪ್ತಿಯನ್ನೂ ತೋರಿಸಿ, ಪಕ್ಕಕ್ಕೆ ಹೊರಳಿ ಮಲಗಿದರು. ಸ್ವಲ್ಪ ಸಮಯದ ನಂತರ, ತುಡಿಯುತ್ತಿದ್ದ ಉಸಿರು ದೇಹವನ್ನು ಬಿಟ್ಟು ಹೋಗಿಬಿಟ್ಟಿತು.

ಹಿರಿಯರ ಮಾತು ಸುಳ್ಳಾಗದಂತೆ, ತಂದೆಯ ಬೇಡಿಕೆಯನ್ನೂ ಭಗವಂತ ಒಪ್ಪಿದನೋ ಎಂಬಂತೆ, ಮುರುಗೇಶ ಪಿಳ್ಳೆ ಮರಣಿಸಿದ 27ನೇ ದಿನ ರಾಜಬಹದ್ದೂರ್ ಸೌಖ್ಯವಾಗಿ ಬಂದು ಸೇರಿದ. ಒಡೆದ ಹಡಗಿನ ಒಂದು ಮರದ ಹಲಗೆಯನ್ನು ಹಿಡಿದುಕೊಂಡು ಈಜಿ, ಒಂದು ಗುಡ್ಡದ ಮೇಲೆ ಹತ್ತಿ ಇದ್ದು, ಅಲ್ಲಿಂದ ಬೇರೆ ಹಡಗಿನಲ್ಲಿ ಬಂದನಂತೆ. ಎಲ್ಲರೂ ಅವನನ್ನು ಬಹಳ ದುಃಖದಿಂದ ಬರಮಾಡಿಕೊಂಡರು. ಅವನ ತಂದೆಯವರ ಅಂತಿಮ ಕಾಲವನ್ನು ಹೇಳಿಹೇಳಿ ಅತ್ತರು.

ಭಾರತಿಯಾರರು 'ಮುರುಗೇಶ ಪಿಳ್ಳೆಯವರು ಮಗನಿಗಾಗಿ ಜೀವ ಕೊಟ್ಟರು. ಅವರು ಇದ್ದಿದ್ದರೆ ಇವನು ಬರುತ್ತಿದ್ದನೋ ಇಲ್ಲವೋ ಯಾರಿಗೆ ಗೊತ್ತು' ಎಂದರು.

(25) 'ವೆಳಿಯೇತ್ರಮ್'

ನಾನು ಪುದುಚೇರಿಯಲ್ಲಿದ್ದಾಗ, ಶೆಲ್ಲಮ್ಮಾ ತಮ್ಮ ತಮ್ಮನ ಮದುವೆಗೆ ಏರ್ಪಾಡುಗಳನ್ನು ಮಾಡಲು, ತಮ್ಮ ಸ್ವಂತ ಊರಾದ 'ಕಡೆಯಂ'ಗೆ ಹೊರಟು ಹೋದರು. ಅವರು ಹೋಗಿದ್ದ ಒಂದು ತಿಂಗಳ ಕಾಲವೂ ಭಾರತಿಯಾರರು ಮೌನವ್ರತ ಆಚರಿಸಿದರು. ನಮ್ಮ ಮನೆಗೆ ಬರುತ್ತಿರಲಿಲ್ಲ. ನಾನೂ ಮೊದಲಿನಂತೆ ಆಗಾಗ ಅವರ ಮನೆಗೆ ಹೋಗಲಾಗುತ್ತಿರಲಿಲ್ಲ.

ಶೆಲ್ಲಮ್ಮಾ ಊರಿನಿಂದ ಹಿಂತಿರುಗಿದ ಸ್ವಲ್ಪ ದಿನಗಳೊಳಗಾಗಿ ಅವರ ತಂದೆ ತೀರಿಕೊಂಡುದಾಗಿ ತಂತಿ ಬಂದಿತು. ಆ ಸಮಯ ತಂಗಮ್ಮಾ, ಶಕುಂತಲಾ ಇಬ್ಬರನ್ನೂ ಪುದುಚೇರಿಯಲ್ಲಿಯೇ ಬಿಟ್ಟು, ಶೆಲ್ಲಮ್ಮಾ ಮಾತ್ರ ಕಡೆಯಕ್ಕೆ ಹೋದರು. ಮಕ್ಕಳು ನಮ್ಮೊಂದಿಗೆ ಆಡುತ್ತಿದ್ದರು.

ಶೆಲ್ಲಮ್ಮಾ ಕೆಲವು ದಿನಗಳಲ್ಲಿಯೇ ಹಿಂತಿರುಗಿ ಬಂದು ಬಿಟ್ಟರು. ಆದರೆ ಊರಿನಿಂದ ಬಂದ ಮೇಲೆ ಪುದುಚೇರಿಯನ್ನು ಬಿಟ್ಟು, ಬ್ರಿಟಿಷ್ ಇಂಡಿಯಾವಿಗೆ ಹೋಗಿ ಬಿಡಬೇಕೆಂಬ ಆಸೆ ಅವರಿಗೆ ಹೆಚ್ಚಾಗಿ ಬಿಟ್ಟಿತು. ಸ್ವಂತ ಊರನ್ನು ಬಿಟ್ಟು ಇಲ್ಲಿಗೆ ಬಂದು ಏಕಿಷ್ಟು ಕಷ್ಟ ಪಡಬೇಕೋ ಎಂದು ಬಂಧು ಬಳಗದವರೆಲ್ಲಾ ಅವರನ್ನು ಪ್ರೋತ್ಸಾಹಿಸುತ್ತಿದ್ದರು. ಭಾರತಿಯಾರರಿಗೂ ಪುದುಚೇರಿ ಸಾಕಾಗಿ ಹೋಗಿದ್ದಿತು. ಆದರೆ ಅವರು ಅಲ್ಲಿಗೆ ಹಿಂತಿರುಗಲು ಕೆಲವು ಇಕ್ಕಟ್ಟುಗಳು ಇದ್ದವು.

ಭಾರತಿಯಾರರನ್ನು ಇದಕ್ಕೆ ಒಪ್ಪಿಸಲು ಶೆಲ್ಲಮ್ಮಾ ಅವರ ತಮ್ಮ, ತಂಗಿ ಮುಂತಾದವರಿಂದ ಅವರಿಗೆ ಕಾಗದ ಬರೆಸುತ್ತಿದ್ದರು. ಆದರೆ ಭಾರತಿಯಾರರು ಅದಕ್ಕೆಲ್ಲಾ ಎಡೆಗೊಡಲಿಲ್ಲ. ಭಾರತಿಯಾರರನ್ನು ಒಂಟಿಯಾಗಿ ಬಿಟ್ಟು ಹೋಗಲು ಮನಸ್ಸಿಲ್ಲದೆ ಶೆಲ್ಲಮ್ಮಾವೂ ಅಲ್ಲಿಯೇ ಇರುತ್ತಿದ್ದರು.

ಭಾದ್ರಪದ ಮಾಸದಲ್ಲಿ ನನ್ನ ಮಗುವನ್ನು ನೋಡಲು ಶೆಲ್ಲಮ್ಮಾ ನಮ್ಮ ಮನೆಗೆ ಬಂದಿದ್ದರು. ಆಗ 'ಇನ್ನು ಇಲ್ಲಿರುವುದು ಸಾಧ್ಯವಿಲ್ಲ; ನಾವು ಕಡೈಯಕ್ಕೆ ಹೋಗಿ ಬಿಡುತ್ತೇವೆ' ಎಂದರು. ಹೇಗೆ ಹೋಗುತ್ತೇವೆ ಎಂದು ಹೇಳಲಿಲ್ಲ. ಭಾರತಿಯಾರರು ಹೋಗುತ್ತಾರೆಂದು ನಾವು ನಂಬಲಿಲ್ಲ. ಅವರು ಪುದುಚೇರಿ ಬಿಟ್ಟು ಹೊರಗೆ ಹೋದರೆ, ಖಂಡಿತ 'ಸೆರೆವಾಸ' ಎಂದು ನಮಗೆ ಗೊತ್ತು.

ತಾವು ಮಹಡಿ ಮೇಲಿರುವಾಗಲೇ, ಶೆಲ್ಲಮ್ಮಾ ಮಕ್ಕಳನ್ನು ಕರೆದುಕೊಂಡು, ಮುಖ್ಯವಾಗಿ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಕಡೆಯಕ್ಕೆ ಹೊರಟು ಹೋದರೆಂದೂ, ತಾವು ಈಗ ಬೇರೆ ಮದುವೆ ಮಾಡಿಕೊಳ್ಳುವುದಾಗಿ ಮರುದಿನ ಬೆಳಿಗ್ಗೆ ಭಾರತಿಯಾರರು ತಿಳಿಸಿದರು.

ಆದರೆ ಒಂದು ವಾರದೊಳಗೆ ಶೆಲ್ಲಮ್ಮಾ ತಮ್ಮ ಅಣ್ಣ ಅಪ್ಪಾದೊರೆಯ ಜೊತೆ ಹಿಂತಿರುಗಿ ಬಂದುಬಿಟ್ಟರು.

ಅಶ್ವಯುಜ ಮಾಸ ಸುಮಾರು ಐದನೇ ದಿನಾಂಕ ಇರಬಹುದು. ಭಾರತಿ, ಶೆಲ್ಲಮ್ಮಾ ಅಪ್ಪಾದೊರೆ ಮೂವರೂ 'ವಿಲ್ಲಿಯನೂರ್' ಕಡೆಗೆ ಹೋದರಂತೆ. 'ವಿಲ್ಲಿಯನೂರ್' ದಾಟಿದ ನಂತರ, ಪೊಲೀಸರು ಭಾರತಿಯಾರರನ್ನು ಸೆರೆ ಹಿಡಿದು, ಕಡಲೂರ್ ಜೈಲಿಗೆ ಕಳುಹಿಸಿದರಂತೆ.

ಶೆಲ್ಲಮ್ಮಾ, ಅಪ್ಪಾದೊರೆ ವಾಪಸ್ಸು ಬಂದು ಪುದುಚೇರಿ ಮನೆಯನ್ನು ಖಾಲಿ ಮಾಡಿ, ಬಾಕಿಗಳನ್ನು ತೀರಿಸಿ, ಮಕ್ಕಳೊಡನೆ ಕಡೆಯಕ್ಕೆ ಹೊರಟುಹೋದರು.

ಕೆಲ ದಿನಗಳ ನಂತರ, ಕಡಲೂರ್ ಸೆರೆಯಿಂದ ಭಾರತಿಯಾರರು ಬಿಡುಗಡೆಯಾದರು. ಒಡನೆ ನೇರಾಗಿ ಪಟ್ಟಣಕ್ಕೆ ಬಂದು (ಚೆನ್ನೈಗೆ) ನಮ್ಮ ಮನೆಯಲ್ಲಿ ಸ್ವಲ್ಪ ದಿನ ತಂಗಿದ್ದರು. ಆಗ ಚೆನ್ನೈ ಕಡಲ ತೀರದಲ್ಲಿ ಕೆಲವು ಭಾಷಣಗಳನ್ನು ನೀಡಿದರು.

ಅವರ ಬಂಧುಗಳಲ್ಲಿ ಕೆಲವರು ಅವರನ್ನು ಒತ್ತಾಯಿಸಿ, ಕಡೆಯದಲ್ಲಿ ಬೇರೆ ಮನೆ ಮಾಡಿ ಅಲ್ಲಿ ಇರಿಸಿ, ಅವರನ್ನು ಸರಿದಾರಿಗೆ ತರಬೇಕೆಂದು ಎಣಿಸಿದರಂತೆ. ಆದರೆ ಆ ಏರ್ಪಾಡು ಫಲಿಸಲಿಲ್ಲ.

ಇದಾದ ನಂತರ, ಸುಮಾರು 1 1/2 ವರ್ಷ ಕಾಲ ಭಾರತಿಯಾರರ ಸಮಾಚಾರ ನನಗೆ ತಿಳಿಯಲಿಲ್ಲ. 'ಸ್ವದೇಶ ಮಿತ್ರನ್'ನಲ್ಲಿ ಅವರ ವಿಷಯ ಏನಾದರೂ ಬಂದಿದೆಯೆ ಎಂದು ನೋಡುತ್ತಿದ್ದೆ. ಬಾಕಿ ವಿಷಯ ಏನೂ ತಿಳಿಯಲಿಲ್ಲ.

(26) 'ಇರುದಿ' (ಕೊನೆ ಅಥವಾ ಅಂತಿಮ)

(1920) ರೌದ್ರಿ ಸಂವತ್ಸರ ಚೈತ್ರಮಾಸ ಪುದುಚೇರಿಯಿಂದ ಅಯ್ಯರ್, ಅಯ್ಯಾ (ನಮ್ಮ ತಂದೆ) ಎಲ್ಲರೂ ಬಂದರು. ಯುದ್ಧ ನಿಂತ ಒಡನೆ, ಇವರುಗಳಿಗೆ ಬಿಡುಗಡೆ ಸಿಕ್ಕಿತು! ಅಯ್ಯರಿಗೆ ಬಿಡುಗಡೆಯಾಗುವವರೆಗೆ ತಾವು ಅಲ್ಲಿಯೇ ಇರುವುದಾಗಿ ನನ್ನ ತಂದೆ ನಿಶ್ಚಯಿಸಿದ್ದರು. ಬಿಡುಗಡೆ ಸಿಕ್ಕಿದ ನಂತರ ಇಬ್ಬರೂ

ಪುದುಚೇರಿಯನ್ನು ಬಿಟ್ಟು ಹೊರಗಡೆ ಬಂದರು. ಅರವಿಂದರೊಬ್ಬರೇ ಪುದುಚೇರಿಯಲ್ಲಿದ್ದರು.

ಸ್ವಲ್ಪ ದಿನಗಳಲ್ಲಿಯೇ ಪುದುಚೇರಿಯ ಮೂವರೂ ಭಾರತಿ, ಅಯ್ಯರ್, ಆಚಾರ್ಯ (ನನ್ನ ತಂದೆ) ಮತ್ತೆ ಚೆನ್ನೈನಲ್ಲಿ (ಒಂದೇ ಊರಿನಲ್ಲಿ) ಬಾಳಲಾರಂಭಿಸಿದರು. ಭಾರತಿಯಾರರು 'ಸ್ವದೇಶ ಮಿತ್ರನ್' ಪತ್ರಿಕೆಯ ಕಾರ್ಯಾಲಯದಲ್ಲಿಯೂ, ಅಯ್ಯರ್ 'ದೇಶಭಕ್ತನ್' ಕಛೇರಿಯಲ್ಲಿಯೂ, ನನ್ನ ತಂದೆ ತಾವು ಮೊದಲು ಮಾಡುತ್ತಿದ್ದ ವ್ಯಾಪಾರದಲ್ಲಿಯೂ ತೊಡಗಿದ್ದರು.

ಆಶ್ವಯುಜ ಮಾಸದ ಕೊನೆಯಲ್ಲಿ ನಾನು ಮೈಸೂರಿನಿಂದ ಚೆನ್ನೈಗೆ ಬಂದಿದ್ದೆ. ಆಗ ಶೆಲ್ಲಮ್ಮಾ ಮತ್ತು ಅಯ್ಯರ್ ಅವರ ಪತ್ನಿ ಭಾಗ್ಯಲಕ್ಷ್ಮಿ ಅಮ್ಮಾ ಇಬ್ಬರೂ ನನ್ನನ್ನು ನೋಡಲು ಬಂದರು. ಅಯ್ಯರ್ ಆ ಸಮಯ ಜಾರ್ಜ್‌ಟೌನ್ ನಲ್ಲಿದ್ದರೆಂದು ಜ್ಞಾಪಕ (ನೆನಪು). ಭಾರತಿಯಾರರು 'ತುಳಸಿಂಗ ಪೆರುಮಾಳ್ ಕೋಯಿಲ್' ಬೀದಿಯಲ್ಲಿ ವಾಸವಾಗಿದ್ದರು. ನಮ್ಮ ಮನೆ ದೇವಸ್ಥಾನದ (ಪಾರ್ಥಸಾರಥಿ ಪೆರುಮಾಳ್) ಉತ್ತರದ ಕಡೆ ಇರುವ 'ಪೇಯಾಳ್ವಾರ ಕೋಯಿಲ್' ಬೀದಿಯ ದೇವಸ್ಥಾನದ ತಲೆ ಬಾಗಿಲಿನ ಮಂಟಪದ ಎದಿರುಗಡೆ ಇದ್ದಿತು. (ಆ ಮನೆಗೆ ಗೌತಮಾಶ್ರಮ ಎಂದು ಹೆಸರು).

ಭಾರತಿಯಾರರು ಬೆಳಿಗ್ಗೆ ಏಳರಿಂದ ಒಂಭತ್ತು ಗಂಟೆಯವರೆಗೆ ಮಾತ್ರ ತಮ್ಮ ಮನೆಯಲ್ಲಿರುವರು. ನಂತರ ಕಾರ್ಯಾಲಯಕ್ಕೆ ಹೊರಟು ಹೋಗುವರು. ಕೆಲ ದಿನಗಳಲ್ಲಿ ಮಾತ್ರ ಬಿಡುವು ವೇಳೆಯಲ್ಲಿ ಮನೆಗೆ ಬಂದು ಹೋಗುವರು.

ಆ ದಿವಸಗಳಲ್ಲಿ ಹಿಂದಿ ಭಾಷೆಯ ಪ್ರಚಾರ ಪ್ರಾರಂಭವಾಗಿತ್ತು. ನಮ್ಮ ಮನೆಯ ಮಹಡಿಯಲ್ಲಿ ಮಹಾತ್ಮಾಗಾಂಧಿಯವರ ಮಗ 'ದೇವದಾಸ್ ಗಾಂಧಿ'ಯವರು ಎಲ್ಲರಿಗೂ ಹಿಂದಿಯನ್ನೂ ದೇಶಭಕ್ತಿ ಹಾಡುಗಳನ್ನೂ ಕಲಿಸಿ ಕೊಡುತ್ತಿದ್ದರು. ಹಿಂದಿ ಚೆನ್ನಾಗಿ ಬರುತ್ತಿದ್ದ ಭಾರತಿಯಾರರೂ ಇದರಲ್ಲಿ ಸೇರಿಕೊಳ್ಳುತ್ತಿದ್ದರು. ನನ್ನ ಮೂರು ತಿಂಗಳ ಮಗು ಕೈಕಾಲುಗಳನ್ನು ಆಡಿಸುತ್ತಾ 'ಆವ್, ಆವ್' ಎಂದು ಶಬ್ದ ಮಾಡಿದಾಗ ಭಾರತಿಯಾರರು 'ಆವೋ, ಆವೋ, ಆವೋ, ಸಕಲ ಭಾರತ ಕುಮಾರ್' ಎಂದು ಹಾಡುವರು. 'ಪುಟ್ಟ ಕಂದ ಎಲ್ಲರನ್ನೂ ಕರೆದು, ಒಗ್ಗಟ್ಟಾಗಿ ಇರುವಂತೆ ಹೇಳುತ್ತಿದೆ. ನಾವು ಗಮನಿಸುವುದಿಲ್ಲ, ನಮ್ಮ ಮೂರ್ಖತನ' ಎನ್ನುವರು.

ಆ ಸಮಯ ದೇಶದ ರಾಜಕೀಯ ಕುದಿಯುತ್ತಿತ್ತು. ಆಲಿ ಸಹೋದರರು ಚೆನ್ನೈಗೆ ಬರುವ ದಾರಿಯಲ್ಲಿ ಸೆರೆ ಹಿಡಿಯಲ್ಪಟ್ಟರು. ಅವರ ತಾಯಿ ಒಬ್ಬ ವೀರಾಂಗನೆ. ಅವರು ಚೆನ್ನೈಗೆ ಬಂದು ಕಡಲ ತೀರದಲ್ಲಿ ಪ್ರಜೆಗಳನ್ನು ಉದ್ದೇಶಿಸಿ ಸಭೆಯಲ್ಲಿ ಭಾಷಣ ಮಾಡಿದರು. ಅವರು ಮಾತು ಮುಗಿಸಿದ ಸಮಯದಲ್ಲಿ

ಭಾರತಿಯಾರರು ವೇದಿಕೆಯ ಮೇಲೆ ಹತ್ತಿ 'ಜಯಭೇರಿ ಕೊಟ್ಟಡಾ' (ಜಯಭೇರಿ ಮೊಳಗಿಸು) ಎಂದು ಹಾಡಲು ಶುರು ಮಾಡಿದರು. ಚದುರಿದ ಗುಂಪು ಮೊದಲಿಗಿಂತ ಹತ್ತು ಪಟ್ಟು ಜಾಸ್ತಿಯಾಗಿ ಸೇರಿಬಿಟ್ಟಿತು.

ಆ ಕಾಲದ ಜನರಿಗೆ ಭಾರತಿಯಾರರ ಮಾತು, ಹಾಡು ಎಲ್ಲವೂ ಪ್ರಾಣ. ಅವರ ಕಂಠ (ಧ್ವನಿ)ದಲ್ಲಿಯೂ ಹಾಡಿನಲ್ಲಿಯೂ ಅಷ್ಟು ಆಕರ್ಷಣೆ ಇದ್ದಿತು. ಅಂದು ಭಾರತಿಯಾರರು ಭೇರಿಗೆ (ನಗಾರಿ) ಶಬ್ದದಂತೆ ತಮ್ಮ ಬಾಯಲ್ಲಿ ಶಬ್ಧ ಮಾಡಿ, ತಮ್ಮ ಹಾಡಿನಿಂದ ಜನರನ್ನು ಸಂತೋಷ ಪಡಿಸಿದರು (ರಂಜಿಸಿದರು).

ನಾನು ಚೆನ್ನೈಯಲ್ಲಿ ಇದ್ದಾಗ, ಯಾವಾಗಲಾದರೊಮ್ಮೆ ಮಾತಿನ ನಡುವೆ 'ಎರಡೂ ಹೆಣ್ಣು ಮಕ್ಕಳು. ಕೈಗೆ ಬಂದ ಗಂಡು ಮಗುವೋ ಹೋಗಿಬಿಟ್ಟಿತು' ಎಂದು ಬೇಸರ ಪಟ್ಟುಕೊಳ್ಳುವುದನ್ನು ಭಾರತಿಯಾರರು ಕೇಳಿಸಿಕೊಂಡರ ಸಾಕು, 'ಹೆಣ್ಣು ಮಕ್ಕಳಿಗೆ ವಾತ್ಸಲ್ಯ ಜಾಸ್ತಿ ಯದುಗಿರಿ, ಈಗ ನೋಡು ಪುದುಚೇರಿಯಲ್ಲಿ ನನ್ನ ಜೊತೆ ಒಡನಾಡಿದ (ಪಳಗಿದ) ನೀನು ಇಂದಿಗೂ ನನ್ನನ್ನು ಹಾಗೆಯೇ ಕಾಣುತ್ತೀಯ. ಆದರೆ ನಿನ್ನ ಅಣ್ಣ ಸಾಮಿಯನ್ನು ನೋಡು. ಸಂಸಾರದ ಚಿಂತೆ, ನಿನ್ನಂತೆ ನನ್ನ ಬಳಿ ಮಾತಾಡಲು ಪುರಸತ್ತಿಲ್ಲ' ಎನ್ನುವರು.

ಯುಗಾದಿಯವರೆಗೆ ನಾನು ಚೆನ್ನೈ ಪಟ್ಟಣದಲ್ಲಿದ್ದೆ. ಭಾರತಿಯಾರರು ನಮ್ಮ ಮನೆಗೆ ಬರುವರು. ಶೆಲ್ಲಮ್ಮಾ, ತಂಗಮ್ಮಾ, ಶಕುಂತಲಾ ಅವರುಗಳೂ ಆಗಾಗ ಬರುವರು. ನಾವುಗಳೂ ಅವರ ಮನೆಗೆ ಆಗಾಗ ಹೋಗುವೆವು.

ಚೈತ್ರಮಾಸ, ನಾನು ಹೊರಡುವ ದಿನ. ಬೆಳಿಗ್ಗೆ ಭಾರತಿಯಾರರು ನಮ್ಮ ಮನೆಗೆ ಬಂದಿದ್ದರು. ಮಾಮೂಲಿನಂತೆ ಕುಶಲ (ಕ್ಷೇಮಲಾಭ) ವಿಚಾರಿಸಿ, ನಂತರ ನಮ್ಮ ಮನೆಯ ಮುಂದೆ ಮುಖಕ್ಷೌರ ಮಾಡಿಸಿಕೊಂಡರು. 'ಈ ದಿನ ಕ್ಷೌರಕ್ಕೆ ದಿನ ಚೆನ್ನಾಗಿಲ್ಲ ಎಂದು ಶೆಲ್ಲಮ್ಮಾ ತಡೆದಳು. ಅದಕ್ಕಾಗಿ ಇಲ್ಲಿ ಮಾಡಿಸಿಕೊಂಡೆ' ಎಂದರು. ಅದೇ ಕಡೇ ಸಲ ನಾನು ಅವರನ್ನು ನೋಡಿದುದು.

ನಾನು ಮೈಸೂರಿನಲ್ಲಿದ್ದೆ. ನನ್ನ ತಾಯಿಯಿಂದ ಒಂದು ಕಾಗದ ಬಂದಿತು. ಅದರಲ್ಲಿ 'ಭಾರತಿಯಾರರು ಹೋಗಿಬಿಟ್ಟರು' ಎಂಬ ಸಮಾಚಾರ ಇದ್ದಿತು. ಮೊದಲು ನಾನು ನಂಬಲಿಲ್ಲ. ನನ್ನ ತಂದೆಯವರೇ ಮತ್ತೆ ವಿಷಯವನ್ನು ವಿವರವಾಗಿ ಬರೆದಿದ್ದರು.

ವಿಧಿಯಾಟ ಮುಗಿದು ಹೋಯಿತು! ತಮಿಳುನಾಡಿನ ಅದೃಷ್ಟವೇ ಅಷ್ಟು!

1923ನೇ ಇಸವಿ, ಮತ್ತೆ ನಾನು ಚೆನ್ನೈಗೆ ಬಂದಿದ್ದೆ. ಶೆಲ್ಲಮ್ಮಾ, ತಂಗಮ್ಮಾ, ಶಕುಂತಲಾ ಮೂವರೂ ನನ್ನನ್ನು ನೋಡಲು ಬಂದರು. ಅವರನ್ನು ಕಾಣಲು

ನನಗೆ ದುಃಖವಾಗಿದ್ದಿತು.

ಶೆಲ್ಲಮ್ಮಾ 'ಅವರು ಪ್ರಾಣ ಹೋಗುವಾಗ ಕೂಡ 'ಯದುಗಿರಿ ಎಲ್ಲಿದ್ದಾಳೆ' ಎಂದು ವಿಚಾರಿಸಿದರು. ನೀನು 'ಮೈಸೂರಿನಲ್ಲಿದ್ದೀಯಾ' ಎಂದು ಹೇಳಿದೆ. 'ಎಷ್ಟು ಮಕ್ಕಳು' ಎಂದು ಕೇಳಿದರು. 'ನಮ್ಮಂತೆಯೇ ಅವಳಿಗೂ ಎರಡು ಹೆಣ್ಣುಮಕ್ಕಳು' ಎಂದೆ. ನಿನ್ನನ್ನು ನೋಡಬೇಕೆನಿಸುತ್ತಿದೆ ಎಂದು ಹೇಳಿ, 'ಅವಳು ಈಗ ಎಲ್ಲಿ ಬರುತ್ತಾಳೆ? ... ಎಲ್ಲಾದರೂ ಚೆನ್ನಾಗಿರಲಿ ... ಬೆಳಿಗ್ಗೆ ಬೇಗ ಅಡಿಗೆ ಮಾಡಿಬಿಡು. ಎಂಟು ಗಂಟೆಗೆಲ್ಲಾ ಆಫೀಸಿಗೆ ಹೋಗಬೇಕು' ಎಂದರು. ಇದೆಲ್ಲಾ ಹೇಳಿದ ಒಂದು ಗಂಟೆಯೊಳಗೆ ಜೀವ ಹೋಗಿಬಿಟ್ಟಿತು. ಏನು ಮಾಡಲಿ? ಅದುವೂ ಒಂದು ಕತೆಯಾಗಿ ಬಿಟ್ಟಿತು' ಎಂದರು.

ಹಲವು ವರ್ಷಗಳಿಂದ ಲೆಕ್ಕವಿಲ್ಲದ ಕಷ್ಟಗಳ ಮಧ್ಯೆಯೇ ಹಲವು ಹಿರಿಯರು – ತಿಲಕರು, ಭಾರತಿಯಾರರು, ಚಿದಂಬರ ಪಿಳ್ಳೈ, ವ.ವೆ.ಶು. ಅಯ್ಯರ್ ಮೊದಲಾದ ಎಣಿಕೆ ಇಲ್ಲದಷ್ಟು ದೇಶಭಕ್ತರು ಏರ್ಪಡಿಸಿದ ತಳಹದಿಯ ಮೇಲೆ ನಮ್ಮ 'ಸ್ವಾತಂತ್ರ ಮಾಳಿಗೆ' ನಲಿದಾಡುತ್ತಿರುವುದನ್ನು ನಾವು ಕಾಣುತ್ತಿರುವೆವು.

ತನಗೇ ಗೊತ್ತಿಲ್ಲದ ಒಂದು ಶಕ್ತಿ ಭಾರತಿಯಾರರನ್ನು ಯಾವಾಗಲೂ ದೂಡುತ್ತಿತ್ತು. ಅವರು ಹಾಡುವಾಗ ಕವಿತೆ ಅಡೆತಡೆಯಿಲ್ಲದೆ ಪೋಣಿಸಿದಂತೆ ಬಂದು ಸುರಿಯುತ್ತಿತ್ತು. ತಾವು ರಚಿಸಿದ ಕವಿತೆಗಳನ್ನು ಕಂಡು ಎಷ್ಟೋ ಸಲ ತಾವೇ ಅತಿಶಯಿಸುವರು. ಪದ, ನಡೆ (ಶೈಲಿ), ಲಕ್ಷಣ, ಎಡುಪು (ಪ್ರಾರಂಭ), ಭಾವ, ಪ್ರಾಸ ಇವುಗಳನ್ನೆಲ್ಲಾ ಹುಡುಕಿ ಹುಡುಕಿ ಸೇರಿಸುವ ಕಷ್ಟ ಅವರಿಗಿರಲಿಲ್ಲ. ಅವರು ಒಬ್ಬ ವರಕವಿ.

ಭಾರತಿಯಾರರು ಕೆಲವು ಸಲ ತಮ್ಮನ್ನು ತಾವೇ ಪ್ರಶ್ನೆ ಕೇಳಿಕೊಳ್ಳುವರು. ಅದನ್ನು ನೋಡಿ ನಾನೂ ಕೂಡ ಭ್ರಮಿಸುವೆ. ಬೇರೆ ಕೆಲವು ಸಮಯಗಳಲ್ಲಿ 'ಕಡಲ ತೀರದಲ್ಲಿ ಯಾರೊಂದಿಗೆ ಮಾತಾಡುತ್ತಿದ್ದಿರಿ?' ಎಂದರೆ, 'ಪರಾಶಕ್ತಿಯ ಜೊತೆಯಲ್ಲಿ, ಕಡಲ ಜೊತೆಯಲ್ಲಿ' ಎಂದು ನಗುವರು. ಆಗೆಲ್ಲಾ ನನಗೆ ಅವರ ಮಾತಿನ ಅರ್ಥ ತಿಳಿಯುತ್ತಿರಲಿಲ್ಲ. ಒಂದು ಉತ್ತಮ ಕವಿತೆ ಹೊರಬರಬೇಕಾದರೆ ಮನುಷ್ಯ ಎಷ್ಟು ತಪಸ್ಸು ಮಾಡಬೇಕು, ಮನಸ್ಸನ್ನು ಹೇಗೆ ಪಕ್ವ ಪಡಿಸಿಕೊಳ್ಳಬೇಕು ಎಂಬುದಕ್ಕೆ ಭಾರತಿಯಾರರು ಉತ್ತಮ ಉದಾಹರಣೆ! ಅಂತಹ ಕವಿಗಳು ಹಲವು ಶತಮಾನಗಳಿಗೊಮ್ಮೆ ಹುಟ್ಟುವರು; ಅಂತಹ ಮಹಾನ್‌ಗಳನ್ನು ಹೆತ್ತ (ಪಡೆದ) ಸಮೂಹ ಭಾಗ್ಯವಂತ ಸಮೂಹವೇ!

(ಮುಗಿಯಿತು)